ವಿಜಯನಗರ ಅಧ್ಯಯನ

ಸಂಪುಟ - 1

ಹಂಪಿ ಉತ್ಸವ 1995ರಲ್ಲಿ ಮಂಡಿಸಿದ ಪ್ರಬಂಧಗಳು

ಸಂಪಾದಕರು
ಡಾ. ಡಿ.ವಿ. ದೇವರಾಜ್
ಡಾ. ಚನ್ನಬಸಪ್ಪ ಎಸ್. ಪಾಟೀಲ



1996
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ವಿಜಯನಗರ ಅಧ್ಯಯನ

ಸಂಪುಟ 1

ಹಂಪಿ ಉತ್ಸವ 1995 ರಲ್ಲಿ ಮಂಡಿಸಿದ ಪ್ರಬಂಧಗಳು

ಕರ್ನಾಟಕ ಸರ್ಕಾರ

ವಿಜಯನಗರ ಅಧ್ಯಯನ

ಸಂಪುಟ 1

ಹಂಪಿ ಉತ್ಸವ 1995 ರಲ್ಲಿ ಮಂಡಿಸಿದ ಪ್ರಬಂಧಗಳು

ಸಂಪಾದಕರು

ಡಾ. ಡಿ.ವಿ. ದೇವರಾಜ್

ಡಾ. ಚನ್ನಬಸಪ್ಪ ಎಸ್. ಪಾಟೀಲ

1996

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಪ್ರಥಮ ಮುದ್ರಣ: 1000 ಪ್ರತಿಗಳು


ಬೆಲೆ: ರೂ. 80.00

ಡಿ.ಟಿ.ಪಿ. ಅಕ್ಷರ ಜೋಡಣೆ: ಕಾಂಪ್ಟೆಕ್ ಕಂಪ್ಯೂಟರ್ ಸಿಸ್ಟಮ್ಸ್, ಮೈಸೂರು
ಮುದ್ರಣ: ಎಫ್‌ಒಎಸ್‌ಟಿಆಯ್‌ಎಸ್, ಸಿಎಫ್‌ಟಿಆರ್‌ಆಯ್, ಮೈಸೂರು

ಎಂ.ಪಿ. ಪ್ರಕಾಶ್
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್‌ರಾಜ್ ಸಚಿವರು

ದೂರವಾಣಿ : ಕಛೇರಿ : ೨೨೫೨೫೩೬
ನಿವಾಸ : ೩೩೩೫೨೦೪

ವಿಧಾನ ಸೌಧ, ಬೆಂಗಳೂರು-೫೬೦ ೦೦೧



ದಿನಾಂಕ 25-10-1996

ಮುನ್ನುಡಿ

"ವಿಜಯನಗರ ಪಟ್ಟಣ ಹೇಗಿದೆಯೆಂದರೆ ಇಂತಹ ಸ್ಥಳವನ್ನು ಕಣ್ಣುಗಳು ಎಂದೂ ಕಂಡಿಲ್ಲ ಮತ್ತು ಇದಕ್ಕೆ ಸಮನಾದುದು ಜಗತ್ತಿನಲ್ಲಿ ಯಾವುದಾದರೂ ಇದ್ದುದರ ಸುದ್ದಿ ಕಿವಿಗೆ ಬಿದ್ದಿಲ್ಲ....... ಬಜಾರಗಳು ಬಹಳ ಅಗಲವಾಗಿವೆ....... ರತ್ನ ವ್ಯಾಪಾರಿಗಳು ಮುತ್ತು, ಮಾಣಿಕ್ಯ, ಪಚ್ಚೆ ಮತ್ತು ವಜ್ರಗಳನ್ನು ಬಜಾರಗಳಲ್ಲಿ ಸಾರ್ವಜನಿಕವಾಗಿ ಮಾರುತ್ತಾರೆ". ಈ ರೀತಿ ಹೇಳಿದವನು ವಿಜಯನಗರಕ್ಕೆ ಭೇಟಿ ನೀಡಿದ ಪರ್ಷಿಯಾ ದೇಶದ ಅಬ್ದುರ್ ರಜಾಕ್. ಇಂತಹ ಸುಂದರ ಮತ್ತು ಸಂಪದ್ಭರಿತವಾದ ಪಟ್ಟಣ ವಿಜಯನಗರದ ಪತನದ ನಂತರ ಹಾಳು ಹಂಪೆಯಾಗಿ ಉಳಿದಿದೆ. ವಿಜಯನಗರದ ಗತಕಾಲದ ವೈಭವದ ನೆನಪು ಮರುಕಳಿಸುವಂತೆ ಮಾಡಲು ಕರ್ನಾಟಕ ಸರ್ಕಾರವು "ಹಂಪಿ ಉತ್ಸವ"ವನ್ನು 1987ರಿಂದ ಆಚರಿಸುತ್ತಿದೆ. 1995ರಲ್ಲಿ ಉತ್ಸವದ ಅಂಗವಾಗಿ ವಿಜಯನಗರದ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ವಿಚಾರ ಸಂಕಿರಣವನ್ನು ಏರ್ಪಡಿಸುವ ಜವಾಬ್ದಾರಿಯನ್ನು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯಕ್ಕೆ ವಹಿಸಲಾಗಿತ್ತು. ನಿರ್ದೇಶಕರಾದ ಡಾ: ಡಿ.ವಿ. ದೇವರಾಜ್ ಅವರು ವಿಚಾರ ಸಂಕಿರಣವನ್ನು ಯಶಸ್ವಿಯಾಗಿ ನಡೆಸಿದುದಲ್ಲದೆ ಮಂಡಿಸಿದ ಪ್ರಬಂಧಗಳನ್ನು ಗ್ರಂಥರೂಪದಲ್ಲಿ ಪ್ರಕಟಿಸಿದ್ದಾರೆ. ವಿಜಯನಗರದ ಇತಿಹಾಸ ಮತ್ತು ಸಂಸ್ಕೃತಿಯ ಮೇಲೆ ಹೊಸ ಬೆಳಕನ್ನು ಚೆಲ್ಲುವ "ವಿಜಯನಗರ ಅಧ್ಯಯನ: ಸಂಪುಟ 1" ವಿದ್ವಾಂಸರಿಗೆ ಮತ್ತು ಸಾರ್ವಜನಿಕರಿಗೆ ಉತ್ತಮ ಆಕರ ಗ್ರಂಥವಾಗುವುದರಲ್ಲಿ ಸಂಶಯವಿಲ್ಲ. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಈ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಿ ಇಂತಹ ಅನೇಕ ಗ್ರಂಥಗಳನ್ನು ಹೊರತರುವುದೆಂದು ಆಶಿಸುತ್ತೇನೆ.

ಹಂಪಿ ಉತ್ಸವವನ್ನು ವಿರೂಪಾಕ್ಷ ತೇರು ಬೀದಿ (ಹಂಪಿ ಬಜಾರ) ಯಲ್ಲಿ ಆಚರಿಸಲಾಗುತ್ತಿದೆ. 720 ಮೀ. ಉದ್ದವಿರುವ ಈ ಬಜಾರದ ಮಂಟಪಗಳು ಹಾಳಾಗಿವೆ. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಈ ಮಂಟಪಗಳ ಸಂರಕ್ಷಣಾ ಕಾರ್ಯವನ್ನು ಕೈಗೆತ್ತಿಕೊಂಡು ಇಲ್ಲಿಯವರೆಗೆ 280 ಮೀ. ಉದ್ದದಷ್ಟು ಮಂಟಪಗಳನ್ನು ಮೂಲ ರೂಪಕ್ಕೆ ತಂದಿದೆ. ಈಗಲೂ ಈ ಕಾರ್ಯ ಮುಂದುವರಿಯುತ್ತಿದೆ. ಇದನ್ನು ಪೂರ್ಣಗೊಳಿಸಿದಾಗ ಹಂಪಿ ಬಜಾರ ದೇಶ ವಿದೇಶದ ಪ್ರವಾಸಿಗರನ್ನು ಮುಂಚಿನಂತೆ ಆಕರ್ಷಿಸುವಲ್ಲಿ ಸಂಶಯವಿಲ್ಲ. ಈ ಮಹತ್ಕಾರ್ಯವನ್ನು ಹಮ್ಮಿಕೊಂಡಿರುವ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವನ್ನು ಅಭಿನಂದಿಸುತ್ತೇನೆ.

ಎಂ.ಪಿ. ಪ್ರಕಾಶ್

(ಎಂ.ಪಿ. ಪ್ರಕಾಶ್)

ಪ್ರಸ್ತಾವನೆ

ಕರ್ನಾಟಕ ಚರಿತ್ರೆಯಲ್ಲಿ ಸುವರ್ಣಯುಗವೆಂದು ಪರಿಗಣಿಸಲ್ಪಟ್ಟಿರುವ ವಿಜಯನಗರ ಸಾಮ್ರಾಜ್ಯದ ವೈಭವೋಪೇತ ದಿನಗಳಲ್ಲಿ ನವರಾತ್ರಿ ಅಥವಾ ದಸರಾ ಮಹೋತ್ಸವದ ಆಚರಣೆ ಪ್ರಾರಂಭವಾಯಿತು. ವಿಜಯನಗರಕ್ಕೆ ಭೇಟಿಯಿತ್ತ ವಿದೇಶಿ ಪ್ರವಾಸಿಗಳಾದ ನಿಕೋಲೊ-ದೆ-ಕೊಂತಿ, ಅಬ್ದುಲ್ ರಜಾಕ್, ಡೊಮಿಂಗೊ ಪಾಯೇಸ್ ಇವರುಗಳು ಅದ್ದೂರಿಯಿಂದ ಆಚರಿಸಲಾಗುತ್ತಿದ್ದ ಈ ಹಬ್ಬದ ವರ್ಣನೆನನ್ನು ಕಣ್ಣಿಗೆ ಕಟ್ಟುವಂತೆ ದಾಖಲಿಸಿದ್ದಾರೆ. ಇದು ಕೇವಲ ಧಾರ್ಮಿಕ ಉತ್ಸವವಾಗಿರದೆ ಕಲೆ ಮತ್ತು ಸಾಹಿತ್ಯವನ್ನು ಪ್ರತಿಬಿಂಬಿಸುವ ಸಾಂಸ್ಕೃತಿಕ ಉತ್ಸವವೂ ಆಗಿತ್ತು. ವಿಜಯನಗರದ ಪತನದ ನಂತರ ಈ ಪರಂಪರೆಯನ್ನು ಮೈಸೂರಿನ ಒಡೆಯರು ಮುಂದುವರಿಸಿಕೊಂಡು ಬಂದರು. ಅರಸೊತ್ತಿಗೆಯ ಕಾಲ ಮುಗಿದ ನಂತರ ಪ್ರಜಾ ಸರ್ಕಾರವೇ ಈ ಸಾಂಸ್ಕೃತಿಕ ಉತ್ಸವವನ್ನು ಆಚರಿಸುತ್ತಿದೆ. ಮೈಸೂರು ದಸರಾ ಇಂದಿಗೂ ದೇಶ ವಿದೇಶಗಳಿಂದ ಜನರನ್ನು ಆಕರ್ಷಿಸುತ್ತಿದೆ.

ವಿಜಯನಗರದ ಗತವೈಭವವು ಕಣ್ಣಿಗೆ ಗೋಚರಿಸುವಂತೆ ಮಾರ್ಪಡಿಸುವುದಕ್ಕಾಗಿ ಹಂಪಿ ಪುನರುತ್ಥಾನ ಯೋಜನೆಯಡಿಯಲ್ಲಿ ಹಂಪಿಯಲ್ಲಿ ವ್ಯಾಪಕವಾದ ಸಂಶೋಧನೆ, ಉತ್ಖನನ ಮತ್ತು ಸ್ಮಾರಕಗಳ ಸಂರಕ್ಷಣೆಯ ಕಾರ್ಯ ನಡೆದಿದೆ. ಸಂಶೋಧನೆಯ ಫಲಿತಾಂಶವನ್ನು ವಿವಿಧ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತಿದೆ.

ಹಂಪಿಯ ಸ್ಮಾರಕಗಳ ಪುನರುಜ್ಜೀವನದ ಜೊತೆಗೆ ಸಾಂಸ್ಕೃತಿಕ ಪುನರುಜ್ಜೀವನವಾಗುವಂತೆ ಕರ್ನಾಟಕ ಸರ್ಕಾರವು ಹಂಪಿ ಉತ್ಸವನನ್ನು 1987ರಿಂದ ಪ್ರತಿ ವರ್ಷ ಮೂರು ದಿನಗಳ ಕಾಲ ಆಚರಿಸುತ್ತಿದೆ. ಈ ಉತ್ಸವದ ಅಂಗವಾಗಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದವತಿಯಿಂದ ಕಳೆದ ವರ್ಷ ಅಂದರೆ 1995 ರಲ್ಲಿ ನವೆಂಬರ್ 26 ಮತ್ತು 27ರಂದು ವಿಜಯನಗರ ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ವಿಚಾರ ಸಂಕಿರಣವನ್ನು ನಡೆಸಲಾಯಿತು. ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಹತ್ತೊಂಬತ್ತು ಪ್ರಬಂಧಗಳನ್ನು "ವಿಜಯನಗರ ಅಧ್ಯಯನ ಸಂಪುಟ 1" ರಲ್ಲಿ ಪ್ರಕಟಿಸಲಾಗಿದೆ. ಈ ಸಂಪುಟವನ್ನು ವಿದ್ವಾಂಸರ ಮತ್ತು ಸಾರ್ವಜನಿಕರ ಮುಂದಿಡಲು ಸಂತೋಷ. ಪ್ರತಿ ವರ್ಷವೂ ವಿಜಯನಗರ ಇತಿಹಾಸ ಮತ್ತು ಸಂಸ್ಕೃತಿಯ ಮೇಲೆ ವಿಚಾರ ಸಂಕಿರಣ ನಡೆಸಿ, ಮಂಡಿಸಿದ ಪ್ರಬಂಧಗಳನ್ನು ತಕ್ಷಣ ಪ್ರಕಟಿಸುವುದರಿಂದ ಸಂಶೋಧನೆಯು ನಿರಂತರವಾಗಿ ನಡೆಯುವಂತಾಗಿ, ಈ ದಿಸೆಯಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸುವುದರೊಂದಿಗೆ ಅನೇಕ ಹೊಸ ವಿಷಯಗಳು ಬೆಳಕಿಗೆ ಬರುವುದರಲ್ಲಿ ಸಂಶಯವಿಲ್ಲ.

ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಸನ್ಮಾನ್ಯ ಶ್ರೀ ಎಂ.ಪಿ. ಪ್ರಕಾಶ್‌ರವರು ಈ ವಿಚಾರ ಸಂಕಿರಣದ ಬಗ್ಗೆ ಹೆಚ್ಚಿನ ಪ್ರೋತ್ಸಾಹ ನೀಡಿ ನಮ್ಮನ್ನು ಈ ವಿಚಾರ ಸಂಕಿರಣ ಏರ್ಪಡಿಸುವಲ್ಲಿ ತೊಡಗಿಸಿಕೊಳ್ಳಲು ಮೂಲ ಕಾರಣಕರ್ತರಾದ್ದರಿಂದ ಅವರಿಗೆ ನಮ್ಮ ಇಲಾಖೆಯ ಪರವಾಗಿ ಈ ಸಂದರ್ಭದಲ್ಲಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುತ್ತಿದ್ದೇನೆ.

ಈ ಪುಸ್ತಕದಲ್ಲಿಯ ಪ್ರಬಂಧಗಳನ್ನು ಶ್ರೀಮತಿ ಎಂ. ಚಂದ್ರಮ್ಮ ಮತ್ತು ಶ್ರೀ ಎನ್. ಸುಬ್ರಹ್ಮಣ್ಯ ಅಂದವಾಗಿ ಬೆರಳಚ್ಚು ಮಾಡಿದ್ದಾರೆ. ಕೇಂದ್ರೀಯ ಆಹಾರ ವಿಜ್ಞಾನ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ವಿ. ಪ್ರಕಾಶ್ ಅವರು ಈ ಪುಸ್ತಕದ ಮುದ್ರಣವನ್ನು ಸಂತೋಷದಿಂದ ಒಪ್ಪಿ ಸಕಾಲದಲ್ಲಿ ಮುದ್ರಿಸಿಕೊಟ್ಟಿರುವರು. ಶ್ರೀ ಕೆ.ಎ. ರಂಗನಾಥ, ಮುಖ್ಯಸ್ಥರು, ಎಫ್‌ಐಎಸ್‌ಟಿಆಯ್‌ಎಸ್ ಮತ್ತು ಶ್ರೀ ಎಸ್. ಉಮೇಶ್, ಮುದ್ರಣದ ತಾಂತ್ರಿಕ ಅಧಿಕಾರಿ ಅವರು ಶ್ರೀಯುತರಾದ ಪಿ.ಎಸ್. ಗಣೇಶ್‌ಪ್ರಸಾದ್, ಜಿ. ವೆಂಕಟೇಶ್ ಮತ್ತು ಸಿ.ಎನ್. ಜನಾರ್ಧನ ಅವರ ಸಹಾಯದಿಂದ ಈ ಪುಸ್ತಕವನ್ನು ಅತ್ಯಂತ ಕಡಿಮೆ ಸಮಯದಲ್ಲಿ ಆಕರ್ಷಕವಾಗಿ ಮುದ್ರಿಸಿದ್ದಾರೆ. ಈ ಎಲ್ಲ ಮಹನೀಯರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಮೈಸೂರು
23-10-96

(ಡಿ.ವಿ. ದೇವರಾಜ್)
ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ

ಪ್ರಬಂಧ ಮಂಡಿಸಿದವರು

1. ಶ್ರೀ ಬಾಲಸುಬ್ರಮಣ್ಯ
ರೀಡರ್, ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ, ಕಮಲಾಪುರ-583 221
ಹೊಸಪೇಟೆ ತಾಲೂಕ, ಬಳ್ಳಾರಿ ಜಿಲ್ಲೆ

2. ಡಾ. ಡಿ.ವಿ. ದೇವರಾಜ್
ನಿರ್ದೇಶಕ
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ, ಅರಮನೆ ಆವರಣ
ಮೈಸೂರು-570 001

3. ಡಾ. ಚನ್ನಬಸಪ್ಪ ಎಸ್. ಪಾಟೀಲ
ಉಪ ನಿರ್ದೇಶಕ
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ, ಅರಮನೆ ಆವರಣ
ಮೈಸೂರು-570 001

4. ಶ್ರೀ ಸಿ.ಟಿ.ಎಮ್. ಕೊಟ್ರಯ್ಯ
340, ಎಂ ಬ್ಲಾಕ್
ಕುವೆಂಪು ನಗರ
ಮೈಸೂರು-570 023

5. ಶ್ರೀ ಹೆಚ್.ಟಿ. ತಳವಾರ್
ಸಹ ನಿರ್ದೇಶಕ
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ
ನಿರ್ದೇಶನಾಲಯ, ಅರಮನೆ ಆವರಣ
ಮೈಸೂರು-570 001

6. ಡಾ. ಸಿಂದಗಿ ರಾಜಶೇಖರ
ಪ್ರಾಧ್ಯಾಪಕ
ಇತಿಹಾಸ ಮತ್ತು ಪುರಾತತ್ವ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಪಾವಟೆನಗರ, ಧಾರವಾಡ-580 003

7. ಪ್ರೊ. ಲಕ್ಷ್ಮಣ್ ತೆಲಗಾವಿ
ಪ್ರಾಧ್ಯಾಪಕ, ಇತಿಹಾಸ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ, ಕಮಲಾಪುರ-583 221
ಹೊಸಪೇಟೆ ತಾಲೂಕ, ಬಳ್ಳಾರಿ ಜಿಲ್ಲೆ

8. ಡಾ. ದೇವರಕೊಂಡಾರೆಡ್ಡಿ
ರೀಡರ್, ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ, ಕಮಲಾಪುರ-583 221
ಹೊಸಪೇಟೆ ತಾಲೂಕ, ಬಳ್ಳಾರಿ ಜಿಲ್ಲೆ

9. ಡಾ. ಎಂ.ಎಸ್. ಕೃಷ್ಣಮೂರ್ತಿ
ರೀಡರ್
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ
ಮೈಸೂರು ವಿಶ್ವವಿದ್ಯಾಲಯ
ಮಾನಸ ಗಂಗೋತ್ರಿ, ಮೈಸೂರು

10. ಶ್ರೀ ಕೆಳದಿ ಗುಂಡಾಜೋಯಿಸ್
ಕೆಳದಿ ವಸ್ತು ಸಂಗ್ರಹಾಲಯ ಮತ್ತು
ಸಂಶೋಧನಾ ಕೇಂದ್ರ,
ಕೆಳದಿ-577 401, ಸಾಗರ ತಾಲೂಕ
ಶಿವಮೊಗ್ಗ ಜಿಲ್ಲೆ

11. ಡಾ. ಶ್ರೀನಿವಾಸ ಪಾಡಿಗಾರ
ರೀಡರ್
ಪ್ರಾಚೀನ ಭಾರತೀಯ ಇತಿಹಾಸ ಮತ್ತು
ಶಾಸನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ
ಪಾವಟೆನಗರ, ಧಾರವಾಡ-580 003

12. ಡಾ. ಎಂ.ಬಿ. ಪದ್ಮ
ಪ್ರಿನ್ಸಿಪಾಲ್
ಮಹಾರಾಜ ಕಾಲೇಜ್
ಮೈಸೂರು-570 005

13. ಡಾ. ಸೂರ್ಯನಾಥ ಕಾಮತ್
ಅಧ್ಯಕ್ಷರು, ಮಿಥಿಕ್ ಸೊಸಾಯಿಟಿ
ನೃಪತುಂಗ ರಸ್ತೆ
ಬೆಂಗಳೂರು-560 001

14. ಡಾ. ಜಿ.ಎಸ್. ದೀಕ್ಷಿತ್
ಬಿ-1, ಕೈಲಾಸ ಅಪಾರ್ಟ್‌ಮೆಂಟ್ಸ್
7ನೇ ಮೇನ್, 9ನೇ ಕ್ರಾಸ್, ಮಲ್ಲೇಶ್ವರಂ
ಬೆಂಗಳೂರು-560 003

15. ಡಾ. ಕೆ.ಜಿ. ವೆಂಕಟೇಶ್ ಜೋಯಿಸ್
ಕ್ಯೂರೇಟರ್, ಕೆಳದಿ ವಸ್ತು ಸಂಗ್ರಹಾಲಯ
ಕೆಳದಿ-577 401
ಸಾಗರ ತಾಲೂಕ, ಶಿವಮೊಗ್ಗ ಜಿಲ್ಲೆ

16. ಡಾ. ಕೆ.ಜಿ. ವಸಂತಮಾಧವ
''ಆರಾಧನಾ'', ಪಾವಂಜೆ
ಹಳೆಯಂಗಡಿ-574 144
ದಕ್ಷಿಣ ಕನ್ನಡ ಜಿಲ್ಲೆ

17. ಶ್ರೀ ಇಟಗಿ ಈರಣ್ಣ
ಕನ್ನಡ ವಿಭಾಗ
ವಿಜಯನಗರ ಕಾಲೇಜ್
ಹೊಸಪೇಟೆ-583 201

18. ಡಾ. ಬಸವರಾಜ ಮಲಶೆಟ್ಟಿ
ಕನ್ನಡ ವಿಭಾಗ
ವಿಜಯನಗರ ಕಾಲೇಜ್
ಹೊಸಪೇಟೆ-583 201

19. ಡಾ. ವಿ.ಎಸ್. ಸಂಪತ್ಕುಮಾರಾಚಾರ್ಯ
927/1, ''ಶ್ರೀ ಘನ ಶ್ಯಾಂ''
1ನೇ ಮುಖ್ಯ ರಸ್ತೆ, ಲಕ್ಷ್ಮೀಪುರಂ
ಮೈಸೂರು-570 004

ಪರಿವಿಡಿ

ಸಂಕ್ಷೇಪಗಳು

ಆರಿಇಂಎ	:	ಆನುವಲ್ ರಿಪೋರ್ಟ್ ಆನ್ ಇಂಡಿಯನ್ ಎಪಿಗ್ರಾಫಿ
ಆರಿಎ	:	ಆನುವಲ್ ರಿಪೋರ್ಟ್ ಆನ್ ಎಪಿಗ್ರಾಫಿ
ಆರಿಮೈಆಡಿ	:	ಆನುವಲ್ ರಿಪೋರ್ಟ್ ಆಫ್ ದಿ ಮೈಸೂರ ಆರ್ಕಿಯಾಲಜಿಕಲ್ ಡಿಪಾರ್ಟ್‌ಮೆಂಟ್
ಆರಿಸೌಇಂಎ	:	ಆನುವಲ್ ರಿಪೋರ್ಟ್ ಆನ್ ಸೌತ್ ಇಂಡಿಯನ್ ಎಪಿಗ್ರಾಫಿ
ಇಂಎಂ	:	ಇಂಡಿಯನ್ ಎಂಟಿಕ್ವೇರಿ
ಎಇಂ	:	ಎಪಿಗ್ರಾಫಿಯ ಇಂಡಿಕ
ಎಕ	:	ಎಪಿಗ್ರಾಫಿಯ ಕರ್ನಾಟಿಕ
ಕಇ	:	ಕರ್ನಾಟಕ ಇನ್‌ಸ್ಕ್ರಿಪ್‌ಶನ್ಸ್
ಕ್ವಾಜಮಿಸೊ	:	ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸಾಯಿಟಿ
ಜಎಸೊಇಂ	:	ಜರ್ನಲ್ ಆಫ್ ದಿ ಎಪಿಗ್ರಾಫಿಕಲ್ ಸೊಸಾಯಿಟಿ ಆಫ್ ಇಂಡಿಯ
ಜಬಾಬ್ರ್ಯಾಂರಾಏಸೊ	:	ಜರ್ನಲ್ ಆಫ್ ದಿ ಬಾಂಬೆ ಬ್ರ್ಯಾಂಚ್ ಆಫ್ ದಿ ರಾಯಲ್ ಏಶಿಯಾಟಿಕ್ ಸೊಸಾಯಿಟಿ
ವಿಪ್ರೊರೀ	:	ವಿಜಯನಗರ : ಪ್ರೊಗ್ರೆಸ್ ಆಫ್ ರೀಸರ್ಚ್
ಸೌಇಂಇ	:	ಸೌತ್ ಇಂಡಿಯನ್ ಇನ್‌ಸ್ಕ್ರಿಪ್‌ಶನ್ಸ್

1. ವಿಜಯನಗರದ ಇತ್ತೀಚಿನ ಉತ್ಖನನ

ಬಾಲಸುಬ್ರಮಣ್ಯ

ವಿಜಯನಗರ (ಹಂಪಿ)ವನ್ನು ''ರಾಷ್ಟ್ರೀಯ ಯೋಜನೆ'' (National Project) ಎಂದು 1976ರಲ್ಲಿ ಘೋಷಿಸಿದ ಭಾರತ ಸರ್ಕಾರವು ದೊಡ್ಡ ಪ್ರಮಾಣದ ಉತ್ಖನನಕ್ಕೆ ಚಾಲನೆ ನೀಡಿತು. ಭಾರತೀಯ ಪುರಾತತ್ವ ಸರ್ವೇಕ್ಷಣೆಯು ಅದೇ ವರ್ಷ ಉತ್ಖನನ ಪ್ರಾರಂಭಿಸಿತು. ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಈ ಯೋಜನೆಯಡಿಯಲ್ಲಿ 1979ರಲ್ಲಿ ಉತ್ಖನನ ಪ್ರಾರಂಭಿಸಿತು. 1981ರಲ್ಲಿ ಕರ್ನಾಟಕ ಸರ್ಕಾರ ಪ್ರಾರಂಭಿಸಿದ ಹಂಪಿ ಪುನರುತ್ಥಾನ ಯೋಜನೆ (Hampi Resurrection Project)ಯಡಿಯಲ್ಲಿ ಪ್ರತ್ಯೇಕ ಅನುದಾನ ದೊರೆತಿದ್ದರಿಂದ ಉತ್ಖನನವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕೈಗೊಳ್ಳಲು ಸಾಧ್ಯವಾಯಿತು.

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಇಲ್ಲಿಯವರೆಗೆ ಉತ್ಖನನ ಮಾಡಿ ಬೆಳಕಿಗೆ ತಂದ ಕಟ್ಟಡಗಳು ಕೆಳಗಿನಂತಿವೆ.

1. ವಿರೂಪಾಕ್ಷ ದೇವಾಲಯದ ತೇರುಬೀದಿಯ ಪೂರ್ವ ಭಾಗ.
2. 'ಟಂಕಸಾಲೆ' ಎಂದು ಕರೆಯುವ ಆವರಣದೊಳಗಿನ ಎರಡು ಅರಮನೆಯಂತಹ ಕಟ್ಟಡಗಳು.
3. ಪ್ರತಿಷ್ಠಿತ ವ್ಯಕ್ತಿಗಳ ಅರಮನೆಗಳ ಪ್ರದೇಶದಲ್ಲಿ 17 ಅರಮನೆಯಂತಹ ಕಟ್ಟಡಗಳು, ಬಾವಿಗಳು ಮತ್ತು ದೇವಾಲಯಗಳು.
4. ಹಜಾರರಾಮ ದೇವಾಲಯದ ಈಶಾನ್ಯಕ್ಕಿರುವ ಆವರಣದೊಳಗಿನ ಕಟ್ಟಡಗಳು ಮತ್ತು ಅದೇ ದೇವಾಲಯದ ಉತ್ತರಕ್ಕಿರುವ ಕಟ್ಟಡಗಳು.
5. ಸಿಂಘಾರದ ಹೆಬ್ಬಾಗಿಲಿನ ಹತ್ತಿರದ ಒಂದು ಕಟ್ಟಡ.

ಪ್ರತಿಷ್ಠಿತ ವ್ಯಕ್ತಿಗಳ ಅರಮನೆಗಳ ಪ್ರದೇಶ

ದಂಡನಾಯಕನ ಕೋಟೆಯ ಉತ್ತರಕ್ಕಿರುವ ಈ ಪ್ರದೇಶ ಎರಡು ಗುಡ್ಡಗಳ ಮಧ್ಯದ 130 ಎಕರೆಗೂ ಹೆಚ್ಚು ಪ್ರದೇಶವನ್ನು ಆವರಿಸಿದೆ. ಇಲ್ಲಿ 17ಕ್ಕೂ ಹೆಚ್ಚು ಅರಮನೆಗಳಂತಹ ಕಟ್ಟಡಗಳನ್ನು, ಕೆಲವು ಬಾವಿಗಳನ್ನು ಮತ್ತು ದೇವಾಲಯಗಳ ಅವಶೇಷಗಳನ್ನು ಉತ್ಖನನ ಮಾಡಿ ಬೆಳಕಿಗೆ ತರಲಾಗಿದೆ. ಈ ಕಟ್ಟಡಗಳನ್ನು ಅವಲೋಕಿಸಿದಾಗ ಇವುಗಳನ್ನು ರಾಜಪರಿವಾರದವರು, ಮಂತ್ರಿಗಳು, ಅಧಿಕಾರಿಗಳು ಮುಂತಾದ ಪ್ರತಿಷ್ಠಿತ ವ್ಯಕ್ತಿಗಳು ಉಪಯೋಗಿಸುತ್ತಿದ್ದರೆಂದು ತಿಳಿಯುತ್ತದೆ. ಇಲ್ಲಿಯ ಕಟ್ಟಡಗಳ ಸಾಮಾನ್ಯ ಅಂಶಗಳು ಕೆಳಗಿನಂತಿವೆ.

1. ಅರಮನೆಗಳು ಉತ್ತರ ಅಥವಾ ಪೂರ್ವಾಭಿಮುಖವಾಗಿವೆ. ಕಟ್ಟಡಗಳು ಅನೇಕ ಹಂತಗಳ ಮೇಲಿದ್ದು, ಮೇಲಿನ ಹಂತಗಳು ಹಿಂದಕ್ಕೆ ಸರಿಯುತ್ತ ಹೋಗುತ್ತವೆ ಮತ್ತು ಮಧ್ಯದ ಹಂತಗಳು U. ಆಕಾರದಲ್ಲಿವೆ.

2. ಹಂತಗಳ ಅಧಿಷ್ಠಾನಗಳು ಅಲಂಕಾರಮಯವಾದ ಕಲ್ಲು ದಿಂಡುಗಳಿಂದ ನಿರ್ಮಿತವಾಗಿವೆ. ಕೆಲವು ಹಂತಗಳ ಮುಂಭಾಗವನ್ನು ವಿವಿಧ ಪ್ರಾಣಿ ಮತ್ತು ಸಸ್ಯಗಳ ಉಬ್ಬು ಶಿಲ್ಪಗಳಿಂದ ಅಲಂಕರಿಸಲಾಗಿದೆ.

3. ಪ್ರತಿ ಅರಮನೆಯ ಸುತ್ತ ಪ್ರಾಕಾರವಿದೆ. ಪ್ರಾಕಾರ ಗೋಡೆ ಕೆಳಭಾಗದಲ್ಲಿ ಹೆಚ್ಚು ದಪ್ಪವಿದ್ದು ಮೇಲೆ ಹೋದಂತೆ ದಪ್ಪ ಕಡಿಮೆಯಾಗುತ್ತದೆ.

4. ಮುಖ್ಯ ಕಟ್ಟಡಗಳ ಪ್ರವೇಶವು ಮುಂದಿನ ಹಜಾರದಿಂದ ಮೆಟ್ಟಿಲುಗಳ ಮೂಲಕ ಇದೆ. ಮೆಟ್ಟಿಲುಗಳ ಎರಡೂ ಬದಿಗೆ ಕಲ್ಲಿನ ಅಥವಾ ಇಟ್ಟಿಗೆ-ಗಾರೆಯ ಆಸರೆ (balustrade) ಇವೆ. ಮುಂದಿನ ಭಾಗದಲ್ಲಿ ಗೋಡೆಯಿರದೆ ಕಂಬಗಳು ಮಾತ್ರ ಇವೆ.

5. ಕಟ್ಟಡದ ಕೊನೆಯ ಹಂತದ ಮೇಲೆ ಆಯತಾಕಾರದ ಮುಖ್ಯ ಕೊಟಡಿ ಇದೆ. ಈ ಕೊಟಡಿಯ ಸುತ್ತ ಪ್ರದಕ್ಷಿಣೋಪಾದಿಯ ದಾರಿಯಿದೆ. ಕೆಲವು ಕಟ್ಟಡಗಳಲ್ಲಿ ಈ ಕೊಟಡಿಯ ಮೂರು ಬದಿಗೆ ಒಂದೊಂದು ಮತ್ತು ಮುಂದೆ ಎರಡು ಕೊಟಡಿಗಳಿವೆ. ಕಟ್ಟಡದೊಳಗೆ ನೆಲಕ್ಕೆ ಮತ್ತು ಗೋಡೆಗೆ ಅನೇಕ ಸಲ ಗಾರೆ ಮಾಡಿರುವುದರಿಂದ ಗಾರೆಯ ಅನೇಕ ಪದರುಗಳನ್ನು ನೋಡಬಹುದು. ಕೆಲವು ಕಟ್ಟಡಗಳಲ್ಲಿ ಶೌಚಾಲಯ ಮತ್ತು ಬಚ್ಚಲುಮನೆಗಳಿವೆ.

6. ಕಟ್ಟಡಗಳನ್ನು ಸಣ್ಣ ಕಲ್ಲು ಮತ್ತು ಮಣ್ಣಿನಿಂದ ಕಟ್ಟಲಾಗಿದೆ. ಬಾಗಿಲ ಚೌಕಟ್ಟಿನ ಹತ್ತಿರ, ಗೂಡುಗಳಿಗೆ ಮತ್ತು ಕಮಾನುಗಳಿಗೆ ಇಟ್ಟಿಗೆಗಳನ್ನು ಉಪಯೋಗಿಸಲಾಗಿದೆ. ಗೋಡೆಗಳಿಗೆ ಮಣ್ಣಿನ ಮತ್ತು ಸುಣ್ಣದ ಗಾರೆಯನ್ನು ಮಾಡಲಾಗಿದೆ. ಕೆಲವು ಕಟ್ಟಡಗಳನ್ನು ಬಣ್ಣದ ಚಿತ್ರಗಳಿಂದ ಅಲಂಕರಿಸಿದ ಕುರುಹುಗಳಿವೆ. ಗಾರೆಯ ಲತಾತೋರಣ, ಕಮಲದ ಹೂ, ಮನುಷ್ಯಾಕೃತಿಯ ಗೊಂಬೆ ಮುಂತಾದವುಗಳನ್ನು ಅಲಂಕಾರಕ್ಕಾಗಿ ಉಪಯೋಗಿಸಲಾಗಿದೆ.

7. ಕಟ್ಟಡಗಳಿಗೆ ಚೌಕಾಕಾರ, ಆಯತಾಕಾರ ಅಥವಾ ಅನೇಕ ಭುಜಗಳ ಮತ್ತು ಸಂಕೀರ್ಣ ವಿನ್ಯಾಸದ ಮರದ ಕಂಬಗಳನ್ನು ಉಪಯೋಗಿಸಲಾಗಿದೆ (ಉತ್ಖನನದಲ್ಲಿ ಇವು ಸುಟ್ಟ ಇದ್ದಲಿನ ರೂಪದಲ್ಲಿ ದೊರೆತಿವೆ).

8. ಕೆಲವು ಅರಮನೆಗಳಲ್ಲಿ ಪ್ರಧಾನ ಕಟ್ಟಡದ ಸುತ್ತ, ಮುಂಭಾಗ ಹೊರತುಪಡಿಸಿ, ಕೊಟಡಿಗಳ ಸಾಲಿದೆ.

9. ಕಟ್ಟಡದ ಮೇಲಿನ ಮಹಡಿ ಅಥವಾ ಮಾಳಿಗೆಗೆ ಹತ್ತಲು ಮರದ ಹಲಗೆಯ ಏಣಿ ಇದ್ದ ಕುರುಹುಗಳಿವೆ.

10. ಕಟ್ಟಡದ ಮೇಲ್ಭಾಗವನ್ನು ಗಾರೆಯ ಗೋಪುರದ ಆಕಾರಗಳಿಂದ ಅಲಂಕರಿಸಲಾಗಿತ್ತು. ಇಂತಹ ಕೆಲವು ಭಾಗಗಳು ಉತ್ಖನನದಲ್ಲಿ ದೊರೆತಿವೆ.

ಪ್ರತಿಷ್ಠಿತ ವ್ಯಕ್ತಿಗಳ ಅರಮನೆ 1

ಬೃಹದಾಕಾರದ ಈ ಅರಮನೆಗೆ ಎರಡು ಪ್ರಾಕಾರಗಳಿವೆ. ಉತ್ತರಾಭಿಮುಖವಾಗಿರುವ ಆವರಣದೊಳಕ್ಕೆ ಬರಲು ಮುಂದೆ 13 ಮೆಟ್ಟಿಲುಗಳಿವೆ. ಪ್ರಾಕಾರದ ಮುಂದಿನ ಗೋಡೆಯನ್ನು ದೊಡ್ಡ ಕಲ್ಲುಗಳನ್ನು ಮಧ್ಯದಲ್ಲಿ ಸಂದಿಯಿಲ್ಲದಂತೆ ಸೇರಿಸಿ ನಿರ್ಮಿಸಲಾಗಿದೆ. ಉಳಿದ ಮೂರು ಕಡೆ ಚಿಕ್ಕ ಕಲ್ಲುಗಳನ್ನು ಉಪಯೋಗಿಸಲಾಗಿದೆ. ಒಳ ಪ್ರಾಕಾರದ ಗೋಡೆ ಮುಂಭಾಗದಲ್ಲಿ ಇಲ್ಲ. ಒಳ ಆವರಣದಲ್ಲಿ ಮಧ್ಯದಲ್ಲಿ ಮುಖ್ಯ ಕಟ್ಟಡ, ಪೂರ್ವ ಮತ್ತು ಪಶ್ಚಿಮಕ್ಕೆ ಕೊಟಡಿಗಳಿವೆ, ಮುಂದೆ ಒಂದು ಬಾವಿ ಮತ್ತು ಹಿಂದೆ ಒಂದು ತೊಟ್ಟಿ ಇವೆ.

ಮುಖ್ಯ ಕಟ್ಟಡವನ್ನು ತಗ್ಗು ದಿಣ್ಣೆ ಇರುವ ಸ್ಥಳದಲ್ಲಿ ನಿರ್ಮಿಸಿರುವುದರಿಂದ ವೇದಿಕೆಯನ್ನು ಉತ್ತರ ದಿಕ್ಕಿಗೆ ಮಾತ್ರ ಪೂರ್ಣ ಪ್ರಮಾಣದಲ್ಲಿ ಕಟ್ಟಿ ಉಳಿದ ಕಡೆ ಅವಶ್ಯಕತೆಗೆ ಅನುಗುಣವಾಗಿ ಚಿಕ್ಕದಾಗಿ ಕಟ್ಟಲಾಗಿದೆ. ಮೊದಲನೇ ಹಂತದ ಅಧಿಷ್ಠಾನವು ಪದ್ಮದಳ, ಕುಮುದ, ಕಂಠ ಮತ್ತು ಕೀರ್ತಿಮುಖಗಳಿರುವ ಕಪೋತವನ್ನು ಹೊಂದಿದೆ. ಮೊದಲನೇ ಹಂತಕ್ಕೆ ಹೋಗಲು ಐದು ಮೆಟ್ಟಿಲುಗಳಿವೆ. ಎರಡನೇ ಹಂತವು U ಆಕಾರದಲ್ಲಿದೆ. ಇದರ ಮೇಲೆ ಹೋಗಲು ಮೂರು ಮೆಟ್ಟಿಲುಗಳಿವೆ. ಮೆಟ್ಟಿಲುಗಳ ಪಕ್ಕದಲ್ಲಿ ಗಾರೆಯ ಸುಂದರವಾದ ಯಾಳಿ ಆಸರೆ (balustrade)ಗಳಿವೆ. ಈ ಹಂತದಲ್ಲಿ ಪೂರ್ವ ಮತ್ತು ಪಶ್ಚಿಮಕ್ಕೆ ಎದುರುಬದುರಾಗಿ ಎರಡು ಕೊಟಡಿಗಳಿವೆ.

ಮೂರನೆಯ ಹಂತವನ್ನು ತಲುಪಲು ಎರಡೂ ಬದಿಗೆ ಎರಡೆರಡು ಮೆಟ್ಟಿಲುಗಳಿವೆ. ಇವುಗಳ ಒಂದು ಬದಿಗೆ ಸುರುಳಿಯ ಆಸರೆಯಿದೆ. ಈ ಹಂತದ ಅಧಿಷ್ಠಾನವನ್ನು ಕಮಲದ ದಳ, ಅಷ್ಟಭುಜ ಕುಮುದ, ಕಂಠ ಮತ್ತು ಕಪೋತಗಳಿಂದ ಅಲಂಕರಿಸಲಾಗಿದೆ. ಕಂಠಭಾಗದಲ್ಲಿ ಕೋಲಾಟದ ಸುಂದರ ಉಬ್ಬು ಶಿಲ್ಪಗಳಿವೆ. ಈ ಹಂತದಲ್ಲಿ ಮಧ್ಯದಲ್ಲಿ ಆಯತಾಕಾರದ ಒಂದು ಕೊಟಡಿಯಿದೆ. ಇದರ ಸುತ್ತಲೂ ಪ್ರದಕ್ಷಿಣೋಪಾದಿಯಲ್ಲಿ ದಾರಿಯಿದೆ. ಮಧ್ಯದ ಕೊಟಡಿಯ ಪೂರ್ವ, ದಕ್ಷಿಣ ಮತ್ತು ಪಶ್ಚಿಮ ದಿಕ್ಕಿಗೆ ಮೂರು ಕೊಟಡಿಗಳಿವೆ. ಆಗ್ನೇಯ ಮೂಲೆಯಲ್ಲಿ ಬಚ್ಚಲು ಮನೆಯಿದೆ.

ಈ ಕಟ್ಟಡದ ಉತ್ಖನನದಲ್ಲಿ ಚೈನಾದೇಶದ ಪಿಂಗಾಣಿ ಬಟ್ಟಲುಗಳು, ಮಣಿಗಳು ದೊರೆತಿವೆ. ಪಿಂಗಾಣಿಯಲ್ಲಿ ಮನುಷ್ಯ, ಪ್ರಾಣಿ, ಹೂಗಳ ಚಿತ್ರಗಳಿವೆ.



1. ಪ್ರತಿಷ್ಠಿತ ವ್ಯಕ್ತಿಗಳ ಅರಮನೆ 1, ಉತ್ಖನನಕ್ಕಿಂತ ಮೊದಲು



2. ಪ್ರತಿಷ್ಠಿತ ವ್ಯಕ್ತಿಗಳ ಅರಮನೆ 1, ಉತ್ಖನನ ಮತ್ತು ಸಂರಕ್ಷಣೆಯ ನಂತರ

2. ವಿಜಯನಗರದ ಸ್ಮಾರಕಗಳ ಸಂರಕ್ಷಣೆ


ಡಿ.ವಿ.ದೇವರಾಜ್ ಮತ್ತು ಚನ್ನಬಸಪ್ಪ ಎಸ್. ಪಾಟೀಲ

ವಿಜಯನಗರದ ಸ್ಮಾರಕಗಳ ಸಂರಕ್ಷಣೆಯು ಸಂಶೋಧನೆಯಷ್ಟೇ ಮುಖ್ಯವಾಗಿದೆ. ಕ್ರಿ.ಶ. 1565ರಲ್ಲಿ ವಿಜಯನಗರದ ಪತನವಾದನಂತರ ವೈರಿ ಸೈನ್ಯದ ಕೈಯಲ್ಲಿ ಧ್ವಂಸಗೊಂಡಿದ್ದಲ್ಲದೆ ಅಂದಿನಿಂದ ಇಂದಿನವರೆಗೂ ನಿರಂತರವಾಗಿ 400 ವರ್ಷಗಳಿಗೂ ಹೆಚ್ಚು ಕಾಲ ಮಳೆ, ಬಿಸಿಲು, ಸಸ್ಯ-ಗಿಡ-ಮರಗಳು ಮುಂತಾದ ನೈಸರ್ಗಿಕ ಕಾರಣಗಳಿಂದ ಮತ್ತು ಉಳುಮೆ ಮಾಡುವುದು ಅಥವಾ ಮನೆ, ಮಠ, ಅಂಗಡಿ, ಹೋಟೆಲು ಮುಂತಾದವುಗಳನ್ನು ಕಟ್ಟುವುದರಿಂದ ಮಾನವನಿಂದ ಈ ಸ್ಮಾರಕಗಳಿಗೆ ಧಕ್ಕೆಯುಂಟಾಗುತ್ತಿದೆ. ಉದಾಹರಣೆಗಾಗಿ 1856ರಲ್ಲಿ ಅಲೆಕ್ಸಾಂಡರ್ ಗ್ರಿನ್‌ಲಾ ತೆಗೆದ 60 ಸ್ಮಾರಕಗಳ ಛಾಯಾಚಿತ್ರಗಳನ್ನು ಮತ್ತು 1983ರಲ್ಲಿ ಜಾನ್ ಗಾಲಿಂಗ್ಸ್ ತೆಗೆದ ಅದೇ ಸ್ಮಾರಕಗಳ ಛಾಯಾಚಿತ್ರಗಳನ್ನು ನೋಡಿದಾಗ ಸುಮಾರು 130 ವರ್ಷಗಳ ಅಂತರದಲ್ಲಿ ಈ ಸ್ಮಾರಕಗಳು ಹಾಳಾದ ತೀವ್ರತೆಯನ್ನು ಗಮನಿಸಬಹುದು.[1] ವಿಠಲ ದೇವಾಲಯದ ಪೂರ್ವ ಮಹಾದ್ವಾರದ ಮುಂದಿನ ದೀಪಸ್ತಂಭ ಬಿದ್ದು ತುಂಡಾಗಿದೆ,[2] ಪಕ್ಕದಲ್ಲಿರುವ ಮಂಟಪ ಬಿದ್ದಿದೆ,[3] ಮತ್ತು ಕಲ್ಲಿನ ರಥದ ಗೋಪುರ ಈಗಿಲ್ಲ.[4] ಕೃಷ್ಣದೇವಾಲಯದ ಆವರಣದೊಳಗಿನ ಚಿಕ್ಕ ಗುಡಿಯೊಂದು ನಾಶವಾಗಿದೆ.[5] ತುಲಾಭಾರದ ಮೇಲಿದ್ದ ಶಂಖ 1856ರಲ್ಲಿ ಇರಲಿಲ್ಲ, ಆದರೆ ಆಗ ಇದ್ದ ಚಕ್ರ ಈಗಿಲ್ಲ.[6] ರಾಣಿಯ ಸ್ನಾನಗೃಹದ ಮೇಲಿದ್ದ ಕಟ್ಟಡವೂ ಇತ್ತೀಚೆಗೆ ಬಿದ್ದು ಹೋಗಿದೆ.[7] ಅಭಿವೃದ್ಧಿಯ ಹೆಸರಿನಲ್ಲಿ ಸರ್ಕಾರದಿಂದಲೇ ಸ್ಮಾರಕಗಳಿಗೆ ಧಕ್ಕೆಯಾಗಿರುವುದನ್ನೂ ಸಹ ಗಮನಿಸಬಹುದು. ಕಡಲೆಕಾಳು ಗಣೇಶನ ದೇವಾಲಯದ ಮುಂದಿರುವ ಅಗುಸೆಯಿಂದ ವಿರೂಪಾಕ್ಷ ತೇರುಬೀದಿಗೆ ಹೋಗುವ ರಸ್ತೆಯು 1856ರಲ್ಲಿ ಹಿಂದೆ ವಿಜಯನಗರ ಕಾಲದಲ್ಲಿ ನಿರ್ಮಿಸಿದ ರಸ್ತೆಯಂತೆಯೇ ಮೂಲ ರೂಪದಲ್ಲಿತ್ತು. ಇಲ್ಲಿನ ಇಳಿಜಾರು ರಸ್ತೆಯನ್ನು ದೊಡ್ಡ ಚಪ್ಪಡಿ ಕಲ್ಲುಗಳ ಮೆಟ್ಟಿಲುಗಳಿಂದ ನಿರ್ಮಿಸಲಾಗಿತ್ತು ಮತ್ತು ಅದರ ಪಕ್ಕದಲ್ಲಿ 12 ಕಂಬಗಳ ಮಂಟಪವೊಂದು ಸುಸ್ಥಿತಿಯಲ್ಲಿತ್ತು. ವಿಜಯನಗರ ಕಾಲದ ಈ ರಸ್ತೆ ಮೋಟಾರು ವಾಹನಗಳಿಗೆ ಅನುಕೂಲವಾಗಿರಲಿಲ್ಲವಾದುದರಿಂದ ಅದನ್ನು ಮುಚ್ಚಿ, ಬಹಳ ಎತ್ತರಕ್ಕೆ ಮಣ್ಣು ಹಾಕಿ, ಹೊಸ ರಸ್ತೆಯನ್ನು ನಿರ್ಮಿಸಿ ಡಾಂಬರ್ ಹಾಕಲಾಗಿದೆ. ಈ ರಸ್ತೆಯ ಅಭಿವೃದ್ಧಿಗೆ(!) ಅಡ್ಡ ಬಂದ 12 ಕಂಬಗಳ ಮಂಟಪವನ್ನು ನಿರ್ದಾಕ್ಷಿಣ್ಯವಾಗಿ ನಾಶಪಡಿಸಲಾಗಿದೆ.[8] ಇದೇ ರೀತಿ ವಾಹನಗಳ ಓಡಾಟಕ್ಕೆ ಅನುಕೂಲವಾಗುವಂತೆ ಅರೆಶಂಕರ ಬಾಗಿಲಿನ ಮುಂದಿನ ಕೋಟೆಯ ಭಾಗವನ್ನು ತೆಗೆದುಹಾಕಲಾಗಿದೆ.[9] ವಿರೂಪಾಕ್ಷ ದೇವಾಲಯದ ಪೂರ್ವ ದಿಕ್ಕಿನ ಮಹಾದ್ವಾರದ ಮುಂದೆ 1856ರಲ್ಲಿ ಯಾವ ಆಧುನಿಕ ಕಟ್ಟಡಗಳೂ ಇರಲಿಲ್ಲ.[10] ಇದೇ ದೇವಾಲಯದಲ್ಲಿ ಕೃಷ್ಣದೇವರಾಯ ನಿರ್ಮಿಸಿದ ಗೋಪುರದ ಪಕ್ಕದಲ್ಲಿಯ ಕಂಬಗಳ ಕೈಸಾಲೆಯನ್ನು ಗೋಡೆ ಕಟ್ಟಿ ಅಂದಗೆಡಿಸಲಾಗಿದೆ.[11] ಅನಂತಶಯನಗುಡಿಯಲ್ಲಿಯ ದೇವಾಲಯದ ಮುಂದಿನ ವಿಶಾಲವಾದ ಬಯಲು ಪ್ರದೇಶದಲ್ಲಿ ಮನೆಗಳನ್ನು ಕಟ್ಟಿರುವುದರಿಂದ ದೇವಾಲಯ ಕಾಣದಂತಾಗಿದೆ.[12]

ಸುಮಾರು ಇಪ್ಪತ್ತೈದು ಚ.ಕಿ.ಮೀ. ವ್ಯಾಪಿಸಿರುವ ಪಟ್ಟಣ ಪ್ರದೇಶದಲ್ಲಿ ಅನೇಕ ಸ್ಮಾರಕಗಳಿವೆ. ಇವುಗಳಲ್ಲಿ ಪ್ರಮುಖವಾದ 56 ಸ್ಮಾರಕಗಳನ್ನು ಭಾರತೀಯ ಪುರಾತತ್ವ ಸರ್ವೇಕ್ಷಣೆ, ಭಾರತ ಸರ್ಕಾರ ಸಂರಕ್ಷಿಸುತ್ತಿದೆ. ರಾಜ್ಯ ಸರ್ಕಾರವು 1961ರಲ್ಲಿ ವಿರೂಪಾಕ್ಷ ದೇವಾಲಯವನ್ನು ಸಂರಕ್ಷಿತ ಸ್ಮಾರಕವೆಂದು ಘೋಷಿಸಿದೆ. ಮಣ್ಣಿನಲ್ಲಿ ಮುಚ್ಚಿಹೋದ ಅವಶೇಷಗಳನ್ನು ಬೆಳಕಿಗೆ ತರುವ ಉತ್ಖನನ ಕಾರ್ಯಕ್ಕೆ ಪ್ರಾಶಸ್ತ್ಯ ನೀಡುವುದಕ್ಕಾಗಿ ಭಾರತ ಸರ್ಕಾರವು 1976ರಲ್ಲಿ ಹಂಪೆಯನ್ನು ರಾಷ್ಟ್ರೀಯ ಯೋಜನೆಯೆಂದು (National Project) ಘೋಷಿಸಿ ಕಾರ್ಯ ಪ್ರಾರಂಭಿಸಿತು. ನಮ್ಮ ನಿರ್ದೇಶನಾಲಯವು ಈ ಯೋಜನೆಯಡಿಯಲ್ಲಿ 1979ರಲ್ಲಿ ಉತ್ಖನನ ಕಾರ್ಯದಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣೆಯೊಂದಿಗೆ ಜೊತೆಗೂಡಿತು. ಹಂಪೆಯ ಮಹತ್ವವನ್ನು ಮನಗಂಡ ಕರ್ನಾಟಕ ಸರ್ಕಾರವು 1981ರಲ್ಲಿ ಹಂಪಿ ಪುನರುತ್ಥಾನ ಯೋಜನೆ (Hampi Resurrection Project) ಯನ್ನು ಪ್ರಾರಂಭಿಸಿ ಪ್ರತ್ಯೇಕ ಸಿಬ್ಬಂದಿ ಮತ್ತು ಅನುದಾನವನ್ನು ನೀಡಿತು. ಈ ಯೋಜನೆಯಡಿಯಲ್ಲಿ ಗಣನೀಯ ಪ್ರಮಾಣದಲ್ಲಿ ಸಂಶೋಧನೆ ಮತ್ತು ಸಂರಕ್ಷಣೆ ಕೈಗೊಳ್ಳಲು ಸಾಧ್ಯವಾಯಿತು. ವಿಜಯನಗರ ಪಟ್ಟಣದಲ್ಲಿ ನೂರಾರು ಸ್ಮಾರಕಗಳಿದ್ದರೂ ಕೇಂದ್ರ ಸರ್ಕಾರದಿಂದ ಸಂರಕ್ಷಿತ ಸ್ಮಾರಕವೆಂದು ಘೋಷಿಸಲ್ಪಟ್ಟ 56 ಸ್ಮಾರಕಗಳು ಮತ್ತು ರಾಜ್ಯ ಸರ್ಕಾರದಿಂದ ಸಂರಕ್ಷಿತ ಸ್ಮಾರಕವೆಂದು ಘೋಷಿಸಲ್ಪಟ್ಟ ವಿರೂಪಾಕ್ಷ ದೇವಾಲಯ ಮಾತ್ರ ಕಾನೂನುಬದ್ಧವಾಗಿ ಪುರಾತತ್ವ ಇಲಾಖೆಗಳ ಸುಪರ್ದಿಗೆ ಒಳಪಟ್ಟಿದ್ದವು. ಉಳಿದ ಸ್ಮಾರಕಗಳ ಸಂರಕ್ಷಣೆ ಮತ್ತು ಸ್ಮಾರಕಗಳ ಪರಿಸರವನ್ನು ಕಾಪಾಡುವ ಉದ್ದೇಶದಿಂದ ಇಡೀ ಪಟ್ಟಣ ಮತ್ತು ಅದರ ಸುತ್ತಲಿನ ಪ್ರದೇಶವನ್ನು ರಾಜ್ಯ ಸರ್ಕಾರವು ಘೋಷಿತ ಪ್ರದೇಶ (Notified Area)ವೆಂದು ಘೋಷಿಸಿದೆ. ಇಲ್ಲಿಯ ಸ್ಮಾರಕಗಳ ಅಧ್ಯಯನ, ಸಂಶೋಧನೆ ಮುಂದುವರೆದಂತೆ ಅವುಗಳ ಮಹತ್ವವೂ ಹೆಚ್ಚುತ್ತ ಹೋಗುತ್ತಿದೆ. ಈಗ ಈ ಸ್ಮಾರಕಗಳು ಜಾಗತಿಕ ಪರಂಪರೆಯ ಸ್ಮಾರಕಗಳ (World Heritage Monuments) ಪಟ್ಟಿಗೆ ಸೇರಿವೆ.



1. ವಿರೂಪಾಕ್ಷ ತೇರುಬೀದಿಯ ಮಂಟಪಗಳು, ಸಂರಕ್ಷಣೆಯ ಹಂತದಲ್ಲಿ



2. ವಿರೂಪಾಕ್ಷ ತೇರುಬೀದಿಯ ಮಂಟಪಗಳು, ಸಂರಕ್ಷಣೆಯ ನಂತರ

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ವಿಜಯನಗರದಲ್ಲಿ ಇಲ್ಲಿಯವರೆಗೆ ಕೈಗೊಂಡ ಸಂರಕ್ಷಣಾ ಕಾರ್ಯಗಳನ್ನು ಇಲ್ಲಿ ಸ್ಥೂಲವಾಗಿ ವಿವರಿಸಲಾಗಿದೆ.

1. ವಿರೂಪಾಕ್ಷ ದೇವಾಲಯ: ವಿಜಯನಗರದ ಅಧಿದೇವತೆಯಾದ ವಿರೂಪಾಕ್ಷನ ದೇವಾಲಯವು ತುಂಗಭದ್ರೆಯ ದಂಡೆಯ ಮೇಲಿನ ಒಂದು ದೊಡ್ಡ ಸಂಕೀರ್ಣವಾಗಿದೆ. ಕೃಷ್ಣದೇವರಾಯ ಕಟ್ಟಿಸಿದ ಮಹಾರಂಗಮಂಟಪದ ಛತ್ತಿನಲ್ಲಿರುವ ಗಿರಿಜಾಕಲ್ಯಾಣ, ದಶಾವತಾರ, ಕಾಮದಹನಮೂರ್ತಿ, ತ್ರಿಪುರಾಂತಕ ಮುಂತಾದವುಗಳನ್ನೊಳಗೊಂಡ ವರ್ಣಚಿತ್ರಗಳು ಗಾಳಿ-ಮಳೆ-ಧೂಳಿನಿಂದ ಹಾಳಾಗುತ್ತಿದ್ದವು. ಇವುಗಳ ಸಂರಕ್ಷಣಾ ಕಾರ್ಯವನ್ನು 1978ರಲ್ಲಿ ಲಕ್ನೋನಲ್ಲಿರುವ ರಾಷ್ಟ್ರೀಯ ಸಾಂಸ್ಕೃತಿಕ ಆಸ್ತಿ ಸಂರಕ್ಷಣಾ ಪ್ರಯೋಗಾಲಯಕ್ಕೆ (National Laboratory for Conservation of Cultural Property) ವಹಿಸಿಕೊಡಲಾಯಿತು. ವರ್ಣಚಿತ್ರಗಳನ್ನು ರಸಾಯನಿಕಗಳಿಂದ ಸ್ವಚ್ಛಗೊಳಿಸಿ ಅವುಗಳ ಮೇಲೆ ಸಂರಕ್ಷಣಾ ಲೇಪನವನ್ನು ಮಾಡಲಾಗಿದೆ.[13]

ದೊಡ್ಡಗೋಪುರವನ್ನು ಹೊತ್ತ ಮಹಾದ್ವಾರದ ಕಲ್ಲಿನ ತೊಲೆಯಲ್ಲಿ ಬಿರುಕುಂಟಾಗಿ ಗೋಪುರಕ್ಕೆ ಧಕ್ಕೆಯಾಗಿತ್ತು. ಈ ತೊಲೆಯೊಳಗೆ ತಗ್ಗು ಮಾಡಿ ಕಬ್ಬಿಣದ ಚಿಕ್ಕ ತೊಲೆಯನ್ನು (I section girder) ಹುದುಗಿಸಿ ಬಲಪಡಿಸಲಾಗಿದೆ. ಗೋಪುರದ ವಿವಿಧ ತಳ(ಮಹಡಿ)ಗಳಲ್ಲಿ ಬಾಗಿಲಿನಾಕಾರದ ಕಿಟಕಿಗಳಿವೆ. ಇವು ತೆರೆದುಕೊಂಡಿದ್ದು ಮಂಗಗಳು ಒಳಗೆ ಸೇರಿ ವಾಸಮಾಡಲು ಅನುಕೂಲವಾಗಿದ್ದು, ಮಂಗಗಳ ಓಡಾಟದಿಂದ ಗೋಪುರದ ಗಾರೆಯ ಕಲಾತ್ಮಕ ಭಾಗಗಳಿಗೆ ಧಕ್ಕೆಯಾಗುತ್ತಿತ್ತು. ತಂತಿಯ ಜಾಲರಿಯ ಚೌಕಟ್ಟುಗಳಿಂದ ಕಿಟಕಿಗಳನ್ನು ಮುಚ್ಚಿ ಮಂಗಗಳ ಕಾಟವನ್ನು ತಪ್ಪಿಸಲಾಗಿದೆ. ಮೇಲೆ ಹತ್ತಲು ಗೋಪುರದೊಳಗೆ ಮಾಡಿದ್ದ ಮೆಟ್ಟಿಲುಗಳು ಹಾಳಾಗಿದ್ದವು. ಇವುಗಳನ್ನು ಸರಿಪಡಿಸಲಾಗಿದೆ. ಗೋಪುರದ ಮೇಲೆ ಪಾಚಿಯಂತಹ ಚಿಕ್ಕ ಸಸ್ಯಗಳು ಬೆಳೆದಿದ್ದವು. ಅಲ್ಲಲ್ಲಿ ಚಿಕ್ಕ ಕುಳಿಗಳು ಮತ್ತು ಬಿರುಕುಗಳು ಉಂಟಾಗಿದ್ದವು. ಕೆಲವು ಗಾರೆಯ ಶಿಲ್ಪಗಳು ಹಾಳಾಗಿದ್ದವು. ಗೋಪುರದ ಹೊರಮೈಯನ್ನು ಸ್ವಚ್ಛಗೊಳಿಸಿ, ಕುಳಿ, ಮತ್ತು ಬಿರುಕುಗಳನ್ನು ಗಾರೆಯಿಂದ ಮುಚ್ಚಿ, ಗಾರೆ ಶಿಲ್ಪಗಳನ್ನು ಬಲಪಡಿಸಲಾಗಿದೆ. ಇಡೀ ಗೋಪುರಕ್ಕೆ ಜಲನಿರೋಧಕವಾದ ಸಿಮೆಂಟ್ ಬಣ್ಣ (snowcem) ಬಳಿಯಲಾಗಿದೆ. ಕೃಷ್ಣದೇವರಾಯ ಕಟ್ಟಿಸಿದ ಚಿಕ್ಕ ಗೋಪುರ ಮತ್ತು ಉತ್ತರ ದಿಕ್ಕಿಗಿರುವ ಕನಕಗಿರಿ ಗೋಪುರವನ್ನೂ ಇದೇ ರೀತಿ ಸಂರಕ್ಷಿಸಲಾಗಿದೆ.


ದೇವಾಲಯದ ಹೊರಗೆ ದೊಡ್ಡ ಗೋಪುರದ ಪಕ್ಕದಲ್ಲಿ ಕೃಷ್ಣದೇವರಾಯನ ಶಾಸನವು[14] ಎರಡು ತುಂಡಾಗಿ ಬಿದ್ದಿತ್ತು. ಇದನ್ನು ದೇವಾಲಯದ ಆವರಣದ ಒಳಗೆ ತಂದು ಒಂದು ಕಂಬವನ್ನು ಎರಡು ಭಾಗಗಳಲ್ಲಿ ಸೀಳಿ, ಅವುಗಳ ಮಧ್ಯದಲ್ಲಿ ಶಾಸನದ ಎರಡು ಭಾಗಗಳನ್ನು ಮೊದಲಿನಂತೆ ಸೇರಿಸಿ ಭದ್ರವಾಗಿ ನಿಲ್ಲಿಸಲಾಗಿದೆ. ಮಹಾದ್ವಾರವನ್ನು ಪ್ರವೇಶಿಸಿದ ಕೂಡಲೇ ಇದು ಬಲಭಾಗದಲ್ಲಿದೆ.[15]

2. ವಿರೂಪಾಕ್ಷ ತೇರುಬೀದಿ: ವಿರೂಪಾಕ್ಷ ದೇವಾಲಯದ ಮುಂದೆ 720 ಮೀ. ಉದ್ದ ಮತ್ತು 35 ಮೀ. ಅಗಲವಾದ ವಿಶಾಲವಾದ ತೇರುಬೀದಿಯಿದೆ. ಬೀದಿಯ ಎರಡೂ ಬದಿಗೆ ಮಂಟಪಗಳ ಸಾಲಿದೆ. ವಿಜಯನಗರ ಕಾಲದಲ್ಲಿ ಇದೊಂದು ಪ್ರಮುಖ ಮಾರುಕಟ್ಟೆಯಾಗಿತ್ತು. ಇಲ್ಲಿ ಮುತ್ತು ರತ್ನಗಳ ವ್ಯಾಪಾರ ನಡೆಯುತ್ತಿತ್ತು. ಇಲ್ಲಿಯ ಮಂಟಪಗಳು ಹಾಳಾಗಿದ್ದು, ರಸ್ತೆಯು ಮಣ್ಣಲ್ಲಿ ಮುಚ್ಚಿ ಹೋಗಿದೆ. ಈ ಬೀದಿಯನ್ನು ಮೂಲ ರೂಪಕ್ಕೆ ತರುವ ಉದ್ದೇಶದ ಪ್ರಥಮ ಹಂತವಾಗಿ ಬೀದಿಯ ಪೂರ್ವ ತುದಿಯಲ್ಲಿ ಉತ್ಖನನ ಪ್ರಾರಂಭಿಸಲಾಯಿತು. ಉತ್ಖನನದಿಂದ 1.75 ಮೀ. ಆಳದಲ್ಲಿದ್ದ ಕಲ್ಲು ಚಪ್ಪಡಿ ಹಾಕಿದ ರಸ್ತೆಯು ಬೆಳಕು ಕಂಡಿತು. ಅಂತೆಯೇ ಪೂರ್ವ ತುದಿಯಲ್ಲಿನ ಉತ್ಸವ ಮಂಟಪ ಮತ್ತು ಬೀದಿಯ ಎರಡೂ ಬದಿಗಿರುವ ಮಂಟಪಗಳ ಮುಚ್ಚಿಹೋಗಿದ್ದ ಅಧಿಷ್ಠಾನವೂ ಹೊರಗೆ ಬಂದಿತು.[16]

ರಸ್ತೆಗೆ ಹಾಸಿದ ಕಲ್ಲು ಚಪ್ಪಡಿಗಳು ಮೇಲೆ, ಕೆಳಗೆ ಸರಿದಿದ್ದವು. ಅವುಗಳನ್ನು ಕಿತ್ತು ಸಮತಟ್ಟಾಗಿ ಹಾಸಲಾಯಿತು. ಸಾಲು ಮಂಟಪಗಳು ಮೊದಲಿನಂತಿಲ್ಲ. ಅವುಗಳ ಅನೇಕ ಕಂಬ, ತೊಲೆ ಮತ್ತು ಚಪ್ಪಡಿ ಬಿದ್ದು ಹೋಗಿವೆ. ಕೆಲವು ಒಡೆದಿದ್ದರೆ ಇನ್ನೂ ಕೆಲವು ಸೈಜುಗಲ್ಲೋ ಅಥವಾ ಬೇರೆ ಯಾವುದೋ ರೂಪದಲ್ಲಿ ಆಧುನಿಕ ಕಟ್ಟಡಗಳಿಗಾಗಿ ಬೇರೆ ಕಡೆಗೆ ಹೋಗಿವೆ. ಮೇಲಿರುವ ಸುಣ್ಣದ ಗಾರೆ (ಸುರಕಿ) ಹಳೆಯದಾಗಿದ್ದರಿಂದ ಮಂಟಪಗಳು ಸೋರುತ್ತಿವೆ. ಬಿದ್ದಿರುವ ಕಂಬ, ತೊಲೆ, ಚಪ್ಪಡಿಗಳನ್ನು ಉಪಯೋಗಿಸಿ, ಇವುಗಳು ಇಲ್ಲದ ಭಾಗದಲ್ಲಿ ಹೊಸತಾಗಿ ಹಾಕಿ, ಮಂಟಪಗಳನ್ನು ಮೂಲರೂಪಕ್ಕೆ ತರಲಾಗುತ್ತಿದೆ. ಮೇಲಿನ ಹಳೆಯ ಸುಣ್ಣದ ಗಾರೆ (ಸುರಕಿ)ಯನ್ನು ತೆಗೆದು ಹೊಸತಾಗಿ ಹಾಕಲಾಗುತ್ತಿದೆ. ಪೂರ್ವ ತುದಿಯಿಂದ ಪ್ರಾರಂಭಿಸಿ ಈ ಕಾರ್ಯ ಇದುವರೆಗೆ 280 ಮೀ. ಉದ್ದದವರೆಗೆ ಪೂರ್ಣಗೊಂಡಿದೆ.[17] ಸಾಲು ಮಂಟಪಗಳ ಸಂರಕ್ಷಣೆ ಪೂರ್ಣಗೊಂಡಾಗ ನೋಡುವವರ ಕಣ್ಣಿಗೆ ಇದು ಹಬ್ಬವಾಗುತ್ತದೆ.



3. ವಿರೂಪಾಕ್ಷ ತೇರುಬೀದಿಯ ಮಂಟಪಗಳು, ಸಂರಕ್ಷಣೆಯ ಮೊದಲು



4. ವಿರೂಪಾಕ್ಷ ತೇರುಬೀದಿಯ ಮಂಟಪಗಳು, ಸಂರಕ್ಷಣೆಯ ನಂತರ

3. ನಂದಿ ಮಂಟಪ: ವಿರೂಪಾಕ್ಷ ತೇರುಬೀದಿಯ ಪೂರ್ವ ದಿಕ್ಕಿನ ತುದಿಯಲ್ಲಿರುವ ಎದುರು ಬಸವಣ್ಣನೆಂದು ಕರೆಯುವ ನಂದಿಯ ಮಂಟಪವು ಹಿಂದೊಮ್ಮೆ ಸಿಡಿಲಿಗೆ ಆಹುತಿಯಾಗಿದ್ದಂತೆ ಕಾಣುತ್ತದೆ. ನಂದಿಯ ಕತ್ತಿನ ಭಾಗ ಕತ್ತರಿಸಿ ಮುಂದೆ ಬಿದ್ದಿದೆ. ನಂತರ ಉಳಿದ ದೇಹದ ಭಾಗದಲ್ಲಿಯೇ ತಲೆಯನ್ನು ಮತ್ತೊಮ್ಮೆ ಕೆತ್ತಲಾಗಿದೆ. ಮಂಟಪದ ಮುಂದಿನ ಭಾಗ ಬಿದ್ದುಹೋಗಿತ್ತು. ವಾಲಿದ ಕಂಬಗಳಿಗೆ ಆಸರೆಯಾಗಿ ಸೈಜುಗಲ್ಲಿನ ಗೋಡೆಯನ್ನು ಕಟ್ಟಲಾಗಿತ್ತು. ಆಸರೆಗೋಡೆಯನ್ನು ತೆಗೆದು, ವಾಲಿದ ಮತ್ತು ಬಿದ್ದು ಹೋಗಿದ್ದ ಕಂಬಗಳನ್ನು ಮೊದಲಿನಂತೆ ನಿಲ್ಲಿಸಿ, ಇಲ್ಲದ ತೊಲೆ ಮತ್ತು ಚಪ್ಪಡಿಗಳನ್ನು ಹೊಸತಾಗಿ ಸೇರಿಸಿ ಮಂಟಪವನ್ನು ಮೊದಲಿನಂತೆ ಪುನರ್‌ನಿರ್ಮಿಸಲಾಯಿತು. ನಂದಿ ಮಂಟಪದ ಪಕ್ಕದಲ್ಲಿ ಒಂದು ಚಿಕ್ಕ ಮಂಟಪ ಸಂಪೂರ್ಣವಾಗಿ ಬಿದ್ದುಹೋಗಿತ್ತು. ಅದರ ಎಲ್ಲ ಕಲ್ಲುಗಳು ಅಲ್ಲಿಯೇ ಬಿದ್ದಿದ್ದವು. ಈ ಮಂಟಪವನ್ನು ಮೊದಲಿನಂತೆಯೇ ಪುನರ್‌ನಿರ್ಮಿಸಲಾಯಿತು.[18]

4. ವಿರೂಪಾಕ್ಷ ತೇರುಬೀದಿಯ ಪೂರ್ವಕ್ಕೆ ಇರುವ ಮೆಟ್ಟಿಲುಗಳು: ವಿರೂಪಾಕ್ಷ ತೇರುಬೀದಿಯ ಪೂರ್ವಕ್ಕೆ ನಂದಿಮಂಟಪದ ಪಕ್ಕದಲ್ಲಿ, ಅಚ್ಯುತರಾಯ ದೇವಸ್ಥಾನಕ್ಕೆ ಹೋಗುವ ದಾರಿಯಲ್ಲಿ ವಿಶಾಲವಾದ ಮೆಟ್ಟಿಲುಗಳಿವೆ. ಈ ಮೆಟ್ಟಿಲುಗಳ ಒಂದು ಭಾಗ ಬಿದ್ದು ಹೋಗಿ ಉಳಿದ ಅನೇಕ ಕಲ್ಲುಗಳು ಮೇಲೆ ಕೆಳಗೆ ಸರಿದಿದ್ದವು. ಕಲ್ಲುಗಳು ಸಿಗದಿದ್ದ ಭಾಗದಲ್ಲಿ ಹೊಸ ಕಲ್ಲುಗಳನ್ನು ಸೇರಿಸಿ, ತಗ್ಗಾಗಿದ್ದ ಭಾಗವನ್ನು ತುಂಬಿ, ಮೆಟ್ಟಿಲುಗಳನ್ನು ಮೊದಲಿನ ರೂಪಕ್ಕೆ ತರಲಾಯಿತು.[19]

5. ನಗರೇಶ್ವರ ದೇವಾಲಯ: ವಿರೂಪಾಕ್ಷ ದೇವಾಲಯದ ಪಕ್ಕದಲ್ಲಿರುವ ಮನ್ಮಥಕುಂಡದ ಪೂರ್ವದಿಕ್ಕಿರುವ ಈ ದೇವಾಲಯ ಮಣ್ಣಿನಲ್ಲಿ ಮುಚ್ಚಿಹೋಗಿ, ಒಳಗೆ ಪ್ರವೇಶಿಸಲು ಕಿರಿದಾದ ದಾರಿಯಿತ್ತು. ದೇವಾಲಯದ ಶಿಖರ ಭಾಗ ಮಾತ್ರ ಕಾಣುತ್ತಿತ್ತು. ಸುಮಾರು 3 ಮೀ. ಗಳಷ್ಟು ಮುಚ್ಚಿದ ಮಣ್ಣನ್ನು ತೆಗೆದಾಗ ದೇವಾಲಯದ ಸ್ವರೂಪ ಬಯಲಿಗೆ ಬಂದಿತು. ಮುಂದಿನ ಮಂಟಪದ ಕಂಬಗಳು ನೆಲದಲ್ಲಿ ಕೆಳಗೆ ಇಳಿದಿದ್ದವು. ದೇವಾಲಯದ ಪಶ್ಚಿಮ ಗೋಡೆಯು ಹೊರಕ್ಕೆ ಬಾಗಿ ಬೀಳುವ ಸ್ಥಿತಿಯಲ್ಲಿತ್ತು. ಮಂಟಪವನ್ನು ಸಂಪೂರ್ಣವಾಗಿ ಕೆಳಗಿಳಿಸಿ, ತಳಪಾಯವನ್ನು ಭದ್ರಗೊಳಿಸಿ ಮೊದಲಿನಂತೆ ಪುನರ್‌ನಿರ್ಮಿಸಲಾಯಿತು. ಅದೇ ರೀತಿ ಪಶ್ಚಿಮ ಗೋಡೆಯನ್ನು ಕೆಳಗಿಳಿಸಿ, ಒಂದು ಕಲ್ಲು ಇಲ್ಲದ ಭಾಗಕ್ಕೆ ಹೊಸ ಕಲ್ಲನ್ನು ಸೇರಿಸಿ ಮೊದಲಿನಂತೆ ಕಟ್ಟಲಾಯಿತು. ಈ ದೇವಾಲಯದ ಸುತ್ತಲಿನ ಭಾಗವನ್ನು ಸ್ವಚ್ಛಗೊಳಿಸಲಾಯಿತು.[20]


6. ವಿರೂಪಾಕ್ಷ ದೇವಾಲಯದ ಉತ್ತರಕ್ಕೆ ಇರುವ ಸ್ಮಾರಕಗಳು: ಕನಕಗಿರಿ ಗೋಪುರದಿಂದ ನದಿಯ ಕಡೆಗೆ ಹೋಗುವ ದಾರಿಯಲ್ಲಿ ಒಂದು ದೊಡ್ಡ ಅಗುಸೆಯಿದೆ. ಇದಕ್ಕೆ ಸೇರಿದಂತೆ ಒಂದೊಂದು ಬದಿಗೆ ಒಂದು ಚಿಕ್ಕ ದೇವಾಲಯವಿದೆ. ಅಗುಸೆಯ ಈಶಾನ್ಯ ಭಾಗವು ಬಿದ್ದು ಹೋಗಿತ್ತು. ಪೂರ್ವ ಮತ್ತು ಉತ್ತರ ದಿಕ್ಕಿನ ಭಾಗವು ವಾಲಿತ್ತು. ವಾಲಿದ ಭಾಗವನ್ನು ಬಿಚ್ಚಿ ಕೆಳಗಿಳಿಸಿ, ಮೊದಲಿನಂತೆ ಕಟ್ಟಲಾಯಿತು. ಬಿದ್ದುಹೋದ ಭಾಗವನ್ನೂ ಪುನರ್‌ನಿರ್ಮಿಸಲಾಯಿತು. ಮಾಳಿಗೆಗೆ ಕೆಲವು ಹೊಸ ಚಪ್ಪಡಿಗಳನ್ನು ಹಾಕಲಾಯಿತು. ಪಕ್ಕದಲ್ಲಿದ್ದ ಎರಡು ಚಿಕ್ಕ ದೇವಾಲಯಗಳ ಸುತ್ತ ಮುಚ್ಚಿದ್ದ ಮಣ್ಣನ್ನು ತೆಗೆದಾಗ ದೇವಾಲಯಗಳು ವಾಲಿರುವುದು ಗೋಚರವಾಯಿತು. ಇವುಗಳನ್ನು ಸಹ ಬಿಚ್ಚಿ ಮೊದಲಿನಂತೆ ಕಟ್ಟಲಾಯಿತು.[21]

7. ಸ್ನಾನಘಟ್ಟದ ಮಂಟಪಗಳು: ಹಂಪೆಗೆ ಬಂದ ಭಕ್ತರ ಮತ್ತು ಪ್ರವಾಸಿಗಳ ಅನುಕೂಲಕ್ಕಾಗಿ ವಿರೂಪಾಕ್ಷ ದೇವಾಲಯದ ವಾಯುವ್ಯಕ್ಕೆ ನದಿಯ ದಂಡೆಯಲ್ಲಿ ಅನೇಕ ಮಂಟಪಗಳಿವೆ. ಇವುಗಳಲ್ಲಿ ನಾಲ್ಕರ ಸಂರಕ್ಷಣೆಯನ್ನು ಕೈಗೊಳ್ಳಲಾಗಿದೆ. ಮಂಟಪದಲ್ಲಿರುವ ಶಾಸನಗಳು ಒಂದನ್ನು ವಿದ್ಯಾರಣ್ಯ ಮಂಟಪ ಮತ್ತೊಂದನ್ನು ಹುಲಿಗೆ ದೇವಯ್ಯನ ಮಂಟಪವೆಂದು ಉಲ್ಲೆಖಿಸುತ್ತವೆ.[22] ಮಂಟಪಗಳ ಕೆಲವು ಭಾಗಗಳು ಬಿದ್ದುಹೋಗಿ, ಕೆಲವು ಭಾಗ ವಾಲಿದ್ದವು. ಕೆಳಗೆ ಹಾಸಿದ ಚಪ್ಪಡಿ ಕಲ್ಲು ಮತ್ತು ಮುಂದಿನ ಮೆಟ್ಟಿಲು ನೀರಿಗೆ ಕೊಚ್ಚಿಹೋಗಿದ್ದವು. ಮಂಟಪಗಳ ತುಂಬ ಉಸುಕು, ಮಣ್ಣು ತುಂಬಿತ್ತು. ಮಣ್ಣನ್ನು ತೆಗೆದು ಮಂಟಪಗಳನ್ನು ಸಂರಕ್ಷಿಸಿ ಮೂಲರೂಪಕ್ಕೆ ತರಲಾಗಿದೆ. ನಾಲ್ಕು ಮಂಟಪಗಳನ್ನು ಸೇರಿಸುವ ಮೆಟ್ಟಿಲು ರಸ್ತೆಯನ್ನು ಹೊಸತಾಗಿ ನಿರ್ಮಿಸಲಾಗಿದೆ.[23]

8. ಅಹ್ಮದ್‌ಖಾನನ ಧರ್ಮಶಾಲೆ: ರಾಮಚಂದ್ರ (ಹಜಾರರಾಮ) ದೇವಾಲಯದಿಂದ ಸಿಂಘಾರದ ಹೆಬ್ಬಾಗಿಲು ಮತ್ತು ಅರೆಶಂಕರ ಬಾಗಿಲಿನ ಮೂಲಕ ನದಿಯನ್ನು ತಲುಪುವ ಆಗಿನ ಬೀದಿ ಸುಮಾರು 5 ಕಿ.ಮೀ. ಉದ್ದವಾಗಿದ್ದು ವಿಜಯನಗರದ ಪ್ರಮುಖ ಬೀದಿಯಾಗಿತ್ತು. ಈ ಬೀದಿಯು ಮುಸ್ಲೀಮರು ವಾಸಿಸಿದ್ದ ಪ್ರದೇಶದ ಮೂಲಕ ಹಾದು ಹೋಗುತ್ತದೆ. ಈ ಪ್ರದೇಶದಲ್ಲಿ ಮಂಟಪದಾಕಾರದಲ್ಲಿರುವ ಒಂದು ಕಟ್ಟಡವಿದೆ. ಇದರ ಮುಂದಿನ ತೊಲೆಯ ಮೇಲಿನ ಶಾಸನದಿಂದ ಇದು ಕ್ರಿ.ಶ. 1439ರಲ್ಲಿ ಕಟಿಗೆಯ ಅಹ್ಮದ್‌ಖಾನನು ವಿಜಯನಗರದ ಅರಸ ಇಮ್ಮಡಿ ದೇವರಾಯನಿಗೆ ಪುಣ್ಯವಾಗಬೇಕೆಂದು ಕಟ್ಟಿಸಿದ ಧರ್ಮಶಾಲೆ ಎಂಬುದು



5. ವಿರೂಪಾಕ್ಷ ತೇರುಬೀದಿಯ ನಂದಿ ಮಂಟಪ, ಸಂರಕ್ಷಣೆಯ ಮೊದಲು



6. ವಿರೂಪಾಕ್ಷ ತೇರುಬೀದಿಯ ನಂದಿ ಮಂಟಪ, ಸಂರಕ್ಷಣೆಯ ನಂತರ



7. ವಿರೂಪಾಕ್ಷ ತೇರುಬೀದಿಯ ಪೂರ್ವಕ್ಕೆ ಇರುವ ಮೆಟ್ಟಿಲುಗಳು, ಸಂರಕ್ಷಣೆಯ ಮೊದಲು



8. ವಿರೂಪಾಕ್ಷ ತೇರುಬೀದಿಯ ಪೂರ್ವಕ್ಕೆ ಇರುವ ಮೆಟ್ಟಿಲುಗಳು, ಸಂರಕ್ಷಣೆಯ ನಂತರ



9. ವಿರೂಪಾಕ್ಷ ತೇರುಬೀದಿಯ ಪೂರ್ವಕ್ಕೆ ಇರುವ ಮೆಟ್ಟಿಲುಗಳು, ಸಂರಕ್ಷಣೆಯ ಮೊದಲು



10. ವಿರೂಪಾಕ್ಷ ತೇರುಬೀದಿಯ ಪೂರ್ವಕ್ಕೆ ಇರುವ ಮೆಟ್ಟಿಲುಗಳು, ಸಂರಕ್ಷಣೆಯ ನಂತರ



11. ನಗರೇಶ್ವರ ದೇವಾಲಯ, ಸಂರಕ್ಷಣೆಯ ಮೊದಲು



12. ನಗರೇಶ್ವರ ದೇವಾಲಯ, ಸಂರಕ್ಷಣೆಯ ನಂತರ



13. ವಿರೂಪಾಕ್ಷ ದೇವಾಲಯದ ಉತ್ತರಕ್ಕೆ ಇರುವ ಅಗುಸೆ, ಸಂರಕ್ಷಣೆಯ ಮೊದಲು



14. ವಿರೂಪಾಕ್ಷ ದೇವಾಲಯದ ಉತ್ತರಕ್ಕೆ ಇರುವ ಅಗುಸೆ, ಸಂರಕ್ಷಣೆಯ ನಂತರ

ತಿಳಿಯುತ್ತದೆ.[24] ಹಿಂದು ಅರಸನಿಗೆ ಪುಣ್ಯವಾಗಲೆಂದು ಮುಸ್ಲೀಮ್ ಅಧಿಕಾರಿ ಕಟ್ಟಿಸಿದ ಈ ಧರ್ಮಶಾಲೆಯು ವಿಜಯನಗರದಲ್ಲಿದ್ದ ವಿವಿಧ ಧರ್ಮಗಳ ಸಾಮರಸ್ಯವನ್ನು ತೋರಿಸುತ್ತದೆ.

ಕಟ್ಟಡದ ನೈರುತ್ಯ ಮೂಲೆಯ ಒಂದು ಅಂಕಣ ಬಿದ್ದುಹೋಗಿತ್ತು. ಪಶ್ಚಿಮ ಗೋಡೆಯ ಮೂರು ತೊಲೆಗಳು ಇರಲಿಲ್ಲ. ಪಶ್ಚಿಮ ಮತ್ತು ದಕ್ಷಿಣ ಗೋಡೆಗಳು ಹೊರಕ್ಕೆ ವಾಲಿದ್ದವು. ವಾಲಿದ ಭಾಗವನ್ನು ಬಿಚ್ಚಿ, ಅಡಿಪಾಯವನ್ನು ಭದ್ರಗೊಳಿಸಿ, ಮೊದಲಿನಂತೆ ಪುನರ್‌ರಚಿಸಲಾಯಿತು. ಪಶ್ಚಿಮ ಗೋಡೆಗೆ ಮೂರು ತೊಲೆಗಳನ್ನು ಮತ್ತು ನೈರುತ್ಯ ಮೂಲೆಯ ಅಂಕಣದ ಮಾಳಿಗೆಯ ಚಪ್ಪಡಿಗಳನ್ನು ಹೊಸದಾಗಿ ಹಾಕಲಾಯಿತು. ನೆಲಕ್ಕೆ ಹೊಸ ಗಾರೆ ಮತ್ತು ಮಾಳಿಗೆಗೆ ಹೊಸ ಸುರಕಿಯನ್ನು ಹಾಕಲಾಯಿತು.[25]

ಮೇಲೆ ಉಲ್ಲೇಖಿಸಿದ ಶಾಸನವು ಅಹ್ಮದ್‌ಖಾನನು ಧರ್ಮಶಾಲೆಯೊಂದಿಗೆ ಒಂದು ಬಾವಿಯನ್ನೂ ಕಟ್ಟಿಸಿದನೆಂದು ತಿಳಿಸುತ್ತದೆ. ಧರ್ಮಶಾಲೆಯ ಸುತ್ತಮುತ್ತಲಿನ ಪ್ರದೇಶವನ್ನು ಪರೀಕ್ಷಿಸಿದಾಗ ಧರ್ಮಶಾಲೆಯ ಈಶಾನ್ಯಕ್ಕೆ ಮುಚ್ಚಿಹೋಗಿದ್ದ ಬಾವಿಯಿರುವುದು ತಿಳಿಯಿತು. ಬಾವಿಯಲ್ಲಿದ್ದ ಮಣ್ಣನ್ನು ತೆಗೆದು ಕಟ್ಟಡವನ್ನು ಸಂರಕ್ಷಿಸಲಾಯಿತು. ಬಾವಿಯ ಹತ್ತಿರ ಮುಸ್ಲೀಮರ ಒಂದು ದೊಡ್ಡ ಗೋರಿಯಿದೆ. ಇದು ಬಹುಶಃ ಅಹ್ಮದ್‌ಖಾನನದೇ ಆಗಿರಬಹುದು. ಮಳೆ ಬಿಸಿಲಿನಿಂದ ಈ ಕಟ್ಟಡದ ಕಲ್ಲುಗಳ ಸಂದಿಗೆ ಹಾಕಿದ ಗಾರೆ ಉದುರಿಹೋಗಿತ್ತು. ಕಲ್ಲಿನ ಸಂದಿಗಳನ್ನು ಗಾರೆಯಿಂದ ಮುಚ್ಚಿ ಕಟ್ಟಡವನ್ನು ಸಂರಕ್ಷಿಸಲಾಯಿತು.

9. ಸಿಂಘಾರದ ಹೆಬ್ಬಾಗಿಲು: ವಿಜಯನಗರದ ಕೋಟೆಯಲ್ಲಿ ಅನೇಕ ಬಾಗಿಲುಗಳಿವೆ. ಇವುಗಳ ಹೆಸರನ್ನು ಸೂಚಿಸುವ ಅನೇಕ ಶಾಸನಗಳು ಇತ್ತೀಚೆಗೆ ಬೆಳಕಿಗೆ ಬಂದಿವೆ. ಪ್ರಸ್ತುತ ಬಾಗಿಲಿನ ಉತ್ತರಕ್ಕೆ ಬೆಟ್ಟದ ಗುಂಡಿನ ಮೇಲಿರುವ ಶಾಸನದಿಂದ ಇದರ ಹೆಸರು ''ಸಿಂಘಾರದ ಹೆಬ್ಬಾಗಿಲು'' ಎಂದು ತಿಳಿಯುತ್ತದೆ.[26] ಶಾಸನಗಳ ಆಧಾರದಿಂದ ಬಾಗಿಲುಗಳನ್ನು ಹೆಬ್ಬಾಗಿಲು, ಬಾಗಿಲು ಮತ್ತು ದಿಡ್ಡಿಗಳೆಂದು ವಿಂಗಡಿಸಬಹುದು. ಪ್ರಮುಖ ಬೀದಿಯಲ್ಲಿರುವ ಸಿಂಘಾರದ ಹೆಬ್ಬಾಗಿಲು ಅತೀ ಮುಖ್ಯವಾದ ಹೆಬ್ಬಾಗಿಲಾಗಿತ್ತು.

ಬಾಗಿಲಿನ ಕೆಳಭಾಗವನ್ನು ಮುಚ್ಚಿದ್ದ ಮಣ್ಣನ್ನು ತೆಗೆಯಲಾಯಿತು. ಪಶ್ಚಿಮ ಭಾಗದಲ್ಲಿದ್ದ ಅನೇಕ ದೊಡ್ಡ ಕಲ್ಲುಗಳು ಕೆಳಗೆ ಬಿದ್ದಿದ್ದವು. ಇವುಗಳನ್ನು ಮೂಲ ಸ್ಥಾನಕ್ಕೆ ಸೇರಿಸಲಾಯಿತು. ಪೂರ್ವ ಭಾಗದ ಗೋಡೆ ಹೊರಕ್ಕೆ ಬಾಗಿತ್ತು. ಈ ಕಲ್ಲುಗಳನ್ನು ಕೆಳಗಿಳಿಸಿ ಗೋಡೆಯನ್ನು ಪುನರ್‌ನಿರ್ಮಿಸಲಾಯಿತು. ಬಾಗಿಲಿನ ದಕ್ಷಿಣ ಭಾಗದಲ್ಲಿ ಆಂಜನೇಯ ಮತ್ತು ಗಣೇಶನ ಎರಡು ಚಿಕ್ಕ ದೇವಾಲಯಗಳಿವೆ. ಇವು ಸಂಪೂರ್ಣವಾಗಿ ಬಿದ್ದುಹೋಗಿದ್ದವು. ಇದ್ದ ಕಲ್ಲುಗಳೊಂದಿಗೆ ಕೆಲವು ಹೊಸ ಕಲ್ಲುಗಳನ್ನು ಉಪಯೋಗಿಸಿ ಈ ದೇವಾಲಯಗಳನ್ನು ಪುನರ್‌ನಿರ್ಮಿಸಲಾಯಿತು. ಬಾಗಿಲಿನ ಗೋಡೆಯ ಮೇಲೆ ಎತ್ತರದಲ್ಲಿ ವಾಯುವ್ಯ ಭಾಗದಲ್ಲಿ ಒಂದು ದೊಡ್ಡ ದೇವಾಲಯವಿದೆ. ಈ ದೇವಾಲಯದ ಉತ್ತರ ಮತ್ತು ದಕ್ಷಿಣ ಗೋಡೆಗಳ ಹೊರಕಲ್ಲುಗಳು ಬಿದ್ದಿದ್ದವು. ಪೂರ್ವ ಗೋಡೆಯ ಕಲ್ಲುಗಳು ಮುಂದಕ್ಕೆ ಬಂದಿದ್ದವು. ಗರ್ಭಗುಡಿಯ ಮೇಲೆ ಶಿಖರವಿದ್ದರೂ ಮಾಳಿಗೆಯ ಚಪ್ಪಡಿಗಳು ಇರಲಿಲ್ಲ. ರಂಗಮಂಟಪದ ಒಳಗೋಡೆಗಳು ಮುಂದಕ್ಕೆ ಬಂದಿದ್ದವು. ನೆಲಕ್ಕೆ ಹಾಸಿದ ಕಲ್ಲು ಇರಲಿಲ್ಲ. ಮಾಳಿಗೆಯ ಮೂರು ಚಪ್ಪಡಿಗಳೂ ಇರಲಿಲ್ಲ. ಗೋಡೆಯ ಮುಂದೆ ಬಂದ ಕಲ್ಲುಗಳನ್ನು ಬಿಚ್ಚಿ ಮೊದಲಿನಂತೆ ಜೋಡಿಸಲಾಯಿತು. ಇಲ್ಲದ ಭಾಗಕ್ಕೆ ಹೊಸ ಕಲ್ಲುಗಳನ್ನು ಹಾಕಲಾಯಿತು. ಮಾಳಿಗೆಗೆ ಹೊಸ ಸುರಕಿಯನ್ನು ಹಾಕಿ ದೇವಾಲಯವನ್ನು ಸಂರಕ್ಷಿಸಲಾಯಿತು.[27]

10. ಪ್ರತಿಷ್ಠಿತ ವ್ಯಕ್ತಿಗಳ ಅರಮನೆಗಳು: ಉತ್ಖನನದ ಅಂಗವಾಗಿ ಪ್ರತಿಷ್ಠಿತ ವ್ಯಕ್ತಿಗಳ ಅರಮನೆಗಳ ಪ್ರದೇಶದಲ್ಲಿ ಅನೇಕ ಅರಮನೆಯಂತಹ ಕಟ್ಟಡಗಳು ಬೆಳಕಿಗೆ ಬಂದಿವೆ. ದೊಡ್ಡ ಕಲ್ಲುಗಳ ವೇದಿಕೆಯ ಮೇಲೆ ಚಿಕ್ಕ ಕಲ್ಲು ಮತ್ತು ಮಣ್ಣಿನಿಂದ ನಿರ್ಮಾಣಗೊಂಡ ಈ ಕಟ್ಟಡಗಳ ನೆಲ ಮತ್ತು ಗೋಡೆಗಳಿಗೆ ಸುಣ್ಣದ ಗಾರೆಯನ್ನು ಮಾಡಿದೆ. ಉತ್ಖನನ ಕಾರ್ಯ ಪೂರ್ಣಗೊಂಡ ತಕ್ಷಣ ಇವುಗಳನ್ನು ಸಂರಕ್ಷಿಸಲಾಗುತ್ತಿದೆ. ಮೂಲರೂಪಕ್ಕೆ ಧಕ್ಕೆಯಾಗದಂತೆ ಸುಣ್ಣ, ಸಿಮೆಂಟ್ ಮತ್ತು ಕಲ್ಲುಗಳನ್ನು ಉಪಯೋಗಿಸಿ, ನೆಲ ಮತ್ತು ಗೋಡೆಗಳಲ್ಲಿ ನೀರು ಸೇರದಂತೆ ಸಂರಕ್ಷಿಸಲಾಗುತ್ತಿದೆ.[28]

ಅಡಿ ಟಿಪ್ಪಣಿಗಳು

1. ಎಂ.ಎಸ್. ನಾಗರಾಜ ರಾವ್, 1988, *ವಿಜಯನಗರ ಥ್ರೂ ದಿ ಆಯ್ಸ್ ಆಫ್ ಅಲೆಕ್ಸಾಂಡರ್ ಗ್ರಿನ್‌ಲಾ* (1856) *ಅಂಡ್ ಜಾನ್ ಗಾಲಿಂಗ್ಸ್* (1983), ಮೈಸೂರು.
2. *ಅದೇ*, ಚಿತ್ರಗಳು 21-22.



15. ಅಹ್ಮದ್‌ಖಾನ್ ಕಟ್ಟಿಸಿದ ಧರ್ಮಶಾಲೆ, ಸಂರಕ್ಷಣೆಯ ಮೊದಲು



16. ಅಹ್ಮದ್‌ಖಾನ್ ಕಟ್ಟಿಸಿದ ಧರ್ಮಶಾಲೆ, ಸಂರಕ್ಷಣೆಯ ನಂತರ



17. ಅಹ್ಮದ್‌ಖಾನ್ ಕಟ್ಟಿಸಿದ ಬಾವಿ, ಸಂರಕ್ಷಣೆಯ ಮೊದಲು



18. ಅಹ್ಮದ್‌ಖಾನ್ ಕಟ್ಟಿಸಿದ ಬಾವಿ, ಸಂರಕ್ಷಣೆಯ ನಂತರ



19. ಸಿಂಘಾರದ ಹೆಬ್ಬಾಗಿಲು, ಸಂರಕ್ಷಣೆಯ ಮೊದಲು



20. ಸಿಂಘಾರದ ಹೆಬ್ಬಾಗಿಲು, ಸಂರಕ್ಷಣೆಯ ನಂತರ



21. ಸಿಂಘಾರದ ಹೆಬ್ಬಾಗಿಲಿನಲ್ಲಿರುವ ದೇವಾಲಯ, ಸಂರಕ್ಷಣೆಯ ಮೊದಲು



22. ಸಿಂಘಾರದ ಹೆಬ್ಬಾಗಿಲಿನಲ್ಲಿರುವ ದೇವಾಲಯ, ಸಂರಕ್ಷಣೆಯ ನಂತರ

3. ಅದೇ, ಚಿತ್ರ 23.

4. ಅದೇ, ಚಿತ್ರಗಳು 24-25.

5. ಅದೇ, ಚಿತ್ರ 18.

6. ಅದೇ, ಚಿತ್ರ 19.

7. ಅದೇ, ಚಿತ್ರಗಳು 46-47.

8. ಅದೇ, ಚಿತ್ರ 4.

9. ಅದೇ, ಚಿತ್ರ 35.

10. ಅದೇ, ಚಿತ್ರಗಳು 8-9.

11. ಅದೇ, ಚಿತ್ರ 10.

12. ಅದೇ, ಚಿತ್ರ 59.

13. ಐಪ್ರೊರಿೀ, 1979-83, ಪು. 32.

14. ಸೌಇಂಇ., 4, ಸಂ. 259.

15. ಐಪ್ರೊರಿೀ, 1979-83, ಪು. 32-33.

16. ಅದೇ, ಪು. 9-10.

17. ಅದೇ, ಪು. 33; 1983-84, ಪು. 19-20; 1984-87, ಪು. 17; 1987-88, ಪು. 14; 1988-91, ಪು. 16-17.

18. ಅದೇ, 1987-88, ಪು. 14.

19. ಅದೇ, 1984-87, ಪು. 17.

20. ಅದೇ, 1979-83, ಪು. 10, 33-34; 1983-84, ಪು. 18-19.

21. ಅದೇ, 1984-87, ಪು. 17-18.

22. ಅದೇ, ಪು. 29-30.

23. ಅದೇ, 1988-91, ಪು. 15-16.

24. ಸೌಇಂಇ., 9(2), ಸಂ. 447; ಎಂ.ಎಸ್. ನಾಗರಾಜ ರಾವ್, "ಅಹ್ಮದ್‌ಖಾನ್ಸ್ ಧರ್ಮಶಾಲ", ಐಪ್ರೊರಿೀ, 1979-83, ಪು. 64-65

25. ಐಪ್ರೊರಿೀ, 1979-83, ಪು. 35; 1983-84, ಪು. 19.

26. ಅದೇ, 1983-84, ಪು. 23-24.

27. ಅದೇ, 1988-91, ಪು. 17-19.

28. ಅದೇ, 1979-83, ಪು. 34-35; 1983-84, ಪು. 18; 1984-87, ಪು. 16-17; 1987-88, ಪು. 13; 1988-91, ಪು. 14-15.

3. ಹಂಪೆಯಲ್ಲೊಂದು ಸಿದ್ಧರಾಮೇಶ್ವರ ಪ್ರಣೀತ ಲಿಂಗಕ್ಕೆ ಲಿಂಗವೇ ಪೀಠವಾಗಿರ್ಪ ಯೋಗಲಿಂಗ ಶಿಲ್ಪ .

ಸಿ.ಟಿ.ಎಂ. ಕೊಟ್ರಯ್ಯ

ಲಿಂಗವೆಂದೊಡೆ ಸಾಮಾನ್ಯವಾಗಿ ನಮ್ಮ ಗಮನಕ್ಕೆ ಬರುವುದು ಎರಡು ಭಾಗಗಳು, ಒಂದು ಪೀಠ ಅಥವಾ ಪಾಣಿಪೀಠ ಮತ್ತೊಂದು ಅದರ ಮೇಲೆ ಕಾಣುವ ಲಿಂಗಭಾಗ. ಇವು ಆಗಮೋಕ್ತ ಶಿಲ್ಪ ಶಾಸ್ತ್ರಗಳಲ್ಲಿ ವಿವರಿಸಲಾಗಿರುವಂತೆ ಮುಖ್ಯವಾದ ಎರಡು ಭಾಗಗಳು. ಈಗ ಪ್ರಸ್ತುತಪಡಿಸುತ್ತಿರುವುದು ಆ ವಿವರಗಳಿಂದ ಬೇರೆಯಾದ ಒಂದು ವಿನೂತನವಾದ ಲಿಂಗ ಶಿಲ್ಪದ ವಿವರಣೆಗಳನ್ನು, ಎಂದರೆ, ಸಂಕ್ಷಿಪ್ತವಾಗಿ ಇಲ್ಲಿ ಎರಡು ಪೀಠಸ್ಥ ಲಿಂಗಗಳನ್ನು ಒಂದಕ್ಕೆ ಇನ್ನೊಂದು ಆಧಾರವಾಗಿರುವಂತೆ ಆ ಸ್ಥಳದಲ್ಲಿಯೇ ಕಂಡರಿಸಿರುವುದು, ಅಥವಾ ಒಂದು ಪೀಠಸ್ಥ ಲಿಂಗಕ್ಕೆ ಮತ್ತೊಂದು ಪೀಠಸ್ಥ ಲಿಂಗವೇ ಪೀಠವಾಗಿರುವುದನ್ನು ಕಾಣುವುದು. ಈ ವಿನೂತನವಾದ ಮತ್ತು ತನ್ನದೇ ಆದ ವಿಶೇಷತೆಗಳಿಂದ ಕೂಡಿರುವ ಲಿಂಗಶಿಲ್ಪವು, ಶಿವಲಿಂಗ ಶಿಲ್ಪಗಳ ಶಾಸ್ತ್ರಾಧ್ಯಯನಕ್ಕೆ, ವಿಜಯನಗರದ ಶಿಲ್ಪಿಯ ಒಂದು ಮುಖ್ಯ ಕೊಡುಗೆಯಾಗಿದೆ.

ಈ ವಿಶಿಷ್ಟವಾದ 'ಲಿಂಗದ ಮೇಲೆ ಲಿಂಗ' ಶಿಲ್ಪವು ಹಂಪೆಯಲ್ಲಿರುವ ಉದ್ದಾನ ವೀರಭದ್ರಸ್ವಾಮಿಯ ದೇವಾಲಯದ ಆವರಣದಲ್ಲಿ ಕಾಣಬರುತ್ತದೆ. ಅಲ್ಲಿಯ ಮುಖ್ಯ ದೇವತೆಯಾದ ವೀರಭದ್ರಸ್ವಾಮಿಯ ಎದುರಿಗೆ, ಅದೇ ಪ್ರಾಕಾರದ ಒಳಗಡೆ ಒಂದು ಜಗಲಿಯ ಮೇಲೆ ಶಿಲೆಯಿಂದ ನಿರ್ಮಿತವಾದ ದೀಪಸ್ತಂಭವನ್ನು ನಿರ್ಮಿಸಲಾಗಿದೆ. ನಾಲ್ಕು ಪಾರ್ಶ್ವವುಳ್ಳ ಆ ದೀಪಸ್ತಂಭದ ದಕ್ಷಿಣದ ಕಡೆಗಿರುವ ಪಾರ್ಶ್ವದ ಮೇಲೆ ಈ ಲಿಂಗದ ಮೇಲೆ ಲಿಂಗವನ್ನು ಉಬ್ಬು ಶಿಲ್ಪವಾಗಿ ಕಂಡರಿಸಲಾಗಿದೆ.

ಈ ದೇವಸ್ಥಾನವಾದರೋ, ಅಲ್ಲಿಯೇ ಕಾಣಬರುವ ಶಿಲಾ ಶಾಸನಗಳ ಪ್ರಕಾರ, ಕ್ರಿ.ಶ. 1546ರಲ್ಲಿ ಅಸ್ತಿತ್ವಕ್ಕೆ ಬಂದಂತೆ ಖಚಿತವಾಗಿ ತಿಳಿಯುತ್ತದೆ. 'ಲಿಂಗದ ಮೇಲೆ ಲಿಂಗ'ವನ್ನು ತೋರಿಸುತ್ತಿರುವ ಆ ದೀಪಸ್ತಂಭವೂ ಸಹ ಅದೇ ಕಾಲಕ್ಕೆ ಸಂಬಂಧಿಸಿದುದೆಂದು ಮೇಲಿನ ಕಾರಣದಿಂದಾಗಿ ಮತ್ತು ಅಲ್ಲಿಯ ಶಿಲ್ಪ ವೈಶಿಷ್ಟ್ಯಗಳಿಂದಾಗಿ ಹೇಳಬಹುದು.

ಅಲ್ಲದೇ, ಆ ದೇವಸ್ಥಾನವು ಒಂದು ವೀರಶೈವ ಮಠದ ಸಂಕೀರ್ಣಕ್ಕೆ ಸೇರಿದ್ದುದಾಗಿರಬೇಕು ಎಂದು ವಿವರಿಸಲು ಹಲವು ಕಾರಣಗಳನ್ನು ಹೇಳಬಹುದು. ನಮಗೆಲ್ಲ ತಿಳಿದಿರುವಂತೆ ವೀರಶೈವ ಮಠಗಳ ಆವರಣಗಳಲ್ಲಿ ವೀರಭದ್ರಸ್ವಾಮಿಯ ದೇವಾಲಯವಿರುವುದು ಒಂದು ಅವಶ್ಯವಾದ ಮತ್ತು ವಿಶಿಷ್ಟವಾದ ಸಂಪ್ರದಾಯ ಹಾಗೂ ಪೂರ್ವದ ಆಚರಣೆ. ಮತ್ತು ಆ ಮಠಗಳಲ್ಲಿ ಮುಖ್ಯವಾದ ಧಾರ್ಮಿಕ ಪ್ರಚಾರಗಳೊಂದಿಗೆ ಸಾಮಾಜಿಕ ಸೇವೆಗಳಾದ ಅನ್ನದಾನ, ವಿದ್ಯಾದಾನ ಮುಂತಾದ ಚಟುವಟಿಕೆಗಳು ಸಹ ನಿರ್ವಹಿಸಲ್ಪಡುತ್ತಿದ್ದುವು. ಆ ದೇವಸ್ಥಾನಕ್ಕೆ ಹೊಂದಿಕೊಂಡಿರಬಹುದಾಗಿದ್ದ, ಅದರ ಪಕ್ಕದಲ್ಲಿಯೇ 600 ಕ್ಕಿಂತಲೂ ಹೆಚ್ಚಾಗಿ ಕಾಣಬರುವ ಶಿಲಾಸ್ತಂಭಗಳುಳ್ಳ ವಿಶಾಲವಾದ ಮಠದ ಅವಶೇಷಗಳನ್ನು ಈಗಲೂ ನೋಡಬಹುದು. ಆ ದೇವಸ್ಥಾನದ ಸ್ಥಾಪನೆಯ ಕಾಲಕ್ಕೆ, ಸಮಕಾಲೀನರು, ಹಂಪೆಯಲ್ಲಿ ವಾಸವಾಗಿದ್ದವರು ಹಾಗೂ ಶರಣ ದಾರ್ಶನಿಕ ಮತ್ತು ಕವಿಯಾಗಿದ್ದು ಚೆನ್ನಬಸವ ಪುರಾಣ ಗ್ರಂಥದ ರಚನಾಕಾರನಾದ ವಿರೂಪಾಕ್ಷ ಪಂಡಿತನು, ಮೇಲೆ ಹೇಳಿದ ಮಠದಲ್ಲಿಯೇ ಇದ್ದಿರಬೇಕು. ಅದೇ, ಆ ವಿರೂಪಾಕ್ಷ ಪಂಡಿತನ ಮೇಲ್ವಿಚಾರಣೆಯಲ್ಲಿದ್ದ ಹಿರಿಯ ಮಠವಾಗಿರಲು ಸಾಕು. ಅಲ್ಲದೆ, ಮೇಲೆ ಹೇಳಿದ ಶಾಸನದ ಪ್ರಕಾರ, ಈ ದೇವಸ್ಥಾನದ ಅತೀ ಹತ್ತಿರದಲ್ಲಿ ಈಗಲೂ ಹರಿಯುತ್ತಿರುವ ವಿಜಯನಗರ ಅರಸರಿಂದ ಅಸ್ತಿತ್ವಕ್ಕೆ ಬಂದ ನದೀ ಕಾಲುವೆಗೆ ಹಿರಿಯ ಕಾಲುವೆ ಎಂದು ಕರೆಯಲಾಗುತ್ತಿತ್ತು. ಮತ್ತು ಅದರ ಅತೀ ಸಮೀಪದಲ್ಲಿದ್ದ ಮಠವೇ ಹಿರಿಯ ಮಠವಾಗಿದ್ದಿತೆಂದು ತರ್ಕಿಸಬಹುದು. ಇನ್ನೊಂದು ಮುಖ್ಯ ಅಂಶವೆಂದರೆ, ಇದೇ ದೇವಸ್ಥಾನದ ಕೆಳಗೆ, ಈಗಲೂ ಉಪದೇವತಾ ವಿಗ್ರಹವಾಗಿ ಪೂಜೆಗೊಳ್ಳುತ್ತಿರುವ ಇನ್ನೊಂದು ಅತೀ ವಿನೂತನವಾದ ಮತ್ತು ಬಹು ಬಹು ಮುಖ್ಯವಾದ ಶಿವಲಿಂಗವಿದ್ದು, ಅದು ವೀರಶೈವ ಧರ್ಮದ ಷಟ್‌ಸ್ಥಲ ಷಟ್‌ಚಕ್ರ ಸಿದ್ಧಾಂತವನ್ನು ನಿರೂಪಿಸುವಂತಹ 'ಸರ್ವಾಂಗ ಲಿಂಗವು' ಆದಾಗಿದೆ. ವಿಜಯನಗರ ಕಾಲದಲ್ಲಿ, ಅಂದರೆ 16ನೇ ಶತಮಾನದಲ್ಲಿ ಒಂದು ಉಪನಗರವಾಗಿದ್ದು ಅದನ್ನು ಕೃಷ್ಣಾಪುರವೆಂದು ಕರೆಯಲಾಗುತ್ತಿತ್ತೆಂಬುದು ಅನೇಕ ಶಿಲಾಶಾಸನಗಳಿಂದ ತಿಳಿದು ಬರುತ್ತದೆ. ಮುಂದೆ ವಿವರಿಸುವಂತೆ, ಪ್ರಸ್ತುತ ಲಿಂಗಶಿಲ್ಪವು ಸಹ ವೀರಶೈವ ಶರಣರಲ್ಲೊಬ್ಬರಾದ ಸೊನ್ನಲಾಪುರದ ಸಿದ್ಧರಾಮೇಶ್ವರರ ಜೀವನ ಕಾಲದ

ಘಟನೆಗಳಿಂದ ಪ್ರಭಾವಿತವಾಗಿರುವಂತಹುದಾಗಿದ್ದು, ಅದೂ ಸಹ ಅಲ್ಲಿಯೇ ಕಾಣಬರುತ್ತಿದ್ದು, ಇದು ವೀರಶೈವ ಧರ್ಮದ ಮತ್ತು ಅನುಯಾಯಿಗಳ ವಿವಿಧ ಚಟುವಟಿಕೆಗಳ ಕ್ಷೇತ್ರವಾಗಿತ್ತೆಂದು, ಮೇಲಿನ ಪ್ರಾಸಂಗಿಕ ಪ್ರಮಾಣಗಳಿಂದ ಹೇಳಬಹುದಾಗಿದೆ.

ಈಗ, ಈ ವಿನೂತನ ಲಿಂಗಶಿಲ್ಪದ ವಿವರಗಳನ್ನು ತಿಳಿಯೋಣ. ಮೇಲೆ ತಿಳಿಸಿರುವಂತೆ ಈ ಶಿಲ್ಪವನ್ನು ಉಬ್ಬು ಶಿಲ್ಪವಾಗಿ ಕಲ್ಲಿನಿಂದ ನಿರ್ಮಿತವಾದ ದೀಪಸ್ತಂಭದ ದಕ್ಷಿಣ ಪಾರ್ಶ್ವದ ಮೇಲೆ ತೋರಿಸಲಾಗಿದೆಯಷ್ಟೆ? ಮೊದಲಿಗೆ, ಎಂದರೆ ಕೆಳಗಿನ ಭಾಗದಲ್ಲಿ, ಒಂದು ರೇಖಾವೃತ್ತದೊಳಗೆ ಆರು ದಳಗಳುಳ್ಳ ಒಂದು ಹೂವನ್ನು ರಚಿಸಲಾಗಿದೆ. ಆ ರೇಖಾವೃತ್ತ ಮತ್ತು ದಳಗಳಿಂದ ಕೂಡಿದ ಹೂವು, ಪುರಾತತ್ವ ಸಂಶೋಧಕರಿಗೆ ವೇದ್ಯವಿರುವಂತೆ, ಒಂದು ಜಲಾಶಯವನ್ನು ಪ್ರತಿನಿಧಿಸುತ್ತವೆ. ಬಹುಶಃ ಈಗಿನ ಸೊಲ್ಲಾಪುರದಲ್ಲಿ ಸಿದ್ಧರಾಮನ ಸಮಾಧಿಯ ಬಳಿ ಈಗಲೂ ಕಾಣಬರುವ ದೊಡ್ಡ ತಟಾಕವನ್ನು ಪ್ರತಿನಿಧಿಸುತ್ತಿರಬೇಕು. ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬೇಕಾದ ವಿಷಯವೆಂದರೆ ಸಿದ್ಧರಾಮನು ತನ್ನ ಜೀವಿತ ಕಾಲದಲ್ಲಿ ಇದೂ ಸೇರಿದಂತೆ ಅನೇಕ ಕೆರೆ, ಕಟ್ಟೆ, ಕಾಲುವೆ ಮುಂತಾದವುಗಳ ನಿರ್ಮಾಣಕ್ಕೆ ಕಾರಣವಾಗಿದ್ದನೆಂಬ ಜನಜನಿತವಾದ ವಿಷಯವು.

ಅನಂತರ ಆ ಹೂವಿನಿಂದ ಮೇಲಕ್ಕೆ ಒಂದು ಪೀಠಸ್ಥ ಶಿವಲಿಂಗವನ್ನು ಕಂಡರಿಸಲಾಗಿದ್ದು, ಇನ್ನೊಂದು ಪೀಠಸ್ಥ ಶಿವಲಿಂಗವು ಅದರ ಮೇಲೆಯೇ ಕಂಡುಬರುತ್ತಿದ್ದು, ಮೊದಲನೆಯದು ಎರಡನೆಯದಕ್ಕೆ ಆಧಾರವಾಗಿರುವಂತೆ ತೋರಿಸಲಾಗಿದೆ. ಮೇಲಿರುವ ಪೀಠದ ಪ್ರಣಾಳವು ನಮ್ಮ ಎಡಕ್ಕೆ ಸ್ವಲ್ಪ ಪ್ರಧಾನವಾಗಿ ಗೋಚರಿಸುವಂತೆ ಕಡೆಯಲಾಗಿದೆ. ಕೆಳಗಿನ ಪೀಠಕ್ಕೆ ಪ್ರಣಾಳವು ಇರುವುದಿಲ್ಲ. ಈ ಎರಡೂ ಲಿಂಗಗಳು ಒಂದೇ ಕಲ್ಲಿನಲ್ಲಿ ಮಾಡಲ್ಪಟ್ಟವುಗಳಂತೆ ಉಬ್ಬು ಶಿಲ್ಪವನ್ನಾಗಿ ಕಂಡರಿಸಲಾಗಿದೆ. ಅವುಗಳನ್ನು ಒಂದರ ಮೇಲೊಂದು ಇರುವಂತೆಯೂ ಮತ್ತು ನಯವಾಗಿ ಕಾಣುವಂತೆಯೂ ಶಿಲ್ಪಿಯು ಚತುರತೆಯಿಂದ ನಿರ್ಮಿಸಿರುತ್ತಾನೆ.

ಪೂರ್ವ ಕಾಲದಲ್ಲಿ ಶಿಲ್ಪಿಯು ಯಾವುದೇ ಕೃತಿಯ ರಚನೆಯಲ್ಲಿ ತೊಡಗುವುದಕ್ಕೆ ಮೊದಲು ಆ ಕೃತಿಗೆ ಸಾಹಿತ್ಯಕ ಆಧಾರಗಳನ್ನು ಆಳವಾಗಿ ಅಭ್ಯಾಸಮಾಡಿದ ನಂತರವೇ ಕಾರ್ಯ ಪ್ರವೃತ್ತನಾಗುತ್ತಿದ್ದನೆಂಬುದು ನಮಗೆಲ್ಲಾ ತಿಳಿದ ವಿಷಯವೇ. ಹಾಗಾಗಿ ಈ 'ಲಿಂಗದ ಮೇಲೆ ಲಿಂಗ' ಶಿಲ್ಪದ ರಚನೆಗೂ ಸಂಬಂಧಿಸಿದ ಸಾಹಿತ್ಯವನ್ನು ನಾವು ಶೋಧಿಸಬೇಕಾಗುತ್ತದೆ. ಆಗಲೇ, ಈ ಶಿಲ್ಪದಲ್ಲಿ ಅಡಕವಾಗಿರುವ ಅರ್ಥಗಳು, ವಿಚಾರಗಳು ಮತ್ತು ಪ್ರಭಾವಗಳೂ ವೇದ್ಯವಾಗುತ್ತವೆ. ಅನಂತರವೇ ಈ ಶಿಲ್ಪದ ಅಭ್ಯಾಸವು ಪೂರ್ಣವಾಗುತ್ತದೆ ಮತ್ತು ಅದರ ಪ್ರಾಮುಖ್ಯತೆಯು ಸಿದ್ಧವಾಗುತ್ತದೆ. ಪೂರ್ವದ ಶಿಲ್ಪ ಶಾಸ್ತ್ರಗಳಾಗಲೀ, ಸಾಹಿತ್ಯವಾಗಲೀ ಇಂತಹ ವಿನೂತನ ಲಿಂಗ ಶಿಲ್ಪದ ಮೇಲೆ ಯಾವುದೇ ರೀತಿಯ ಬೆಳಕನ್ನು ಬೀರುವುದಿಲ್ಲವಾದುದರಿಂದ, ಈ ಪ್ರಯತ್ನದಲ್ಲಿ ನಾವು ವೀರಶೈವ ಸಾಹಿತ್ಯವನ್ನೇ ಅವಲಂಬಿಸಬೇಕಾಗುತ್ತದೆಂಬುದು ಒಂದು ಗಮನೀಯ ವಿಷಯ. ಅದರಲ್ಲೂ ವೀರಶೈವರು ವಿಶೇಷವಾಗಿ ಕೃಷಿಮಾಡಿದ ಮತ್ತು ಪ್ರೋತ್ಸಾಹಿಸಿದ ಕನ್ನಡ ಸಾಹಿತ್ಯವನ್ನೇ ಶೋಧಿಸಬೇಕಾಗುತ್ತದೆ. ಈ ದಿಶೆಯಲ್ಲಿ, ಸೊನ್ನಲಾಪುರದಲ್ಲಿ (ಈಗಿನ ಸೊಲ್ಲಾಪುರ) ಕ್ರಿ.ಶ. 12ನೇ ಶತಮಾನದಲ್ಲಿ ಜೀವಿಸಿದ್ದ ವೀರಶೈವ ಶರಣ ಸಿದ್ಧರಾಮೇಶ್ವರನ ಜೀವನ ಚರಿತ್ರೆ, ಆ ಸಮಯದಲ್ಲಿ ಜರುಗಿದುವೆನ್ನಲಾದ ಪವಾಡಗಳು, ಘಟನೆಗಳು ಮುಂತಾದವುಗಳು ಸಹಾಯಕವಾಗುತ್ತವೆ. ಇವುಗಳ ವಿವರಗಳೆಲ್ಲವನ್ನು ಹಂಪೆಯಲ್ಲಿ ವಾಸವಾಗಿದ್ದ ಇನ್ನೊಬ್ಬ ವೀರಶೈವ ಶರಣ ಕವಿ ರಾಘವಾಂಕನು ಬರೆದ ಕನ್ನಡದ ಗ್ರಂಥವಾದ 'ಸಿದ್ಧರಾಮ ಚರಿತ್ರೆ'ಯಲ್ಲಿ ಕಾಣಬಹುದು. ಆ ಕಾವ್ಯ ಗ್ರಂಥದಲ್ಲಿ ಆ ವಿವರಗಳೆಲ್ಲವನ್ನು ಕ್ರೋಢೀಕರಿಸುತ್ತಾ ಹಾಸುಹೊಕ್ಕಾಗಿ ಬರೆಯಲಾಗಿದೆ. ಅಂಥ ಗ್ರಂಥಗಳನ್ನು ಬರೆಯುವಾಗ ಕವಿಗಳು ತಮ್ಮ ತಮ್ಮ ಧರ್ಮ, ಅದರ ಸಿದ್ಧಾಂತ, ತತ್ವ ಮತ್ತು ಸಾಹಿತ್ಯಗಳ ಪ್ರಚಾರಗಳನ್ನೇ ಮುಖ್ಯ ಧ್ಯೇಯವಾಗಿ ಇಟ್ಟುಕೊಂಡಿರುತ್ತಿದ್ದರೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಅಂಥ ಒಂದು ಕಾರಣಕ್ಕಾಗಿಯೇ ಪ್ರಸ್ತುತ ವಿವರಿಸಲಾಗಿರುವ ಲಿಂಗ ಶಿಲ್ಪವು ಅಸ್ತಿತ್ವಕ್ಕೆ ಬಂದಿರಬೇಕು. ಈ ಶಿಲಾಕೃತಿಯು ಆ ದಿಶೆಯಲ್ಲಿ ಒಂದು ಮಾಧ್ಯಮವಾಗಿ ಉಪಯೋಗವಾಗಿದೆಯೆಂಬುದನ್ನು ಇಲ್ಲಿ ಗಮನಿಸಬೇಕಾಗುತ್ತದೆ.

ಈಗ ನಮಗೆ ಅವಶ್ಯವಿರುವ ಆಧಾರ ಸಾಹಿತ್ಯವನ್ನು ರಾಘವಾಂಕನಿಂದ ರಚಿತವಾದ 'ಸಿದ್ಧರಾಮ ಚರಿತ್ರೆ' ಎಂಬ ಗ್ರಂಥದಿಂದ ಅವಲೋಕಿಸೋಣ. ಸಿದ್ಧರಾಮೇಶ್ವರರು ಒಬ್ಬ ಚಾರಿತ್ರಿಕ ಪುರುಷ ಮತ್ತು ಕ್ರಿ.ಶ. 12ನೇ ಶತಮಾನದ ಉತ್ತರಾರ್ಧದಲ್ಲಿ ಆಧುನಿಕ ಸೊಲ್ಲಾಪುರದಲ್ಲಿ ಜೀವಿಸಿದ್ದವರು. ಅವರು ಬಸವೇಶ್ವರ, ಅಲ್ಲಮಪ್ರಭು, ಚನ್ನಬಸವಣ್ಣ ಮತ್ತಿತರ ಬಸವಕಲ್ಯಾಣದ ಶರಣರ ಸಮಕಾಲೀನರು.

ಮೇಲೆ ಉಲ್ಲೇಖಿಸಿರುವ ಗ್ರಂಥದಲ್ಲಿ ಕಾಣಬರುವ ಸಿದ್ಧರಾಮೇಶ್ವರರ ಜನನ, ಬಾಲ್ಯ ಕಥಾನಕಗಳು, ಇನ್ನಿತರ ವಿವರಗಳನ್ನು ಬದಿಗಿರಿಸಿ ಈ ಲಿಂಗ ಶಿಲ್ಪಕ್ಕೆ ಪ್ರಸ್ತುತವಿರುವ ಘಟನೆಗಳನ್ನು ಮಾತ್ರ ಪರಿಗಣಿಸೋಣ. ರಾಘವಾಂಕನು ತನ್ನ 'ಸಿದ್ಧರಾಮ ಚರಿತ್ರೆ'ಯಲ್ಲಿ ಹೇಳಿರುವಂತೆ, ಸಿದ್ಧರಾಮನ ಆರಾಧ್ಯ ದೈವವಾದ ಶ್ರೀಶೈಲ ಮಲ್ಲಿಕಾರ್ಜುನಸ್ವಾಮಿಯು ಒಂದು ದಿನ ತನ್ನ ಭಕ್ತನನ್ನು ಕುರಿತು ಸ್ವಂತ

ಊರಾದ ಸೊನ್ನಲಾಪುರಕ್ಕೆ ಹಿಂತಿರುಗಿ ಅದನ್ನೇ ತನ್ನ ಆಧ್ಯಾತ್ಮಿಕ, ಸಾಹಿತ್ಯಕ, ಸಾಮಾಜಿಕ ಮುಂತಾದ ಕಾರ್ಯಗಳ ಕೇಂದ್ರವನ್ನಾಗಿಸಿಕೊಳ್ಳುವಂತೆ ತಿಳಿಸುತ್ತಾನೆ. ಆದರೆ ಸಿದ್ಧರಾಮನು ತನ್ನ ಆರಾಧ್ಯ ದೈವದಿಂದ ದೂರವಿರಲು ಸಮ್ಮತಿಸುವುದಿಲ್ಲ. ಅದಕ್ಕೆ ಪರಿಹಾರವಾಗಿ ಶ್ರೀಶೈಲ ಮಲ್ಲಿಕಾರ್ಜುನಸ್ವಾಮಿಯು ಆ ಕಾರಣಕ್ಕಾಗಿ ಚಿಂತಿಸದಿರಲು ಸಿದ್ಧರಾಮನಿಗೆ ಹೇಳುತ್ತಾ, ತಾನೂ ಕೂಡಾ ಸೊನ್ನಲಾಪುರದಲ್ಲಿ ಪ್ರಕಟವಾಗಿ ತನ್ನ ಭಕ್ತನ ಜೊತೆಯಲ್ಲಿಯೇ ಇರುವುದಾಗಿ ವಚನವನ್ನೀಯುತ್ತಾನೆ. ಅದಕ್ಕಾಗಿ ಸಿದ್ಧರಾಮನು ಅನುಸರಿಸಬೇಕಾದ ಕೆಲವು ನಿಬಂಧನೆಗಳನ್ನೂ ತಿಳಿಸುತ್ತಾನೆ. ಎಂದರೆ ಸಿದ್ಧರಾಮನು ಸೊನ್ನಲಾಪುರಕ್ಕೆ ಹಿಂದಿರುಗಿದ ನಂತರ ಒಂದು ಶುಭ ಮುಹೂರ್ತದಲ್ಲಿ ಮಂದಾರ ವೃಕ್ಷವೊಂದರ ಕೆಳಗೆ ಒಂದು ಶಿವಲಿಂಗವನ್ನು ಸ್ಥಾಪಿಸುವಂತೆಯೂ ತದನಂತರ ತಾನೇ ಅಲ್ಲಿಗೆ ಬಂದು ಅದರ ಮೇಲೆ ನೆಲೆಸುವುದಾಗಿಯೂ, ಮುಂತಾಗಿ ಆಶ್ವಾಸನೆ ನೀಡುತ್ತಾನೆ. ಅದಕ್ಕೆ ಸಂಬಂಧಿಸಿದ ಮೂಲ ಪಾಠಕ್ರಮ ಈ ರೀತಿ ಇದೆ.


..... ಮುಂದೊಂದು ಲಿಂಗ ಪ್ರತಿಷ್ಠೆಗೈದೆನ್ನನಾ
ನಂದದಿಂದಾ ಲಿಂಗದುತ್ತಮಾಂಗದಲಿ ನಿಲಿ
ಸೆಂದೆಡೆ ...... (ಸಂ. 3, ಪದ್ಯ 20)
....
ಕ್ಷೇಮತರವಾಗಿ ಲಿಂಗದ ಮೇಲೆ ಲಿಂಗಮಂ
ಪ್ರೇಮದಿಂದಂ ಪ್ರತಿಷ್ಠಿಸು ಮಗನೇ ....
(ಸಂ. 3, ಪದ್ಯ 21)

ಅಷ್ಟಲ್ಲದೇ, ಮಲ್ಲಿಕಾರ್ಜುನ ದೇವರು ತಾನು ಸಿದ್ಧರಾಮನ ಸೊನ್ನಲಾಪುರಕ್ಕೆ ಬರುವ ಶುಭ ಮುಹೂರ್ತ, ಸ್ಥಳ, ಕುರುಹುಗಳು ಅನುಸರಿಸಬೇಕಾದ ಆಚರಣೆಗಳು, ತಾನು ಬಂದುದನ್ನು ಗುರುತಿಸುವ ಕ್ರಮ ಮುಂತಾದವುಗಳ ಕುರಿತು ವಿವರವಾಗಿ ತಿಳಿಸುತ್ತಾನೆ. ಅದಕ್ಕನುಗುಣವಾಗಿ ಸಿದ್ಧರಾಮೇಶ್ವರನು ಸೊನ್ನಲಾಪುರಕ್ಕೆ ಹಿಂದಿರುಗಿ, ಅಮರಲಿಂಗವನ್ನು ಪ್ರತಿಷ್ಠಿಸಿ ಅದಕ್ಕೆ ಒಂದು ದೇವಾಲಯವನ್ನು ನಿರ್ಮಿಸುತ್ತಾನೆ. ಹಾಗೆಯೇ ಇನ್ನೂ ಕೆಲವು ಲಿಂಗಗಳನ್ನು ಅದೇ ಪರಿಸರದಲ್ಲಿ ಪ್ರತಿಷ್ಠಿಸುತ್ತಾನೆ. ತದನಂತರ ತನ್ನ ಆರಾಧ್ಯ ದೈವವಾದ ಶ್ರೀಶೈಲ ಮಲ್ಲಿಕಾರ್ಜುನನ ಬರುವಿಕೆಗಾಗಿ ಭಕ್ತಿಪರವಶತೆಯಿಂದ ಮತ್ತು ಕಾತುರದಿಂದ ನಿರೀಕ್ಷಿಸುತ್ತಾ ಇರುತ್ತಾನೆ. ಆ ಸಮಯದಲ್ಲಿ ಒಬ್ಬ ಭಕ್ತನು ಓಡೋಡಿ ಬಂದು ಸಿದ್ಧರಾಮನನ್ನು ಸಂಧಿಸಿ ಒಂದು ಸಂದೇಶವನ್ನು ತಿಳಿಸುತ್ತಾನೆ. ಅವನ ಸಂದೇಶದ ಪ್ರಕಾರ, ಒಂದು ಬರಡು ಹಸು ಆ ದಿನವೇ ಗರ್ಭಧಾರಣೆ ಮಾಡಿ, ಆ ದಿನವೇ ಕರುವಿಗೆ (ಬಸವ ಅಥವಾ ವೃಷಭನಿಗೆ) ಜನ್ಮವಿತ್ತಂತೆ ಮತ್ತು ಆ ಕರು ಕ್ಷಣಮಾತ್ರದಲ್ಲಿ ಬೆಳೆದು ಯೌವನದ ಹೋರಿಯಾಗಿ (ಬಸವನಾಗಿ) ಮೆರೆಯುತ್ತಿದ್ದಂತೆ ಮುಂತಾಗಿ. ಆ ಕೂಡಲೇ ಸಿದ್ಧರಾಮನು ತನ್ನ ಪರದೈವವನ್ನೇ ಆ ಘಟನೆಗಳಲ್ಲಿ ಗುರುತಿಸಿ ಸಕಲ ಮರ್ಯಾದೆಗಳೊಂದಿಗೆ ಆ ಸ್ಥಳಕ್ಕೆ ಧಾವಿಸಿ, ಆ ಹೋರಿಯನ್ನು (ಬಸವನನ್ನು) ತಾನು ಮೊದಲೇ ನಿರ್ಮಿಸಿದ್ದ ದೇವಸ್ಥಾನಕ್ಕೆ ಕರೆತಂದು ಅದರೊಳಕ್ಕೆ ಕಳುಹಿಸುತ್ತಾನೆ. ಆಗ, ಮೊದಲೇ ಆಗಿದ್ದ ದೈವಘೋಷಣೆಯಂತೆ ಆಶ್ಚರ್ಯಕರವಾದ ಪವಾಡವೊಂದು ಜರುಗಿತು. ಎಂದರೆ, ಆ ಬಸವ ದೇವಸ್ಥಾನದ ಒಳಗೆ ಹೋಗುತ್ತಾ ಗರ್ಭಗೃಹವನ್ನು ಪ್ರವೇಶಿಸಿ, ಅಲ್ಲಿಯೇ ಲಿಂಗದಲ್ಲಿ ಐಕ್ಯವಾಗುತ್ತಾ, ಮೊದಲಿದ್ದ ಲಿಂಗದ ಮೇಲೆ ಇನ್ನೊಂದು ಲಿಂಗವಾಗಿ ರೂಪುಗೊಂಡಿತು. ಎಂದರೆ ಮೊದಲಿದ್ದ ಲಿಂಗವು ಈ ಎರಡನೆಯ ಲಿಂಗಕ್ಕೆ ಪೀಠವಾಯಿತು. ಅದರ ಪಠ್ಯಭಾಗ ಕೆಳಗಿನಂತಿದೆ.

...... ಬಂದವರ್ಗಾನನನ್ನಾಧಾರನೆಂದು ಪೇ
ಳ್ದಂದದಿಂದ ಮೊದಲ ಲಿಂಗವೆ ಪೀಠವಾಗಿ ಮುದ
ದಿಂದೊಸೆದು ಮೂರ್ತಿಗೊಂಡಾಲಿಂಗದೊಳು ವೃಷಬನಡೆಗೆ ಕಂಡಾಸಿದ್ಧನು.
(ಸಂ. 3, ಪದ್ಯ 49)

ಆಗ ಘಟಿಸಿದ ಐಕ್ಯದ ಪರಿಣಾಮವಾಗಿ ಅದು ಒಂದೇ ದೈವ (ಲಿಂಗ)ವೆನಿಸಿತು. ಅಂಥ ಲಿಂಗಕ್ಕೆ ಯೋಗಲಿಂಗವೆಂದು ಪ್ರತೀತಿ.

ಸಿದ್ಧರಾಮ ಚರಿತ್ರೆಯ ಕರ್ತೃ ರಾಘವಾಂಕನ ವ್ಯಾಖ್ಯಾನದ ಪ್ರಕಾರ ಯೋಗಲಿಂಗವೆಂಬುದು ಒಂದೇ ಕಲ್ಲಿನಿಂದಾದ ಲಿಂಗಶಿಲ್ಪ. ಇಲ್ಲಿ ಆಗಮ ಶಾಸ್ತ್ರಗಳಲ್ಲಿ ನಿರ್ದೇಶಿಸಿರುವಂತೆ ಪೀಠ ಒಂದು ಕಲ್ಲಿನಿಂದ ಮತ್ತು ಲಿಂಗ (ಬಾಣ) ಮತ್ತೊಂದು ಕಲ್ಲಿನಿಂದ ನಿರ್ಮಿತವಾದವುಗಳಲ್ಲ. ಇಲ್ಲಿ ಕಾಣಬಹುದಾದ ಸೈದ್ಧಾಂತಿಕ ತತ್ವವೆಂದರೆ (ಇದು ವೀರಶೈವ ತತ್ವವೂ ಹೌದು) ಪುರುಷ (ಶಿವ) ಮತ್ತು ಶಕ್ತಿ (ದೇವಿ) ಒಂದೇ, ಅವು ಅವಿಚ್ಛಿನ್ನ ಮತ್ತು ಅವಿಭಾಜ್ಯ ಎಂಬುದು, ಮತ್ತು ಪರಮಾತ್ಮನಿಗೆ ಆಧಾರಕ್ಕೆ ಇಲ್ಲವೆಂಬುದು ಮತ್ತು ತನಗೆ



1. ಯೋಗಲಿಂಗವಿರುವ ದೀಪಸ್ತಂಭ



2. ಯೋಗಲಿಂಗ

ತಾನೇ ಆಧಾರ ಎಂಬ ತತ್ವಗಳು. ಇದೇ ತತ್ವವನ್ನು ಸ್ಪಷ್ಟೀಕರಿಸುವ ದಿಶೆಯಲ್ಲಿ ಆರಾಧ್ಯ ದೈವವನ್ನು ವಿಶದೀಕರಿಸುವಂತೆ ಪ್ರಶ್ನಿಸಿ ವಿನಂತಿಸಿಕೊಳುತ್ತಾನೆ ಸಿದ್ಧರಾಮೇಶ್ವರ. ಅದು ಈ ಕೆಳಗಿನಂತಿದೆ.

ಪ್ರ : ..... ಗಿರೀಶ ಲಿಂಗಕ್ಕೆ ಲಿಂಗಂ ಪೀಠವೇಕೆ ಕರುಣಿಪುದೆಂದನು.... (ಸಂ. 3, ಪದ್ಯ 20)

ಉ : ...... ಈ ಮಹಾಲಿಂಗಮಂ ಮೂರ್ತಿಗೊಳಿಸಿದ ಸಿದ್ಧ
ರಾಮಯ್ಯ .....
ಈ ಮಹಿಯ ಮರ್ತ್ಯರಂತಲ್ಲೆಂದು ಮುಂದು ಜನವರಿಯಬೇಕದು ಕಾರಣಂ ।
(ಸಂ. 3, ಪದ್ಯ 21)

ಭಕ್ತ ಸಿದ್ಧರಾಮನು ಇತರೆ ಸಾಮಾನ್ಯರಂತಲ್ಲ. ಅದನ್ನು ಜಗವು ತಿಳಿದುಕೊಳ್ಳಬೇಕು. ಆ ಕಾರಣಕ್ಕಾಗಿಯೇ 'ಲಿಂಗದ ಮೇಲೆ ಲಿಂಗ'ವನ್ನು ಪ್ರತಿಷ್ಠಿಸು ಎಂದು ಹೇಳಿದಂತೆ ಕವಿ ರಾಘವಾಂಕನು ವ್ಯಾಖ್ಯಾನಿಸಿದ್ದಾನೆ. ಮತ್ತು ಆಗ ಜರುಗಿದ ಐಕ್ಯವು ಕೂಡಾ ಪ್ರಜೆಗಳೆಲ್ಲರ ಕ್ಷೇಮಾಭಿವೃದ್ಧಿಗಾಗಿ ಎಂದು ತಿಳಿಸುತ್ತಾನೆ. ಅಲ್ಲದೆ ಎರಡೂ ಲಿಂಗಗಳು ಪರಮಾತ್ಮನೊಬ್ಬನನ್ನೇ ಪ್ರತಿನಿಧಿಸುತ್ತವೆ ಎಂದು ಮುಂತಾಗಿ ಸ್ಪಷ್ಟೀಕರಿಸುತ್ತಾನೆ. ಇದೇ ವೀರಶೈವ ಧರ್ಮವು ಪ್ರತಿಪಾದಿಸುವ ಒಂದು ಮೂಲ ತತ್ವವೆಂದು ಬೇರೆ ಹೇಳಬೇಕಾಗಿಲ್ಲ.

ಇನ್ನು, ಸಿದ್ಧರಾಮನು ಸಾಧಿಸಿದ ಮತ್ತು ಕಾರಣನಾದ 'ಲಿಂಗದ ಮೇಲೆ ಲಿಂಗ' (ಯೋಗಲಿಂಗ) ಇದ್ದ ದೇವಸ್ಥಾನವು, ಆತನ ಕಾಲದಲ್ಲಿ, ಆನಂತರವೂ ಲೋಕಪ್ರಿಯವೂ ಮತ್ತು ಪ್ರಸಿದ್ಧವೂ ಆಗಿತ್ತು. ಹಾಗಾಗಿ ಆಡಳಿತಾರೂಢ ರಾಜವಂಶಗಳಾದ ದೇವಗಿರಿ ಯಾದವರು, ಗೋವಾದ ಕದಂಬರು, ಅವರ ಉಚ್ಚ ಅಧಿಕಾರಿಗಳು, ಮುಂತಾದವರು ಆ ದೇವಸ್ಥಾನಕ್ಕೆ ದತ್ತಿದಾನಗಳನ್ನು ಭಕ್ತಿಪೂರ್ವಕವಾಗಿ ಅರ್ಪಿಸುವಲ್ಲಿ ಮುಂದಾದರು. ಅವರ ಪ್ರೋತ್ಸಾಹದ ದ್ಯೋತಕವಾಗಿ ಕ್ರಿ.ಶ. 12 ಮತ್ತು 13ನೇ ಶತಮಾನಗಳಲ್ಲಿ 22ಕ್ಕೂ ಹೆಚ್ಚಿನ ದಾನ ಶಾಸನಗಳು ಅಸ್ತಿತ್ವಕ್ಕೆ ಬಂದವು. ಅವುಗಳನ್ನು ಈಗಿನ ಬಿಜಾಪುರ ಧಾರವಾಡ, ಶಿವಮೊಗ್ಗ, ಚಿತ್ರದುರ್ಗ, ಸೊಲ್ಲಾಪುರ ಮತ್ತು ಉಸ್ಮಾನಾಬಾದ್ ಜಿಲ್ಲೆಗಳಲ್ಲಿ ಕಾಣಬಹುದು. ಆದರೆ ಇಲ್ಲಿ ಗಮನಿಸಬೇಕಾದ ವಿಷಯವೆಂದರೆ, ಯಾವೊಂದು ಶಿಲಾಶಾಸನವು ಆ ದೇವಸ್ಥಾನದಲ್ಲಿ ಸ್ಥಾಪಿತವಾದ ಲಿಂಗಕ್ಕೆ 'ಲಿಂಗದ ಮೇಲೆ ಲಿಂಗ' ವೆಂದಾಗಲೀ ಅಥವಾ ಯೋಗ ಲಿಂಗವೆಂದಾಗಲೀ ಹೇಳದೆ, ಕಪಿಲ ಸಿದ್ಧ ಮಲ್ಲಿಕಾರ್ಜುನದೇವ ಅಥವಾ ಕಪಿಲ ಮಲ್ಲಿಕಾರ್ಜುನ ಎಂದು ವಿವರಿಸುತ್ತವೆ. ಇಲ್ಲಿ ಕಪಿಲ ಎಂಬ ಶಬ್ದವು ಮೇಲೆ ವಿವರಿಸಿದ ಹೋರಿಯ (ಬಸವನ) ಪವಾಡಕ್ಕೆ ಅನ್ವಯವಾಗುತ್ತದೆ. ಮತ್ತು ಆ ಸ್ಥಳಕ್ಕೆ (ಸೊಲ್ಲಾಪುರಕ್ಕೆ) ಅಭಿನವ ಶೈಲ, ದಕ್ಷಿಣ ಕಾಶಿಯೆಂದು ಉಲ್ಲೇಖಿಸಿರುವುದು ತಿಳಿಯುತ್ತದೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ವಿಷಯವೆಂದರೆ, ಶರಣ ಸಿದ್ಧರಾಮೇಶ್ವರನು ತನ್ನ ವಚನಗಳ ಅಂತ್ಯದಲ್ಲಿ ತನ್ನ ಆರಾಧ್ಯದೈವವನ್ನು ಸ್ಮರಿಸುತ್ತಾ 'ಕಪಿಲ ಸಿದ್ಧಮಲ್ಲಿಕಾರ್ಜುನ' ಎಂಬ ಅಂಕಿತದಲ್ಲಿ ಬರೆದಿರುತ್ತಾನೆ. ಆ ಕಾರಣದಿಂದಾಗಿಯೇ ಶಿಲಾಶಾಸನಗಳೂ ಸಹ ಆ ಪದಗಳನ್ನೇ ಬಳಸಿರಲು ಸಾಕು.

ಸಿದ್ಧರಾಮನು ನಿರ್ಮಿಸಿದ ದೇವಾಲಯ ಮತ್ತು ಸ್ಥಾಪಿಸಿದ ಲಿಂಗದ ಮೇಲೆ ಲಿಂಗವು ಕಾಲಾಂತರದಲ್ಲಿ ಸ್ಥಳಾಂತರಗೊಂಡು ಶಿಥಿಲವಾದಂತೆ ತಿಳಿಯುತ್ತದೆ. ಸೊಲ್ಲಾಪುರದ ಕೋಟೆ ಪ್ರದೇಶದಲ್ಲಿ ಈಗಲೂ ಕಾಣಬರುವ ಶಿಥಿಲವಾಗಿರುವ ದೇವಸ್ಥಾನವೇ ಮೂಲದಲ್ಲಿ 'ಲಿಂಗದ ಮೇಲೆ ಲಿಂಗ'ಕ್ಕೆ ತಾಣವಾಗಿತ್ತೆಂದೂ, ಆ ಲಿಂಗವು ತದನಂತರ ಸ್ಥಳಾಂತರಗೊಂಡು ಈಗ ಪೇಟೆ ಭಾಗದಲ್ಲಿರುವ ದೇವಸ್ಥಾನದಲ್ಲಿ ಸ್ಥಾಪಿಸಲಾಯಿತೆಂದು ಹೇಳಲಾಗುತ್ತದೆ. ಅದೂ ಕೂಡಾ ಈಗ ಶಿಥಿಲವಾಗಿ ಲಿಂಗವು ಮಣ್ಣಿನಲ್ಲಿ ಹೂತು ಹೋಗಿರುತ್ತದಲ್ಲದೇ ಅದರ ಮೇಲಿನ ಲಿಂಗ ಭಾಗವು ಮಾತ್ರ ಕಾಣಿಸುತ್ತದೆ. ಆದರೂ ಸೊಲ್ಲಾಪುರವು ಈಗಲೂ ಕೂಡಾ ಸಿದ್ಧರಾಮನ ಸಮಾಧಿ, ಸಿದ್ಧರಾಮನು ಕಟ್ಟಿಸಿದ ಕೆರೆ ಮತ್ತು ಸಿದ್ಧರಾಮ ಕ್ಷೇತ್ರವೆಂಬ ಸ್ಥಳ ಪ್ರಾಮುಖ್ಯತೆಯಿಂದಾಗಿ ಅದು ಒಂದು ಪ್ರಸಿದ್ಧ ಯಾತ್ರಾ ಸ್ಥಳವಾಗಿದ್ದು ಸಾಧು ಸಂತರನ್ನು ಮತ್ತು ಭಕ್ತಾದಿ ಯಾತ್ರಿಕರನ್ನು ಆಕರ್ಷಿಸುವ ಯಾತ್ರಾ ಸ್ಥಳವಾಗಿದೆ.

ಹಂಪೆಯಲ್ಲಿ ಉದ್ದಾನ ವೀರಭದ್ರ ಸ್ವಾಮಿಯ ದೇವಾಲಯದಲ್ಲಿ ಕಾಣಬರುವ ಲಿಂಗದ ಮೇಲೆ ಲಿಂಗವು ಮೇಲೆ ವಿವರಿಸಿದ ಕ್ರಿ.ಶ. 12ನೇ ಶತಮಾನದಲ್ಲಿ ಜೀವಿಸಿದ್ದ ಸಿದ್ಧರಾಮನ ಜೀವನ ಚರಿತ್ರೆ, ಘಟನಾವಳಿಗಳನ್ನು ಆಧರಿಸಿದುದಾಗಿದೆ ಎಂದು ತಿಳಿದಂತಾಯಿತು. ಅಲ್ಲದೆ ಅಂಥ ಸಿದ್ಧರಾಮನ ಜೀವನ ಚರಿತ್ರೆಯು ಪ್ರಥಮ ಬಾರಿಗೆ ಬರೆಯಲ್ಪಟ್ಟಿದ್ದು ಹಂಪೆಯಲ್ಲಿ ಮತ್ತು ಅಲ್ಲಿಯೇ ವಾಸವಾಗಿದ್ದ ಕವಿ ಹರಿಹರನ ಶಿಷ್ಯರಲ್ಲೊಬ್ಬನಾದ ರಾಘವಾಂಕನಿಂದ, ಅದೂ ಸಹ ಸಿದ್ಧರಾಮನ ಕಾಲಾನಂತರವೆಂಬುದು ಇನ್ನೊಂದು ವಿಶೇಷತೆ. ಮತ್ತೊಂದು ಮುಖ್ಯ ಅಂಶವೆಂದರೆ ಕ್ರಿ.ಶ. 1585ರಲ್ಲಿ ಹಂಪೆಯಲ್ಲಿ ಹಿರಿಯ ಮಠದಲ್ಲಿ ವಾಸವಾಗಿದ್ದ ಶರಣಕವಿ ವಿರೂಪಾಕ್ಷ ಪಂಡಿತನು, ತನ್ನ ಬೃಹತ್ ಕಾವ್ಯಗ್ರಂಥವಾದ ಚನ್ನಬಸವ ಪುರಾಣವನ್ನು ರಚಿಸುವ ಸಂದರ್ಭದಲ್ಲಿ ಆ ಪುರಾಣಾಂತರ್ಗತ ವಿಷಯಗಳನ್ನು

ಸಿದ್ಧರಾಮೇಶ್ವರನಿಗೆ ಚನ್ನಬಸವಣ್ಣನು ಬಿತ್ತರಿಸಿದಂತೆ ಬರೆಯಲಾಗಿದೆ. ಈ ಎಲ್ಲ ಕಾರಣಗಳಿಂದ, ಸೊಲ್ಲಾಪುರದಲ್ಲಿ ಜೀವಿಸಿದ್ದ ಸಿದ್ಧರಾಮೇಶ್ವರನ ಜೀವನ ಚರಿತ್ರೆ, ಆತನ ಪವಾಡಗಳು, ಮತ್ತಿತರ ಜನೋಪಯೋಗಿ ಕಾರ್ಯಗಳು ದೂರದ ಹಂಪೆಯ ಪ್ರಾಂತದಲ್ಲಿಯೂ ಮತ್ತು ಸಿದ್ಧರಾಮನ ಕಾಲಾನಂತರ, ಸುಮಾರು 400 ವರ್ಷಗಳ ನಂತರ, ಎಂದರೆ ಕ್ರಿ.ಶ. 16ನೇ ಶತಮಾನದಲ್ಲಿಯೂ ಸಹ, ವಿಶೇಷ ಜನಪ್ರಿಯತೆ ಮತ್ತು ವ್ಯಾಪಕ ಪ್ರಚಾರವನ್ನು ಪಡೆದಿದ್ದುವೆಂಬುದು ಸ್ಪಷ್ಟವಾಗಿ ವೇದ್ಯವಾಗುತ್ತದೆ. ಇದೇ ರೀತಿ, ವೀರಶೈವರು ಗಣನೀಯ ಪ್ರಮಾಣದಲ್ಲಿರುವ ಕರ್ನಾಟಕದಲ್ಲಿ ಬಹುತೇಕ ಎಲ್ಲಾ ಕಡೆಗಳಲ್ಲೂ ಅವು ಜನಪ್ರಿಯವಾಗಿ ಪ್ರಚಾರದಲ್ಲಿದ್ದುವೆಂಬುದನ್ನು, ಮೈಸೂರು ಜಿಲ್ಲೆಯ ಬೆಟ್ಟದಪುರದಲ್ಲಿ ಕಾಣಬರುವ ಲಿಂಗಶಿಲ್ಪದಿಂದಲೂ ತಿಳಿಯಬಹುದು. ಇಲ್ಲಿಯ ಲಿಂಗವು ಹಂಪೆಯ ಉದಾಹರಣೆಗಿಂತ ಸ್ವಲ್ಪ ವಿಭಿನ್ನವಾಗಿದೆ. ಎಂದರೆ ಇಲ್ಲಿ ಕಾಣಬರುವಂತೆ ಎರಡು ಲಿಂಗಗಳು ಒಂದರ ಮೇಲೊಂದಿರದೆ, ಒಂದೇ ಪಾಣಿಪೀಠದ ಮೇಲೆ ಎರಡು ಲಿಂಗಗಳು (ಬಾಣಗಳು) ಇವೆ. ಅವು ಒಂದರ ಹಿಂದೆ ಒಂದು ಇರುವಂತೆ ಸ್ಥಾಪಿತವಾಗಿವೆ. ಇವುಗಳಲ್ಲಿ ಮುಂದಿರುವುದು ಚಿಕ್ಕದಾಗಿದ್ದು ಮೂರು ಮುಕ್ಕಾಲು ಅಂಗುಲ ಎತ್ತರವಾಗಿದ್ದರೆ ಅದರ ಹಿಂದೆ ಇರುವುದು ಏಳುವರೆ ಅಂಗುಲ ಎತ್ತರದ್ದಾಗಿದೆ. ಎಂದರೆ ಹಿಂದೆ ಇರುವುದು ಮುಂದಿನ ಲಿಂಗಕ್ಕಿಂತ ಸರಿಯಾಗಿ ದ್ವಿಗುಣ ಪ್ರಮಾಣದಲ್ಲಿದೆ. ಇಲ್ಲಿ ಇನ್ನೊಂದು ಗಮನಿಸಬೇಕಾದ ಅಂಶವೆಂದರೆ, ಈ ಲಿಂಗವಿರುವ ಬೆಟ್ಟ, ಅಲ್ಲಿರುವ ಪ್ರಮುಖ ದೇವಸ್ಥಾನ, ಇತರೇ ಶಿಲ್ಪ ವಿಗ್ರಹಗಳು, ಸಿದ್ಧರಾಮೇಶ್ವರನ ಆರಾಧ್ಯ ದೈವವಾದ ಶ್ರೀಶೈಲ ಮಲ್ಲಿಕಾರ್ಜುನ ದೇವರ ಮತ್ತು ವೀರಶೈವರ ಧಾರ್ಮಿಕ ಚಟುವಟಿಕೆಗಳಿಗೆ ಸಾಕಷ್ಟು ಆಧಾರ ಪ್ರಮಾಣಗಳು ಮತ್ತು ಸಂಬಂಧಗಳನ್ನು ಹೊಂದಿರುತ್ತವೆಂಬುದು.

ಮೇಲೆ ವಿವರಿಸಿದಂತೆ ವೀರಶೈವ ಶರಣರ ಜೀವನ ಘಟನಾವಳಿಗಳು, ಪವಾಡಗಳು ಅವರು ಪ್ರತಿಪಾದಿಸಿದ ವಿಚಾರಗಳು, ತತ್ವಗಳು, ರಚಿಸಿದ ಸಾಹಿತ್ಯ ಗ್ರಂಥಗಳು ಮುಂತಾದವು, ಆಗೊಮ್ಮೆ ಈಗೊಮ್ಮೆ ಸಾಕಾರ ರೂಪಗಳನ್ನು ಪಡೆಯುವಲ್ಲಿ ಸಮಕಾಲೀನ ಶಿಲ್ಪಿಗಳಿಗೆ ಪ್ರೇರಣಾ ವಿಷಯವಾಗಿದ್ದುವೆಂಬುದು ವೇದ್ಯವಾಗುತ್ತದೆ. ಇನ್ನೂ ಕೆಲವು ಉದಾಹರಣೆಗಳನ್ನು ಹಂಪೆಯ ವಿರೂಪಾಕ್ಷ ದೇವಸ್ಥಾನದ ಸೋಮವಳ್ಳಿ ಯೋಗಾನಂದರ ಪ್ರಹಸನದ ದೃಶ್ಯ, ಕಮಲಾಪುರದ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿರುವ ಅಷ್ಟತನುಮೂರ್ತಿ ಶಿವ, ಬುಕ್ಕಸಾಗರದ ವೀರಶೈವ ಶರಣರ ಪವಾಡಗಳ ನಿರೂಪಣಾ ದೃಶ್ಯಗಳು, ಮುಂತಾದವುಗಳಲ್ಲಿ ಕಾಣಬಹುದು. ಅವುಗಳನ್ನೆಲ್ಲಾ ವಿವರಿಸುವ ಸಾಹಿತ್ಯಾಧಾರಗಳು ವೀರಶೈವ ಕನ್ನಡ ಸಾಹಿತ್ಯ ಕೃತಿಗಳೆಂದು ಬೇರೆ ಹೇಳಬೇಕಾಗಿಲ್ಲ. ಹಾಗಾಗಿ ಶಿಲ್ಪ ಶಾಸ್ತ್ರಾಧ್ಯಯನಕ್ಕೆ ಹೊಸದಾದ ವಿನೂತನವಾದ ಆಯಾಮವನ್ನು ಅವು ಒದಗಿಸುತ್ತಾ ಬಂದಿವೆ.

4. ಅಚ್ಯುತಾಪುರದ ಶಿಲ್ಪಗಳು

ಹೆಚ್.ಟಿ. ತಳವಾರ್

ವಿಜಯನಗರ ಕಾಲದಲ್ಲಿ ಅನೇಕ ಪಟ್ಟಣಗಳು ನಿರ್ಮಾಣಗೊಂಡು ಸಾಮ್ರಾಜ್ಯದ ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಗೆ ಪ್ರಮುಖ ಪಾತ್ರ ವಹಿಸಿದವು. ಅದೇ ರೀತಿ ಸಾಮ್ರಾಜ್ಯದ ರಾಜಧಾನಿಯಾದ ವಿಜಯನಗರ ಪಟ್ಟಣಧ ಅಭಿವೃದ್ಧಿಯ ಅಂಗವಾಗಿ ಉಪ ನಗರಗಳಾದ ಕೃಷ್ಣಾಪುರ, ಅಚ್ಯುತಾಪುರ, ವಿಠಲಾಪುರ, ವರದಾಜಮ್ಮನ ಪಟ್ಟಣ ಮುಂತಾದವುಗಳ ನಿರ್ಮಾಣವಾಯಿತು.

ಅಚ್ಯುತಾಪುರ ಅಥವಾ ಅಚ್ಯುತರಾಯಪೇಟೆಯ ನಿರ್ಮಾಣ ವಿಜಯನಗರ ಅರಸ ಅಚ್ಯುತರಾಯನ ಕಾಲದಲ್ಲಿ ಆಯಿತು. ಇದರ ಕೇಂದ್ರ ಬಿಂದು ಈಗ ಅಚ್ಯುತರಾಯ ದೇವಾಲಯವೆಂದು ಕರೆಯಲಾಗುತ್ತಿರುವ ತಿರುವೆಂಗಳನಾಥ ದೇವಾಲಯ.[1] ಈ ದೇವಾಲಯವನ್ನು ಕ್ರಿ.ಶ. 1534ರಲ್ಲಿ ಸಲಕರಾಜ ವೊಡೆಯನ ಮಗ ಮಹಾಮಂಡಲೇಶ್ವರ ಹಿರಿಯ ತಿರುಮಲರಾಜ ವೊಡೆಯನು ಕಟ್ಟಿಸಿದನು ಮತ್ತು ಹಿರಿಯ ತಿರುಮಲರಾಜನು ಅಚ್ಯುತರಾಯಪೇಟೆಯನ್ನು ಕಟ್ಟಿಸಿದನು ಎಂಬುದು ದೇವಾಲಯದ ಗೋಪುರದ ಹತ್ತಿರವಿರುವ ಶಾಸನದಿಂದ ತಿಳಿಯುತ್ತದೆ.[2] ಅಚ್ಯುತರಾಯಪೇಟೆಯ ಚತುಸ್ಸೀಮೆಯನ್ನು ಶಾಸನವು ಈ ರೀತಿ ಉಲ್ಲೇಖಿಸುತ್ತದೆ: ಪಶ್ಚಿಮಕ್ಕೆ ಮತಂಗ ಪರ್ವತ, ಪೂರ್ವಕ್ಕೆ ತಿಪರಾಜನ ತೋಟ, ಉತ್ತರಕ್ಕೆ ತುಂಗಭದ್ರ ತೀರದ ಸೀತಾಕೊಂಡ ಮತ್ತು ದಕ್ಷಿಣಕ್ಕೆ ಭೂಪತಿಕೆರೆ.

ತಿರುವೆಂಗಳನಾಥ ದೇವಾಲಯ, ಅದರ ಕಲ್ಯಾಣ ಮಂಟಪ, ಪ್ರಾಕಾರ ಮತ್ತು ಗೋಪುರದ ಮೇಲಿನ ಉಬ್ಬು ಶಿಲ್ಪಗಳು ವಿಜಯನಗರ ಕಾಲದ ಶಿಲ್ಪಗಳ ಬಗ್ಗೆ ಹೆಚ್ಚಿನ ವಿಷಯವನ್ನು ತಿಳಿಯಲು ಸಹಾಯವಾಗಿವೆ. ತಿರುವೆಂಗಳನಾಥ ದೇವಾಲಯವು ವೈಷ್ಣವ ಪಂಥಕ್ಕೆ ಸೇರಿರುವುದರಿಂದ ಆ ಪಂಥದ ಶಿಲ್ಪಗಳೇ ಪ್ರಮುಖವಾಗಿವೆ. ಇಲ್ಲಿ ರಾಮ, ಕೃಷ್ಣ, ವೆಂಕಟೇಶ, ವಿಠಲ, ತಿರುವೆಂಗಳನಾಥ, ಲಕ್ಷ್ಮೀನಾರಾಯಣ ಮುಂತಾದ ದೇವತೆಗಳ ಶಿಲ್ಪಗಳಲ್ಲದೆ, ಮತ್ಸ್ಯ, ಕೂರ್ಮ, ನರಸಿಂಹ ಅವತಾರಗಳು, ವಿಷ್ಣು ಮೊಸಳೆಯ ಹಿಡಿತದಿಂದ ಗಜೇಂದ್ರನನ್ನು ಮೋಕ್ಷಗೊಳಿಸುವ ಶಿಲ್ಪವನ್ನೂ ಕೆತ್ತಲಾಗಿದೆ. ವಿಷ್ಣುವಿನ ಪತ್ನಿಯರಾದ ಲಕ್ಷ್ಮೀ ಮತ್ತು ಭೂದೇವಿ, ಭಕ್ತರಾದ ಆಳ್ವಾರರು, ವಾಹನವಾದ ಗರುಡನ ಶಿಲ್ಪಗಳನ್ನೂ ಮತ್ತು ವೈಷ್ಣವ ಧರ್ಮದ ಸಂಕೇತಗಳಾದ ಶಂಖ, ಚಕ್ರ, ಮತ್ತು ನಾಮಗಳನ್ನೂ ಕೆತ್ತಲಾಗಿದೆ. ದೇವಾಲಯದ ಗೋಪುರಗಳ ಮೇಲೆ ರಾಮಾಯಣದ ಕೆಲವು ಸನ್ನಿವೇಶಗಳನ್ನು ಕೆತ್ತಲಾಗಿದೆ. ಇವುಗಳಲ್ಲಿ ರಾಮನು ಮಾರೀಚನಿಗೆ ಬಾಣವನ್ನು ಬಿಡುವುದು, ಸೀತೆ ಅಶೋಕವನದಲ್ಲಿರುವುದು, ಆಂಜನೇಯನು ಸೀತೆಗೆ ಮುದ್ರೆಯುಂಗುರವನ್ನು ಕೊಡುವುದು, ಆಂಜನೇಯನು ಸಂಜೀವಿನಿ ಪರ್ವತವನ್ನು ಎತ್ತುವುದು, ಲಕ್ಷ್ಮಣ ಮತ್ತು ಆಂಜನೇಯ ರಾಮನೊಡನಿರುವುದು ಮುಂತಾದವುಗಳನ್ನು ನೋಡಬಹುದು.

ಇಲ್ಲಿ ವೈಷ್ಣವ ಧರ್ಮಕ್ಕೆ ಪ್ರಾಮುಖ್ಯತೆ ನೀಡಿದ್ದರೂ ಸೂರ್ಯ ಶಿಲ್ಪ ಮತ್ತು ಶೈವ ಸಂಪ್ರದಾಯದ ನಟರಾಜ, ಭೈರವ, ಹರಿಹರ, ಗಣೇಶ, ನಂದಿ ಮತ್ತು ಶಿವಲಿಂಗಗಳ ಶಿಲ್ಪಗಳನ್ನೂ ಕೆತ್ತಲಾಗಿದೆ.

ದಿನನಿತ್ಯದ ಜನಜೀವನವನ್ನೂ ಪ್ರತಿಬಿಂಬಿಸಲು ನೃತ್ಯಗಾರರು, ವಾದ್ಯಗಾರರು, ಕುಸ್ತಿಪಟುಗಳು, ಬೇಟೆಗಾರರು, ಕೊರವಂಜಿ ಮಗುವನ್ನು ಬೆನ್ನಮೇಲೆ ಒಯ್ಯುವುದು, ಕೊರವಂಜಿ ಕಣಿ ಹೇಳುವುದು, ಸ್ತ್ರೀಯರು ಪೂಜೆ ಮಾಡುವುದು, ಸ್ತ್ರೀಯರು ಹೂಬಳ್ಳಿಯನ್ನು ಹಿಡಿದಿರುವುದು, ದೊಂಬರ ಆಟ, ಕೋಲಾಟ ಮುಂತಾದ ಶಿಲ್ಪಗಳನ್ನು ಮನಮೋಹಕವಾಗಿ ಕೆತ್ತಲಾಗಿದೆ. ಕೆಲವು ಮಿಥುನ ಶಿಲ್ಪಗಳೂ ಇವೆ.

ಗಿಡ-ಮರಗಳು, ಪ್ರಾಣಿ-ಪಕ್ಷಿಗಳೂ ಇಲ್ಲಿ ಸ್ಥಾನ ಪಡೆದಿವೆ. ಈ ಗುಂಪಿನಲ್ಲಿ ವಿವಿಧ ಗಿಡ-ಮರಗಳು, ಸಿಂಹ, ಹುಲಿ, ಜಿಂಕೆ, ಕುದುರೆ, ಜಾನುವಾರುಗಳು, ಗಿಳಿ, ನವಿಲು, ಹಂಸ, ಮೀನು, ಆಮೆ, ಕಪ್ಪೆ, ಮೊಸಳೆ ಮತ್ತು ಹಲ್ಲಿಗಳ ಶಿಲ್ಪಗಳು, ಮಕರ, ಯಾಳಿ ಮುಂತಾದ ಕಾಲ್ಪನಿಕ ಪ್ರಾಣಿ-ಪಕ್ಷಿಗಳ ಶಿಲ್ಪಗಳು ಇವೆ. ಇವಲ್ಲದೆ ರಾಜ ಲಾಂಛನಗಳಾದ ವರಾಹ, ಖಡ್ಗ ಮತ್ತು ಗಂಡಭೇರುಂಡ ಶಿಲ್ಪಗಳನ್ನೂ ಇಲ್ಲಿ ಕೆತ್ತಲಾಗಿದೆ.



1. ಯೋಗನರಸಿಂಹ



2. ದ್ವಾರಪಾಲಕ



3. ರಾಮಾಯಣದ ದೃಶ್ಯಗಳು




4. ರಾಮಾಯಣದ ದೃಶ್ಯಗಳು



5. ಗರುಡ



6. ವಾದ್ಯಗಾರ



7. ನೃತ್ಯಗಾರ



8. ಕುಸ್ತಿಪಟುಗಳು



9. ಕೃಷ್ಣ



10. ಮಿಥುನ ಶಿಲ್ಪ



11. ಚೇಳಿನ ಮೇಲೆ ಕುಳಿತ ಪುರುಷ

ವಿಜಯನಗರದ ಶಿಲ್ಪಿಗಳ ಕೈಚಳಕದಿಂದ ರೂಪುಗೊಂಡ ಸುಂದರ ಮತ್ತು ಮನಮೋಹಕವಾದ ಈ ಶಿಲ್ಪಗಳು ವಿಜಯನಗರ ಕಾಲದ ಶಿಲ್ಪಗಳ ಅಧ್ಯಯನಕ್ಕೆ ಹೆಚ್ಚಿನ ಮಾಹಿತಿಯನ್ನು ಒದಗಿಸುವಲ್ಲಿ ಸಹಾಯಕವಾಗಿವೆ.

ಅಡಿ ಟಿಪ್ಪಣಿಗಳು

1. ಡಿ. ದೇವಕುಂಜರಿ, 1983, *ಹಂಪಿ*, ಪು. 60.
2. *ಸೌಇಂಇ.*, 9(2), ಸಂ. 564.

5. ತಿರುಪತಿಯಲ್ಲಿರುವ ಕೃಷ್ಣದೇವರಾಯ ಮತ್ತು ಅವನ ರಾಣಿಯರ ಕಂಚಿನ ವಿಗ್ರಹಗಳು - ಒಂದು ಟಿಪ್ಪಣಿ

ಸಿಂದಗಿ ರಾಜಶೇಖರ

ವಿಜಯನಗರದ ಅರಸ ಶ್ರೀ ಕೃಷ್ಣದೇವರಾಯನು ಹಾಗೂ ಅವನ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲಾದೇವಿಯರು ತಿರುಪತಿಯ ಶ್ರೀ ವೆಂಕಟೇಶ್ವರನ ಸನ್ನಿಧಾನವನ್ನು ಅನೇಕ ಬಾರಿ ಸಂದರ್ಶಿಸಿದುದು ತಿರುಪತಿಯಲ್ಲಿರುವ ಶ್ರೀ ಕೃಷ್ಣದೇವರಾಯನ ಶಾಸನಗಳಿಂದ ತಿಳಿದುಬರುತ್ತದೆ. ಅವನು ತನ್ನ ಆಳ್ವಿಕೆಯ ಕಾಲಾವಧಿಯಲ್ಲಿ ಏಳು ಸಲ ತಿರುಪತಿಯನ್ನು ಸಂದರ್ಶಿಸಿದನು. ಪ್ರತಿ ಸಲವೂ ಅವನು ಶ್ರೀ ವೆಂಕಟೇಶ್ವರನಿಗೆ ಅನೇಕ ರೀತಿಯ ದಾನಗಳನ್ನು ನೀಡಿದುದಾಗಿ ಶಾಸನಗಳಲ್ಲಿ ಕಂಡುಬರುತ್ತದೆ.

ವಿಜಯನಗರದ ಅರಸ ಶ್ರೀ ಕೃಷ್ಣದೇವರಾಯನ ಕಾಲದ ಪ್ರಮುಖ ಘಟನೆಗಳನ್ನು ಅರಿಯಲು ತೆಲುಗಿನಲ್ಲಿ ರಚಿತವಾದ 'ರಾಯವಾಚಕಮು' ಗ್ರಂಥ ಪ್ರಮುಖವಾಗಿದೆ. ಇದನ್ನು ಮಹಾಮಂಡಳೇಶ್ವರ ಕಾಶಿವಿಶ್ವನಾಥನ ಸ್ಥಾನಪತಿಯು ರಚಿಸಿದ್ದಾನೆ. ಹಾಗೂ ಇದು ಬಹುಶಃ ಹದಿನಾರನೇ ಶತಮಾನದ ಕೊನೆಯ ವರ್ಷಗಳಲ್ಲಿ ಇಲ್ಲವೇ ಹದಿನೇಳನೇ ಶತಮಾನದ ಮೊದಲ ಭಾಗದಲ್ಲಿ ರಚಿತವಾದ ಗ್ರಂಥ. ಈ ಗ್ರಂಥವು ಕನ್ನಡ ಭಾಷೆಯಲ್ಲಿರುವ ಶ್ರೀ ಕೃಷ್ಣದೇವರಾಯನ ದಿನಚರಿಯ ತೆಲುಗು ಭಾಷಾಂತರವಾಗಿದ್ದು ಕಾಶಿವಿಶ್ವನಾಥನ ಸ್ಥಾನಪತಿಯು ಈ ರೀತಿ ಭಾಷಾಂತರಿಸುವಾಗ, ದಿನಚರಿಯಲ್ಲಿಲ್ಲದ ಅನೇಕ ವಿಷಯಗಳನ್ನು ಕೂಡ ಸೇರಿಸಿದುದು ಕಂಡುಬರುತ್ತದೆ. ಇಂತಹ ಸೇರ್ಪಡೆಯಾದ ವಿಷಯಗಳಲ್ಲಿ ಕೃಷ್ಣದೇವರಾಯನು ತನ್ನ ರಾಣಿಯರ ಕಂಚಿನ ಪ್ರತಿಮೆಗಳನ್ನು ತಿರುಪತಿ ದೇವಸ್ಥಾನದಲ್ಲಿ ಪ್ರತಿಷ್ಠೆ ಮಾಡಿದುದನ್ನು ತಿಳಿಸುತ್ತದೆ. ದಿನಚರಿ ಹಾಗೂ ರಾಯವಾಚಕಮು ಕೃತಿಗಳಲ್ಲಿ ರಾಯನು ಕಲುಬರಿಗೆಯ ವಿಜಯದ ಅನಂತರ ತಿರುಪತಿಯ ವೆಂಕಟೇಶ್ವರನನ್ನು ದರ್ಶಿಸಿ ದೇವಾಲಯಕ್ಕೆ ಅನೇಕ ಕಾಣಿಕೆಗಳನ್ನಿತ್ತ ವಿವರಗಳನ್ನು ನೀಡುತ್ತದೆ. ರಾಯವಾಚಕಮುದಲ್ಲಿ ಈ ವಿವರಗಳ ಜೊತೆಗೆ ದಿನಚರಿಯಲ್ಲಿಲ್ಲದ ವಿಷಯವೊಂದನ್ನು ಕಾಣಬಹುದು. ದಿನಚರಿಯು ರಾಯನು ಕೇವಲ ವೆಂಕಟೇಶ್ವರನ ದರ್ಶನಗೈದು ಕಾಣಿಕೆಗಳನ್ನು ಅರ್ಪಿಸಿದುದನ್ನು ಉಲ್ಲೇಖಿಸಿದರೆ,[1] ರಾಯವಾಚಕಮು ಕೃಷ್ಣದೇವರಾಯನು ಈ ಸಂದರ್ಭದಲ್ಲಿ ತನ್ನ ಹಾಗೂ ತನ್ನ ರಾಣಿಯರಾದ ತಿರುಮಲಾದೇವಿ ಮತ್ತು ಚಿನ್ನಾದೇವಿಯರ ಕಂಚಿನ ಪ್ರತಿಮೆಗಳನ್ನು ದೇವಾಲಯದಲ್ಲಿ ಪ್ರತಿಷ್ಠೆಮಾಡಿದುದನ್ನು ತಿಳಿಸುತ್ತದೆ.[2] ಇದು ಕೃಷ್ಣದೇವರಾಯನ ದಿನಚರಿ ರಚಿತವಾದ ನಂತರದ ಕಾಲದಲ್ಲಿ ತಿರುಪತಿಗೆ ಹೋದಾಗ ಈ ಪ್ರತಿಮೆಗಳನ್ನು ನಿಲ್ಲಿಸಿದುದನ್ನು ಖಚಿತಪಡಿಸುತ್ತದೆ.

ದಿನಚರಿ ಕ್ರಿ.ಶ. 1509ರಿಂದ ಕ್ರಿ.ಶ. 1520ರವರೆಗೆ ನಡೆದ ಘಟನೆಗಳನ್ನು ಮಾತ್ರ ಒಳಗೊಂಡಿದೆ. ಇದರಿಂದ ವ್ಯಕ್ತವಾಗುವ ಒಂದು ಅಂಶವೆಂದರೆ ತಿರುಪತಿಯ ದೇವಸ್ಥಾನದಲ್ಲಿ ಕೃಷ್ಣದೇವರಾಯನ ಮತ್ತು ಅವನ ರಾಣಿಯರ ಕಂಚಿನ ವಿಗ್ರಹಗಳನ್ನು 1520ರ ನಂತರ ಕೊಡಲಾಯಿತೆಂಬುದು. 'ರಾಯವಾಚಕಮು' ಹದಿನಾರನೆಯ ಶತಮಾನದ ಕೊನೆಯಲ್ಲಿ ರಚಿತವಾಗಿದ್ದು, ಕಾಶಿವಿಶ್ವನಾಥನ ಸ್ಥಾನಪತಿಗೆ ತಿರುಪತಿಯಲ್ಲಿದ್ದ ಈ ಕಂಚಿನ ವಿಗ್ರಹಗಳ ಅರಿವಿದ್ದುದರಿಂದ ಅವನು ಅದನ್ನು ಉಲ್ಲೇಖಿಸಿದ್ದಾನೆ. ಈ ವಿಗ್ರಹಗಳನ್ನು ಯಾವಾಗ ಕೃಷ್ಣದೇವರಾಯನು ತಿರುಪತಿ ದೇವಸ್ಥಾನಕ್ಕೆ ಕೊಟ್ಟಿರಬಹುದೆಂಬುದನ್ನು ಅರಿಯಲು ಕೃಷ್ಣದೇವರಾಯನ ಶಾಸನಗಳನ್ನು ಪರಿಗಣಿಸಬೇಕಾಗುತ್ತದೆ.

ಕೃಷ್ಣದೇವರಾಯನು ತನ್ನ ಆಳ್ವಿಕೆಯಲ್ಲಿ ತಿರುಪತಿಯನ್ನು ಏಳು ಸಲ ಸಂದರ್ಶಿಸಿದನು. ದೇವಾಲಯಕ್ಕೆ ಇವನಿತ್ತ ಮೊದಲ ಭೇಟಿ 10-2-1513ರಲ್ಲಿ.[3] ಆ ಸಂದರ್ಭದಲ್ಲಿ ಕೃಷ್ಣದೇವರಾಯನು ತನ್ನ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲಾದೇವಿಯರೊಡನೆ ದೇವರ ದರ್ಶನ ಪಡೆದು ನವರತ್ನ ಖಚಿತ ಕಿರೀಟವನ್ನು 25 ಬೆಳ್ಳಿಯ ಆರತಿತಟ್ಟೆಗಳನ್ನು ಕಾಣಿಕೆಯಾಗಿ ನೀಡಿದರೆ, ಅವನ ರಾಣಿಯರು ಬಂಗಾರದ ಹಾಲಿನ ಬಟ್ಟಲನ್ನು ದಾನವಾಗಿತ್ತರು.

ಶ್ರೀ ಕೃಷ್ಣದೇವರಾಯನು ದಿನಾಂಕ 2-5-1513ರಲ್ಲಿ ತಿರುಪತಿಯ ದೇವಾಲಯವನ್ನು ಎರಡನೆಯ ಬಾರಿಗೆ ಒಬ್ಬನೆ ಸಂದರ್ಶಿಸಿ, ವೆಂಕಟೇಶ್ವರ, ಶ್ರೀದೇವಿ ಮತ್ತು ಭೂದೇವಿಯರಿಗೆ ಚಿಕ್ಕ ಕಿರೀಟಗಳನ್ನು ದಾನವಾಗಿತ್ತನು.[4] 1515ರ ಜೂನ್ 13ರಂದು ಇವನು ಮೂರನೆಯ ಬಾರಿಗೆ ತಿರುಪತಿಯ ಶ್ರೀ ವೆಂಕಟೇಶ್ವರ ದರ್ಶನ ಪಡೆದು ತನ್ನ ತಂದೆ-ತಾಯಿಗಳಿಗೆ ಪುಣ್ಯವಾಗಲೆಂದು ಐದು ಹಳ್ಳಿಗಳನ್ನು

ದಾನವಾಗಿತ್ತನು.[5] ಕೃಷ್ಣದೇವರಾಯನು ಕಳಿಂಗದ ಗಜಪತಿಯಿಂದ ಉದಯಗಿರಿ ಕೋಟೆಯನ್ನು ವಶಪಡಿಸಿಕೊಂಡ ನಂತರ ನಾಲ್ಕನೆಯ ಸಲ ತಿರುಪತಿಗೆ ಜುಲೈ 6, 1514ರಂದು ಬಂದು ವೆಂಕಟೇಶ್ವರನನ್ನು ಆರಾಧಿಸಿ 30,000 ವರಹಗಳಿಂದ ಕನಕಾಭಿಷೇಕವನ್ನು ಮಾಡಿಸಿದ.[6] ಅವನೊಂದಿಗೆ ಅವನ ರಾಣಿಯರೂ ಕೂಡ ಬಂದುದನ್ನು ಶಾಸನಗಳೇ ತಿಳಿಸುತ್ತವೆ. ಈ ಸಂದರ್ಭದಲ್ಲಿ ಅವರು ಚಿನ್ನದ ತೋರಣಗಳನ್ನು ಕಾಣಿಕೆಯಾಗಿತ್ತುದಲ್ಲದೆ ಎರಡು ಹಳ್ಳಿಗಳನ್ನು ದೇವರ ಸೇವಾಕಾರ್ಯಕ್ಕೆ ದಾನವಾಗಿತ್ತರು. ಕಳಿಂಗ ದಿಗ್ವಿಜಯವನ್ನು ಯಶಸ್ವಿಯಾಗಿ ಮುಗಿಸಿದುದರ ದ್ಯೋತಕವಾಗಿ ಕೃಷ್ಣದೇವರಾಯನು ತಿರುಪತಿಗೆ ಜನವರಿ 2, 1517ರಂದು ಭೇಟಿ ನೀಡಿದ.[7] ಈ ಸಂದರ್ಭದಲ್ಲಿ ದೇವಸ್ಥಾನದ ಶಿಖರಕ್ಕೆ ಚಿನ್ನದ ಲೇಪನವನ್ನು ಮಾಡಲು 30,000 ಚಿನ್ನದ ವರಹಗಳನ್ನು ಕಾಣಿಕೆಯಾಗಿತ್ತನು. ಕೃಷ್ಣದೇವರಾಯ, 16ನೆಯ ಅಕ್ಟೋಬರ್ 1518ರಲ್ಲಿ ತಿರುಪತಿಗೆ ಆರನೆಯ ಸಲ ಭೇಟಿ ನೀಡಿದನು.[8] 17 ಫೆಬ್ರವರಿ 1521ರ ಸಂದರ್ಭದಲ್ಲಿ ಇವನೊಂದಿಗೆ ತಿರುಮಲಾದೇವಿಯು ಕೂಡಾ ಬಂದುದನ್ನು ಶಾಸನಗಳು ಉಲ್ಲೇಖಿಸುತ್ತವೆ.

ಕೃಷ್ಣದೇವರಾಯನ 1521ರ ತಿರುಪತಿಯ ಯಾತ್ರೆಯು ಗಬ್ಬೂರು ಕದನದಲ್ಲಿ ಆದಿಲ್‌ಶಾಹಿ ಸುಲ್ತಾನನ್ನು ಸೋಲಿಸಿ, ಅನಂತರ ರಾಯಚೂರು ಕೋಟೆಯನ್ನು ಕ್ರಿ.ಶ. 1520ರ ಮೇ ತಿಂಗಳಲ್ಲಿ ಯಶಸ್ವಿಯಾಗಿ ವಶಪಡಿಸಿಕೊಂಡು ತದನಂತರ ವಿಜಾಪುರವನ್ನು ಮುತ್ತಿ ಜಯಿಸಿ, ಫಿರೋಜಾಬಾದ ಮತ್ತು ಹಸನಾಬಾದ ಕೋಟೆಗಳನ್ನು ವಶಪಡಿಸಿಕೊಂಡು ಸಾಗರದ ಮೂಲಕ ಗುಲ್ಬರ್ಗವನ್ನು ವಶಪಡಿಸಿಕೊಂಡು ಸುಲ್ತಾನ್ ಮಹಮುದ್‌ಷಾನ ಮಗನನ್ನು ಪಟ್ಟಕ್ಕೇರಿಸಿ ವಿಜಯನಗರಕ್ಕೆ ಹಿಂದಿರುಗಿದ ನಂತರ ಕೈಗೊಂಡ ಯಾತ್ರೆಯಾಗಿದೆ. ಇದೇ ಸಂದರ್ಭದಲ್ಲಿ ಕೃಷ್ಣದೇವರಾಯನು ತನ್ನ ಹಾಗೂ ತನ್ನಿಬ್ಬರು ರಾಣಿಯರ ಕಂಚಿನ ಪ್ರತಿಮೆಗಳನ್ನು ತಿರುಪತಿಯ ದೇವಸ್ಥಾನದಲ್ಲಿ ಪ್ರತಿಷ್ಠೆ ಮಾಡಿದನೆಂದು ಕಾಣುತ್ತದೆ. ಇದನ್ನೇ ರಾಯವಾಚಕಮುವಿನಲ್ಲಿ ಉಲ್ಲೇಖಿಸಲಾಗಿದೆ. 1521ರ ಆರಂಭಕಾಲದ ಒಳಗಾಗಿ ಕೃಷ್ಣದೇವರಾಯನ ದಿಗ್ವಿಜಯಗಳು ಪೂರ್ತಿಗೊಂಡು ಕಲಿಂಗದ ಗಜಪತಿ ಅರಸರು ಬಹಮನಿ ಮತ್ತು ಆದಿಲ್‌ಷಾಹಿ ಸುಲ್ತಾನರು ವಿಜಯನಗರವನ್ನು ಎದುರಿಸುವ ಶಕ್ತಿಯಿಲ್ಲದಂತಾದರು. ಈ ಕಾರಣಕ್ಕಾಗಿ ಕೃಷ್ಣದೇವರಾಯನು ತನ್ನ 1521ರ ತಿರುಪತಿಯ ಭೇಟಿಯ ಸಂದರ್ಭದಲ್ಲಿ ತನ್ನ ಹಾಗೂ ತನ್ನ ರಾಣಿಯರು ಶ್ರೀ ವೆಂಕಟೇಶ್ವರನ ಕರುಣೆಗೆ ಸದಾ ಕೃತಜ್ಞರಾಗಿರುವುದಾಗಿ ಹಾಗೂ ತಾವು ಅವನ ಸೇವೆಗೈಯುತ್ತಿರುವುದನ್ನು ಸಾಂಕೇತಿಕವಾಗಿ ನಿರೂಪಿಸಲು ಕೃಷ್ಣದೇವರಾಯನು ತನ್ನ ಹಾಗೂ ತನ್ನ ರಾಣಿಯರಾದ ಚಿನ್ನಾದೇವಿ ಮತ್ತು ತಿರುಮಲಾದೇವಿಯರ ಕಂಚಿನ ಪ್ರತಿಮೆಗಳನ್ನು ತಿರುಪತಿಯ ದೇವಾಲಯದಲ್ಲಿ ನಿಲ್ಲಿಸಿದ.

ರಾಯವಾಚಕಮುವಿನ ಕರ್ತೃ ದಿನಚರಿಯಲ್ಲಿ ಉಲ್ಲೇಖಿಸದೆ ಇರುವುದನ್ನು ಉಲ್ಲೇಖಿಸಿದ್ದಾನೆ. ಹೀಗಾಗಿ ಈ ಪ್ರತಿಮೆಗಳು 1521ರಲ್ಲಿ ಪ್ರತಿಷ್ಠಾಪಿಸಲ್ಪಟ್ಟವೆಯೆಂದು ಹೇಳಬಹುದು.

ಅಡಿ ಟಿಪ್ಪಣಿಗಳು

1. ಎಂ.ವಿ. ಸೀತಾರಾಮಯ್ಯ (ಸಂ.), 1983, *ಶ್ರೀ ಕೃಷ್ಣದೇವರಾಯ ದಿನಚರಿ*, ಬೆಂಗಳೂರು, ಪು. 52.
2. ಸಿ.ವಿ. ರಾಮಚಂದ್ರರಾವ್ (ಸಂ.), 1982, *ರಾಯವಾಚಕಮು*, ಹೈದರಾಬಾದ್, ಪು. 77.
3. *ತಿರುಪತಿ ತಿರುಮಲ ದೇವಸ್ಥಾನಂ ಇನ್‌ಸ್ಕ್ರಿಪ್‌ಶನ್ಸ್ ಆಫ್ ಕೃಷ್ಣರಾಯಾಸ್ ಟೈಂಮ್ಸ್, ಎಪಿಗ್ರಫಿಕಲ್ ಸೀರಿಸ್*, ಸಂಪುಟ 3, ನಂ. 32-59.
4. *ಅದೇ*, ನಂ. 62-63.
5. ಎಸ್. ಕೃಷ್ಣಸ್ವಾಮಿ ಐಯ್ಯಂಗಾರ್, 1941, *ಎ ಹಿಸ್ಟರಿ ಆಫ್ ತಿರುಪತಿ*, ಸಂಪುಟ 2, ಪು. 111.
6. *ಅದೇ*, ಪು. 111-113.
7. *ಅದೇ*, ಪು. 115-117.
8. *ಅದೇ*, ಪು. 118-119.
9. *ಅದೇ*, ಪು. 119.

6. ಹಂಪೆಯ ಸ್ಮಾರಕಗಳು: ಪ್ರೇರಣೆಯ ಸಂಕೇತಗಳಾಗಿ

ಲಕ್ಷ್ಮಣ್ ತೆಲಗಾವಿ

ಸಂಕೇತ ಎಂಬ ಶಬ್ದಕ್ಕೆ ಇರುವ ಅರ್ಥಗಳೆಂದರೆ ಸೂಚನೆ, ಸಂಜ್ಞೆ, ಗುರುತು, ನಿಯಮ, ಒಪ್ಪಂದ, ಏರ್ಪಾಡು, ಶಕ್ತಿ, ಇತ್ಯಾದಿ. ಚಾರಿತ್ರಿಕ ಸಂಕೇತದ ಸಂದರ್ಭದಲ್ಲಿ ಅದು ನಿರ್ದಿಷ್ಟ ಪ್ರದೇಶದ, ಭಾಷಾ ಸಮುದಾಯದ ಒಗ್ಗಟ್ಟಿನ ಪ್ರತೀಕವೂ ಆಗಬಹುದು. ಕರ್ನಾಟಕದ ಮಟ್ಟಿಗೆ, ಕನ್ನಡ ಬಾವುಟ, ಕನ್ನಡ ರತ್ನಸಿಂಹಾಸನ, ಕನ್ನಡ ತಾಯಿ, ಕನ್ನಡ ಪ್ರೇಮ, ಕನ್ನಡ ಕುಲ, ಕನ್ನಡ ಭುವನೇಶ್ವರಿ, ಶ್ರೀ ಚಾಮುಂಡೇಶ್ವರಿ, ಕರ್ನಾಟಕದೇವಿ - ಇವು ಕೆಲವು ಸಂಕೇತಗಳು. ಇವುಗಳ ಮೂಲಕ ಸಂಗ್ರಹಿಸಬಹುದಾದ ಸಂದೇಶಗಳ ಬಗೆಗೆ ಕರ್ನಾಟಕ ಚರಿತ್ರೆಯ ಪುಟಗಳಲ್ಲಿ ವಿವರಣೆ ದೊರಕುತ್ತದೆ. ರಾಜಕೀಯವಾಗಿಯಾಗಲೀ ಸಾಹಿತ್ಯಕ ಹಾಗೂ ಸಾಂಸ್ಕೃತಿಕವಾಗಿಯಾಗಲೀ ಒಂದು ಪ್ರದೇಶದ ಜನಸಮುದಾಯದ ಭಾವನೆಗಳನ್ನು ಬೆಸೆಯಲು, ಎಲ್ಲರನ್ನೂ ಒಗ್ಗೂಡಿಸಲು ಇಂಥವು ಪ್ರೇರಣೆಯ, ಪ್ರಚೋದನೆಯ ಹಾಗೂ ಸ್ಫೂರ್ತಿಯ ಸಂಕೇತಗಳಾಗುತ್ತವೆ. ಜನಜಾಗೃತಿಯ ಆವೇಶವನ್ನು ಮೈಗೂಡಿಸಿಕೊಂಡ ಸಂಕೇತಗಳು ಚಳವಳಿಗಳ ಹುಟ್ಟಿಗೂ ಬೆಳವಣಿಗೆಗೂ ಕಾರಣವಾಗಿರುವುದುಂಟು.

ಬಹುಪಾಲು ಕನ್ನಡ ಭಾಷಿಕರಲ್ಲಿ ಭಾವಾವೇಶವನ್ನು ತುಂಬುವ 'ಭುವನೇಶ್ವರಿ' ಎಂಬ ಮಂತ್ರಸದೃಶ ಹೆಸರು ಅಪ್ಪಟ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಿಂದ ಮೂಡಿಬಂದುದೆಂಬುದು ಗಮನಾರ್ಹ. ಇದು ತಮ್ಮ ಬಣಗು ಬಯಕೆಯ ಕಾರಣಕ್ಕಾಗಿ ಕೆಲವು ಕನ್ನಡ ಹೋರಾಟಗಾರರು ಕಟ್ಟಿಕೊಂಡ ಪೊಳ್ಳು ಘೋಷಣೆಯಲ್ಲ. ಹಂಪೆಯ ವಿರೂಪಾಕ್ಷ ದೇವಾಲಯದ ಆವರಣದಲ್ಲಿ ವಿಜಯನಗರ ಪೂರ್ವದ, ಅಂದರೆ ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿದ ದೇವಾಲಯಗಳಲ್ಲಿ ಪಂಪಾದೇವಿ ಹಾಗೂ ಭುವನೇಶ್ವರಿಯರವೂ ನೆಲೆಗೊಂಡಿವೆ. ವಿರೂಪಾಕ್ಷನ ಬಯಕೆಯಂತೆ, ಪಾರ್ವತಿ ಅಥವಾ ಗಿರಿಜೆ ಹಂಪೆಯಲ್ಲಿ ನೆಲಸಿ ಭುವನೇಶ್ವರಿ ಎಂಬ ಹೆಸರು ಪಡೆದಳೆಂದು ಹೇಳುತ್ತದೆ, ಶ್ರೀ ಪಂಪಾಮಹಾತ್ಮೆ. ತಾಂತ್ರಿಕ ದೇವತೆ ಎನಿಸಿಕೊಂಡ ಭುವನೇಶ್ವರಿ ಹೊಯ್ಸಳರ ಅವಧಿಯಲ್ಲೂ ಪ್ರಾಮುಖ್ಯತೆ ಪಡೆದಿದ್ದಳೆನ್ನುವುದನ್ನು ಗಮನಿಸಬೇಕು. ವಿಜಯನಗರ ಎಂಬ ಹೆಸರಿನ ಹಿನ್ನೆಲೆಯನ್ನು ವಿವರಿಸುವಾಗ, ವಿಜಯಾ ಎಂದರೆ ಭುವನೇಶ್ವರಿಯ ಪ್ರಸಾದವೇ ಇದರ ಜನ್ಮಕ್ಕೆ ಕಾರಣವಾದುದರಿಂದ ವಿಜಯಾನಗರ ಎಂಬ ಹೆಸರು ಬಂದಿತೆಂದು ವ್ಯಾಖ್ಯಾನಿಸಿರುವುದುಂಟು. ಹೀಗಾಗಿ, 'ತಾಯಿ ಭುವನೇಶ್ವರಿ'ಯ ಮೂಲನೆಲೆ ಹಂಪೆಯೇ ಎನ್ನುವುದು ಪ್ರಮುಖ ಸಂಗತಿ.

'ಕರ್ನಾಟಕ ಸಿಂಹಾಸನ' ಎಂಬ ಸಂಕೇತವು ಮೈಸೂರು ಒಡೆಯರ ಕಾಲದವರೆಗೆ ಸ್ಫೂರ್ತಿದಾಯಕವಾಗಿ ಉಳಿದುಬಂದುದನ್ನು ನೋಡಿದರೆ, ಆಳವಾಗಿ ನೆಲೆಯೂರಿದ್ದ ಜನಾಭಿಮಾನದ ದ್ಯೋತಕವಾಗಿಯೂ ಇದು ಇದ್ದುದು ತೋರಿಬರುತ್ತದೆ. ಪ್ರಾಯಶಃ ವಿಜಯನಗರ ಸಾಮ್ರಾಜ್ಯ ಸ್ಥಾಪಕರೆನಿಸಿದ ವಿದ್ಯಾರಣ್ಯರಿಗೆ ಆರೋಪಿಸಲಾದ ಹಾಗೂ ಇಂದಿನವರೆಗೂ ಪ್ರತೀಹಾರಿಗಳ ಮುಖದಲ್ಲಿರುವ 'ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ' ಎಂಬ ಬಿರುದು ಈ ಹಿನ್ನೆಲೆಯಲ್ಲಿ ಪ್ರಭಾವಶಾಲಿ ಪಾತ್ರವಹಿಸಿದ್ದಿರಬಹುದು. ಅಲ್ಲದೆ, ವಿಜಯನಗರಕ್ಕೆ ಸಂಬಂಧಿಸಿದ ಶಾಸನಗಳಲ್ಲಿ 'ಕರ್ಣಾಟ ಕನಕ ಸಿಂಹಾಸನ' (ಕ್ರಿ.ಶ. 1571)ವೆಂದು ಸಂಬೋಧಿಸಿದೆ. ಇದನ್ನೆ ಲಿಂಗಣ್ಣ ಕವಿಯು 'ವಿದ್ಯಾನಗರದ ರತ್ನಸಿಂಹಾಸನ' ವೆಂದು ತನ್ನ 'ಕೆಳದಿನೃಪ ವಿಜಯಂ'ನಲ್ಲಿ ಕರೆದಿರುವನು.

'ಕರ್ನಾಟಕ' ಎಂಬ ರೂಪವೇ ಕನ್ನಡಿಗರೆಲ್ಲರ ಜೀವನ ಸ್ವರೂಪವನ್ನು, ಅಂದರೆ ಕರ್ನಾಟಕತ್ವವನ್ನು ನಿರ್ಧರಿಸುವಂಥಾದ್ದು. ಆಲೂರು ವೆಂಕಟರಾಯರು ಪ್ರತಿಪಾದಿಸಿದಂತೆ, ಕರ್ನಾಟಕವೆಂಬ ಹೆಸರಿನಲ್ಲಿ ಕನ್ನಡನಾಡಿನ ಗತವೈಭವವೆಲ್ಲ ತುಂಬಿ ಕುಳಿತಿದೆ. ಅವರು ಪ್ರಚುರಗೊಳಿಸಿದ 'ಗತವೈಭವ' ಎಂಬುದು ಸಹಾ ಕರ್ನಾಟಕದ ಸರ್ವಾಂಗೀಣ ಔನ್ನತ್ಯದ ಸಂಕೇತವಾಗಿಯೇ ಇಂದಿಗೂ ಉಳಿದು ಬಂದಿದೆ. ಅರವತ್ತು ವರುಷಗಳ ಹಿಂದೆಯೇ, ಕರ್ನಾಟಕತ್ವದ ಕಲ್ಪನೆ ಇನ್ನೂ ವಿಕಾಸದ ಹಂತದಲ್ಲಿರುವಾಗಲೇ, ಆಲೂರರು ಪ್ರತಿಪಾದಿಸಿದ ಕರ್ನಾಟಕದ ಗತವೈಭವ ಸಹಾ ಕನ್ನಡಿಗರಲ್ಲಿ ನವಚೈತನ್ಯ ಮೂಡಿಸಿದುದು ಮರೆಯಲಾಗದ್ದು.

ಕನ್ನಡ ನಾಡು-ನುಡಿ-ಜನಾಂಗಗಳ ಐಕ್ಯತೆಯ ಮಂತ್ರವಾಗಿ ಆವಿರ್ಭವಿಸಿದ ಹಂಪೆಯ ಸ್ಮಾರಕಗಳು, ಕಳೆಯ ಮೂರುನೂರು ವರುಷಗಳಿಂದಲೂ ಏಕರೀತಿಯಲ್ಲಿ ಆಡಳಿತಗಾರರಿಗೂ ಕವಿ-ಕಲಾವಿದ-ಪಂಡಿತರಿಗೂ ಜನಸಾಮಾನ್ಯರಿಗೂ ಅಂತಃಸತ್ವವನ್ನು ತುಂಬುವ ಅಮೃತಪ್ರಾಯದ ಸಂಕೇತಗಳಾಗಿ ಉಳಿದುಕೊಂಡು ಬಂದಿವೆ. ಕನ್ನಡಿಗರನ್ನು ಮೊದಲ್ಗೊಂಡು ದಕ್ಷಿಣ ಭಾರತೀಯರನ್ನೆಲ್ಲಾ ಮಾತ್ರವಲ್ಲ,

ಮಹಾರಾಷ್ಟ್ರೀಯರಿಗೂ - ಕಡೆಗೆ ದೇಶ-ವಿದೇಶಗಳವರಿಗೂ ಈ ಸ್ಮಾರಕಗಳು ಚೈತನ್ಯಸ್ವರೂಪಿಗಳಾಗಿ ತೋರಿಬಂದಿರುವುದನ್ನು ಗುರುತಿಸಬಹುದು.

ವಿಜಯನಗರ ಅರಸರ ಕಾಲಾವಧಿ ಮತ್ತು ಅದಕ್ಕೂ ಮೊದಲಿನ ಸಂಗತಿಗಳನ್ನು ಈ ದೃಷ್ಟಿಯಿಂದ ಗಮನಿಸುವುದು ಇಲ್ಲಿ ಅಪ್ರಸ್ತುತ. ವಿಜಯನಗರದ ಜೀವಿತಾವಧಿಯಲ್ಲಿ ಈ ಸಾಮ್ರಾಜ್ಯವನ್ನು ಹೊಂದಿಕೊಂಡು ಪ್ರಾಂತ್ಯಾಡಳಿತ ನೋಡಿಕೊಳ್ಳುತ್ತಿದ್ದ ನೂರಾರು ಸಂಸ್ಥಾನಿಕರು, ಪಾಳೆಯಗಾರರು ದಕ್ಷಿಣ ಭಾರತದಲ್ಲೆಲ್ಲ ಹರಡಿದ್ದರು. ಆ ನಂತರ ಇವರಲ್ಲಿ ಬಹುಮಂದಿ ಸ್ವತಂತ್ರರಾದರು. ಆದರೆ ವಿಜಯನಗರದ ಧ್ಯೇಯಾದರ್ಶಗಳನ್ನು ತಮ್ಮ ಆಡಳಿತದಲ್ಲಿ ಅಳವಡಿಸಿಕೊಂಡವರು ಬಹು ವಿರಳ. ಪ್ರಾಯಶಃ ಮೈಸೂರು, ಕೆಳದಿ - ಇಂತಹ ಒಂದೆರಡು ಸಂಸ್ಥಾನಗಳು ಇದಕ್ಕೆ ಉದಾಹರಣೆಗಳು.

ಈಗ ಹಂಪೆಯ ಸ್ಮಾರಕಗಳು ರಾಷ್ಟ್ರವೀರರಿಗೂ ನಾಡು-ನುಡಿಗಳ ಸೇವಕರಿಗೂ ಕಾಲಕಾಲಕ್ಕೆ ನೀಡುತ್ತಾ ಬಂದ ಪ್ರೇರಣೆ-ಪ್ರಚೋದನೆಗಳನ್ನು ಪರಿಶೀಲಿಸೋಣ. ಕೆಲವು ಪ್ರಮುಖ ಉದಾಹರಣೆಗಳನ್ನಷ್ಟೆ ಇಲ್ಲಿ ಕೊಡಲು ಪ್ರಯತ್ನಿಸಿದ್ದು, ನಾನು ಭಾವಿಸಿರುವಂತೆ ಈ ಉದಾರಹಣೆಗಳು ಪ್ರಸ್ತುತ ಪ್ರಬಂಧದ ಶೀರ್ಷಿಕೆಗೆ ಅನುಗುಣವಾಗಿಯೇ ಇವೆ. ವ್ಯಕ್ತಿ ಆದರ್ಶವು ರಾಷ್ಟ್ರೀಯ ಆದರ್ಶದ ಭಾಗವೇ ಆಗಿರುವುದರಿಂದ ಮಹಾತ್ಸಾಧನೆಯಲ್ಲಿ ವ್ಯಕ್ತಿಯ ಪಾತ್ರವನ್ನು ಕಡೆಗಣಿಸಲಾಗದು. ಆದ್ದರಿಂದ ಕೆಲವು ಪ್ರಸಿದ್ಧ ವ್ಯಕ್ತಿಗಳ ಮೂಲಕ ಈ ಸ್ಮಾರಕಗಳ ಪ್ರಭಾವ-ಪರಿಣಾಮಗಳನ್ನು ನಿಖರವಾಗಿ ಅರಿಯುವುದು ಖಂಡಿತ ಸಾಧ್ಯವೆಂದು ತಿಳಿಯಬಹುದಾಗಿದೆ.

1. ಮೊದಲನೆಯ ಪ್ರಮುಖ ಉದಾಹರಣೆ, ರಾಷ್ಟ್ರವೀರನೆಂದು ಪರಿಗಣಿಸಲ್ಪಟ್ಟಿರುವ ಶಿವಾಜಿಯದು. ಕ್ರಿಸ್ತಶಕ ಸುಮಾರು 1678ರಲ್ಲಿ, ಅಂದರೆ ವಿಜಯನಗರ ನಾಶವಾಗಿ ಒಂದು ಶತಮಾನದ ತರುವಾಯ, ಮರಾಠ ಸಾಮ್ರಾಜ್ಯಕ್ಕೆ ಭದ್ರ ಬುನಾದಿ ಹಾಕಲು ಕಾರಣನಾದ ಶಿವಾಜಿಯು ಹಂಪೆಗೆ ಭೇಟಿಕೊಟ್ಟುದು ಮಹತ್ವದ ಸಂಗತಿಗಳಲ್ಲೊಂದು. ಕ್ರಿ.ಶ. 1676-78ರ ಅವಧಿಯಲ್ಲಿ ಶಿವಾಜಿ ತಾನು ಕೈಗೊಂಡ 'ಕರ್ನಾಟಕದ ದಂಡಯಾತ್ರೆ'ಯ ಸಂದರ್ಭದಲ್ಲಿ ಹಂಪೆಗೆ ಬಂದಿದ್ದು, ಇಲ್ಲಿ ಹತ್ತು ದಿವಸಗಳ ಕಾಲ ತಂಗಿದ್ದನು. 'ಶಿವಾಜಿ-ಮಲ್ಲಮ್ಮಾಜಿ ಸಮರೋತ್ಸವ' (1993) ಎಂಬ ದಾಖಲೆ ಈ ಸಂದರ್ಭವನ್ನು ಪ್ರಸ್ತಾಪಿಸುತ್ತದೆ. ಅದರ ಪ್ರಕಾರ, ಶಿವಾಜಿಯು ಹಂಪೆಯ (ಪಂಪಾಕ್ಷೇತ್ರದ) ಅಥವಾ ವಿಜಯನಗರದ ನಷ್ಟ-ಭ್ರಷ್ಟ ಸ್ಥಿತಿಯನ್ನು ಕಣ್ಣಾರೆ ಕಂಡು ತುಂಬಾ ನೊಂದುಕೊಂಡನು. ವಿರೂಪಾಕ್ಷ ದೇವರಿಗೆ ಪೂಜೆ, ಅಭಿಷೇಕಗಳನ್ನು ಮಾಡಿಸಿ ಹೇರಳ ಕಾಣಿಕೆಯನ್ನೂ ಉತ್ಸವದ ಸಾಮಾನುಗಳನ್ನೂ ಕೊಟ್ಟನು. ಶಿವಾಜಿಯ ದೈವಶ್ರದ್ಧೆ ಮತ್ತು ಕೀರ್ತಿಗಳು ಆಗ ಕರ್ನಾಟಕದಲ್ಲೆಲ್ಲ ಹರಡಿದ್ದು, ಎಷ್ಟೋ ಜನರು ಅವನನ್ನು ಕಾಣಲು ಬಂದರು. "ನೀವು ನಿಮ್ಮ ದೇಶಕ್ಕೆ ಹೋಗಬೇಡಿರಿ. ಇಲ್ಲಿಯೇ ಇದ್ದು ನಮ್ಮ ರಾಜರಾಗಿರಿ" ಎಂದು ಅವರು ಅವನನ್ನು ಪ್ರಾರ್ಥಿಸಿದರು. ಆಗ ಶಿವಾಜಿಯು, "ನಾನು ನಮ್ಮ ರಾಜಧಾನಿಗೆ ಹೋಗಿ ಅಲ್ಲಿ ಸಂಭಾಜಿಗೆ ಇಟ್ಟು ರಾಜಾರಾಮನಿಗೆ ಇಲ್ಲಿ ತಂದು ಇಡುತ್ತೇನೆ. ನಾನು ಇಲ್ಲಿಯೇ ಇದ್ದು ತುಂಗಭದ್ರೆಯಲ್ಲಿ ಸ್ನಾನವನ್ನು ಮಾಡುತ್ತ, ವಿರೂಪಾಕ್ಷದೇವರ ಪೂಜೆ ಅರ್ಚನೆಗಳನ್ನು ಮಾಡುತ್ತ ಕೊನೆಯ ಆಯುಷ್ಯವನ್ನು ಇಲ್ಲಿಯೇ ಕಳೆಯುತ್ತೇನೆ. ನೀವು ಚಿಂತಿಸಬೇಡಿರಿ" ಎಂದು ಉತ್ತರವಿತ್ತು ಎಲ್ಲರನ್ನೂ ಸಮಾಧಾನಪಡಿಸಿದನು. ಆಗಲೇ ಆನೆಗೊಂದಿ ಅರಸನು ಶಿವಾಜಿಯನ್ನು ಬಹುವಾಗಿ ಸತ್ಕರಿಸಿ ಅವನ ಅನುಗ್ರಹಕ್ಕೆ ಪಾತ್ರನಾದನು.

ಮರಾಠಾಷಾಹಿ ಅಸ್ತಿತ್ವಕ್ಕೆ ಬಂದುದು ವಿಜಯನಗರ ಸಾಮ್ರಾಜ್ಯದ ನಿಮಿತ್ತದಿಂದ ಎಂಬುದನ್ನು ಮಹಾರಾಷ್ಟ್ರದ ಇತಿಹಾಸಕಾರರೂ ಒಪ್ಪುತ್ತಾರೆ. ಕ್ರಿ.ಶ. 1637ರಿಂದ 1664ರ ವರೆಗೆ ಬಿಜಾಪುರ ಸುಲ್ತಾನನ ಪರವಾಗಿ ಕರ್ನಾಟಕದ ಪ್ರದೇಶಗಳನ್ನು ಆಕ್ರಮಿಸಿಕೊಳ್ಳಲು ಹೋರಾಡಿದ ಶಿವಾಜಿಯ ತಂದೆ ಷಹಜಿಯು, ವಿಜಯನಗರದ ಪತನಕ್ಕೂ ಕಾರಣನಾದನೆಂಬುದನ್ನು ಅಲ್ಲಗೆಳೆಯುವಂತಿಲ್ಲ. ಆದರೆ ಇಂತಹ ಧೋರಣೆಗೆ ವಿರುದ್ಧವಾಗಿ ಈತನ ಮಗ ಶಿವಾಜಿಯು ವರ್ತಿಸಿದುದು ಗಮನಾರ್ಹ. ವಾಸ್ತವದಲ್ಲಿ ತನ್ನ ತಂದೆಯಲ್ಲಿದ್ದ ಸುಲ್ತಾನರ ಪರವಾದ ನಿಷ್ಠೆಯನ್ನು ವಿರೋಧಿಸಿದ ಶಿವಾಜಿ, ತನ್ನ ಆದರ್ಶದ 'ಹಿಂದೂ ಪದ ಪಾದಷಾಹಿ'ಯನ್ನು ಸಾಕ್ಷಾತ್ಕರಿಸಿ ತೋರಿಸುವಲ್ಲಿ ಸಫಲನಾದುದು ಗಮನೀಯ ಅಂಶ. ತನ್ನ ತಂದೆಯ ದ್ವೇಷಕ್ಕೆ ಪಾತ್ರವೆನಿಸಿದ ವಿಜಯನಗರ ರಾಜಧಾನಿ ಹಂಪೆಯ ಸ್ಮಾರಕಗಳಿಂದಲೂ ಶಿವಾಜಿ ಸಾಂತ್ವನ-ನೆಮ್ಮದಿಗಳನ್ನೂ ಭರವಸೆಯನ್ನೂ-ಮುಖ್ಯವಾಗಿ ಪ್ರೇರಣೆಯನ್ನೂ ಪಡೆದುದು ಕೇವಲ ಆಕಸ್ಮಿಕವಲ್ಲ. ಈ ಹಿನ್ನೆಲೆಯಲ್ಲಿ, ಸನಾತನ ಸಂಸ್ಕೃತಿಯ ರಕ್ಷಣೆಗಾಗಿ ಉದಯವಾದ ವಿಜಯನಗರದ ರಾಜಧಾನಿ ಹಂಪೆಯ ಸ್ಮಾರಕಗಳು ಶಿವಾಜಿಯ ಮೇಲೆ ಅಪಾರ ಪರಿಣಾಮ ಉಂಟು ಮಾಡಿರಲು ಸಾಕು. ತಾನೂ ಅಂತಹ ಸಂಸ್ಕೃತಿ ರಕ್ಷಣೆಗಾಗಿ ತನ್ನ ಬಾಳನ್ನು ಮೀಸಲಿಡಬೇಕೆಂಬ ಶಿವಾಜಿಯ ಸಂಕಲ್ಪವನ್ನು ಹಂಪೆಯ ಭೇಟಿಯು ಇನ್ನೂ ದೃಢಗೊಳಿಸಿರಬಹುದು. ಹಂಪೆಯ ಸ್ಮಾರಕಗಳು ನಿಶ್ಚಿತವಾಗಿಯೂ ಶಿವಾಜಿಗೆ ಪ್ರಚೋದನೆಗಳನ್ನು ನೀಡಿರಬಹುದು. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಎ. ಶಂಕರರಾವ್, ಟಿ.ಎಸ್. ಶೆಜ್ವಾಲ್ಕರ್, ಡಿ.ಬಿ. ದಿಸ್ಕಲ್‌ಕರ್ - ಇವರೇ ಮೊದಲಾದ ವಿದ್ವಾಂಸರು ಇದನ್ನು ಸಮರ್ಥಿಸಿರುವರು.[1]

2. ಎರಡನೆಯ ಉದಾಹರಣೆ 20ನೇ ಶತಮಾನದ ಆರಂಭಕಾಲದ್ದು. 'ಕರ್ನಾಟಕ ಕುಲಪುರೋಹಿತ'ರೆಂದು ಖ್ಯಾತಿಗೊಂಡ ಆಲೂರ ವೆಂಕಟರಾಯರದು. 1905ರಲ್ಲಿ ಆಲೂರರು ಹಂಪೆ ಮತ್ತು ಆನೆಗೊಂದಿಗಳನ್ನು ಮೊದಲಬಾರಿಗೆ ದರ್ಶಿಸಿದರು. ಆಲೂರರು ಪ್ರಸ್ತಾಪಿಸುವ ಆನೆಗೊಂದಿಯು ತುಂಗಭದ್ರಾ ನದಿಯಾಚೆಯ ಮೂಲ ರಾಜಧಾನಿಯ ಊರೇ ಆಗಿದ್ದರೂ ಇದು ಹಂಪೆಯನ್ನೊಳಗೊಂಡ ವಿಜಯನಗರವೇ ಆಗಿದೆ. ಆನೆಗೊಂದಿಯೆಂಬುದನ್ನು ಸಂಸ್ಕೃತದಲ್ಲಿ ಹಸ್ತಿನಾವತಿ ಎಂದು ಕರೆದಿದ್ದು, ಎಷ್ಟೋ ತಾಮ್ರ ಪತ್ರಗಳಲ್ಲಿ ವಿಜಯನಗರವನ್ನು ಹಸ್ತಿನಾವತಿಯೆಂತಲೇ ಉಲ್ಲೇಖಿಸಿರುವುದು ಕಂಡುಬರುತ್ತದೆ. ಏನೇ ಇದ್ದರೂ ಹಂಪೆಯ ಈ ಭೇಟಿಯು ಆಲೂರರಲ್ಲಿ ಕರ್ನಾಟಕತ್ವದ ರೂಪ-ರೇಖೆಗಳು ಮೂಡಲು ಪ್ರೇರಣೆ ನೀಡಿತು; ದಿಟ್ಟ ಹೋರಾಟ ಕೈಗೊಳ್ಳಲು ಅಡಿಗಲ್ಲು ಹಾಕಿತು.

ಆಲೂರರೇ ಹೇಳಿರುವಂತೆ, ''1905ನೆಯ ಇಸ್ವಿಯಲ್ಲಿ ನಾನು ಮೇ ತಿಂಗಳ 4ನೆಯ ತಾರೀಖಿನ ದಿವಸ ಆನೆಗೊಂದಿಗೆ ಹೋಗಿದ್ದೆ. ಆ ಆನೆಗೊಂದಿಯ ಆಕಸ್ಮಿಕ ದರ್ಶನವು ಆದ ದಿವಸದಿಂದ ನನ್ನ ವಿಚಾರಕ್ಕೆ ಬೇರೆ ದಿಶೆ ಹತ್ತಿತೆಂದೂ ಅದು ಅನೇಕ ಸಂಗತಿಗಳ ಮೂಲಕ ಪರಿಪಕ್ವವಾಗುವುದಕ್ಕೆ ನಾಲ್ಕೆಂಟು ತಿಂಗಳುಗಳು ಬೇಕಾದವೆಂದೂ ಮಾತ್ರ ನಾನು ಸ್ಥೂಲವಾಗಿ ಹೇಳಬಲ್ಲೆನು. 1905ನೆಯ ಇಸ್ವಿಯ ಮೇ ತಿಂಗಳ 4ನೆಯ ತಾರೀಖೆಂದರೆ ನನ್ನ ಮನದಲ್ಲಿ ಕರ್ನಾಟಕತ್ವದ ಭಾವನೆಯು ಒಡಮೂಡಲಿಕ್ಕೆ ಪ್ರಾರಂಭವಾದ ದಿವಸ. ಹಾಗೆಯೇ ಅದು ನನ್ನ ಜೀವನದಲ್ಲಿಯ ತಿರುಗಣೆ ಸ್ಟೇಶನ್ (Reversing Station) ಎಂದೂ ಹೇಳಬಹುದು... ನಮ್ಮ ವಿಜಯನಗರವು ಅಲ್ಲಿ ಪ್ರತ್ಯೇಕವಾಗಿಯೂ ವಿಸ್ತಾರವಾಗಿಯೂ ನನ್ನ ಮುಂದೆ ಬಿದ್ದಿದೆ. ಆ ದಿವಸದ ದರ್ಶನವು ನನ್ನ ಮನದಲ್ಲಿ ವಿದ್ಯುತ್ತಿನ ಸಂಚಾರವನ್ನು ಮೂಡಿಸಿತು. ಚಲಚ್ಚಿತ್ರಪಟದಲ್ಲಿ ವಿದ್ಯುದ್ದೀಪದ ಬಲದಿಂದ ಮೂರ್ತಿಗಳು ಮೂಡುವಂತೆ ನನ್ನ ಹೃದಯದಲ್ಲಿ ಕರ್ನಾಟಕದೇವಿಯ ಸುಂದರವಾದ ಮೂರ್ತಿಯು ಒಡಮೂಡಹತ್ತಿತು. ಆ ದಿವಸದ ದರ್ಶನವು ನನ್ನ ತಲೆಯಲ್ಲಿ ನಾನಾ ವಿಧ ತರಂಗಗಳಿಗೆ ಇಂಬುಗೊಟ್ಟಿತು. ಹೃದಯ ಸಮುದ್ರವು ಅಲ್ಲೋಲಕಲ್ಲೋಲವಾಯಿತು. ಆ ದಿವಸವು ನನ್ನ ಜೀವನಕ್ರಮದಲ್ಲಿ ಕ್ರಾಂತಿಯನ್ನು ಮಾಡಲಿಕ್ಕೆ ಕಾರಣವಾಯಿತು.... ಆ ಸಂಸ್ಮರಣೀಯ ದಿನವನ್ನು ನಾನು ಎಂದಿಗೂ ಮರೆಯಲಾರೆ.''[2]

ಆಲೂರರನ್ನು ಸ್ವದೇಶಿ ಚಳವಳಿಯು ರಾಷ್ಟ್ರೀಯರನ್ನಾಗಿ ಮಾಡಿದರೆ, ಆನೆಗೊಂದಿ ಹಂಪೆಗಳ ದರ್ಶನವು ರಾಷ್ಟ್ರೀಯತ್ವದ ಆದೇಶವನ್ನು ಅವರಲ್ಲಿ ತುಂಬಿತು; ರಾಷ್ಟ್ರಸೇವೆಯ ಲವಲವಿಕೆಯನ್ನೂ, ಸ್ಫೂರ್ತಿಯನ್ನೂ ಹುಟ್ಟಿಸಿತು; ಈ ಸ್ಫೂರ್ತಿಯು ಕರ್ನಾಟಕತ್ವದ ಸ್ವರೂಪವನ್ನು ಪಡೆಯಿತು. ಇವು ಒಂದೇ ಸಮನೆ ಅವರ ವಿಚಾರ ಪರಂಪರೆಗಳಿಗೆ ಆಸ್ಪದ ಮಾಡಿಕೊಟ್ಟವು. ಅಲ್ಲದೆ, ಕರ್ನಾಟಕದ ಸೇವೆಯೊಂದನ್ನೇ ಮಾಡಬೇಕೆಂಬ ಕೊನೆಯ ನಿರ್ಣಯಕ್ಕೆ ಅವರನ್ನು ತಲುಪಿಸಿದವು. ಒಟ್ಟಿನಲ್ಲಿ, ಸ್ವದೇಶಿ ಚಳವಳಿ ಮತ್ತು ಹಂಪೆಯ ದರ್ಶನದಿಂದ ಆಲೂರರ ಮೇಲೆ ಆದ ಶಾಶ್ವತ ಪರಿಣಾಮವೆಂದರೆ, ಅವರ ಹೃದಯದಲ್ಲಿ 'ಕರ್ನಾಟಕದೇವಿ'ಯ ಮೂರ್ತಿಯು ಸ್ಥಿರವಾಗಿ ಒಡಮೂಡಿದುದು.

ಹಂಪೆಯ ಸ್ಮಾರಕಗಳ ದರ್ಶನದಿಂದ ತಮ್ಮಲ್ಲಿ ಉಂಟಾದ ಇಂಥಾ ಮಹಾಪರಿವರ್ತನೆಯನ್ನು ಆಲೂರರು ತಮ್ಮ ಜೀವನಸ್ಮೃತಿಗಳನ್ನು ಕುರಿತ ಗ್ರಂಥದಲ್ಲಿ ಮೇಲಿಂದ ಮೇಲೆ ಹೇಳಿಕೊಂಡಿದ್ದಾರೆ. ಈ ಉತ್ಸಾಹದಿಂದಾಗಿಯೇ ಅವರು 1936ರಲ್ಲಿ ಹಂಪೆಯಲ್ಲಿ ಜರುಗಿದ ವಿಜಯನಗರದ ಸ್ಮಾರಕೋತ್ಸವದಲ್ಲಿ ಸಕ್ರಿಯವಾಗಿದ್ದು, ಅದಕ್ಕೆ ಪೂರ್ತ ಬೆಂಬಲ ನೀಡಿದರು.

3. ಮೂರನೆಯ ಉದಾಹರಣೆ ಈಚಿನದು; ಇದೇ ದಶಕದ್ದು. ಮೊತ್ತ ಮೊದಲಬಾರಿಗೆ ಹಂಪೆಯನ್ನು ಇಟಲಿಯ ರಾಜಧಾನಿ ರೋಮ್‌ನ ಭಾಗವಾದ ಹಾಗೂ ರೋಮನ್ ಕ್ಯಾಥೋಲಿಕ್ ಧರ್ಮದ ಸರ್ವಶ್ರೇಷ್ಠ ಗುರು ಪೋಪ್ ಅಧಿಪತಿಯಾಗಿರುವ 'ವ್ಯಾಟಿಕನ್ ನಗರ' ಕ್ಕೆ ಹೋಲಿಸಿದ ನವ ವಿಚಾರಗಳನ್ನು ಪ್ರತಿಪಾದಿಸುವುದರೊಡನೆ ಖ್ಯಾತ ಸಂಶೋಧಕ ಎಂ. ಚಿದಾನಂದಮೂರ್ತಿ ಅವರು ವಿಜಯನಗರ ಚರಿತ್ರೆಗೆ, ತನ್ಮೂಲಕ ಕರ್ನಾಟಕ ಚರಿತ್ರೆಗೆ ಹೊಸ ಪುಟವೊಂದನ್ನು ಸೇರಿಸಿದರು.[3] ಹಂಪೆ ಮತ್ತು ವ್ಯಾಟಿಕನ್ ನಗರಗಳ ನಡುವೆ ಹಲವು ಬಗೆಯ ಹೋಲಿಕೆ ಮತ್ತು ವ್ಯತ್ಯಾಸಗಳಿದ್ದರೂ ಇಂದಿನ ವ್ಯಾಟಿಕನ್ ನಗರದಂತೆಯೇ ಹಂಪೆಯೂ ಹಿಂದೆ ಎಲ್ಲ ದೃಷ್ಟಿಗಳಿಂದಲೂ ಸ್ವತಂತ್ರವಾಗಿದ್ದಿತು; ವಿರೂಪಾಕ್ಷ ದೇವರ ನೇರ ಒಡೆತನದಲ್ಲಿದ್ದಿತು.

ಹರಿಹರ ಕವಿಯು ತನ್ನ 'ಪಂಪಾಕ್ಷೇತ್ರದ ರಗಳೆ'ಯಲ್ಲಿ ವಿರೂಪಾಕ್ಷದೇವರನ್ನು 'ಪಂಪಾಪುರದರಸ' ಎಂದು ವರ್ಣಿಸಿರುವುದು ಅರ್ಥಪೂರ್ಣವಾದುದು. ಈ ಕವಿಯು ಹೇಳಿರುವಂತೆ, ಪಂಪಾಪುರದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಬಾಗಿಲುಗಳಿದ್ದವು. ಅವುಗಳಲ್ಲಿ ಮೂಡಣ ಬಾಗಿಲಲ್ಲಿ ಕಿನ್ನರೇಶ್ವರ, ತೆಂಕಣ ಬಾಗಿಲಲ್ಲಿ ಜಂಬುಕೇಶ್ವರ, ಪಶ್ಚಿಮ ಬಾಗಿಲಲ್ಲಿ ಸೋಮೇಶ್ವರ, ಉತ್ತರ ಬಾಗಿಲಲ್ಲಿ ಮಾಣಭದ್ರೇಶ್ವರ ದೇವಾಲಯಗಳು ನೆಲಸಿದ್ದು, ಈ ನಾಲ್ಕು ಬಾಗಿಲುಗಳ ಅಥವಾ ಗಡಿಗಳ ಒಳಗಿನದೇ ಪಂಪಾಪುರವೆನಿಸಿದ್ದಿತು.

ಚಿದಾನಂದಮೂರ್ತಿ ಅವರ ಸಂಶೋಧನೆಯ ಪ್ರಕಾರ, ಈ ನಾಲ್ಕು ಬಾಗಿಲುಗಳು ಇಂದಿಗೂ ಉಳಿದುಬಂದಿವೆ. ಅಲ್ಲದೆ, ಪಂಪಾಪುರದ ವಿಸ್ತಾರ ಸುಮಾರು 400 ಚದರ ಕಿ.ಮೀ. ಆಗುತ್ತದೆ. ಅಷ್ಟು ವಿಸ್ತಾರವಾಗಿ ಹಂಪೆ ಊರು ಇದ್ದಿತೆಂದು ತಿಳಿಯಲಾಗದಿದ್ದರೂ ಏಳುನೂರು ಜನ ಬ್ರಾಹ್ಮಣರೂ ಉಳಿದ ವರ್ಗದ ಜನರೂ ಇದ್ದ ದೊಡ್ಡ ಗ್ರಾಮವಾಗಿದ್ದುದಂತೂ ದಿಟ. ಒಟ್ಟಿನಲ್ಲಿ ಪಂಪಾಪುರ ಅಥವಾ ಹಂಪೆಯು ವಿರೂಪಾಕ್ಷದೇವರ ಒಡೆತನದ್ದಾಗಿದ್ದು, ಹಂಪೆಯೂ ಸೇರಿದಂತೆ ಹಲವು ಗ್ರಾಮಗಳನ್ನು ಒಳಗೊಂಡಿತ್ತು.

ಹಂಪೆಯು ಮಹಾಕಾರ್ಯವೊಂದರ ಸಾಧನೆಗೆ ಚಿದಾನಂದಮೂರ್ತಿ ಅವರಿಗೆ ನೀಡಿದ ಪ್ರೇರಣೆ ಕುರಿತು ಇಲ್ಲಿಯೇ ಹೇಳಬೇಕು. 1985ರ ಮೇ ತಿಂಗಳಿನಲ್ಲಿ ಅವರು ತುಮಕೂರು ಪಕ್ಕದ ಸಿದ್ಧಗಂಗೆಯಿಂದ ಹಂಪೆಗೆ ಒಬ್ಬರೇ ಕಾಲ್ನಡಿಗೆಯಲ್ಲಿ ಹೊರಟ ಸಂದರ್ಭವದು. ಅವರ ಈ ಮಹಾನಡಿಗೆಯ ಕಾಲದಲ್ಲಿ ಅವರಲ್ಲಿ ಮೂಡಿದ ಹಲವಾರು ವಿಚಾರಗಳಲ್ಲಿ ಇಂದು ಹಂಪೆಯ ಪರಿಸರದಲ್ಲಿ ಹೆಮ್ಮೆಯಿಂದ ತಲೆಯೆತ್ತಿ ನಿಂತಿರುವ ಹಂಪೆ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯ ವಿಚಾರ ಬಹು ಮುಖ್ಯವಾದುದು. ಮೂರ್ತಿಗಳು ಆಗ ಆಲೋಚಿಸಿದುದು ಹೀಗೆ: ''ಆ ದಿನ ಏಕೋ ಹಂಪಿ ಮತ್ತೆ ಮತ್ತೆ ಜ್ಞಾಪಕಕ್ಕೆ ಬಂತು, ಕಾಡಿತು. ಅದು ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದುಕೊಂಡೆ. ಪ್ರವಾಸಿಗಳು ವಿಜಯನಗರ ರಾಜಧಾನಿಯ ವಿಸ್ತಾರವನ್ನೂ ಆರ್ಥಿಕ ಸಂಪತ್ತನ್ನೂ ಕೊಂಡಾಡಿರುವುದು ನೆನಪಾಯ್ತು. ಹಾಗೇ ತುಂಗಭದ್ರಾ ಜಲಾಶಯದಿಂದ ಇಡೀ ಆ ಪ್ರದೇಶ ಹಸುರಾಗಿರುವುದೂ, ತೋರಣಗಲ ಸಮೀಪ ವಿಜಯನಗರ ಉಕ್ಕಿನ ಕಾರ್ಖಾನೆ ಮುಂದೊಮ್ಮೆ ತಲೆ ಎತ್ತಿ ಆರ್ಥಿಕವಾಗಿ ಆ ಭಾಗ ಪ್ರಗತಿ ಹೊಂದಲಿರುವುದೂ ಜ್ಞಾಪಕಕ್ಕೆ ಬಂದಿತು. ಈ ಆರ್ಥಿಕ ಪ್ರಗತಿಯಷ್ಟೇ ಹಂಪೆಗೆ ಸಾಲದು - ಇದು ಹಿಂದಿನ ಪರಂಪರೆಯ ಒಂದು ಭಾಗದ ಮುಂದುವರಿಕೆ ಮಾತ್ರ; ಸಾಸ್ಕೃತಿಕ ಬೆಳವಣಿಗೆಯೂ ಅದರ ಜೊತೆಗೆ ನಡೆಯಬೇಕಲ್ಲವೇ ಎಂದು ಅಂದುಕೊಳ್ಳುತ್ತಿದ್ದಂತೆ, ತಮಿಳಿನಷ್ಟೇ ಸಮೃದ್ಧ ಸಾಂಸ್ಕೃತಿಕ ಪರಂಪರೆಯಿರುವ ಕನ್ನಡಕ್ಕೆ ಒಂದು ವಿಶ್ವವಿದ್ಯಾಲಯ ಆಗುವುದಾದರೆ, ತಮಿಳುನಾಡಿನ ಸಂಸ್ಕೃತಿ ಕೇಂದ್ರವೆನ್ನಿಸಿಕೊಂಡ ತಂಜಾವೂರಿನಲ್ಲಿ ತಮಿಳು ವಿಶ್ವವಿದ್ಯಾಲಯ ತಲೆಯೆತ್ತಿರುವಂತೆ ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯ ಏಕೆ ಸ್ಥಾಪಿತವಾಗಬಾರದು ಎಂಬ ಆಲೋಚನೆ ಹೊಳೆಯಿತು. ಮನಸ್ಸಿಗೆ ಬಹಳ ಹರ್ಷವನ್ನು ತಂದಿತು... ಕರ್ನಾಟಕದ ಕೇಂದ್ರ ಜಾಗದಲ್ಲಿರುವ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕೇಂದ್ರವಾಗಲು ಎಲ್ಲ ದೃಷ್ಟಿಗಳಿಂದಲೂ ಅತ್ಯಂತ ಅರ್ಹ ಪ್ರದೇಶವಾಗಿ ಕಂಡಿತು. ಭಾಷೆ, ಸಾಹಿತ್ಯ, ಇತಿಹಾಸ, ಭೂಶೋಧ, ಲಲಿತಕಲೆಗಳು, ಸಮಾಜಶಾಸ್ತ್ರ, ಅರ್ಥಶಾಸ್ತ್ರ, ಜಾನಪದ, ಸಾಂಪ್ರದಾಯಕ ವಿಜ್ಞಾನಗಳು, ಸಮೂಹ ಮಾಧ್ಯಮಗಳು ಅವುಗಳನ್ನು ಕುರಿತಂತೆ ಕರ್ನಾಟಕವನ್ನು ಕೇಂದ್ರವಾಗಿಟ್ಟುಕೊಂಡ ಸಂಶೋಧನೆಗಳು ನಡೆಯಲು ಅಲ್ಲಿ ಒಂದು ಪೂರ್ಣ ಪ್ರಮಾಣದ ವಿಶ್ವವಿದ್ಯಾಲಯವಾಗಬೇಕೆಂಬ ಕನಸು ಕಾಣಲು ಆರಂಭಿಸಿದ್ದು ಅಂದಿನಿಂದ.''[4]

ಹಂಪಿ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಗೆ ನಡೆದ ಪ್ರಯತ್ನ, ಈ ಪ್ರಯತ್ನಕ್ಕೆ ಮಹನೀಯರನೇಕರು ನೀಡಿದ ಬೆಂಬಲ, ಮುಖ್ಯವಾಗಿ ಬೆಂಗಳೂರಿನ 'ಸಾಹಿತಿಗಳ ಕಲಾವಿದರ ಬಳಗ'ದ ಉತ್ಸಾಹ, ಇತ್ಯಾದಿಗಳು ಈಗ ಚರಿತ್ರೆಯ ಭಾಗಗಳಾಗಿವೆ. ಗಮನೀಯ ಸಂಗತಿಯೆಂದರೆ, ಕನ್ನಡ ವಿಶ್ವವಿದ್ಯಾಲಯದ ಕಚೇರಿ ವಿರೂಪಾಕ್ಷ ದೇವಾಲಯದ ಮುಂದಿನ ಮಂಟಪಗಳಲ್ಲಿ ಆರಂಭಗೊಂಡುದು 'ಭುವನೇಶ್ವರಿದೇವಿ'ಯ ಪೂಜೆಯಿಂದ. 'ಕನ್ನಡ ತಾಯಿ ಭುವನೇಶ್ವರಿ'ಯು ಕನ್ನಡ ವಿಶ್ವವಿದ್ಯಾಲಯವನ್ನು ಹರಸಿದಳು !

ಮೇಲಿನ ಮೂರು ಉದಾರಹಣೆಗಳಲ್ಲೂ ಸಹಜವಾಗಿಯೇ ಒಂದು ಸಮಾನ ಗುಣ ಎದ್ದು ಕಾಣುತ್ತದೆ. ಅದೆಂದರೆ, ಧೀರರಿಗೂ ನಾಡಾಭಿಮಾನಿಗಳಿಗೂ ಪ್ರತಿಭಾಶಾಲಿಗಳಿಗೂ ಹಂಪೆಯ ಸ್ಮಾರಕಗಳು ನೀಡಿದ ನಿರಂತರ ಪ್ರೇರಣೆ ಹಾಗೂ ಸ್ಫೂರ್ತಿ. ಹಾಗೆಯೇ, ಪ್ರಾಯಶಃ ಶಿವಾಜಿಯು ಕ್ರಿ.ಶ. 1678ರ ಜನವರಿ-ಫೆಬ್ರವರಿಯಲ್ಲಿ ಹಂಪೆಗೆ ಭೇಟಿ ನೀಡಿದುದುದನ್ನು ಹೊರತುಪಡಿಸಿದರೆ, ಆಲೂರು ವೆಂಕಟರಾಯರೂ, ಚಿದಾನಂದಮೂರ್ತಿಗಳೂ ಇಲ್ಲಿಗೆ ಭೇಟಿ ನೀಡಿದುದು ಮೇ ತಿಂಗಳಿನಲ್ಲಿಯೇ. ಮೇಲೆಯೇ ನಮೂದಿಸಿರುವಂತೆ, ಆಲೂರರು 1905ರ ಮೇನಲ್ಲಿ ಹಾಗೂ ಮೂರ್ತಿಗಳು 1985ರ ಮೇ ತಿಂಗಳಲ್ಲಿ ಹಂಪೆಯನ್ನು ಸಂದರ್ಶಿಸಿದರು. ತಮ್ಮ ತಮ್ಮ ಸಂಕಲ್ಪಗಳಿಗೆ ಪ್ರೇರೇಪಣೆ ಪಡೆದುಕೊಂಡರು.

ರಾಬರ್ಟ್ ಸಿವೆಲ್‌ನ 'ಮರೆತು ಹೋದ ಸಾಮ್ರಾಜ್ಯ',[5] ಬಿ. ಸೂರ್ಯನಾರಾಯಣರಾಯರ 'ಎಂದೆಂದೂ ಮರೆಯಲಾಗದ ಸಾಮ್ರಾಜ್ಯ',[6] ಎ.ಹೆಚ್. ಲಾಂಗ್‌ಹರ್ಸ್ಟ್‌ನ 'ಹಂಪಿ ಅವಶೇಷಗಳು'[7] ಹಾಗೂ ಈಚೆಗೆ ಜಾನ್ ಎಂ. ಫ್ರಿಟ್ಜ್ ಮತ್ತು ಜಾರ್ಜ್ ಮಿಶಲ್ ಅವರು ಪ್ರಕಟಿಸಿದ 'ಸಿಟಿ ಆಫ್ ವಿಕ್ಟರಿ - ವಿಜಯನಗರ'[8] ಮೊದಲಾದ ಪ್ರಕಟಣೆಗಳು ಹಂಪೆಯ ಚರಿತ್ರೆ ಮತ್ತು ಸ್ಮಾರಕಗಳ ಆಶಯವನ್ನು, ಮಹತ್ವವನ್ನು ಪರಿಣಾಮಕಾರಿಯಾಗಿ ದೇಶ-ವಿದೇಶಗಳವರ ಗಮನಕ್ಕೆ ತಂದಂಥವು. ಬರ್ಟನ್ ಸ್ಟೀನ್‌ರವರು ವಿಜಯನಗರ ಕುರಿತು ಭಿನ್ನ ಬಗೆಯಲ್ಲಿ ನಿರೂಪಿಸಿದ್ದಾರೆ.[9]

ಕನ್ನಡ ಕವಿಗಳಿಗೆ ಹಂಪೆಯ ಸ್ಮಾರಕಗಳು ನೀಡಿದ ಪ್ರೇರಣೆಗಳು ರೋಚಕವಾದುವು. ಕವಿಗಳು ಈ ಸ್ಮಾರಕಗಳನ್ನು ಕಂಡು ವ್ಯಥೆಯಿಂದಲೂ ರೋಷಾವೇಶಗಳಿಂದಲೂ ಹೆಮ್ಮೆಯಿಂದಲೂ ಕವನಗಳನ್ನು ಕಟ್ಟಿ ಹಾಡಿರುವುದುಂಟು. ''ಹಂಪೆಯಿದು ಕಲಿಯುಗದ ಹಸಿಯ ಹಿರಿಮಸಣ! ...ಪಾಳಾದ ಕನ್ನಡಾರಾಮ....''[10] ಎಂದು ಕುವೆಂಪು ನಿಡುಸುಯ್ದರೆ, ''ಕಾಳವಿಲ್ಲದಲೆ ಬೇತಾಳನಂದದಿ ಕುಣಿವ ಕಾಳನರ್ತಕನ ಕಾಲ್ಕೆಳಗೆ ತೊತ್ತುಳಿಗೊಂಡು ಹಾಳಾಗಿ ಹುಡಿಗೂಡಿ ಹೋದ ಕನ್ನಡನಾಡಿಗಿದಿರಾಗಿ ಬಂದು ನಿಂದು ಹಾಳುಗಳ ಹೊರವೊಳಗೆ ಹಾಳುಗಳ ಸಾಲುಗಳು ಬೀಳುಗಳ ಬದಿಬದಿಗೆ ಬೀಳುಗಳ ಬಾಳುಗಳು ಕಾಳರಕ್ಕಸನ ಕಡೆಕೂಳು - ಬಾಳಕವಾದ ನಾಡ ನಡುಮನೆಯ ಕಂಡೆ'' ಎಂದು ಬೇಂದ್ರೆಯವರು ಕೊರಗೂತ್ತಾರೆ.[11] ''ನಿದ್ದೆ ಬಾರದು ಇನ್ನು ಈ ಜನ್ಮಕೆ ಬಿದ್ದ ಹಂಪೆಯ ಕಂಡು ಕಂಗೆಟ್ಟೆನು... ತುಂಗಭದ್ರೆಯ ಕೂಸಿನುಸಿರಡಗಿದೆ ಮಂಗಳದ ಆ ಹೆಸರು ಹದಗೆಟ್ಟಿದೆ''[12] ಎಂದು ಹೊಯಿಸಳರೂ (ಎ. ಲಕ್ಷ್ಮಣರಾವ್), ''ಕಲ್ಲಿನೊಳು ಜೀವವನು ತುಂಬಿದ ಬಲ್ಲಿದರ ಶಿಲ್ಪಿಗಳ ಮೂರ್ತಿಗಳೆಲ್ಲ ನೋಡಿದಡಲ್ಲಿ ಕೈಕಾಲ್ಮುರಿದು ಒರಗಿಹವು... ಎನಿತು ನೋಡಲಿ ಶಿವಶಿವಾ ಮನ ಬರಿವ ದೃಶ್ಯವಿದು'' ಎಂದು ಜೋಳದರಾಶಿ ದೊಡ್ಡನಗೌಡರೂ[13] ನೊಂದುಕೊಂಡಿರುವರು.

ಹಿಂದೊಮ್ಮೆ ಹಿರಿದಾಗಿ ಬಾಳಿದ 'ಹಳೆಯ ಮುತ್ತೈದೆ' ಕನ್ನಡ ತಾಯಿಯನ್ನು ಹಾಳು ಹಂಪೆಯಲ್ಲಿ ಕಂಡು ಬಿ.ಎಂ.ಶ್ರೀ. ''ನಮಗಿಲ್ಲ ಬಾಳು. ಎಲ್ಲರೂ ಬಾಳುವಡೆ ನಮಗೆ ಸಾವೇ? ಎಲ್ಲರೂ ನಲಿವ ಕಡೆ ನಮಗೆ ನೋವೇ?''[14] ಎಂಬ ಆಕೆಯ ಅಳಲನ್ನು ಕನ್ನಡ ಮಕ್ಕಳಿಗೆ ಮುಟ್ಟಿಸಿದ್ದಾರೆ. ''ನನ್ನ ನಾಡಿನಲ್ಲಿರುಳು...'' ಎಂಬ ಆಕೆಯ ಅಳಲು ಮನವನ್ನು ಇರಿಯುವಂಥಾದ್ದು. ಆದರೆ ''ಪಂಪೆಯಲಿ ನಾನಿಂದು ಓ ಎಂದು ಕೂಗಿದರೆ ಎನ್ನ ಕರೆಗೆ ಓಗೊಟ್ಟು ಓ ಎನ್ನುವರಿಲ್ಲ. ಹಂಪೆಯಾ ಸ್ಥಿತಿ ನೋಡಿ ಕಣ್ಣೀರ ಸುರಿಸಿದರೆ ಕಣ್ಣೊರಸಿ ಸಂತೈಸುವ ಕನ್ನಡಿಗರಿಲ್ಲಾ'' ಎಂದು ಭಾವಾವೇಶದಿಂದ ಹಾಡಿರುವ ದಾ.ಸ. ಗಂಗಾಧರಗೌಡರ ರೋಧನ ಕೇಳಿರದ ಕನ್ನಡಿಗನಿಲ್ಲವೆಂದರೆ ಉತ್ಪ್ರೇಕ್ಷೆಯಾಗದು.

ಕವಿಗಳಂತೆಯೇ, ಎಂ.ಆರ್.ಶ್ರೀ. ಅವರು ತಾವು ಸೃಷ್ಟಿಸಿದ 'ನಾಗರಿಕ'ನ ಬಾಯಿಯಲ್ಲಿ ಹಂಪೆಯ ಸ್ಮಾರಕಗಳನ್ನು ಕುರಿತು ಆಡಿಸಿರುವ ಮಾತುಗಳು ಗಮನೀಯವಾದುವು. ''ಪೂರ್ವ ವೈಭವದ ನೆನಪಾಗೆ ಕಲ್ಲು ತಾ ಕರಗುವುದು. ಮನ ಮರುಗದಿಹದೆಂತು? ಕೊರಗದಿಹದೆಂತು?'' ಎಂದು ಕೇಳುವ ನಾಗರಿಕ, ''ವೈಭವ ಸ್ಮರಣೆಯಿಂ ರಾಜಸವು ಬೆಳೆಯುವುದು, ರೋಷಾಗ್ನಿ ಪೊತ್ತುವುದು, ತಾಮಸವು ಬತ್ತುವುದು''[15] ಎಂತಲೂ ಆದರ್ಶವನ್ನಾಡುತ್ತಾನೆ. ವಿ.ಸೀ. ಅವರು ಗುರುತಿಸುವ 'ಶಾಂತಿಯ ರುದ್ರಭೂಮಿ'ಯು[16] ಹಂಪೆಯನ್ನು ದಾರ್ಶನಿಕ ದೃಷ್ಟಿಯಿಂದ ಪರಿಭಾವಿಸಲು ಪ್ರೇರಣೆ ನೀಡುತ್ತದೆ. ಹೀಗೆ ಹಂಪೆಯ ಸ್ಮಾರಕಗಳನ್ನು ಕಂಡು ಮರುಗಿರುವವರ ಸಂಖ್ಯೆಯೇ ಅಧಿಕ.

ಈಚಿನ ವರುಷಗಳಲ್ಲಿ ಹಂಪೆಯ ಸ್ಮಾರಕಗಳಿಂದ ದೇಶ-ವಿದೇಶಗಳ ಛಾಯಾ ಮತ್ತು ವರ್ಣಚಿತ್ರ ಕಲಾವಿದರೂ ಸ್ಫೂರ್ತಿಗೊಂಡಿರುವುದನ್ನು ಕಾಣಬಹುದು. ಪ್ರತಿಭಾಶಾಲಿ ಛಾಯಾಚಿತ್ರ ಗ್ರಾಹಕರೂ ಇಂಗ್ಲಿಷ್ ಸೇನಾಧಿಕಾರಿಯೂ ಆಗಿದ್ದ ಕರ್ನಲ್ ಅಲೆಕ್ಸಾಂಡರ್ ಜಾನ್ ಗ್ರೀನ್‌ಲಾ (1818-1870) ಅವರು 1856ರಲ್ಲಿ ತೆಗೆದಿದ್ದ ಹಂಪೆಯ ಸ್ಮಾರಕಗಳ ಅತ್ಯುತ್ತಮ ಛಾಯಾಚಿತ್ರಗಳು ಬೆಳಕಿಗೆ ಬಂದು ಜಗತ್ತಿನ ಗಮನವನ್ನು ಹಂಪೆಯತ್ತ ಇನ್ನೊಮ್ಮೆ ಸೆಳೆಯುವಲ್ಲಿ ಸಹಕಾರಿಯಾದವು. ಪ್ರಾಯಶಃ ಇಡೀ ಭಾರತದಲ್ಲೆ ಮೊತ್ತಮೊದಲಿಗೆ ಛಾಯಾಚಿತ್ರಗೊಂಡಿರುವ ಸ್ಮಾರಕಗಳು ಹಂಪೆಯವೇ ಎಂಬುದು ಸಹಾ ಹೆಮ್ಮೆಯನ್ನುಂಟು ಮಾಡುವಂಥಾದ್ದು. ಗ್ರೀನ್‌ಲಾ ತೆಗೆದ ಹಂಪೆಯ ಸ್ಮಾರಕಗಳ ಅಸಂಖ್ಯ 'ಪೇಪರ್-ವ್ಯಾಕ್ಸ್ ನೆಗೆಟಿವ್'ಗಳ ಪೈಕಿ ಇದೀಗ 60 ನೆಗೆಟಿವ್‌ಗಳು ದೊರೆತಿವೆ. ಈ ಚಿತ್ರಗಳ ನೆರವಿನಿಂದ ಇಲ್ಲಿಗೆ 140 ವರುಷಗಳ ಹಿಂದಿನ ಹಂಪೆಯ ಸ್ಮಾರಕಗಳ ಸ್ಥಿತಿ-ಗತಿ ಹಾಗೂ ಮೂಲ ರಚನೆಗಳನ್ನು ತಕ್ಕಮಟ್ಟಿಗೆ ಗುರುತಿಸಬಹುದು. ಗ್ರೀನ್‌ಲಾ ಚಿತ್ರಿಸಿದ ಸ್ಮಾರಕಗಳನ್ನೆ ಅದೇ ಕೋನದಿಂದ ಇನ್ನೊಮ್ಮೆ ಚಿತ್ರಿಸಿ ಹಂಪೆಯ ಸ್ಮಾರಕಗಳ ಅಧ್ಯಯನಕ್ಕೆ ಹೊಸ ತಿರುವು ನೀಡಲು ಕಾರಣರಾದವರೆಂದರೆ ಜಾನ್ ಗಾಲಿಂಗ್ಸ್; ಆಸ್ಟ್ರೇಲಿಯಾದ ಮೆಲ್‌ಬೋರ್ನ್‌ನ ಶಿಕ್ಷಣ ಸಂಸ್ಥೆಗಳಲ್ಲಿ ಛಾಯಾಚಿತ್ರ ಅಧ್ಯಾಪಕರು. 1983ರಲ್ಲಿ ಇವರು ಹಂಪೆ ಸ್ಮಾರಕಗಳ ಛಾಯಾಚಿತ್ರಗಳನ್ನು ತೆಗೆಯುವ ಪ್ರಯತ್ನ ನಡೆಸಿದರು. ಗ್ರೀನ್‌ಲಾ ಮತ್ತು ಗಾಲಿಂಗ್ಸ್ ಅವರ ಪ್ರಯತ್ನಗಳು ದೇಶಿ ಮತ್ತು ವಿದೇಶಿ ಛಾಯಾಚಿತ್ರ ಗ್ರಾಹಕರಿಗೆ ಸ್ಫೂರ್ತಿದಾಯಕವಾಗಿವೆಯೆನ್ನಬಹುದು.[17]

ವರ್ಣಚಿತ್ರ ಕಲಾವಿದರಲ್ಲಿ ಐರ್ಲೆಂಡ್‌ನ ರಾಯ್ ರೇಗನ್ ಅವರನ್ನು ಪ್ರಸ್ತಾಪಿಸಬಹುದು. ಹಂಪೆಯ ಜನಜೀವನದ ಒಂದು ಭಾಗವೇ ಆಗಿದ್ದು, ಅಲ್ಲಿಯ ಸಾಂಸ್ಕೃತಿಕ ಬದುಕಿನಲ್ಲಿಯೂ ಇವರು ಪ್ರವೇಶಿಸಿದ್ದರು. ರೇಗನ್ ಇಲ್ಲಿಯ ಪರಿಸರ ಮತ್ತು ಸ್ಮಾರಕಗಳ ಆಕರ್ಷಣೆಗೆ ಒಳಗಾಗಿದ್ದವರು. ಹದಿಮೂರು ವರುಷಗಳ ಕಾಲ ಹಂಪೆಯಲ್ಲಿ ನೆಲಸಿ (ಇವರು ಅಪಘಾತದಲ್ಲಿ ತೀರಿಕೊಂಡಿದ್ದು 9 ಜನವರಿ 1994ರಲ್ಲಿ) ಅಲ್ಲಿಯ ಸ್ಮಾರಕಗಳ ಸಾವಿರಾರು ವರ್ಣಚಿತ್ರಗಳನ್ನು ಬಿಡಿಸಿದುದು ಇವರ ವಿಶೇಷ. ಹಂಪೆಗೆ ಸಂಬಂಧಿಸಿದ ವರ್ಣಚಿತ್ರಗಳ ಸಂಕಲನವೊಂದನ್ನು ಹೊರತರುವ ಇವರ ಕನಸು ನನಸಾಗದೆ ಕರಗಿ ಹೋಯಿತು.

ಹಂಪೆಯ ಸ್ಮಾರಕಗಳು ಕೇವಲ ಗತೇತಿಹಾಸ ಮತ್ತು ಸಂಸ್ಕೃತಿಗಳ ಸಂಕೇತಗಳಾಗಿಯಷ್ಟೇ ಉಳಿದು ಬಂದಿವೆಯೆಂಬುದು ಅರ್ಥವಿಲ್ಲದ್ದು. ವರ್ತಮಾನದ ಬದುಕನ್ನೂ ಇವು ಪ್ರತಿಭಾವಿಸುತ್ತಿರುವುದನ್ನು ಇಂದಿಗೂ ಕಾಣಬಹುದು. ಮುಖ್ಯವಾಗಿ, ನಾಡು-ನುಡಿಗಳ ರಕ್ಷಣೆಗೆ ಸಂಬಂಧಿಸಿದ ಚಳವಳಿ, ಜನಪರವಾದ ಹೋರಾಟ ಹಾಗೂ ಸಾಂಸ್ಕೃತಿಗ ಚಟುವಟಿಕೆಗಳು ಹುಟ್ಟಿಕೊಳ್ಳಲು, ಸಂಘಟನೆಗೊಳ್ಳಲು ಮುಖ್ಯ ಪ್ರೇರಣೆಯಾಗಿ ಇವು ಈಗ ಮಾರ್ಪಟ್ಟಿರುವುದು ಸ್ಪಷ್ಟ. ಜನಜಾಗೃತಿಯ ಗಟ್ಟಿ ನೆಲೆಯಾಗಿ ಉಳಿದು ಬೆಳೆದು ಬರುತ್ತಿರುವ ಹಂಪೆ, ಕರ್ನಾಟಕದ ಎಲ್ಲ ವರ್ಗಗಳವರ ಬದುಕಿಗೆ ಆದರ್ಶಪ್ರಾಯವಾಗಿರುವುದನ್ನು ಮರೆಮಾಚಲಾಗದು. ವಿರೂಪಾಕ್ಷನ ದೇವನೆಲೆಯಾಗಿದ್ದು, ಇಹ-ಪರ ಪ್ರಜ್ಞೆಯನ್ನು ಮೂಡಿಸುವಲ್ಲಿ ಹಾಗೂ ವ್ಯಷ್ಟಿ-ಸಮಷ್ಟಿಗಳ ಸಮನ್ವಯತೆ ಸಾಧಿಸುವಲ್ಲಿ - ಒಂದು ವಿಧದಲ್ಲಿ ಪ್ರಯೋಗರಂಗವಾಗಿರುವುದು ಉತ್ಪ್ರೇಕ್ಷೆಯೆನಿಸಿದರೂ ಸತ್ಯ.

ಕೊನೆಯಲ್ಲಿ, ಎಂ.ಆರ್.ಶ್ರೀ. ಯವರು ರಚಿಸಿದ ವಿದ್ಯಾರಣ್ಯ ಪಾತ್ರದ ನುಡಿಯೊಂದನ್ನು ಉಲ್ಲೇಖಿಸುವುದಾದರೆ,

> ''ಕಾರ್ಯವೊದಗಿಸುವಲ್ಲಿ ಕಾರ್ಯವನು ಸಾಧಿಪುದು
> ಬರಿದೆ ಶೋಕಿಪುದಲ್ಲ. ಗತವೈಭವಕೆ ಕೊರಗಿ
> ಹರಣಮಂ ಬಿಡಲುಂಟೇ? ಆಗುವುದು, ಪೋಗುವುದು.
> ಮುಂದಿನಾ ವೈಭವಕೆ ತಳಹದಿಯು ಹಿಂದಿನದ ಸಂಪದವು.''[18]

ಅಡಿ ಟಿಪ್ಪಣಿಗಳು

1. *ವಿಜಯನಗರ ಸೆಕ್ಸ್ ಸೆಂಟನರಿ ಕಮೆಮೊರೇಶನ್ ವಾಲ್ಯೂಮ್* (1936), ಪು. 119-138.
2. ಆಲೂರ ವೆಂಕಟರಾಯರು, *ನನ್ನ ಜೀವನ ಸ್ಮೃತಿಗಳು*, ಪು. 79-80.
3. ಎಂ. ಚಿದಾನಂದಮೂರ್ತಿ, *ಹೊಸತು ಹೊಸತು*, ಪು. 469-484.
4. *ಅದೇ, ಪ್ರಸ್ತಾವನೆ* ಪು. viii.
5. ರಾಬರ್ಟ್ ಸಿವೆಲ್, 1900, *ಫಾರ್ಗಾಟನ್ ಎಂಪಾಯರ್.*
6. ಬಿ. ಸೂರ್ಯನಾರಾಯಣರಾವ್, 1905, *ನೆವರ್ ಟು ಬಿ ಫಾರ್ಗಾಟನ್ ಎಂಪಾಯರ್.*
7. ಎ.ಹೆಚ್. ಲಾಂಗ್‌ಹರ್ಸ್ಟ್, 1905, *ಹಂಪಿ ರೂಯಿನ್ಸ್.*
8. ಜಾನ್ ಎಂ. ಫ್ರಿಟ್ಸ್ ಮತ್ತು ಜಾರ್ಜ್ ಮಿಶಲ್, 1991, *ಸಿಟಿ ಆಫ್ ವಿಕ್ಟರಿ - ವಿಜಯನಗರ.*
9. ಬರ್ಟನ್ ಸ್ಟೀನ್, 1989, *ದಿ ನ್ಯೂ ಕೆಂಬ್ರಿಡ್ಜ್ ಹಿಸ್ಟರಿ ಆಫ್ ಇಂಡಿಯಾ - ವಿಜಯನಗರ.*
10. *ಕನ್ನಡ ಡಿಂಡಿಮ*, ಪು. 46.
11. *ಕನ್ನಡ ಬಾವುಟ*, ಪು. 141.
12. *ಅದೇ*, ಪು. 140.
13. *ತುಂಗಾ ತರಂಗ*, ಪು. 16-17.
14. *ಕನ್ನಡ ಬಾವುಟ*, ಪು. 167.
15. ಎಂ.ಆರ್.ಶ್ರೀ., *ನಾಗರಿಕ*, ಪು. 59-60.
16. ವಿ.ಸೀ., *ಪಂಪಾಯಾತ್ರೆ*, ಪು. 76.
17. ಎಂ.ಎಸ್. ನಾಗರಾಜರಾವ್, 1988, *ವಿಜಯನಗರ ಥ್ರೂ ದಿ ಆಯ್ಸ್ ಆಫ್ ಅಲೆಕ್ಸಾಂಡರ್ ಜೆ. ಗ್ರಿನ್‌ಲಾ (1856) ಆಂಡ್ ಜಾನ್ ಗಾಲಿಂಗ್ಸ್ (1983).*
18. ಎಂ.ಆರ್.ಶ್ರೀ., *ನಾಗರಿಕ*, ಪು. 55-56.

7. ಹಂಪೆಯಲ್ಲಿ ಬಾದಾಮಿ ಚಾಲುಕ್ಯರ ಕಾಲದ ದೇವಾಲಯ

ದೇವರಕೊಂಡಾರೆಡ್ಡಿ

ಸಂಸ್ಕೃತದಲ್ಲಿ ಪಂಪಾಕ್ಷೇತ್ರ ಹಾಗೂ ಕನ್ನಡದಲ್ಲಿ ಹಂಪೆಯೆಂದು ಗುರುತಿಸುವ ಈಗಿನ ಹಂಪೆಯ ಪ್ರಾಚೀನ ಉಲ್ಲೇಖ ಕ್ರಿ.ಶ. 681ರ ಶಾಸನದಲ್ಲಿ ಉಕ್ತವಾಗಿದೆ. ಇದರಲ್ಲಿ ಇದನ್ನು ಪಂಪಾತೀರ್ಥ ಎಂದು ಹೆಸರಿಸಿದೆ. ಆ ಕಾಲಕ್ಕೆ ಇದು ಪವಿತ್ರ ತೀರ್ಥವಾಗಿತ್ತೆಂಬುದನ್ನು ಇದು ಧ್ವನಿಸುತ್ತದೆ. ಮುಂದೆ ಇದರ ಉಲ್ಲೇಖ ಬರುವುದು ಕ್ರಿ.ಶ. 1018ರ ಶಾಸನದಲ್ಲಿ. ಬಾಗಳಿಯ ಈ ಶಾಸನದಲ್ಲಿ ಕಂಪ್ಲಿಯ ನೊಳಂಬ ಉದಯಾದಿತ್ಯನು ಪಂಪಾತೀರ್ಥಕ್ಕೆ ಬಂದಿದ್ದ ಉಲ್ಲೇಖವಿದೆ. ಮುಂದೆ ಕ್ರಿ.ಶ. 1199ರ ಶಾಸನದಲ್ಲಿ ಹಂಪೆಯಲ್ಲಿದ್ದ ಅನೇಕ ದೇವಾಲಯಗಳು ಹೆಸರುಗೊಂಡಿವೆಯಲ್ಲದೆ ಮತಂಗ ಪರ್ವತದಲ್ಲಿ ಈ ಕ್ಷೇತ್ರದ ರಕ್ಷಣೆಗಾಗಿ ಸಣ್ಣ ಸೈನ್ಯವೊಂದಿತ್ತು ಎಂಬ ವಿಷಯವೂ ತಿಳಿಯುತ್ತದೆ.

ಶಾಸನಗಳಲ್ಲದೆ ಹರಿಹರ, ರಾಘವಾಂಕ, ಸೋಮನಾಥ ಮುಂತಾದ ಕವಿಗಳ ಕೃತಿಗಳಲ್ಲಿ ಇಲ್ಲಿದ್ದ ಅನೇಕ ದೇವಾಲಯಗಳ, ತೀರ್ಥಗಳ, ವ್ಯಕ್ತಿಗಳ ಉಲ್ಲೇಖ ಬರುತ್ತದೆ. ಕಾವ್ಯಗಳಲ್ಲಿ ವಿಸ್ತಾರ ವರ್ಣನೆ ಸಹ ಬಂದಿರುತ್ತದೆ.

ಇಷ್ಟೆಲ್ಲಾ ಆಧಾರಗಳಿದ್ದರೂ ಇಲ್ಲಿನ ವಾಸ್ತು ರಚನೆಗಳ ಕಾಲವನ್ನು ನಿರ್ಧರಿಸುವುದರಲ್ಲಿ ಇನ್ನೂ ಸ್ಪಷ್ಟವಾದ ಮಾನದಂಡಗಳಿಲ್ಲ. ಮನ್ಮಥಕುಂಡದ ಎದುರಿಗಿನ ದೇವಾಲಯ ಸಮುಚ್ಚಯ ಹಾಗೂ ಹೇಮಕೂಟದಲ್ಲಿನ ಕೆಲವು ದೇವಾಲಯಗಳನ್ನು ವಿಜಯನಗರ - ಪೂರ್ವ ಕಾಲದವೆಂದು ಗುರುತಿಸುತ್ತಾರೆ. ಈ ಪೂರ್ವಕಾಲವೆಂದಾಗ 1100ರಿಂದ 1300ರ ಅವಧಿಯಾಗಿರುತ್ತದೆ.

ಹಾಗಾದರೆ ಈ ಕ್ಷೇತ್ರದಲ್ಲಿ ಕ್ರಿ.ಶ. 11ನೆಯ ಶತಮಾನಕ್ಕಿಂತ ಹಿಂದಿನ ದೇವಾಲಯಗಳು ಯಾವುವು?. ಎಂಬ ಪ್ರಶ್ನೆ ಸಹಜವಾಗಿ ಎದುರಾಗುತ್ತದೆ. ಈಗಿನ ವಿರೂಪಾಕ್ಷ ದೇವಾಲಯವು ವಾಸ್ತು ರಚನಾ ಶೈಲಿಯಿಂದ 14ನೇ ಶತಮಾನಕ್ಕಿಂತ ಹಿಂದೆ ಹೋಗಲಾರದು. ಹಾಗೆಯೇ ಮನ್ಮಥಕುಂಡದ ಎದುರಿನ ದೇವಾಲಯಗಳು 11ನೆಯ ಶತಮಾನದ ಅಂತ್ಯಕ್ಕೆ ಸೇರುತ್ತವೆ. ಹೇಮಕೂಟದ ದೇವಾಲಯಗಳಲ್ಲಿ ಕೆಲವು ವಿಜಯನಗರ ಕಾಲಕ್ಕೆ ಸೇರುತ್ತವೆಯಾದರೂ ಕೆಲವು ತ್ರಿಕೂಟ ದೇವಾಲಯಗಳು ವಿಜಯನಗರದ ಆರಂಭ ಕಾಲಕ್ಕೆ ಸೇರಿದವುಗಳಾಗಿವೆ.

ಇಂತಹ ಹೇಮಕೂಟದ ದೇವಾಲಯಗಳಲ್ಲಿನ ಒಂದು ದೇವಾಲಯ ಈ ಮೂರೂ ಕಡೆಯಲ್ಲಿನ ದೇವಾಲಯಗಳಿಗಿಂತ ಭಿನ್ನವಾಗಿದ್ದು, ಅದರ ಪರಿಚಯ ಹಾಗೂ ಅಧ್ಯಯನವನ್ನು ಮುಂದೆ ನೀಡಲಾಗಿದೆ.

ಹೇಮಕೂಟದ ದೇವಾಲಯ ಸಮುಚ್ಚಯದ ವಾಯುವ್ಯದ ಇಳಿಜಾರಿನಲ್ಲಿ ಈಗಿನ ವಿರೂಪಾಕ್ಷ ದೇವಾಲಯದ ದಕ್ಷಿಣ ಪ್ರವೇಶ ದ್ವಾರಕ್ಕೂ ತ್ರಿಕೂಟ ದೇವಾಲಯಕ್ಕೂ ಮಧ್ಯೆ ಒಂದು ಸಣ್ಣ ದೇವಾಲಯವಿದೆ. ಈ ದೇವಾಲಯವನ್ನು ಮರಳುಗಲ್ಲಿನಿಂದ ಕಟ್ಟಿದ್ದು ಇತರ ದೇವಾಲಯಗಳಿಗಿಂತ ಇದು ಭಿನ್ನವಾಗಿದೆ. ದೇವಾಲಯವು ಅಧಿಷ್ಠಾನದಿಂದ ಸ್ತೂಪಿಯವರೆಗೆ ಸುಮಾರು ಇಪ್ಪತ್ತೈದು ಅಡಿ ಎತ್ತರವಿದೆ. ದ್ವಿತಳವನ್ನು ಹೊಂದಿರುವ ಈ ದೇವಾಲಯದಲ್ಲಿ ಗರ್ಭಗೃಹ ಮತ್ತು ಅಂತರಾಳ ಮಾತ್ರ ಮೂಲ ರೂಪದಲ್ಲಿ ಉಳಿದಿದ್ದು ಮುಂದಿನ ನವರಂಗ ಭಾಗ ವಿಜಯನಗರ ಕಾಲದಲ್ಲಿ ಪೂರ್ಣವಾಗಿ ಗುರುತಿಸಲಾರದಷ್ಟು ಬದಲಾಗಿದೆ. ಈ ದೇವಾಲಯವು ಉಳಿದ ದೇವಾಲಯಗಳಿಗಿಂತ ಹೇಗೆ ಭಿನ್ನ ಹಾಗೂ ಪ್ರಾಚೀನ ಎಂಬುದನ್ನು ಈ ಕೆಳಗಿನ ಅಂಶಗಳಿಂದ ಗುರುತಿಸಬಹುದಾಗಿದೆ.

1. ಮೊದಲೇ ಹೇಳಿರುವಂತೆ ಇದಕ್ಕೆ ಬಳಸಿರುವ ಶಿಲಾಮಾಧ್ಯಮ ಮರಳುಗಲ್ಲು, ಗಟ್ಟಿ ಚಪ್ಪಡಿಗಲ್ಲಲ್ಲ. ಬಹುಶಃ ಇದು ಸವೆಯುತ್ತಿದ್ದುದನ್ನು ಗಮನಿಸಿ ಮಧ್ಯಕಾಲದಲ್ಲಿ ಗಾರೆಯ ಲೇಪನವನ್ನು ಮಾಡಿದ್ದರು. ಇಂದಿಗೂ ಅಲ್ಲಲ್ಲಿ ಗಾರೆಯ ಲೇಪನವನ್ನು ಕಾಣಬಹುದಾಗಿದೆ. ಇಂತಹ ಶಿಲೆಯನ್ನು ಬಾದಾಮಿ ಚಾಲುಕ್ಯರ ಕಾಲದಲ್ಲಿ ಹೆಚ್ಚಿಗೆ ಬಳಸಿರುತ್ತಾರೆ.

2. ಅಧಿಷ್ಠಾನವು ಚಿಕ್ಕದಾಗಿದ್ದು, ಕಪೋತಬಂಧ ಅಧಿಷ್ಠಾನವಾಗಿದೆ. ಪದ್ಮೋಪಾನ, ತ್ರಿಪಟ್ಟ ಕುಮುದ, ಗಳ, ಕಪೋತವನ್ನು ಹೊಂದಿದೆ. ಕರ್ಣ, ಭದ್ರಗಳಿಂದ ಕೂಡಿದೆ.



1. ಬಾದಾಮಿ ಚಾಲುಕ್ಯರ ಕಾಲದ ದೇವಾಲಯ, ಹೇಮಕೂಟ, ಹಂಪೆ

3. ಭಿತ್ತಿಯ ಅಧಿಷ್ಠಾನದ ರೀತಿಯಲ್ಲಿ ಭದ್ರ ಕರ್ಣಗಳನ್ನು ಹೊಂದಿ ಉಬ್ಬು ಕಂಬಗಳನ್ನು ಹೊಂದಿದೆ. ಭದ್ರದಲ್ಲಾಗಲೀ ಕರ್ಣದ ಭಾಗದಲ್ಲಾಗಲೀ ಕೊಷ್ಠ ಗೂಡುಗಳನ್ನು ಹೊಂದಿಲ್ಲ. ಇದರಲ್ಲಿನ ಹುಸಿ ಕಂಬಗಳ ಶಲಾಕಭಾಗವು ನೀಳವಾಗಿದ್ದು ಮೇಲೆ ಎಡೆಕಟ್ಟು, ಕಂಠ, ಫಲಕ ಮುಂತಾದ ಭಾಗಗಳನ್ನು ಹೊಂದಿದೆ. ಫಲಕದ ಮೇಲೆ ಬೋದಿಗೆ ಬಂದಿದ್ದು ಈ ಬೋದಿಗೆಯು ವಿಜಯನಗರ ವಾಸ್ತುವಿನಲ್ಲಿ ಕಾಣುವ ಬೋದಿಗೆಗಿಂತ ಭಿನ್ನವಾಗಿದ್ದು ಸೀಳಿಲ್ಲದ ಬೋದಿಗೆಯಾಗಿದೆ.

4. ಪ್ರಸ್ತರದ ಭಾಗದಲ್ಲಿ ಬರುವ ಹಾರಾಂತರದಲ್ಲಿ ಗಣಗಳ ಹಾಗೂ ಪಕ್ಷಿಗಳ ಸಾಲಿದೆ. ಅದರ ಮೇಲೆ ಅಧಿಷ್ಠಾನವನ್ನನುಸರಿಸಿದ ಭದ್ರ ಹಾಗೂ ಕರ್ಣಗಳ ಮೇಲೆ ಕಪೋತ ಬಂದಿದೆ. ಈ ಕಪೋತ ಭಾಗದಲ್ಲಿ ಕ್ಷುದ್ರ ನಾಸಿ ಭಾಗಗಳು ಬಂದಿದ್ದು, ಇವುಗಳಲ್ಲಿ ಕೆತ್ತನೆಗಳಿರುವುದಿಲ್ಲ. ಈ ಕಪೋತದ ಮೇಲೆ ಪ್ರತಿ ಬಂದಿದ್ದು, ಇದರಲ್ಲಿನ ಕೆತ್ತನೆಗಳು ಸವೆದಿವೆ. ಈ ಭಾಗದ ಮೂಲೆಗಳಲ್ಲಿ ಅಂದರೆ ಕರ್ಣದ ಭಾಗದಲ್ಲಿ ಕರ್ಣಕೂಟವಿತ್ತು. ಆದರೆ ಈಗ ಆ ಭಾಗಗಳು ಬಿದ್ದು ಹೋಗಿವೆ. ಭದ್ರದ ಮೇಲೆ ಶಾಲಾ ಶಿಖರವಿದೆ.

5. ಇಲ್ಲಿಂದ ಮುಂದೆ ದ್ವಿತಳ ವಿಮಾನ ಬಂದಿದ್ದು ಮೊದಲ ತಳದ ಭಾಗಗಳಂತೆಯೇ ಇದೆ. ಭಾಗಗಳು ಮೊದಲ ತಳದಂತೆ ಬಂದರೂ ಎತ್ತರಕ್ಕೆ ತಕ್ಕಂತೆ ಚಿಕ್ಕದಾಗಿವೆ.

6. ಎರಡನೆಯ ತಳದ ಮೇಲೆ ವೇದಿ ಬಂದಿದ್ದು ಆ ವೇದಿಯ ಮೇಲೆ ಗ್ರೀವ ಬಂದಿದೆ. ಗ್ರೀವದ ಆಕಾರದಲ್ಲಿ ಆದರ ಮೇಲೆ ಬ್ರಹ್ಮಛಂಧ ಸ್ತೂಪಿ ಬಂದಿದೆ. ಸ್ತೂಪಿಯ ನಾಲ್ಕುಕಡೆ ಮಹಾನಾಸಿಗಳು ಬಂದಿದ್ದು, ಅವುಗಳಲ್ಲಿ ಹೆಚ್ಚಿನ ಅಲಂಕಾರವಿಲ್ಲ. ಸ್ತೂಪಿಯ ಮೇಲಿನ ಕಲಶ ಕಾಣುತ್ತಿಲ್ಲ.

ದೇವಾಲಯದ ಪೂರ್ವ ಭಾಗದಲ್ಲಿ ಅಂತರಾಳದ ಮೇಲೆ ಶಾಲಾ ಆಕಾರದ ಶುಕನಾಸಿ ಬಂದಿದೆ. ಇದರಲ್ಲಿನ ಮುಂಭಾಗದ ಮಹಾನಾಸಿಯಲ್ಲಿನ ಅಲಂಕಾರಗಳು ಸವೆದಿವೆ.

ಮೇಲೆ ವಿವರಿಸಿದ ವಿವರಗಳು ದೇವಾಲಯದ ಹೊರಭಾಗದವು. ಇನ್ನು ಒಳಭಾಗದಲ್ಲಿ ಉಳಿದಿರಬಹುದಾದ ಪ್ರಾಚೀನ ಲಕ್ಷಣಗಳನ್ನು ಗಮನಿಸುವುದಾದಲ್ಲಿ

1. ಗರ್ಭಗೃಹದ ಒಳಭಾಗ ಚೌಕಾಕಾರವಾಗಿದ್ದು, ಗರ್ಭಗೃಹದ ಮುಚ್ಚಿಗೆಯ ಭಾಗವು ಆರಂಭದಲ್ಲಿ 8 ಭಾಗವಾಗಿದ್ದು ಮುಂದೆ ಚೌಕಾಕಾರವಾಗಿ ಮುಂದುವರಿಯುತ್ತದೆ. ಮಧ್ಯೆ ಕಮಲದ ಶಿಲ್ಪ ಬಂದಿಲ್ಲ.

2. ಅಂತರಾಳವು ತೆರೆದ ಅಂತರಾಳವಾಗಿದ್ದು, ಅಂತರಾಳದ ಮೇಲಿನ ತೂಕವನ್ನು ಹೊರಲು ಮುಚ್ಚಿಗೆ ಭಾಗದಲ್ಲಿ ಮೂರು ಸಣ್ಣ ತೊಲೆಗಳು ಬಂದಿವೆ. ತೊಲೆಗಳ ಆರಂಭ ಭಾಗದಲ್ಲಿ ತರಂಗದ ಬೋದಿಗೆಯನ್ನು ಬಿಡಿಸಿದೆ. ಅಂತರಾಳಕ್ಕೂ ನವರಂಗಕ್ಕೂ ಮಧ್ಯೆ ಬರುವ ತೊಲೆಯನ್ನು ತೋರಣವಾಗಿ ಬಿಡಿಸಿದ್ದು, ಇಂದು ತೋರಣದ ಮೊಗ್ಗುಗಳನ್ನು ಒಡೆದು ಹಾಕಿರುತ್ತಾರೆ.

ಈ ದೇವಾಲಯದ ಮುಂದಿನ ಭಾಗವನ್ನು ವಿಜಯನಗರ ಕಾಲದಲ್ಲಿ ಕಿತ್ತು ಕಟ್ಟಿರುತ್ತಾರೆ. ಆದರೆ ಮೂಲದಲ್ಲಿದ್ದಿರಬಹುದಾದ ಕಂಬಗಳಾಗಲೀ ಮತ್ಯಾವುದೇ ಪ್ರಾಚೀನ ಅವಶೇಷಗಳನ್ನಾಗಲೀ ಉಳಿಸಿಲ್ಲ. ಇದರಲ್ಲಿ ಇದ್ದಿರಬಹುದಾದ ದೈವದ ಬಗ್ಗೆಯೂ ನಮಗೆ ಸ್ಪಷ್ಟವಾದ ಕುರುಹು ಸಿಗುವುದಿಲ್ಲ.


ಆದರೂ ಇದರ ರಚನೆ ಬಳಸಿರುವ ಮಾಧ್ಯಮದಿಂದ, ಅಧಿಷ್ಠಾನದ ಮಾದರಿ, ದೇವಾಲಯದ ರೀತಿ, ಎತ್ತರ, ಒಳಗಿನ ಸುರಳಿ (ತರಂಗಗಳು) ಮುಂತಾದ ವಿವರಗಳಿಂದ ಈ ದೇವಾಲಯವನ್ನು ನಾವು ಬಾದಾಮಿಯ ಚಾಲುಕ್ಯರ ಕಾಲಕ್ಕೆ ಅಂದರೆ ಸುಮಾರು ಎಂಟನೆಯ ಶತಮಾನದ ಆರಂಭ ಕಾಲಕ್ಕೆ ಸೇರಿಸಬಹುದಾಗಿದೆ.

ಈ ದೇವಾಲಯದ ಆಗ್ನೇಯಕ್ಕೆ ಬಯಲಿನಲ್ಲಿ ಒಂದು ಮಂಟಪವಿದ್ದು ಅದರ ಮೇಲೆ ಶಾಲಾ ಶಿಖರವಿದೆ. ಈ ಮಂಟಪಕ್ಕೆ ಬಳಸಿರುವ ಕಲ್ಲೂ ಸಹ ಮೇಲೆ ಹೇಳಿದ ದೇವಾಲಯಕ್ಕೆ ಸೇರಿದ ಕಲ್ಲಿನಂತೆಯೇ ಇದೆ. ಈಗ ಇದು ಒಂದು ಅಂಕಣ ಮಾತ್ರವಿದ್ದು, ಉಳಿದ ಭಾಗ ಹಾಳಾಗಿರಬಹುದು. ಈ ಮಂಟಪ ಆಯತಾಕಾರದಲ್ಲಿದ್ದು, ಇದರಲ್ಲಿನ ದೇವತಾಮೂರ್ತಿ ಸಪ್ತಮಾತೃಕಾ ಶಿಲ್ಪ ಪಟ್ಟಿಕೆಯಾಗಿದ್ದಿರಬಹುದು. ಇದು ಉತ್ತರಾಭಿಮುಖವಾಗಿ, ಆಯತಾಕಾರದಲ್ಲಿರುವುದು ಈ ಊಹೆಗೆ ಕಾರಣ.

ಈ ಸಪ್ತಮಾತೃಕಾ ಮಂಟಪದ ಬಲಬದಿಗೆ ಒಂದು ಪಾಳು ನಿವೇಶನ(ಮಂಟಪ)ವಿದ್ದು, ಇದರ ಒಂದೆರಡು ಒಳ ಕಂಬಗಳು ಮಾತ್ರ ಉಳಿದಿವೆ. ಇದರ ಒಳಕಂಬಗಳ ಸ್ವರೂಪದಿಂದ ಇದು ವಿಜಯನಗರ ಕಾಲದ್ದಲ್ಲ. ಕಲ್ಯಾಣದ ಚಾಳುಕ್ಯ ಅಥವಾ ಹೊಯ್ಸಳರ ಕಾಲದ್ದೂ ಅಲ್ಲ. ಹಾಗೆಂದ ಮೇಲೆ ರಾಷ್ಟ್ರಕೂಟರ ಕಾಲಕ್ಕೆ ಸೇರಿಸಬೇಕಾಗುತ್ತದೆ. ಇದು ಚೌಕಾಕಾರದ ಮಂಟಪವನ್ನು ಹೊಂದಿತ್ತು.

ಬಾದಾಮಿ ಚಾಲುಕ್ಯರ ಈ ಶಿವ ದೇವಾಲಯದ ಸುತ್ತ ಇನ್ನೂ ಹಲವಾರು ಸಣ್ಣ ದೇವಾಲಯಗಳಿದ್ದಿರಬೇಕು. ವಿಜಯನಗರದ ಅರಸರ ಕಾಲದಲ್ಲಿ ನಡೆದ ಬೃಹತ್ ಜೀರ್ಣೋದ್ಧಾರ ಕಾರ್ಯ, ಹೊಸ ರಚನೆಗಳ ಕಾರ್ಯದಲ್ಲಿ ಶಿಥಿಲವಾಗಿದ್ದ ಅನೇಕ ದೇವಾಲಯಗಳು ನಾಶವಾಗಿರಬಹುದು. ಹೀಗಾಗಿ ಶಿವ ಪಂಚಾಯತನದಿಂದ ಕೂಡಿದ್ದ ಈ ದೇವಾಲಯದ ಬೇರೆ ಬೇರೆ ಮಂಟಪಗಳು ನಾಶ ಹೊಂದಿ ಒಂದೆರಡು ಮಾತ್ರ, ಉಳಿದುಕೊಂಡಿವೆ.

ಒಟ್ಟಿನಲ್ಲಿ ಹಂಪೆಯಲ್ಲಿ ಉಳಿದಿರಬಹುದಾದ ಬಾದಾಮಿ ಚಾಲುಕ್ಯರ ಕಾಲದ ಏಕಮಾತ್ರ, ಉದಾರಹಣೆಯಾಗಿ ಈ ದೇವಾಲಯ ನಿಂತಿದೆ.



2. ಚಾಲುಕ್ಯರ ಕಾಲದ ದೇವಾಲಯ ಒಳಬಾಗಿಲು



3. ಚಾಲುಕ್ಯರ ಕಾಲದ ದೇವಾಲಯ (ಸಪ್ತಮಾತೃಕಾ ಮಂಟಪ)

8. ಹಂಪೆಯ ವಿರೂಪಾಕ್ಷ ಸಂಕೀರ್ಣದ ಮಹಿಷಮರ್ದಿನಿ ದೇವಾಲಯ

ಎಂ.ಎಸ್. ಕೃಷ್ಣಮೂರ್ತಿ

ವಿರೂಪಾಕ್ಷ ದೇವಾಲಯದ ಉತ್ತರ ಕೈಸಾಲೆಯಲ್ಲಿನ ಮಹಾದ್ವಾರವನ್ನು ದಾಟಿ ಹೊರಕ್ಕೆ ಬಂದರೆ ವಿಶಾಲವಾದ ಜಾಗದಲ್ಲಿ ಎಡಭಾಗದಲ್ಲಿ ಅನೇಕ ಸಣ್ಣ ಸಣ್ಣ ದೇವಾಲಯಗಳೂ, ಬಲಭಾಗದಲ್ಲಿ ಮನ್ಮಥ ಕುಂಡವೂ ಕಾಣಸುವುದು. ಮನ್ಮಥ ಕುಂಡ ಎಂಬುದು ಸುತ್ತಲೂ ಸೋಪಾನಗಳನ್ನುಳ್ಳ ಆಯತಾಕಾರದ ವಿಶಾಲವಾದ ಪುಷ್ಕರಿಣಿ. ಶಿವನ ಮುಖದಿಂದ ಬಂದದ್ದರಿಂದ ಈ ಕುಂಡಕ್ಕೆ ಮನ್ಮಥ ಕುಂಡವೆಂದು ಕರೆಯುತ್ತಾರೆ.[1] ಈ ಪುಷ್ಕರಿಣಿಗೆ ಮುಖಮಾಡಿ ಕೆಲವು ಸಣ್ಣ ಸಣ್ಣ ದೇವಾಲಯಗಳು ಪೂರ್ವಾಭಿಮುಖವಾಗಿ ನಿರ್ಮಿತವಾಗಿವೆ. ಇವುಗಳಲ್ಲಿ ಎರಡು ದೇವಾಲಯಗಳು ಉಳಿದೆಲ್ಲವುಗಳಿಗಿಂತಲೂ ಪ್ರಾಚೀನವಾದ ವಾಸ್ತು ಲಕ್ಷಣಗಳನ್ನು ಹೊಂದಿದ್ದು ಅಕ್ಕಪಕ್ಕದಲ್ಲಿ ನಿರ್ಮಿತವಾಗಿದೆ. ಅವುಗಳ ಸೂಕ್ಷ್ಮ ಅವಲೋಕನದಿಂದ ಬಂದ ಕೆಲವು ಅಭಿಪ್ರಾಯಗಳನ್ನು ವಿದ್ವಾಂಸರ ಮುಂದೆ ಇಡಲಾಗಿದೆ.

ಈ ಎರಡು ದೇವಾಲಯಗಳಲ್ಲಿ ಒಂದು ಮಹಿಷಮರ್ದಿನಿ ಅಥವಾ ದುರ್ಗಾ ದೇವಾಲಯ ಮತ್ತೊಂದು ನಾಗನಂದೀಶ್ವರ ಎಂಬ ಹೆಸರಿನ ಶಿವನ ದೇವಾಲಯ. ದುರ್ಗಾ ದೇವಾಲಯದ ಬಗ್ಗೆ ದೊರೆಯುವ ಅತ್ಯಂತ ಪ್ರಾಚೀನ ಶಾಸನಾಧಾರವೆಂದರೆ ಕ್ರಿ.ಶ. 1199ರ ಮೈದುನ ಚೌಡಯ್ಯನ ಶಾಸನ.[2] ಈ ದೇವಾಲಯಗಳನ್ನು ಈಗಾಗಲೇ ದೇವಕುಂಜರಿ,[3] ವಸುಂಧರಾ ಫಿಲಿಯೋಜಾ,[4] ಫಿಲಿಪ್ ಬಿ. ವ್ಯಾಗ್ನರ್,[5] ಜಾರ್ಜ್ ಮಿಷಲ್,[6] ಚನ್ನಬಸಪ್ಪ ಎಸ್. ಪಾಟೀಲ[7] ಮುಂತಾದವರು ವರ್ಣಿಸಿದ್ದಾರೆ. ಆದರೂ ನಮ್ಮ ಅನಿಸಿಕೆಗಳನ್ನು ಮುಂದಿಡುವುದಕ್ಕೆ ಈ ದೇವಾಲಯಗಳ ಒಂದು ಸ್ಥೂಲ ವರ್ಣನೆ ಇಲ್ಲಿ ಅಗತ್ಯ ಎನಿಸುತ್ತದೆ.

ದುರ್ಗಾ ದೇವಾಲಯದ ಪೂಜಾ ಮೂರ್ತಿ ಮಹಿಷಮರ್ದಿನಿಯದು. ಈಗಲೂ ಇಲ್ಲಿ ಪೂಜೆ ನಡೆಯುತ್ತದೆ. ತಳವಿನ್ಯಾಸದಲ್ಲಿ ಗರ್ಭಗೃಹ (4x4ಮೀ.), ಅಂತರಾಳ (2x4 ಮೀ.) ಮತ್ತು ಮುಂದುಗಡೆ ನಂತರದ ಕಾಲದ ತೆರೆದ ಮಂಟಪವನ್ನು (8x8 ಮೀ.) ಹೊಂದಿದೆ. ಗರ್ಭಗುಡಿಯ ಮೇಲೆ ದ್ರಾವಿಡ ಶೈಲಿಯ ಮೆಟ್ಟಿಲು ಪಿರಮಿಡ್ಡಿನಾಕಾರದ ಸುಂದರ ವಿಮಾನವಿದೆ (ಎತ್ತರ 7 ಮೀ.). ಮೂಲ ಗುಡಿಯನ್ನು ಕೆಂಪು ಮರಳುಗಲ್ಲಿನಿಂದ ಕಟ್ಟಲಾಗಿದೆ. ಬಾದಾಮಿ ಮತ್ತು ಆಸುಪಾಸಿನಲ್ಲಿ ದೊರೆಯುವ ಪಟ್ಟಿಗಳಿರುವ ಕೆಂಪು ಮರಳುಗಲ್ಲನ್ನು ದೂರದ ಯಾವುದೋ ಭಾಗದಿಂದ ಶ್ರಮವಹಿಸಿ ಸಾಗಿಸಿ ಇಲ್ಲಿ ದೇವಾಲಯವನ್ನು ಕಟ್ಟಿರುವುದೂ ಒಂದು ವಿಶೇಷ ಸಂಗತಿ.

ದೇವಾಲಯದ ಅಧಿಷ್ಠಾನದಲ್ಲಿ ಉಪಾನ (ಹೂತು ಹೋಗಿದೆ), ಜಗತಿ, ತ್ರಿಪಟ್ಟ ಕುಮುದ, ಕಂಠ (ಕಂಪ ಎನ್ನಲೂ ಅನ್ನಬಹುದು) ಮತ್ತು ಕಪೋತಗಳಿವೆ. ಕಪೋತಕ್ಕೆ ಅಪೂರ್ಣವಾಗಿರುವ ಕೂಡುಗಳ ಅಲಂಕರಣವಿದೆ. ಭಿತ್ತಿಯಲ್ಲಿ ಸಣ್ಣದಾದ ನೀಳವಾದ, ಎಲ್ಲ ವಿವರಗಳಿಂದ ಕೂಡಿದ ಅರೆಗಂಬಗಳನ್ನು ಸಾಲಾಗಿ ಬಿಡಿಸಲಾಗಿದೆ. ಗರ್ಭಗುಡಿಯ ಗೋಡೆಯ ಮೂರೂ ಮುಖಗಳ ಮಧ್ಯಭಾಗದಲ್ಲಿ ಒಂದೊಂದು ಕೋಷ್ಠ ರೀತಿಯ ಅಲಂಕರಣ ಕಾಣಬರುತ್ತದೆ. ದಕ್ಷಿಣ ಕೋಷ್ಠಕ್ಕೆ ತ್ರಿಕೋನಾಕಾರದ ಅಥವಾ ಗೇಬಲ್ಲಿನಾಕಾರದ ತೋರಣವಿದ್ದರೆ, ಉತ್ತರದ ಕೋಷ್ಠಕ್ಕೆ ಬಿಲ್ಲಿನಾಕಾರದ ತೋರಣವಿದೆ. ಅಲ್ಲದೆ ಎರಡೂ ಕೋಷ್ಠಗಳಲ್ಲಿ ಇಳಿಬಿದ್ದಿರುವ ಜೋಡಿ ಬಾಳೆ ಮೊಗ್ಗಿನಾಕಾರದ ಅಲಂಕರಣವೂ ಇದೆ. ಇಷ್ಟಾದರೂ ಈ ಭಾಗ ಕೆತ್ತನೆಯಲ್ಲಿ ಇನ್ನೂ ಅಪೂರ್ಣವೇ ಎನಿಸುತ್ತದೆ.

ಭಿತ್ತಿಯ ಮೇಲಿನ ಕಪೋತವೂ ಸಹ ಅಪೂರ್ಣ ಕೂಡುಗಳನ್ನು ಹೊಂದಿದೆ. ಕೈಪಿಡಿ ಅಥವಾ ಹಾರದಲ್ಲಿ ಕೂಡ ಪಂಜರ, ಶಾಲ ಮಂಟಪಗಳ ಸಾಲಿದೆ. ಇದೂ ಸಹ ಅಪೂರ್ಣ ಕೆಲಸದ್ದಾಗಿದೆ. ಅಂತರಾಳದ ಹೊರ ಗೋಡೆ ಸಮತಟ್ಟಾಗಿದ್ದು ಗಾರೆಯಿಂದ ಗಿಲಾವ್ ಮಾಡಿದೆ. ಗರ್ಭಗೃಹದ ಮೇಲೆ ಸಣ್ಣದಾದ ದ್ವಿತಲ ವಿಮಾನವಿದೆ. ಮೇಲಿನ ಹಂತ ಕೆಳಗಿನ ಹಂತದ ಅರ್ಧ ಪ್ರಮಾಣದಲ್ಲಿ ನಿರ್ಮಿತವಾಗಿದೆ. ಈ ಹಂತವು ಕೆಳಗಿನ ಹಂತದಂತೆಯೇ ಕಂಡರೂ ಇಲ್ಲಿ ಹಾರದ ಅಲಂಕರಣವಿಲ್ಲ. ಎರಡನೆಯ ತಲದ ಮೇಲೆ ಎತ್ತರವಾದ ಹಾಗೂ ಕಿರಿದಾದ ಗ್ರೀವವಿದ್ದು, ಮೇಲ್ಗಡೆ ಚೌಕ-ಗುಮ್ಮಟಾಕಾರವಾದ ಶಿಖರವಿದೆ. ಶಿಖರದ ನಾಲ್ಕೂ ಮುಖಗಳಲ್ಲಿ ಅಪೂರ್ಣ ಕೂಡುಗಳು, ಮೇಲ್ಗಡೆ ಸ್ತೂಪಿ ಇವೆ.



1. ಮಹಿಷಮರ್ದಿನಿ ದೇವಾಲಯ, ಹಂಪೆ



2. ಗರ್ಭಗೃಹ (ವಿಮಾನ)



3. ಮಹಿಷಮರ್ದಿನಿ

ವಿಮಾನದ ಎಲ್ಲಾ ಭಾಗಗಳನ್ನೂ ನಿಖರವಾಗಿ, ಸ್ಪಷ್ಟವಾಗಿ, ಪರಿಮಾಣಬದ್ಧವಾಗಿ ನಿರ್ಮಿಸಲಾಗಿದ್ದರೂ, ಅಲಂಕಾರಗಳು, ವಿವರಗಳು ಅಪೂರ್ಣವಾಗಿ ಸಾಧಾರಣ ದೇವಾಲಯದಂತೆ ಕಾಣುತ್ತದೆ. ಒಂದು ಪಕ್ಷ ಎಲ್ಲಾ ಅಲಂಕಾರಿಕ ಕೆತ್ತನೆಗಳೂ ಪೂರ್ಣವಾಗಿದ್ದಲ್ಲಿ, ಈ ದೇವಾಲಯ ಅದರ ಪರಿಮಾಣಬದ್ಧ ಆಕೃತಿಯಿಂದಾಗಿ ಒಂದು ಉತ್ಕೃಷ್ಟ ದ್ರಾವಿಡ ದೇವಾಲಯವಾಗುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ.

ವಿಮಾನದ ಮುಂಭಾಗದಲ್ಲಿ, ಮಧ್ಯದ ತಲಕ್ಕೆ ಸಮನಾಗಿ, ಉದ್ದವಾದ, ಕಮಾನಿನಾಕಾರದ ಶುಕನಾಸವನ್ನು ನಿರ್ಮಿಸಲಾಗಿದೆ. ಈ ಶುಕನಾಸ ಹೆಚ್ಚು ಉದ್ದವಾಗಿದ್ದು, ಜೊತೆಗೆ ಸಂಪೂರ್ಣವಾಗಿ ಗಾರೆಯಿಂದ ಮುಚ್ಚಲ್ಪಟ್ಟಿದ್ದು, ದೇವಾಲಯದ, ಅದರಲ್ಲೂ ವಿಮಾನದ ಅಂದವನ್ನು ಕೆಡಿಸಿದೆ. ವಿಮಾನದ ಮೇಲ್ಭಾಗ ಮತ್ತು ಶುಕನಾಸದ ಭಾಗ ಪೊಳ್ಳಾಗಿರುವುದು ಈ ದೇವಾಲಯದ ಒಂದು ವೈಶಿಷ್ಟ್ಯ.[8]

ಅಂತರಾಳದ ದ್ವಾರ ಬಂಧ ಈ ದೇವಾಲಯದ ಒಂದು ಮುಖ್ಯ ಆಕರ್ಷಣೆ. ಕರಿಯ ಕಲ್ಲಿನಿಂದ ಕೆತ್ತಲಾದ ಈ ದ್ವಾರ ಬಂಧದಲ್ಲಿ ವಿಭಿನ್ನ ರೀತಿಯ ಶಾಖೆಗಳು ಮತ್ತು ವಾಸ್ತು ಚೌಕಟ್ಟನ್ನು ಕಾಣಬಹುದು. ಇಕ್ಕೆಲದ ಕೆಳಭಾಗದಲ್ಲಿ ಪೂರ್ಣ ಕುಂಭವನ್ನು ಹಿಡಿದು ನಿಂತಿರುವ ಜಲದೇವತೆಗಳಾದ ಗಂಗ ಯಮುನೆಯರು, ತ್ರಿಶೂಲ, ಡಮರು, ಗದೆಗಳನ್ನು ಹಿಡಿದು ಅಭಯ ಮುದ್ರೆಯಲ್ಲಿರುವ ದ್ವಾರಪಾಲಕರು ಇದ್ದಾರೆ. ದ್ವಾರದ ಚೌಕಟ್ಟಿಗೆ ಆಸರೆಯಾಗಿ ಸಾಲಂಕೃತ ಸ್ತಂಭಿಕೆಗಳು, ಅವುಗಳ ಪಕ್ಕಗಳಲ್ಲಿ ವ್ಯಾಳ, ಲತೆ, ಕಮಲದ ದಳ ಮತ್ತಿತರ ಚಿತ್ರ ಪಟ್ಟಿಕೆಗಳು ಇಕ್ಕೆಲಗಳಲ್ಲಿ ಸಮವಾಗಿ ಕಂಡುಬರುತ್ತವೆ. ಸ್ತಂಭಿಕೆಗಳ ಮೇಲೆ ಕಪೋತವಿದ್ದು, ಸ್ತಂಭಿಕೆಗಳಿಗೆ ಸಮಾನವಾಗಿ ಮೇಲ್ಗಡೆ ಒಂದೊಂದು ಸಣ್ಣ ಶಿಖರಗಳಿವೆ. ಕಪೋತದ ಮೇಲ್ಗಡೆ ಮತ್ತು ಕೆಳಗಡೆ ಲಲಾಟ ಬಿಂಬವಾಗಿ ಮಹಿಷಮರ್ದಿನಿ ಮತ್ತು ಗಜಲಕ್ಷ್ಮಿ ಶಿಲ್ಪಗಳು ಕ್ರಮವಾಗಿ ಇವೆ. ಮಹಿಷನನ್ನು ಉದ್ದವಾದ ತ್ರಿಶೂಲದಿಂದ ಇರಿಯುತ್ತಿರುವ ದೇವಿ ಚತುರ್ಭುಜಳಾಗಿ ಮೇಲಿನ ಎರಡೂ ಕೈಗಳಲ್ಲಿ ಶಂಖ ಚಕ್ರಗಳನ್ನು ಹಿಡಿದಿದ್ದಾಳೆ.


ದ್ವಾರಬಂಧದಲ್ಲಿ ಈ ರೀತಿಯ ಮಹಿಷಮರ್ದಿನಿಯನ್ನು ಲಲಾಟ ಬಿಂಬವಾಗಿ ರೂಪಿಸಿರುವುದು ಅಪರೂಪ. ಗರ್ಭಗುಡಿಯಲ್ಲೂ ಸಹ ಇದೇ ರೀತಿಯ ಮಹಿಷಮರ್ದಿನಿಯ ಪ್ರತಿಷ್ಠಾಪನೆಯನ್ನು ನೋಡಿದರೆ ಈ ದೇವಾಲಯ ಪ್ರತ್ಯೇಕವಾಗಿ ಮಹಿಷಮರ್ದಿನಿಗಾಗಿಯೇ ನಿರ್ಮಿತವಾದ ದೇವಾಲಯವೆಂದು ಖಚಿತವಾಗುತ್ತದೆ. ಮಹಿಷಮರ್ದಿನಿಗಾಗಿಯೇ ಪ್ರತ್ಯೇಕವಾಗಿ ನಿರ್ಮಿತವಾದ ದೇವಾಲಯಗಳು ಅಪರೂಪ. ಬೇರೆ ಯಾವುದೋ ಉದ್ದೇಶಕ್ಕಾಗಿ ನಿರ್ಮಾಣವಾದ ದೇವಾಲಯಗಳಲ್ಲಿ ಮಹಿಷಮರ್ದಿನಿಯನ್ನು ಸ್ಥಾಪಿಸಿರುವುದು ಅಥವಾ ಮಹಿಷಮರ್ದಿನಿ ಪರಿವಾರ ದೇವತಾ ಗೃಹಗಳಲ್ಲಿ ಕಾಣಬರುವುದು ಸಾಮಾನ್ಯ. ಆದರೆ ಈ ದೇವಾಲಯ ಮಹಿಷಮರ್ದಿನಿಗಾಗಿಯೇ ನಿರ್ಮಾಣವಾಗಿದೆ ಎಂಬ ಅಪರೂಪದ ಸಂಗತಿ ದೇವಾಲಯದ ವೈಶಿಷ್ಟ್ಯವನ್ನು ಸಹ ಹೆಚ್ಚಿಸುತ್ತದೆ. ದುರ್ಗಾ ದೇವಾಲಯಗಳು ಕರ್ನಾಟಕದಲ್ಲಿ ಅನೇಕ ಕಡೆ ನಮಗೆ ಕಾಣಬರುತ್ತವೆ. ಆದರೆ ದೇವಾಲಯದ ಮೂಲ ಶಿಲ್ಪವಾಗಿ ಮತ್ತು ಲಲಾಟಬಿಂಬದಲ್ಲೂ ಮಹಿಷಮರ್ದಿನಿ ಶಿಲ್ಪ ಕಾಣಬರುವುದು ಪ್ರಾಯಶಃ ಇದೊಂದೇ ದೇವಾಲಯದಲ್ಲಿ. ಈ ನಿಟ್ಟಿನಲ್ಲಿ ನೋಡಿದಾಗ ಈ ಮಹಿಷಮರ್ದಿನಿ ದೇವಾಲಯ ಒಂದು ಅಪೂರ್ವ ವಾಸ್ತುಕೃತಿ.

ದೇವಾಲಯದ ಮೂಲವಿಗ್ರಹ (1.92 ಮೀ. ಎತ್ತರ) ಬಹಳ ಪ್ರಾಚೀನವಾದುದೆಂದು ಅದರ ಲಕ್ಷಣಗಳಿಂದ ತಿಳಿದುಬರುತ್ತದೆ. ಮುಖದಲ್ಲಿ ಮಂದಹಾಸವಿದೆ. ಅಷ್ಟಬಾಹುಗಳಿಂದ ಕೂಡಿದ ದೇವಿ ಚಕ್ರವನ್ನು ಪ್ರಯೋಗ ಮುದ್ರೆಯಲ್ಲಿ ಹಿಡಿದಿದ್ದಾಳೆ. ಈ ಚಕ್ರದ ವಿಶೇಷತೆ ಎಂದರೆ ಇದು ಸ್ವಲ್ಪ ಚಪ್ಪಟೆಯಾದ ಬಳೆಯ ರೀತಿಯಲ್ಲಿದೆ. ಬಾಣ, ಖಡ್ಗ, ಶೂಲಗಳನ್ನು ಬಲಗೈಗಳಲ್ಲೂ, ಶಂಖ, ಬಿಲ್ಲು, ಗುರಾಣಿಗಳನ್ನು ಎಡಗೈಗಳಲ್ಲೂ ಹಿಡಿದಿದ್ದಾಳೆ. ಎಡಗಡೆಯ ನಾಲ್ಕನೆಯ ಕೈ ಮಹಿಷನ ನಾಲಿಗೆಯನ್ನು ಹಿಡಿದು ಹೊರಕ್ಕೆಳೆಯುತ್ತಿದೆ. ಬಲಗಾಲನ್ನು ಭದ್ರವಾಗಿ ನೆಲದ ಮೇಲೂರಿ, ಎಡಪಾದವನ್ನು ಮಹಿಷನ ಬೆನ್ನಿನ ಮೇಲೆ ಒತ್ತಿದ್ದಾಳೆ ದೇವಿ. ಕರಂಡ ಮಕುಟ, ಪತ್ರ ಕುಂಡಲ, ಸರ, ಬಳೆ ಇತ್ಯಾದಿಗಳಿಂದ ಅಲಂಕೃತವಾಗಿದೆ ಶಿಲ್ಪ. ದೇವಿಯ ಬಲಗಡೆ ಕೆಳಭಾಗದಲ್ಲಿ ಅವಳ ವಾಹನ ಸಿಂಹವನ್ನು ಕಂಡರಿಸಲಾಗಿದೆ. ಇಡೀ ವಿಗ್ರಹಕ್ಕೆ ಬಳ್ಳಿ ಸುರುಳಿಗಳ ಪ್ರಭಾವಳಿ ಇದೆ. ಶಿಲ್ಪದ ಈ ಲಕ್ಷಣಗಳಿಂದಾಗಿ ಸಂಹಾರಮೂರ್ತಿಯನ್ನು ಮೂಲ ಶಿಲ್ಪವನ್ನಾಗಿ ಹೊಂದಿರುವ ಅತಿ ಪ್ರಾಚೀನ ದೇವಾಲಯ ಇದಾಗಿದೆ.

ವಾಸ್ತು ಮತ್ತು ಶಿಲ್ಪ ಶೈಲಿಯ ಆಧಾರಗಳ ಮೇಲೆ ಈ ದೇವಾಲಯವನ್ನು ಮತ್ತು ಅದರ ಶಿಲ್ಪವನ್ನು ಕ್ರಿ.ಶ. 9-10ನೇ ಶತಮಾನಗಳಿಗೆ ಸೇರಿಸಬಹುದು. ದೇವಕುಂಜರಿ ಹಾಗೂ ಇನ್ನಿತರರ ಅಭಿಪ್ರಾಯವೂ ಇದೇ ಆಗಿದೆ. ದೇವಕುಂಜರಿಯವರು ಈ ಬಗ್ಗೆ ಬರೆಯುತ್ತಾ ''ಶುಕನಾಸದ ಅನುಪಸ್ಥಿತಿ ಮತ್ತು ಪಲ್ಲವ ಹಾಗೂ ದಾಕ್ಷಿಣಾತ್ಯ ಶೈಲಿಗಳೊಂದಿಗೆ ಸಮೀಕರಿಸಬಹುದಾದ ಲಕ್ಷಣಗಳು ಈ ದುರ್ಗಾ ದೇವಾಲಯಕ್ಕೆ ಪ್ರಾಚೀನ ಕಾಲಮಾನವನ್ನು ಸೂಚಿಸುತ್ತದೆ'' ಎಂದಿದ್ದಾರೆ.[9]



4. ಅಂತರಾಳ ದ್ವಾರಬಂಧದ ಮೇಲಿನ ಮಹಿಷಮರ್ದಿನಿ ಮತ್ತು ಗಜಲಕ್ಷ್ಮಿ



5. ಅಂತರಾಳ ದ್ವಾರಬಂಧದ ಮೇಲಿನ ದ್ವಾರಪಾಲ

ಹಾಗಿದ್ದ ಪಕ್ಷದಲ್ಲಿ ಬಳ್ಳಾರಿ ಜಿಲ್ಲೆಯ ಹಂಪೆಯಲ್ಲಿ ಕ್ರಿ.ಶ. 9-10ನೇ ಶತಮಾನಗಳಲ್ಲಿ ಪಲ್ಲವ ಶೈಲಿಯ ವಾಸ್ತು ಲಕ್ಷಣಗಳು ಹೇಗೆ ನುಸುಳಿಬಂದುವು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಕ್ರಿ.ಶ. 9-10ನೇ ಶತಮಾನಗಳಲ್ಲಿ ದಕ್ಷಿಣ ಕರ್ನಾಟಕದಲ್ಲಿ ದಾಕ್ಷಿಣಾತ್ಯ ಅಥವಾ ಪಲ್ಲವ-ಚೋಳ ಕಲೆಯ ಪ್ರಭಾವವನ್ನು ಹೊಂದಿದ್ದ ವಾಸ್ತುಶೈಲಿಗಳೆಂದರೆ ಗಂಗ ಶೈಲಿ ಮತ್ತು ನೊಳಂಬ ಶೈಲಿ. ಗಂಗರು ತುಂಗಭದ್ರಾ ನದಿಯಿಂದ ಬಹಳ ದಕ್ಷಿಣಕ್ಕೆ ನೆಲೆಸಿದ್ದವರು. ಆದ್ದರಿಂದ ಇವರ ಶೈಲಿಯ ಪ್ರಭಾವ ತುಂಗಭದ್ರಾ ಭಾಗದಲ್ಲಿ ಕಂಡುಬರುವ ಸಂಭವ ಕಡಿಮೆ. ನೊಳಂಬರು ನೊಳಂಬವಾಡಿ-32000 ಪ್ರಾಂತ್ಯವನ್ನು ಆಳಿದವರು. ಈ ಪ್ರಾಂತ್ಯ ಬಳ್ಳಾರಿ ಜಿಲ್ಲೆಯ ದಕ್ಷಿಣ ಭಾಗಗಳನ್ನೂ ಸಹ ಒಳಗೊಂಡಿತ್ತು. ಕ್ರಿ.ಶ. 10ನೇ ಶತಮಾನದ ಆದಿ ಭಾಗದಲ್ಲಿ ನೊಳಂಬ ರಾಜ್ಯ ಮಾಸೆಯವಾಡಿ-140 ಮತ್ತು ಕೋಗಳಿ-500 ಪ್ರಾಂತ್ಯಗಳ ಮೇಲೂ ವಿಸ್ತರಿಸಿತ್ತು, ಈ ಪ್ರಾಂತ್ಯಗಳು ಇಂದಿನ ಬಳ್ಳಾರಿ ಮತ್ತು ಧಾರವಾಡ ಜಿಲ್ಲೆಗಳ ಭಾಗಗಳನ್ನು ಒಳಗೊಂಡಿದ್ದವು ಎಂದು ಹೇಳಬಹುದು. ನೊಳಂಬ ಅಯ್ಯಪದೇವನ (ಕ್ರಿ.ಶ. 897-934) ಮತ್ತು ಆತನ ಮಗ ಬೀರನೊಳಂಬ ಅಣ್ಣಿಗನ (ಕ್ರಿ.ಶ. 920-37) ಶಾಸನಗಳು ಬಳ್ಳಾರಿ ಜಿಲ್ಲೆಯಲ್ಲಿ ಹಂಪೆಯ ಆಸುಪಾಸಿನಲ್ಲಿ ದೊರೆತಿವೆ.[10]

ಈ ಕಾರಣಗಳಿಂದಾಗಿ ನೊಳಂಬರ ರಾಜಕೀಯ ಪ್ರಾಭಲ್ಯ, ತನ್ಮೂಲಕ ನೊಳಂಬವಾಡಿಯ ಕಲೆ ಈ ಸ್ಥಳಗಳಲ್ಲಿ ಅಪರೂಪವಾಗಿಯಾದರೂ ಕಾಣಬರುವುದು ಸಹಜ. ಹಂಪೆ ಅಥವಾ ಪಂಪಾಕ್ಷೇತ್ರ ಆ ಕಾಲದ ಮುಖ್ಯ ಧಾರ್ಮಿಕ ಕೇಂದ್ರಗಳಲ್ಲಿ ಒಂದಾಗಿದ್ದು ಪ್ರಾಯಶಃ ನೊಳಂಬ ರಾಜರು ಪಂಪಾಕ್ಷೇತ್ರದಲ್ಲಿ ಈ ದುರ್ಗಾ ದೇವಾಲಯವನ್ನು ಕಟ್ಟಿಸಿರಬಹುದು. ಪವಿತ್ರ ಕ್ಷೇತ್ರಗಳನ್ನು ಸಂದರ್ಶಿಸಿದಾಗ ಅಲ್ಲಿ ತಮ್ಮ ರಾಜಕೀಯ ನೆಲೆ ಇಲ್ಲದಿದ್ದರೂ ಆ ಸ್ಥಳದಲ್ಲಿ ದೇವಾಲಯವನ್ನು ಕಟ್ಟಿಸುವುದು ಪ್ರಾಚೀನ ಕಾಲದಿಂದಲೂ ಬಂದಿರುವಂತಹ ಒಂದು ಪದ್ಧತಿ. ಇದರಿಂದಾಗಿ ನೊಳಂಬ ರಾಜರು ಇಲ್ಲಿ ಈ ದೇವಾಲಯವನ್ನು ಕಟ್ಟಿಸಿರಬಹುದು. ಈ ರೀತಿ ದೇವಾಲಯಗಳನ್ನು ಕಟ್ಟಿಸುವಾಗ ತಾಯ್ನಾಡಿನ ಶೈಲಿಯನ್ನು ಅನುಸರಿಸುವುದು ಸಾಮಾನ್ಯ. ಇದಕ್ಕೆ ಚರಿತ್ರೆಯಲ್ಲಿ ಉದಾಹರಣೆಗಳಿವೆ. ಯತಿಶ್ರೇಷ್ಠ ರಾಮಾನುಜಾಚಾರ್ಯರು ತೊಣ್ಣೂರಿನಲ್ಲಿ ಕಟ್ಟಿಸಿರುವ ದೇವಾಲಯಗಳೆಲ್ಲವೂ ಚೋಳ ಶೈಲಿಯಲ್ಲಿ (ದ್ರಾವಿಡ) ತಮಿಳುನಾಡಿನ ಶಿಲ್ಪಿಗಳಿಂದ ನಿರ್ಮಿತವಾಗಿವೆ. ಚೋಳ ಶೈಲಿಯ ದೇವಾಲಯಗಳು ಅನೇಕ ಸಂಖ್ಯೆಯಲ್ಲಿ ಕರ್ನಾಟಕದಲ್ಲಿವೆ. ಹೊಯ್ಸಳ ದೊರೆಗಳು, ಹೊಯ್ಸಳ ಶೈಲಿಯಲ್ಲಿ ತಮಿಳುನಾಡಿನಲ್ಲಿ ದೇವಾಲಯಗಳನ್ನು ನಿರ್ಮಿಸಿದ್ದಾರೆ.

ಪ್ರಸ್ತುತ ಮಹಿಷಮರ್ದಿನಿ ದೇವಾಲಯವು ನೊಳಂಬ ಶೈಲಿಯ ಅನೇಕ ವಾಸ್ತುಲಕ್ಷಣಗಳನ್ನು ಮೈಗೂಡಿಸಿಕೊಂಡು ನಿರ್ಮಿತವಾಗಿದೆ. ಅಧಿಷ್ಠಾನ, ಭಿತ್ತಿಯ ಲಕ್ಷಣಗಳು ಪಲ್ಲವ ಶೈಲಿಯ ಲಕ್ಷಣಗಳನ್ನು ಹೊಂದಿವೆ ಎಂಬ ಅಭಿಪ್ರಾಯವು ಆಗಲೇ ಇದೆ. ಹೇಮಾವತಿಯ ದೊಡ್ಡೇಶ್ವರ ದೇವಾಲಯದ ಭಿತ್ತಿಯ ವಿವರಗಳಿಗೂ ಪ್ರಸ್ತುತ ದೇವಾಲಯದ ಭಿತ್ತಿಯ ವಿವರಗಳಿಗೂ ಸಾಕಷ್ಟು ಸಾಮ್ಯವಿದೆ. ಅರೆಗಂಬಗಳ ರೂಪರೇಷೆಗಳು ಒಂದೇ ರೀತಿಯದಾಗಿವೆ. ಭಿತ್ತಿಕೋಷ್ಠದ ಮೇಲಿನ ಅಲಂಕರಣಗಳು ಹೇಮಾವತಿಯ ಅಕ್ಕಗುಡಿಯ ದಕ್ಷಿಣ ಕೋಷ್ಠದ ಲಕ್ಷಣಗಳನ್ನು ಪ್ರತಿಬಿಂಬಿಸುತ್ತವೆ. ಇವೆಲ್ಲಕ್ಕಿಂತಲೂ ಮಿಗಿಲಾಗಿ ಹೇಮಾವತಿಯ ನೊಳಂಬ ದ್ವಾರ ಬಂಧಗಳೂ ಹಂಪಿಯ ದೇವಾಲಯದ ದ್ವಾರಬಂಧವೂ ಹೆಚ್ಚು ಕಡಿಮೆ ಏಕರೀತಿಯವು. ದ್ವಾರಬಂಧದ ವಿವಿಧ ಶಾಖೆಗಳು, ಅವುಗಳ ಅಲಂಕರಣಾ ವಿವರ, ವಿಧಾನಗಳೂ, ದ್ವಾರಪಾಲಕ, ಗಂಗ ಯಮುನೆಯರು ಇತ್ಯಾದಿಗಳೆಲ್ಲವೂ ನೊಳಂಬ ಶೈಲಿಯಲ್ಲಿ ಕಂಡು ಬರುವಂಥವುಗಳೇ ಆಗಿವೆ. ನೊಳಂಬರು ದ್ವಾರಬಂಧವನ್ನು ನಿರ್ಮಿಸಲು ವಿಶೇಷವಾದ, ಸೂಕ್ಷ್ಮ ರಚನೆಯುಳ್ಳ ಕಲ್ಲನ್ನು ಬಳಸುತ್ತಿದ್ದರು. ಇದೇ ವಿಧಾನ ಹಂಪೆಯ ದುರ್ಗಾ ದೇವಾಲಯದಲ್ಲೂ ಕಾಣಬರುತ್ತದೆ. ಕಟ್ಟಡಕ್ಕೆ ಕೆಂಪು ಮರಳುಗಲ್ಲನ್ನೂ ದ್ವಾರಬಂಧಕ್ಕೆ ಕರೀ ಕಣಶಿಲೆಯನ್ನೂ ಬಳಸಲಾಗಿದೆ. ಇದು ದ್ವಾರಬಂಧಕ್ಕೆ ವಿಜಾತೀಯ ಕಲ್ಲನ್ನು ಬಳಸುವ ನೊಳಂಬ ಸಂಪ್ರದಾಯವನ್ನು ಪ್ರತಿಬಿಂಬಿಸುತ್ತದೆ.

ಗರ್ಭಗೃಹದಲ್ಲಿರುವ ಮಹಿಷಮರ್ದಿನಿಯ ಶಿಲ್ಪ, ಶೈಲಿಯಲ್ಲಿ ಸ್ಥೂಲವಾಗಿ ಚಾಲುಕ್ಯ ಅಥವಾ ಕರ್ನಾಟಕದ ಮಹಿಷಮರ್ದಿನಿಯ ಶಿಲ್ಪ ಪ್ರಕಾರವನ್ನು ಪ್ರತಿಬಿಂಬಿಸುತ್ತದೆ. ಆದರೆ ಈ ಶಿಲ್ಪದ ಒಂದು ಅಂಶ ಮಾತ್ರ ಅತ್ಯಂತ ಅಪೂರ್ವವಾಗಿದ್ದು, ಅದಕ್ಕೆ ಸಾದೃಶ್ಯ ಕೇವಲ ಒಂದೇ ಒಂದು ನೊಳಂಬ ಮಹಿಷಮರ್ದಿನಿ ಶಿಲ್ಪದಲ್ಲಿ ಮಾತ್ರ ಕಾಣಬರುತ್ತದೆ. ಪ್ರಸ್ತುತ ಹಂಪೆಯ ಮಹಿಷಮರ್ದಿನಿ ಶಿಲ್ಪವು ಮೇಲಿನ ಬಲಗೈ ಒಂದರಲ್ಲಿ ಪ್ರಯೋಗ ಚಕ್ರವನ್ನು ಹಿಡಿದಿದೆ ಎಂದು ಆಗಲೇ ಹೇಳಿದೆ. ಈ ಚಕ್ರದ ಆಕಾರ ಸ್ವಲ್ಪ ಚಪ್ಪಟೆಯಾದ ಬಳೆಯ ಆಕಾರದಲ್ಲಿದೆ. ಸಾಮಾನ್ಯವಾಗಿ ಇದುವರೆಗೆ ವರದಿಯಾಗಿರುವ ಯಾವ ಮಹಿಷಮರ್ದಿನಿ ಶಿಲ್ಪದಲ್ಲೂ ಈ ರೀತಿಯ ಚಕ್ರದ ನಿರೂಪಣೆ ಇಲ್ಲ. ಹೇಮಾವತಿಯ (ಮೊದಲು ದೊಡ್ಡೇಶ್ವರ ದೇವಾಲಯದಲ್ಲಿದ್ದು ಈಗ ಅಲ್ಲಿಯ ವಸ್ತು ಸಂಗ್ರಹಾಲಯದಲ್ಲಿರುವ) ಮಹಿಷಮರ್ದಿನಿ ಶಿಲ್ಪ ಮತ್ತು ಪ್ರಸ್ತುತ ಹಂಪೆಯ ಶಿಲ್ಪಗಳು ಮಾತ್ರ ಈ ರೀತಿಯ ಚಕ್ರ ನಿರೂಪಣೆಯನ್ನು ಹೊಂದಿವೆ. ಇದರಿಂದಾಗಿ ಈ ಎರಡೂ ಶಿಲ್ಪಗಳ ಕಂಡರಣೆಯಲ್ಲಿ ಒಂದೇ ಮೂಲ ಮತ್ತು ಪರಸ್ಪರ ಪ್ರಭಾವವಿದೆ ಎನ್ನಬಹುದು. ಹೇಮಾವತಿಯ ಶಿಲ್ಪವೂ ಸಹ

ಶೈಲಿಯ ದೃಷ್ಟಿಯಿಂದ ಕ್ರಿ.ಶ. 9-10ನೇ ಶತಮಾನಗಳಿಗೆ ಸೇರುವಂತಹ ಕೃತಿ. ಆದ್ದರಿಂದ ಹಂಪೆಯ ಮತ್ತು ಹೇಮಾವತಿಯ ನೊಳಂಬ ಮಹಿಷಮರ್ದಿನಿ ಶಿಲ್ಪಗಳು ಒಂದೇ ಶಿಲ್ಪ ಸಾಲು ಅಥವಾ ಪರಂಪರೆಗೆ ಸೇರಿದ ಅಪೂರ್ವ ಕೃತಿಗಳೆನ್ನಬಹುದು.

ವಾಸ್ತು ಮಾದರಿಯಲ್ಲಿ ನೊಳಂಬ ದೇವಾಲಯಗಳೊಂದಿಗೆ ಸಾಮ್ಯವಿರುವುದು, ದ್ವಾರಬಂಧದ ನಿರೂಪಣೆಯಲ್ಲಿ ನೊಳಂಬ ಶೈಲಿಯ ಲಕ್ಷಣಗಳಿರುವುದು, ದೇವಿಯ ಚಕ್ರಾಯುಧದ ನಿರೂಪಣೆಯಲ್ಲಿ ಕೇವಲ ನೊಳಂಬ ಶಿಲ್ಪದೊಂದಿದೆ ಮಾತ್ರ ಸಾದೃಶ್ಯವಿರುವುದು, ಮತ್ತು ಕನಿಷ್ಠವಲ್ಲದಿದ್ದರೂ ಕಡೆಯದಾಗಿ ಹಂಪೆಯ ಸಮೀಪದ ಪ್ರದೇಶಗಳಲ್ಲಿ 10ನೇ ಶತಮಾನದಲ್ಲಿ ನೊಳಂಬರ ನೇರ ಆಳ್ವಿಕೆ ಇದ್ದ ವಿಷಯ - ಈ ಎಲ್ಲಾ ಕಾರಣಗಳಿಂದಾಗಿ ಹಂಪೆಯ ಮಹಿಷಮರ್ದಿನಿ ದೇವಾಲಯ ನೊಳಂಬ ಶೈಲಿಯ ಹಾಗೂ ನೊಳಂಬ ರಾಜರಿಂದ ನಿರ್ಮಿತವಾಗಿರಬಹುದಾದ ದೇವಾಲಯವೆಂದು ಹೇಳಬಹುದು.

ಮೇಲೆ ಹೇಳಿರುವಂತೆ ಇಡೀ ದೇವಾಲಯವನ್ನು ಕೆಂಪು ಮರಳುಗಲ್ಲಿನಿಂದ ನಿರ್ಮಿಸಲಾಗಿದೆ.. ಈ ರೀತಿಯ ಶಿಲೆ ಹಂಪೆಯ ಆಸುಪಾಸಿನಲ್ಲಿ ಲಭ್ಯವಿಲ್ಲದಿರುವುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ದೂರದ ಯಾವುದೋ ಒಂದು ಖನಿಯಿಂದ ಕಲ್ಲನ್ನು ಕಡಿದು ತಂದಿರಬೇಕು. ದೇವಾಲಯ ನಿವೇಶನದ ಪಕ್ಕದಲ್ಲೇ ಸುಲಭವಾಗಿ ಇನ್ನೂ ಗಟ್ಟಿಯಾದ ಕಣಶಿಲೆಯು ಲಭ್ಯವಿದ್ದರೂ, ಮೃದುವಾದ ಈ ಕೆಂಪು ಮರಳುಗಲ್ಲನ್ನು ದೂರದ ಪ್ರಾಂತ್ಯದಿಂದ ಏಕೆ ಇಲ್ಲಿಗೆ ಆಮದು ಮಾಡಿಕೊಂಡರೆಂಬುದು ಮುಖ್ಯ ಪ್ರಶ್ನೆ. ಈ ರೀತಿಯ ಕಲ್ಲನ್ನು ಉಪಯೋಗಿಸಿರುವ ಪದ್ಧತಿ ಹಂಪೆಯ ಬೇರೆ ಯಾವ ದೇವಾಲಯದಲ್ಲೂ ಕಾಣಬರುವುದಿಲ್ಲ. ಹೀಗಾಗಿ ಕೆಂಪು ಮರಳುಗಲ್ಲನ್ನು ಆಮದು ಮಾಡಿ ಉಪಯೋಗಿಸಿರುವ ವಿಚಾರ ನಿಗೂಢವಾಗಿಯೇ ಇದೆ.

ಈ ಪ್ರಶ್ನೆಗೆ ಮುಂದಿನ ವಿವರಣೆ ಪ್ರಾಯಶಃ ಸರಿ ಎನಿಸಬಹುದು. ಈ ದೇವಾಲಯ ಮೂಲತಃ ಮಹಿಷಮರ್ದಿನಿಗಾಗಿಯೇ ನಿರ್ಮಿತವಾದ ದೇವಾಲಯ. ಈ ಅಂಶ ಅಂತರಾಳದ ಲಲಾಟ ಬಿಂಬದಿಂದ ಖಚಿತವಾಗುತ್ತದೆ. ಇಲ್ಲಿಯ ಮೂಲ ಶಿಲ್ಪ ದುರ್ಗಿಯು ಮಹಿಷನನ್ನು ಕೊಲ್ಲುತ್ತಿರುವ ಭಯಂಕರ ಸಂಹಾರಮೂರ್ತಿ. ಸಂಹಾರಮೂರ್ತಿಯು ರೌದ್ರ, ಭೀಭತ್ಸ, ಭಯಾನಕ, ಘೋರ ಮುಂತಾದ ಭಾವನೆಗಳ ಪ್ರತೀಕ. ಈ ರಸಗಳು, ಭಾವನೆಗಳು ರಕ್ತ ಅಥವಾ ರಕ್ತವರ್ಣದಿಂದ ಪ್ರತಿನಿಧಿಸಲ್ಪಡುತ್ತವೆ. ಇದರಿಂದಾಗಿ ಸಂಹಾರಮೂರ್ತಿ ದುರ್ಗಿಯ ದೇವಾಲಯವನ್ನು ನಿರ್ಮಿಸಲು ಶಿಲ್ಪಿಯು ಈ ರಸಗಳ ಪ್ರತೀಕವಾದ ಕೆಂಪು ಶಿಲೆಯೇ ಸೂಕ್ತವೆಂದು ಭಾವಿಸಿ ಬಳಸಿರಬೇಕು. ಈ ದೇವಾಲಯ ಅತ್ಯಂತ ಪ್ರಾಚೀನ ಸಂಹಾರಮೂರ್ತಿ ದೇವಾಲಯವೆಂದು ಖಚಿತವಾಗಿದೆ. ಪ್ರಾಯಶಃ ಆ ಕಾಲದಲ್ಲಿ ಸಂಹಾರಮೂರ್ತಿ ದೇಗುಲಕ್ಕೆ (ಲಭ್ಯವಿದ್ದಲ್ಲಿ) ಕೆಂಪು ಕಲ್ಲಿನ ಬಳಕೆ ಪ್ರಚಲಿತದಲ್ಲಿದ್ದಿರಬೇಕು. ಕ್ರಮೇಣವಾಗಿ ಈ ಪದ್ಧತಿಯನ್ನು ಕೈಬಿಟ್ಟಿರುವ ಸಾಧ್ಯತೆಯೂ ಇಲ್ಲದಿಲ್ಲ. ದೂರದಿಂದ ನೋಡಿದಾಕ್ಷಣ ಇದು ಸಂಹಾರಮೂರ್ತಿಯ ದೇಗುಲವೆಂದು ಗೋಚರವಾಗಬೇಕೆಂಬ ದೃಷ್ಟಿಯಿಂದ ಈ ರೀತಿಯ ಕೆಂಪು ಕಲ್ಲನ್ನು ಬಳಸಿದ್ದಿರಬಹುದು. ಈ ದೇವಾಲಯದ ಬಲಪಾರ್ಶ್ವದಲ್ಲಿ ಎಲ್ಲಾ ರೀತಿಯಲ್ಲೂ ಇದೇ ವಾಸ್ತು ಲಕ್ಷಣಗಳನ್ನು ಹೊಂದಿರುವ, ಇದೇ ಆಕಾರದ, ಇದೇ ಕಾಲದ, ಇದೇ ಗಾತ್ರದ ನಾಗನಂದೀಶ್ವರ ದೇವಾಲಯ ಬೂದು ಬಣ್ಣದ ಕಣಶಿಲೆಯಲ್ಲಿ ನಿರ್ಮಿತವಾಗಿದೆ. ಒಂದೇ ಕಾಲದಲ್ಲಿ, ಒಂದೇ ಶಿಲ್ಪ ಶೈಲಿಯಲ್ಲಿ ಒಂದೇ ಸ್ಥಳದಲ್ಲಿ ಒಂದೇ ಪಂಥದ ಎರಡು ದೇವಾಲಯಗಳು ವಿವಿಧ ಬಣ್ಣದ ಮಾಧ್ಯಮದಲ್ಲಿ ನಿರ್ಮಿತವಾಗಿರುವುದನ್ನು ನೋಡಿದಾಗ, ಸಂಹಾರಮೂರ್ತಿಯ ದೇಗುಲಕ್ಕೂ, ಶಾಂತಮೂರ್ತಿಯ ದೇಗುಲಕ್ಕೂ ವ್ಯತ್ಯಾಸವಿರಬೇಕೆಂಬ ರೂಢಿ ಇದ್ದು, ಶಿಲ್ಪಿಯು ಈ ದುರ್ಗಾ ದೇವಾಲಯಕ್ಕೆ ಕೆಂಪು ಕಲ್ಲನ್ನು ಬಳಸಿದ್ದಾನೆಂದು ವ್ಯಕ್ತವಾಗುತ್ತದೆ. ದೇವಾಲಯದ ವಾಸ್ತುವೂ ಸಹ ಮೂಲ ಶಿಲ್ಪವು ಪ್ರತಿನಿಧಿಸುವ ಧ್ಯೇಯಗಳ ಪ್ರತೀಕವಾಗಿರಬೇಕೆಂದು ಪ್ರಾಯಶಃ ಆಗಿನ ಕಾಲದ ನಂಬಿಕೆ ಇದ್ದಿರಬೇಕು ಅಥವಾ ಕನಿಷ್ಠ ಪಕ್ಷ ಶಿಲ್ಪಿಯ ಹಂಬಲವಾದರೂ ಆಗಿದ್ದಿರಬೇಕು.

ಒಟ್ಟಿನಲ್ಲಿ ಹೇಳುವುದಾದರೆ ಈ ಮಹಿಷಮರ್ದಿನಿ ದೇವಾಲಯ

1. ನಮಗೆ ನಿರ್ದಿಷ್ಟವಾಗಿ ತಿಳಿದಿರುವ ಅತ್ಯಂತ ಪ್ರಾಚೀನ ಹಾಗೂ ಮಹಿಷಮರ್ದಿನಿಗಾಗಿಯೇ ನಿರ್ಮಿತವಾಗಿರುವ ಏಕೈಕ ದೇವಾಲಯ.
2. ಲಲಾಟ ಬಿಂಬದಲ್ಲಿ ಮಹಿಷಮರ್ದಿನಿಯನ್ನು ಹೊಂದಿರುವ ಏಕೈಕ ಪ್ರಾಚೀನ ದೇವಾಲಯ.
3. ನೊಳಂಬ ಶೈಲಿಯಲ್ಲಿ ಹಂಪೆಯಲ್ಲಿ ನಿರ್ಮಿತವಾದ ದೇವಾಲಯ.
4. ಕೆಂಪು ಮರಳುಗಲ್ಲಿನ ಹಂಪೆಯ ಏಕೈಕ ದೇವಾಲಯ.
5. ಮೂಲ ದೇವತೆಯ ಧ್ಯೇಯ ಮತ್ತು ಭಾವನೆಗಳನ್ನು ವಾಸ್ತು ಮಾಧ್ಯಮದ ಮೂಲಕ ಪ್ರತಿಬಿಂಬಿಸುವ ಒಂದು ಅಪೂರ್ವ ದೇವಾಲಯ.

ಮೇಲೆ ಹೇಳಿದ ಈ ವಿಶೇಷ ಅಂಶಗಳಿಂದಾಗಿ ಪಂಪಾಕ್ಷೇತ್ರದ ವಿರೂಪಾಕ್ಷ ದೇವಾಲಯ ಸಂಕೀರ್ಣದ ಈ ಮಹಿಷಮರ್ದಿನಿ ದೇವಾಲಯವು ಒಂದು ವಿಶೇಷವೂ, ವಿಶಿಷ್ಟವೂ ಅನುಪಮವೂ ಆದ ವಾಸ್ತುಕೃತಿ ಎನ್ನಬಹುದು.

ಅಡಿ ಟಿಪ್ಪಣಿಗಳು

1. ಮತ್+ಮುಖ, ಮನ್+ಮುಖ=ಮನ್‌ಮುಖ>ಮನ್ಮಥ. ವಸುಂಧರಾ ಫಿಲಿಯೋಜಾ, 1982, *ಅಳಿದುಳಿದ ಹಂಪೆ*, ಬೆಂಗಳೂರು, ಪು. 27.
2. *ಸೌಇಂಇ.*, 4, ಸಂ. 260.
3. ಡಿ. ದೇವಕುಂಜರಿ, 1983, *ಹಂಪಿ*, ನ್ಯೂ ಡೆಲ್ಲಿ, ಪು. 57-58.
4. ವಸುಂಧರಾ ಫಿಲಿಯೋಜಾ, *ಅಳಿದುಳಿದ ಹಂಪೆ*, ಪು. 27-28.
5. ಫಿಲಿಪ್ ಬಿ. ವ್ಯಾಗ್ನರ್, 1991, "ಆರ್ಕಿಟೆಕ್ಚರ್ ಆಂಡ್ ಮಿಥಿಕ್ ಸ್ಪೇಸ್ ಅಟ್ ದಿ ಹೇಮಕೂಟ ಹಿಲ್: ಎ ಪ್ರಿಲಿಮಿನರಿ ರಿಪೋರ್ಟ್," *ವಿಜಯನಗರ: ಪ್ರೊಗ್ರೆಸ್ ಆಫ್ ರೀಸರ್ಚ್ 1984-87*, (ಸಂ.) ಡಿ.ವಿ. ದೇವರಾಜ್ ಮತ್ತು ಚನ್ನಬಸಪ್ಪ ಎಸ್. ಪಾಟೀಲ, ಮೈಸೂರು, ಪು. 142-148.
6. ಜಾರ್ಜ್ ಮಿಷಲ್, 1991, "ಆರ್ಕಿಟೆಕ್ಚರಲ್ ಡಾಕುಮೆಂಟೇಶನ್ ಅಟ್ ವಿಜಯನಗರ ಇನ್ 1987 ಆಂಡ್ 1988, ಹೇಮಕೂಟ ಹಿಲ್ ಆಂಡ್ ದಿ ವಿರೂಪಾಕ್ಷ ಟೆಂಪಲ್ ಕಾಂಪ್ಲೆಕ್ಸ್ ಅಟ್ ಹಂಪಿ", *ವಿಜಯನಗರ: ಪ್ರೊಗ್ರೆಸ್ ಆಫ್ ರೀಸರ್ಚ್ 1987-88*, (ಸಂ.) ಡಿ.ವಿ.ದೇವರಾಜ ಮತ್ತು ಚನ್ನಬಸಪ್ಪ ಎಸ್. ಪಾಟೀಲ, ಮೈಸೂರು, ಪು. 35-43.
7. ಚನ್ನಬಸಪ್ಪ ಎಸ್.ಪಾಟೀಲ, 1991 "ಪ್ರಿ-ವಿಜಯನಗರ ಟೆಂಪಲ್ಸ್ ಅಟ್ ಹಂಪಿ", *ವಿಜಯನಗರ: ಪ್ರೊಗ್ರೆಸ್ ಆಫ್ ರೀಸರ್ಚ್ 1987-88*, ಪು. 113-142.
8. *ವಿಜಯನಗರ: ಪ್ರೊಗ್ರೆಸ್ ಆಫ್ ರೀಸರ್ಚ್ 1984-87*, ಚಿತ್ರ 46.
9. ದೇವಕುಂಜರಿ, *ಹಂಪಿ*, ಪು. 59, ಟಿಪ್ಪಣಿ 1.
10. *ಸೌಇಂಇ.*, 9(1), ಸಂ. 57, ದಿನಾಂಕ ಕ್ರಿ.ಶ. 922, ಸೆಪ್ಟೆಂಬರ್ 9 (ಇದರಲ್ಲಿ ಅಯ್ಯಪದೇವ ರಾಷ್ಟ್ರಕೂಟ ಇಂದ್ರನ ಸಾಮಂತನಾಗಿದ್ದಾನೆ). *ಸೌಇಂಇ.*, 9(1), ಸಂ. 61 (ನಾಲ್ಕನೆಯ ಗೋವಿಂದನ ಸಾಮಂತನಾಗಿ). *ಆರಿಎ.*, 1961, ಸಂ. ಬಿ 440.

9. ವಿಜಯನಗರದ ಶ್ರೀರಂಗರಾಯನ ಅಪ್ರಕಟಿತ ದಾನ ಶಾಸನ

ಕೆಳದಿ ಗುಂಡಾಜೋಯಿಸ್

ದಕ್ಷಿಣ ಭಾರತದಲ್ಲಿ ಉಪಲಬ್ಧವಿರುವ ವಿಜಯನಗರ ಶಾಸನಗಳನ್ನು ಒಟ್ಟುಗೂಡಿಸಿ, ಸಂಶೋಧಕರಿಗೆ ಒಂದೆಡೆ ಲಭಿಸುವಂತೆ ಶಾಸ್ತ್ರೀಯ ಹಾಗೂ ವೈಜ್ಞಾನಿಕವಾಗಿ ಸಮೀಕರಿಸಿ, ಬಿ.ಆರ್. ಗೋಪಾಲ್‌ರವರು ಭಾರತ ಇತಿಹಾಸ ಸಂಶೋಧನಾ ಸಂಸ್ಥೆಯ ಸಹಾಯದಿಂದ ಹೊರ ತಂದಿದ್ದಾರೆ. ಕರ್ನಾಟಕ ಪುರಾತತ್ವ ಇಲಾಖೆಯು ಇದನ್ನು ಪ್ರಕಟಿಸಿ ಮಹೋಪಕಾರ ಮಾಡಿದೆ.[1] ಪ್ರಥಮ ಪ್ರಯತ್ನದಲ್ಲಿ ಲೋಪದೋಷಗಳಿದ್ದರೂ, ಅವುಗಳನ್ನು ಉಪವಿಭಾಗಗಳಲ್ಲಿ ಸೇರಿಸಲು ಅವಕಾಶವಿರುವುದರಿಂದ ಇಂತಹ ಸಂಶೋಧನಾ ಸೂಚೀ ಪ್ರಕಟಣೆಗಳು ಶೀಘ್ರಗತಿಯಲ್ಲಿ ಮಾರ್ಪಾಟಾಗುತ್ತಿರುವ ಈಗಿನ ವೈಜ್ಞಾನಿಕ ಪ್ರಪಂಚದಲ್ಲಿ ಅತ್ಯಮೂಲ್ಯ ಆಕರಗಳು. ಪಾಡಿಗಾರ್ ಶಾಸನ ಶಾಸ್ತ್ರ ವಾರ್ಷಿಕ ಸಂಚಿಕೆಯಲ್ಲಿ ಇದರ ಅವಶ್ಯಕತೆ ಕುರಿತು ಹೇಳಿದ್ದಾರೆ.[2] ಇಂತಹ ಸಂಪುಟಗಳು ಕನ್ನಡದಲ್ಲಿ ಪ್ರಕಟವಾಗುವುದು ಅಗತ್ಯ.

ಪ್ರಕೃತ ನನ್ನ ಈ ಪ್ರಬಂಧದಲ್ಲಿ ಸಂಪುಟಗಳಲ್ಲಿ ಕೈಬಿಟ್ಟಿರುವ ಹಲವಾರು ಶಾಸನಗಳನ್ನು ಪ್ರಸ್ತಾಪಿಸುವುದರೊಂದಿಗೆ ನನ್ನ ಸಮೀಕ್ಷೆಯಲ್ಲಿ ಕಂಡು ಬಂದ ಅಪ್ರಕಟಿತ ಶಾಸನ ಕುರಿತು ವಿದ್ವಾಂಸರಿಗೆ ಪರಿಚಯಿಸುವ ಉದ್ದೇಶವಾಗಿದೆ.

ಶಾಸನ ಪರಿಚಯ

ಕನ್ನಡ ಮೋಡೀ ಲಿಪಿಯಲ್ಲಿರುವ ಈ ಶಾಸನ ತೀರ್ಥಹಳ್ಳಿ ಶ್ರೀ ಶಾಮಾಚಾರ್‌ರವರಲ್ಲಿ ನನಗೆ ಲಭಿಸಿತು. ಅವರಿಗೆ ಅತ್ಯಂತ ಕೃತಜ್ಞನಿರುವೆನು. 76 ಸಾಲಿನ ಈ ಶಾಸನವು ಸಂಸ್ಕೃತ ಭಾಷೆಯಲ್ಲಿದೆ. ಶಾಸನದ ಕಾಲ ಶಾ.ಶ. 1562ನೇ ಚೈತ್ರ ಬಹುಳ 7 ಸೋಮವಾರ (ಕ್ರಿ.ಶ. 1640). ದಿನಾಂಕ 30-4-1837ರ ಕಡತ (ಕಾಗದ) ಸಂಗ್ರಹದಲ್ಲಿ ಇದರ ಪ್ರತಿಯಿದೆ.

ಶಾಸನದ ಕಾಲ:

ವಿಜಯನಗರ ಶಾಸನ ಸೂಚೀ ವಿವರ - ಸಂಪುಟದಲ್ಲಿ ಕಂಡಂತೆ

ಸಂಖ್ಯೆ	ಜಿಲ್ಲೆ	ಶಿಲಾ ಶಾಸನ	ತಾಮ್ರ ಶಾಸನ	ಶಾಸನ ಪ್ರತಿಗಳು	ಇತರೆ
1.	ಬೆಂಗಳೂರು	234	56	1	3 ತಾಮ್ರ ಶಾಸನ ತಾಲೂಕು ಖಜಾನೆಯಲ್ಲಿವೆ. 1 ಶಾಸನ ಪ್ರತಿ ಓಲೆಗರಿಯಲ್ಲಿದೆ.
2.	ಬೆಳಗಾಂ	3	-	-	
3.	ಬಳ್ಳಾರಿ	147	6	-	
4.	ಬಿದರೆ	-	1	-	
5.	ಬಿಜಾಪುರ	4	-	-	
6.	ಚಿಕ್ಕಮಗಳೂರು	86	24	11*	* ಕಡತ 5; ಓಲೆಗರಿ 3; ಕಾಗದ 3
7.	ಚಿತ್ರದುರ್ಗ	96	22	4	* ಕಡತ 3; ಕಾಗದ 1
8.	ಕೊಡಗು	1	-	-	

9.	ಧಾರವಾಡ	67	3	-	
10.	ಹಾಸನ	101	62*	2	* ದೀಪಮಾಲೆ ಕಂಭ 2; ಶಿಖರ 1
11.	ಉತ್ತರ ಕನ್ನಡ	70	1	-	
12.	ದಕ್ಷಿಣ ಕನ್ನಡ	287	16	-	
13.	ಕೋಲಾರ	266	30*	3	* ಹಿತ್ತಾಳೆ ತಟ್ಟೆ 1
14.	ಮಂಡ್ಯ	102	38*		ತಾಲ್ಲೂಕು ಖಜಾನೆಯಲ್ಲಿಯೂ ಇದೆ
15.	ಮೈಸೂರು	237	69	-	ತಾಲ್ಲೂಕು ಖಜಾನೆಯಲ್ಲಿಯೂ ಇದೆ
16.	ರಾಯಚೂರು	39	1*	1	* ಮರಗೆತ್ತನೆಯಲ್ಲಿದೆ
17.	ಶಿವಮೊಗ್ಗ	178	75*		* ಒಂದು ಶಾಸನ ದೀಪಸ್ತಂಭದಲ್ಲಿದೆ.
18.	ತುಮಕೂರು	110	82	3	
19.	ಕಲ್ಬುರ್ಗಿ	-	-	-	
ಒಟ್ಟು		2058	486	25	

ಮೇಲ್ಕಂಡ ಗೋಷವಾರೆ ಶಾಸನ ಸೂಚಿಯಲ್ಲಿ ಸಾಕಷ್ಟು ಶಾಸನಗಳು ಕೈಬಿಟ್ಟಿರುವುದನ್ನು ಅವಲೋಕಿಸಬಹುದು. ಕುಂದಾಪುರ ತಾಲ್ಲೂಕು ಸಿದ್ದಾಪುರ ಗ್ರಾಮದ ಜಂಸಾಲೆಯಲ್ಲಿರುವ ಸಂಗಮ ವಂಶದ ಮಲ್ಲಿಕಾರ್ಜುನ ದೇವರಾಯ (III) ನ ಕ್ರಿ.ಶ. 1457ರ ಶಿಲಾಶಾಸನ.[3] ಮೈಸೂರು ಪುರಾತತ್ವ ವರದಿ 1928 ನಂ. 63 ಮತ್ತು 64 ಅಚ್ಯುತರಾಯನ ಶಾಸನಗಳು, ಈ ಶಾಸನಗಳು 1512ನೇ ಸಂಖ್ಯೆಯ ಶಾಸನ ಕಾಲಕ್ಕೆ ಸಮರ್ಥನೆ ನೀಡುತ್ತವೆ. ಈ ಶಾಸನದಂತೆ ಕೃಷ್ಣಜೋಯಿಸರಿಗೆ ಇನಾಂ ಮತ್ತು ಧಾರ್ಮಿಕ ದತ್ತಿ ಇಲಾಖೆಯಿಂದ ನಂ 36694ರ ಮೇರೆಗೆ ಪೊಗದಿ ಹಾಗೂ ಗೌರವಗಳು ಇತ್ತೀಚಿನವರೆಗೂ ಸಲ್ಲುತ್ತಿತ್ತು. ಕೆಳದಿ ಬಸವರಾಜನು ಶಿವತತ್ವ ರತ್ನಾಕರ ಕೃತಿಯಲ್ಲಿ ಉಲ್ಲೇಖಿಸಿದ ಕಾಮಂಡಕೀಯ ನೀತಿಶಾಸ್ತ್ರ 4; 33; ಯಾಜ್ಞವಲ್ಕ್ಯಸ್ಮೃತಿ 1, 307 ಹಾಗೂ ಕೌಟಿಲ್ಯನ ಅರ್ಥಶಾಸ್ತ್ರ IX, 4ರ ಮೇರೆಗೆ ವಿಜಯನಗರ ಧಾರ್ಮಿಕ ಕ್ಷೇತ್ರದಲ್ಲಿ ಆಸ್ಥಾನ ಜ್ಯೋತಿಷಿಯಾಗಿ ಕೆಳದಿ ವೆಂಕಟಾದ್ರಿ, ಯಜಮಾನರಿಗೆ ನೀಡಿದ ಸ್ಥಾನಮಾನವನ್ನು ಉಲ್ಲೇಖಿಸಿದೆ.[4] ಕ್ರಿ.ಶ. 1529ರಿಂದ 1542ರವರೆಗೆ ಆಳಿದ ಅಚ್ಯುತರಾಯನ ಶಾಸನಗಳು ಈ ಕೆಳಕಂಡಂತಿವೆ.

ಸಂಪುಟ I	ಸಂಖ್ಯೆ 1508 ರಿಂದ 1540-41	ರವರೆಗೆ	69
ಸಂಪುಟ II	ಸಂಖ್ಯೆ 1516 ರಿಂದ 1647	ರವರೆಗೆ	50
ಸಂಪುಟ III	ಸಂಖ್ಯೆ 1524 ರಿಂದ 1595	ರವರೆಗೆ	103
		ಒಟ್ಟು	222

ಸಂಪುಟ III ರಲ್ಲಿ ಕಂಡಂತೆ ಕ್ರಿ.ಶ. 1532ರಲ್ಲಿ ಅಚ್ಯುತರಾಯನು ನೀಡಿದ ಶಾಸನಗಳು:

ಸಂಖ್ಯೆ	ಶಾಸನ ಸಂಖ್ಯೆ	ಶಿಲಾ ಶಾಸನ	ತಾಮ್ರ ಶಾಸನ	ತಾಲ್ಲೂಕು	ಇತರೆ
1.	1759	ಶಿಲಾ	-	ಹೆಗ್ಗಡದೇವನಕೋಟೆ	
2.	1512	-	ತಾಮ್ರ ಶಾಸನ	ಕೃಷ್ಣರಾಜಪೇಟೆ	ಬ್ಯಾಲದಕೆರೆ-ಸಪ್ತಸಾಗರದಾನ
3	1284	ಶಿಲಾ	-	ಚಿಂತಾಮಣಿ	
4.	1485	,,	-	ಶಿಡ್ಲಘಟ್ಟ	

5.	1749	,,	-	ಹೆಗ್ಗಡದೇವನಕೋಟೆ
6.	1310	,,	-	ಗೌರಿಬಿದನೂರು
7.	1683	,,	-	ಚಾಮರಾಜನಗರ
8.	1407	,,	-	ಮಾಲೂರು

ಈ ಸೂಚಿಯಲ್ಲಿ ಕಂಡುಬಂದಂತೆ ಅಚ್ಯುತರಾಯನು 1512ನೇ ಸಂಖ್ಯೆಯ ಮೇರೆಗೆ ಬ್ಯಾಲದಕೆರೆಯಲ್ಲಿ ಸಪ್ತಸಾಗರದಾನ ನೀಡಿದ್ದು, ಮೈಸೂರು ಪುರಾತತ್ವ ವರದಿ 1928ರ 63 ಮತ್ತು 64ರ ಶಾಸನಗಳು ಇದಕ್ಕೆ ಪೂರಕ ಅಂಶಗಳಾಗಿವೆ. ಮೈಸೂರು ಪುರಾತತ್ವ ವರದಿ 1941 ನಂ. 36ರ ಮೇರೆಗೆ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ಎರಡನೇ ಹರಿಹರನಿಂದ ಕ್ರಿ.ಶ. 1399ರಲ್ಲಿ (ಪಟೇಲ್ ರಾಮಪ್ಪ) ಮೂರು ತಾಮ್ರ ಶಾಸನವೂ,[5] ಕ್ರಿ.ಶ. 1420ರಲ್ಲಿ (ಮುಗುಳಗೆರೆ ಪಟೇಲ) ಒಂದು ತಾಮ್ರ ಶಾಸನವೂ[6] ವಿಜಯನಗರದ ಅರಸರು ನೀಡಿದ್ದಾರೆ. ಶಿವಮೊಗ್ಗ ತಾಲ್ಲೂಕೊಂದರಲ್ಲಿಯೇ ಈ ಅರಸರ 23 ತಾಮ್ರ ಶಾಸನಗಳು ಕಂಡು ಬಂದಿವೆ.

ದೇವರಾಯ (II)ನ ಮೂಲ ತಾಮ್ರಪಟ

ಕಳೆದ ಹಲವು ವರ್ಷಗಳ ಹಿಂದೆ, ನನ್ನ ಓಲೆಗರಿ ಸರ್ವೇಕ್ಷಣೆಯಲ್ಲಿ ತುಮಕೂರಿನಿಂದ ನನಗೆ ಮೂರು ಅಪೂರ್ವ ತಾಮ್ರ ಪಟಗಳು ಗೋಚರಿಸಿದವು. ಇವುಗಳನ್ನು ಅದರ ಒಡೆಯರ ಮನವೊಲಿಸಿ, ನಾನು ಇದನ್ನು ಪರಿಶೀಲಿಸಲು ಶಾಸನತಜ್ಞರಾದ ಕೆ.ವಿ.ರಮೇಶ್‌ರವರಿಗೆ ನೀಡಿದ್ದೆನು. ಅವರು ಇವುಗಳ ಅಧ್ಯಯನ ನಡೆಸಿ, ಎರಡನೇ ದೇವರಾಯನ ಕ್ರಿ.ಶ. 1424ರ ಅಪ್ರಕಟಿತ ಶಾಸನವೆಂದು ನನಗೆ ತಿಳಿಸಿದರು. ಸಂಪುಟ II ನಂ. 1212ರ ಮೇರೆಗೆ ತಾಮ್ರ ಶಾಸನ ನೀಡಿದ್ದಾನೆ.[7] ಆದರೆ ಈ ತಾಮ್ರ ಶಾಸನವು ನನ್ನ ನೂತನ ಸಂಶೋಧನೆಯಲ್ಲಿ ಅಪೂರ್ವ ಸಾಮಗ್ರಿಯಾಗಿದ್ದು, ನಾಗರೀ ಲಿಪಿ ಹಾಗೂ ವಿರೂಪಾಕ್ಷನ ಅಂಕಿತವನ್ನೊಳಗೊಂಡಿದೆ.[8] ಪ್ರಾಮುಖ್ಯವಾದ ಈ ಆಕರವನ್ನೊಳಗೊಂಡು ಪುದುಕೋಟೆಯ 200 ಶಾಸನಗಳು,[9] ಹೊರನಾಡಿನ ಶಾಸನಗಳು,[10] ತೆಲುಗು ಶಾಸನಗಳು,[11] ಪುಣೆಯ ಭಾರತೀಯ ಇತಿಹಾಸ ಸಂಶೋಧನಾ ಮಂಡಳದಿಂದ ಪ್ರಕಾಶಿತ ವಿಜಯನಗರ ಸ್ಮಾರಕ ಗ್ರಂಥ (ಮರಾಠಿ), ವಿಜಯನಗರ ಸೆಕ್ಸ್ ಸೆಂಟೆನರಿ ಕಮೆಮೊರೇಶನ್ ಸಂಪುಟ (ಇಂಗ್ಲೀಷ್) ಭಾಗಗಳಲ್ಲಿರುವುದು ಕೈಬಿಟ್ಟಿರುವುದರ ಸ್ಥೂಲ ಅಂಶಗಳನ್ನು ಅನುಬಂಧದಲ್ಲಿ ಅವಲೋಕಿಸಬಹುದು.

ಶ್ರೀರಂಗರಾಯನ ದಾನ ಶಾಸನ (ಪಠ್ಯ ಭಾಗ)

ಕಾಗದ ಪ್ರತಿ, ಪುಟ 14.

ನರಸೆಪುರದ ಶಾಸನ ಪ್ರತಿ

1 ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೆ ತ್ರೈಲೋಕ್ಯ
2 ನಗರಾರಂಭ ಮೂಲಸ್ತಂಭಾಯ ಶಂಭವೆ ॥1॥ ಶ್ರೀಮದ್ವೆಂಕಟ
3 ಭೂಪಾಲ ಸೂರ್ಯ್ಯವಂಶೆ ಭವಾಂನ್ಮುಹೂನ್ನು । ಭೂತ್ತಿಪ್ರಭಾ
4 ವ ವಿಭವೊವದಂನ್ಯಕಾರ್ತಿಲಂಕೃತಾಃ ॥2॥ ತಸ್ಯತ್ಮಜೊಲಕ್ಷ್ಮಿ
5 ನರೇಂದ್ರ ಆಸೀತ್ತು ಸತ್ಕಿರಿತ್ತಿಸಾಂದ್ರಃ ಸ್ಥಿರವಾರ್ಧಿಚಂದ್ರಃ
6 ನಿಜಪ್ರಸ್ತಾಪೊ ಅಷ್ಟಕರಪ್ರಕಾಶತ್ತಿರೊಹಿತ್ತರಾತ್ತಿಶಶಃ ಶಶಾಂ
7 ಕಃ ॥3॥ ಶ್ರಿ ರಂಗಭೂಪೊಸ್ಯಸುತ್ತಾವದಾಂನ್ಯವಿಲಾಸೆರ
8 ಸ್ಪರ್ಧಿನಿರೂಪದೈನ್ಯಸ್ವಬಾಹುಶತ್ತ್ಯಾವಿಜಯೊತ್ತಗ್ರಜಂ
9 ನ್ಯ ಪ್ರತ್ಯರ್ಥಿಸ್ಯಸ್ತ್ಯೊಜಯತ್ತೀಹದಂನ್ಯಃ ॥4॥ ಲೊಕೆಸ್ಮಿಂ
10 ನ್ನ್ಯಜನಾಧಿ ಷಡ್ಗುಣಯುಕ್ತಃ ಪ್ರಖ್ಯಾತ್ತಃ ವಿದ್ವಸ್ವಿರಾಟ್ಟು ।

ಕಾಗದ ಪ್ರತಿ ಪುಟ 15

11 ॥ ನಿಷ್ಪಾಲಬ್ಧ ವಸಿಷ್ಟ ಮುಖ್ಯ ಯಶಸಃ ಶ್ರಿ ರಾಮಕೃಷ್ಣಪ್ರ

ಭೋ । ಪುತ್ರ ಶ್ರಿ ಪುರುಷೋತ್ತುಮಾಭಿದಮಹ । ವಿದ್ವ
ಜನಾಧಿಶ್ವರಃ ॥ ಶ್ಲಾಘ್ಯಸಾ ಸುಗುಣಾಂನ್ವಿತ್ತೊ ವಿ
ಜಯತ್ತೆ ಧರ್ಮೈಕಮೂರ್ತಿ ಸದಾ ॥5॥ ಲೋಕೈಕ ಧಂನ್ಯಃ
ಪುರುಷೊತ್ತಮ ವಿದ್ವದಿಂದ್ರ ಸದ್ಗುರ್ಭದುಗ್ಧ ಭರಿತ್ತಾಂಬು
ಧಿ ಪೂರ್ಣಚಂದ್ರ ಶ್ರಿ ರಾಮಕೃಷ್ಣ ಸುಮಹೊಧರಣ ಸು
ರೆಂದ್ರ । ಪ್ರಖ್ಯಾತ್ತಾ ಸದ್ಗುಣನಿಧಿ ಜಾಯತ್ತಿ ಶ್ರಿಯೆಂ
ದ್ರಃ ॥6॥ ಯಃ ಕರ್ನಾಟಕ ರಾಜ ಮತದಖಿಳಂ ಕೃ(ತ್ವಾ)
ತ್ತು ನಿಷ್ಕಟಕಂ । ಕಾತ್ತದ್ರಜಪತ್ತಿಂನಿಧಾವಧಚಿತ್ತಾತ್ತು
ಸಂಸ್ಥಾಪಯಂನಿಯತ್ತೆ ಯಿದಂ ಸಂ ವಿದಿತ್ತು ಪ್ರ
ಭಾವ ವಿಭವಃ ಶ್ರಿ ರಂಗಪೃದ್ವಿಪತ್ತಿಃ ॥ ಸ್ತಸ್ಯೆ ಸದ್ಗುಣ
ರಾಮಕೃಷ್ಣ ವಿಭವಃ ಪೆತೊಗ್ರಹಾರಂ ದದೌ ॥7॥
ತ್ರೆವ ರಂಗನರೆಂದ್ರೆಣ ರಾಮಕೃಷ್ಣ (ಭ್ಯ) (ಖ್ಯ) ಧಿಮತ್ತೆ । ದ
ತ್ತಸ್ಯಾಸ್ಯಾಗ್ರಹಾರಸ್ಯ ವಿಖ್ಯತ್ತೆ ದಾನದಾಶನಂ ॥8॥
ಸ್ವಸ್ಥೆ ಶ್ರಿ ವಿಜಯೋಪೆತ್ತಾ ಶಾಲಿವಾಹನ ಶಕೆ ದ್ವಿಷಃ ಷಷ್ಟ್ಯಾ
ತ್ತರಕ್ಕೆ ಸಾರ್ದಸಹಸ್ರೆ ಶರದಾಂಗತ್ತೆ ವರ್ತಮಾನೆ ಪ್ರಮಾತ್ಯೆ
ದ್ವೈಚೈತ್ರೆ ಮಾಸೆ ಶುಭಪ್ರದೆ । ಸೆತ್ತಪಕ್ಷೆ ಪುಂಣ್ಯದಿನೆಸೊ
ಮವಾರೆಣ ಸಂಯುತ್ತೆ । ಕಾಶ್ಯಪಾಂನ್ವಯ ಸಂಭೂತ್ತೆ
ಪೌತ್ರ ವೇಂಕಟ ಭೂಪತ್ತೆ ಶ್ರಿ ಲಕ್ಷ್ಮಿ ಭೂಪತ್ತನಯಃ
ಶ್ರಿರಂಗಕ್ಷಿತಿಪಾಲಕಃ ॥11॥ ವಷ್ಟಗೊತ್ರೆ ಜಾತ್ತಾಯ
ರುಗ್ವೆದ ಪರ್ರಿಪಾಲಿನೆ । ರಾಮಕೃಷ್ಣೆಂದ್ರ ಪೌತ್ರಾಯ
ಪುರುಷೋತ್ತುಮಧಿಯತ್ತೆ ॥12॥ ಪುತ್ರಾಯ ರಾ
ಮಕೃಷ್ಣಾಖ್ಯ ಮಹನಿಯ ವಿಪಶ್ಚಿತ್ತೆ । ಶ್ರಿ ವೇಂಕ
ಟಪತ್ತಿ ಪತ್ತಿಖ್ಯಾತ್ತೆ ಮಹಾರಾಜ ಮಹಿಮಿಮಾಂ ॥13॥
ಸೆಂಹಾಸನಂ ಸಮಾರೂಹ್ಯದೊ(ಷ್ಪ) ಬಿಬ್ರತ್ತಿತ್ತೆಜಸಾಂ ।
ಸೆವಯತೊ(ಪೆ)ತ್ರ ಸ್ಯಾಸ್ಯಾ ಪ್ರಖ್ಯಾತ್ತ ಗುಣಸಂಪದಾಂ
॥14॥ ಶ್ರಿ ವೆಂಕಟಪತ್ತೆರಾಜಂ । ಕೃಪಯ ಪರ್ರಿಪಾ
ಲಿತ್ತೆ । ರಾಜಸ್ವಕೀಯ ಮಂಜುರ್ರು ಪ(ಟ್ಟು)ಲ್ಲುಪಗ್ರಾಸಂ
ರಿಯುಕ್ತಂ ॥15॥ ಶಕ್ತತ್ರಯೆಣ ಸಂ(ಖ್ಯಾ)ಕ್ತಾನಿಷಾ
ಣಾಂತ್ವಾರ್ಜಮೊಚಿತ್ತಂ । ಸಸೆಮಭೂಮಿ ಸಹಿತ್ತಾಂ
ಗ್ರಾಮಂ ಮೇಲುರು ಸಂಗ್ನಿಕಂ ॥16॥ ಭವಂತ್ತಃ
ಪುತ್ರಪೌತ್ರಾಣಾಂ ಪಾರಂಪರ್ಯೆಣ ಸಂಖ್ಯ
ತ್ತಾಂ । ಆಚಂದ್ರಾರ್ಕಸ್ಥಾಯಿನೊಷ್ಪಸ್ವಾಮ್ಯಭೊ
ಗಾನುಭಾವಿತಃ ॥17॥ ತಂ ಚಾರಿತ್ರಯಯೊದ್ಯಾ

45 ನಪರ್ರಿಕೃತ್ಯಾಯದೊಚಿತ್ತಂ । ತ್ರಿದ್ಯದಾನಭವಂ
46 ತ್ತಿ ಶತತ್ತಿಷ್ವಂತ್ತು ಸುಖಿನ ಸದಾ ॥18॥ ಯಿತ್ತಿ ಸ
47 ತ್ತ್ಯಾತ್ಮ ವಚನ ಶ್ರಿರಂಗ ಕ್ಷಿತಿಪಾಲಕಃ ಸ್ವಸ್ಯಶ್ರೆಯೊ
48 ಭಿ ಉದ್ರ್ಯರ್ಥ ರಾಮಕೃಷ್ಣಖ್ಯ ಧಿಮತ್ತೆ ॥19॥
49 ವೆಲೂರುನಾಮಗ್ರಹಾರಂ ನಿಜೊಪಗ್ರಾಮಸಂಯು
50 ಕ್ತಂ ಸಂಮತ್ತಂ ಸಹಿರಣಾಂಬುದಾರಾಪೂರ್ವಕಂ ದದಾ
51 ಮುದಾ ॥20॥ ಯಿದಂವರಿಗೆದ್ರದತ್ತಸ್ಯ ರಾಮಕೃಷ್ಣ
52 ಖ್ಯಧಿಮತ್ತೆ । ವೆಲೂರಂಭೋಗ್ರಹಾರಸ್ಯ ತದಿ
53 ದಂ ದಾನಶಾಸನಂ ॥21॥ ಯೆಕೈವ ಭಗಿನೀಲೊಕ್ಕೆ
54 ಸರ್ವೆಷಾಮೆವ ಭೂಭುಜಾಂ । ನಭೋಜನಖಿರಗ್ರಾಂ
55 ಹ್ಯ ವಿಪ್ರದತ್ತಾ ವಸುಂಧರಂ ॥22॥ ಸೆಂಚೆರಿತ್ತೆ ದಾನ
56 ವಿವ್ವೆ ಯಾವದಾಭುಮಿರೆಣವಃ ತ್ತಾವಲ್ಕಲ್ಪ ಸಹಸ್ರಾ
57 ಣಿ ವಿಷ್ಣುಲೊಕೆ ಮಹಿಯತೆ ॥23॥ ಸಾಮಾಂ
58 ನ್ಯೆಯೊ ಧರ್ಮಸೆತ್ತೊ ನೃಪಾಣಾಂ ಕಾಲೆ ಕಾಲೆ ಪಾಲಿ
59 ನೀಯೊಭಧ್ಬಿ । ಯಿದಂ ಸರ್ವಾನ್ ಭಾವಿನಃ ಪಾರ್ಥಿ
60 ವೆಂದ್ರ ಭೂಯೊ ಭೂಯೊ ಯಾಚತ್ತೆ ರಾಮಚಂದಃ
61 ॥24॥ ಸ್ವದತ್ತಾ ದ್ವಿಗುಣಂ ಪುಣ್ಯ ಪರದತ್ತಾನುಪಾನಂ
62 ಪರದಪಹಾರೆಣ ಸ್ವದತ್ತಾಂ ನಿಷ್ಪಲಂ ಭವೆತ್ತು ॥25॥
63 ದಾನಪಾಲನಯೊರ್ಮಧ್ಯೆ ದಾನಾಛ್ರೆಯೊನುಪಾಲನಂ
64 ದಾನತ್ಸವರ್ಗಮವಾಪ್ನೊತ್ತಿ ಪಾಲನಾದಚ್ಯುತ್ತಂ ಪದಂ ॥ 26॥
65 ಯಾವದದಾತ್ತಿ ಧರಣಿ ಧರಣಿ ಧರಾಣಾಂ ಯಾವಷ್ಟೆ ।
66 (ತ್ತಿಂರವಿ) ನಿಶಾಕರತ್ತಾರಕಾಣಾಂ ಯಾತ್ಕಥಾ ರಘುಪತ್ತೆ
67 ರ್ಜಯತ್ತಿ ಪ್ರತ್ತಾಪದೆಶೊ ಪೆರಂನ್ರುಪದರ್ಮಭಸ್ಥೆರೊಸ್ಥು ॥
68 ॥27॥ ಲಕ್ಷ್ಮಿ ಚಾರ್ರು ಕುಚದ್ವಂದ್ವಸ್ವಮಾಲ್ಲಿಂಗಿ ವಕ್ಷಸಃ

ಕಾಗದ ಪ್ರತಿ ಪುಟ 16

69 ಭಕ್ತಿಪ್ರಯಸ್ಯನ್ರುಹರೆ ನಿಶ್ಚಲಾಸ್ತು ಕ್ರುಪಾಸ್ಥಯಾ ॥28॥
70 ಮಧ್ಯಂ ಶಾಚಾ ಪರಮಹಿಭ್ರುತ್ತ ವಂಶಜಾಪಾಯೆಭೂವಿ
71 ಪಾಃ ಸತತಮುಜ್ಜ ಧರ್ಮಚಿತ್ತ ॥ ಮಧರ್ಮಮೆವ ಪರ್ರಿಪಾಲ
72 ನಮಾಚರಂತ್ತಿ (ತ್ವ)ತ್ವಾದುಕದ್ವಯ ಮಹಂಸೆರಸಾವಹಾಮಿ ॥
73 ॥29॥ ಯಿಂದ್ರ ಪ್ರ(ಶ್ಚ) ಚಾಂಡಲೀ ಕಿಮಿದಂ ಪಚತ್ತೆಕ್ಷಯಾ
74 ಸ್ವಮಾಸರಿಸುರಯಾಸತ್ತಂ । ತಪಾವೆನಚಿದಾನ್ನಿನಾದೆವಬ್ರಹ್ಮ
75 ಣ ವಿತ್ತೀಸಿ ಬಲಾದಪಹರಂತ್ತಿ ಯೆತ್ತೆಷಾಂ ಪಾದರಜೊಶಿತ್ಥ
76 ಚರ್ಮಣಭಾಧಿತ್ತಂ ಮಯಾ ॥30॥ ಶ್ರಿ ಶ್ರಿ ಶ್ರಿ ಶ್ರಿ ಶ್ರಿ ಶ್ರಿ ॥

ವಿಜಯನಗರದ ಮೂರನೇ ಶ್ರೀರಂಗರಾಯನು ಕ್ರಿ.ಶ. 1640ರಲ್ಲಿ ವಶಿಷ್ಠಗೋತ್ರದ ಋಕ್‌ಶಾಖೆಯ ಶ್ರೀರಾಮಕೃಷ್ಣನ ಪೌತ್ರ ಪುರುಷೋತ್ತಮನ ಪುತ್ರ ಶ್ರೀರಾಮಕೃಷ್ಣನಿಗೆ ವೇಲೂರು ಅಗ್ರಹಾರವನ್ನು ನೀಡಿದ ಶಾಸನ ಇದಾಗಿದೆ. ರಾಮಕೃಷ್ಣನು ಶಾಸನ ಸಂಖ್ಯೆ 2137ರ ಮೇರೆಗೆ ವಿಜಯನಗರದ ಮೊದಲನೇ ಶ್ರೀರಂಗರಾಯನು ಕೆಳದಿ ರಾಮರಾಜನಾಯಕನ ಆಳ್ವಿಕೆಯ ಕಾಲದಲ್ಲಿ ನಾರಣಪ್ಪಯ್ಯನ ಪುತ್ರ ಇದೇ ವಶಿಷ್ಠಗೋತ್ರದ ಆಶ್ವಲಾಯನ ಸೂತ್ರದ ಋಕ್ ಶಾಖೆಯ ಚಿನ್ನ ಭಂಡಾರದ ರಾಮಕೃಷ್ಣಯ್ಯನಿಗೆ ತೀರ್ಥಹಳ್ಳಿ ಸಮೀಪ ಸದಾಶಿವಪುರ ಅಗ್ರಹಾರಕ್ಕೆ ಯಜಮಾನನನ್ನಾಗಿ ಪುನರ್ನೇಮಕ ಮಾಡಿದ ಸಂಗತಿಯಿದೆ. ಉಡುಪಿಯ ಶಾಸನವೊಂದು ರಾಮಕೃಷ್ಣನು ಕೃಷ್ಣದೇವರಿಗೆ ಉಂಬಳಿಯಿತ್ತುದನ್ನು ಹೇಳಿದೆ. ಕುಂಜಾರು ಕೈಫಿಯತ್ತು, ಕದರಿ ಮಾಗಣಿ ಕೈಫಿಯತ್ತುಗಳಲ್ಲಿಯೂ ಈತನ ಹೆಸರುಗಳು ಹಾಸು ಹೊಕ್ಕಾಗಿ ಬಂದಿವೆ.[12] ಕ್ರಿ.ಶ. 1565ರ ವಿಜಯನಗರ ಚಕ್ರಾಧಿಪತ್ಯ ಅಂತ್ಯಕಾಲದಲ್ಲಿ ಆಸ್ಥಾನ (ಅರಮನೆ) ಯಲ್ಲಿದ್ದ ಬೊಕ್ಕಸದ ಸೇನಬೋವ ಚಿನ್ನ ಭಂಡಾರದ ನಾರಣಪ್ಪಯ್ಯನು ಕೆಳದಿ ಅರಸರ ಆಶ್ರಯ ಬೇಡಿ ಅಲ್ಲಿಯೇ ನೆಲೆಸಿದನು. ಕೆಳದಿ ವೀರಭದ್ರನಾಯಕನ ಕಾಲದವರೆಗೂ ಈತನ ತಲೆಮಾರಿನವರು ಚಿನ್ನ ಭಂಡಾರದ ಅಧಿಕಾರಿಯಾಗಿದ್ದುದು ಕಂಡು ಬರುತ್ತದೆ.[13] ಮೂರನೇ ಶ್ರೀರಂಗರಾಯ ಚಕ್ರವರ್ತಿಯ ಕಾಲದ ಶಾಸನ ಸಂಖ್ಯೆ:

ಶಿಲಾಶಾಸನ	31
ತಾಮ್ರ ಶಾಸನ	22
ಶಾಸನ ಪ್ರತಿ	1
ಅಸ್ಪಷ್ಟ	1
ಒಟ್ಟು	55

ಚಕ್ರವರ್ತಿಯು ತನ್ನ ಶ್ರೇಯೋಭಿವೃದ್ಧಿಗಾಗಿ ರಾಮಕೃಷ್ಣನಿಗೆ ವೇಲೂರು ಅಗ್ರಹಾರವನ್ನು ಕ್ರಿ.ಶ. 1640ರಲ್ಲಿ ನೀಡಿದುದು ಈ ಶಾಸನ ಪ್ರತಿಯಿಂದ ವ್ಯಕ್ತವಾಗುತ್ತದೆ.[14] ವಿಜಯನಗರ ಇನ್ಸ್‌ಕ್ರಿಪ್‌ಶನ್ಸ್ ಸಂಪುಟ III ಸಂಖ್ಯೆ 1574ರ ಮೇರೆಗೆ ಇದೇ ಕಾಲದಲ್ಲಿ ಮೂರನೇ ಶ್ರೀರಂಗರಾಯನು ನೀಡಿದ ಶಿಲಾ ಶಾಸನವೊಂದು ನಾಗಮಂಗಲ ತಾಲ್ಲೂಕಿನ ಕುಡುಗುಬಾಲುನಲ್ಲಿದೆ. ಸಂಪುಟ II ಸಂಖ್ಯೆ 529ರ ಮೇರೆಗೆ ಈ ಚಕ್ರವರ್ತಿಯು ನೀಡಿದ ಕಾಗದ ಹಸ್ತಪ್ರತಿಯಲ್ಲಿರುವ ಶಾಸನವೂ ಸೇರ್ಪಡೆಯಾಗಿದ್ದುದರ ಹಿನ್ನೆಲೆಯಲ್ಲಿ ಈ ಪ್ರತಿಯೂ ಈ ನಿಟ್ಟಿನಲ್ಲಿ ಸೇರಲು ಅರ್ಹತೆ ಹೊಂದಿದೆ.

ಇದೇ ಕಟ್ಟಿನಲ್ಲಿ ಗೋಚರಿಸಿದ್ದ ಕ್ರಿ.ಶ. 1662ರ ಮೂರನೇ ಶ್ರೀರಂಗರಾಯನು ವಶಿಷ್ಠ ಗೋತ್ರದ ಆಶ್ವಲಾಯನ ಸೂತ್ರದ ಋಕ್ ಶಾಖೆಯ ಚಿನ್ನ ಭಂಡಾರದ ರಾಮಕೃಷ್ಣಯ್ಯನ ಪ್ರಪೌತ್ರ ಪುರುಷೋತ್ತಮ್ಮನ ಪೌತ್ರ, ರಾಮಕೃಷ್ಣಯ್ಯನ ಪುತ್ರ ಹೂವಯ್ಯನಿಗೆ ನೀಡಿದ ಹಳೆಯಬೀಡಿನ ಗ್ರಾಮಕ್ಕೆ ಸಂಬಂಧಪಟ್ಟ ಶಾಸನ ಪ್ರತಿಯೊಂದೂ ಸೇರ್ಪಡೆಯಾಗಬೇಕಾಗಿದೆ.[15]

ವಿಜಯನಗರ ಶಾಸನದ ಬಗ್ಗೆ ನಡೆಯಬೇಕಾದ ಸಮೀಕ್ಷಾ ಕಾರ್ಯ ಅಪೂರ್ಣವಾಗಿದೆ. ಅವರ ಕಾಲದ ನಿರೂಪಗಳಾದಿಯಾಗಿ ಅನೇಕ ಆಕರಗಳು ಕಾಗದ ಹಾಗೂ ಓಲೆ ಪ್ರತಿಗಳಲ್ಲಿಯೂ ಅಲ್ಲಲ್ಲಿಯೇ ಗೋಚರಿಸುತ್ತಿವೆ. ನನ್ನ ಓಲೆಗರಿ ಗ್ರಂಥ ಸಮೀಕ್ಷಾ ಸಂಶೋಧನೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಉದ್ಯೋಗ ಮಾಹಿತಿ ಕೇಂದ್ರದ ನಿರ್ದೇಶಕರಾಗಿದ್ದ ಸ್ವಾಮಿರವರ ಮನೆಯಲ್ಲಿ ಕೆಲವು ವರ್ಷಗಳ ಹಿಂದೆ ಇಂತಹ ಸಾಕಷ್ಟು ಅಮೂಲ್ಯ ಸಾಮಗ್ರಿಗಳು ನನ್ನ ಗಮನಕ್ಕೆ ಬಂದಿದ್ದವು. ಕೊನೆಯ ಪಕ್ಷ ಅಂತಹವುಗಳ ಜೆರಾಕ್ಸ್ ಪ್ರತಿ ಅಥವಾ ಮೈಕ್ರೋಫಿಲ್ಮ್ ಪ್ರತಿಗಳನ್ನಾದರೂ ಸಂರಕ್ಷಿಸಿಡುವುದು ಒಳ್ಳೆಯದು.[16] ಮದರಾಸಿನ ನರಸಿಂಹಯ್ಯನವರು ಶರಾವತಿ ಮುಳುಗಡೆ ಯೋಜನೆಯಲ್ಲಿ ಸಿದ್ಧಪಡಿಸಿದ ಪುರಾತತ್ವ ವರದಿ ಹಾಗೂ ಕರ್ನಾಟಕ ಪ್ರಾಚ್ಯವಸ್ತು ನಿರ್ದೇಶಕ ದೇವರಾಜ್ ವಾರಾಹಿ ಯೋಜನೆಯಲ್ಲಿ ಸಮೀಕ್ಷಿಸಿದ ವರದಿಗಳಲ್ಲಿ ಅಡಕವಾಗಿರುವ ವಿಜಯನಗರ ಶಾಸನಗಳನ್ನು ಮೌಲ್ಯಮಾಪನದೊಂದಿಗೆ ಪ್ರಕಟಿಸುವುದೂ ಅಗತ್ಯ. ಲಂಡನ್ನಿನ ಬ್ರಿಟಿಷ್ ಮ್ಯೂಜಿಯಂಗೆ ಸಾಗಿಸಲಾಗಿದೆಯೆಂದು ಹೇಳಲಾದ ಗೋಕರ್ಣದ 400 ಅಪ್ರಕಟಿತ ಶಾಸನಗಳಲ್ಲಿಯೂ ವಿಜಯನಗರದ ಶಾಸನಗಳು ಅಡಕವಾಗಿರುವ ಸಂಭವವಿರುವುದರಿಂದ ಇದೂ ಸಂಶೋಧನೆಗೆ ಅರ್ಹವಾಗಿದೆ.

ಅನುಬಂಧ

ಸಂ.	ಶಿಲಾ ಶಾಸನ	ತಾಮ್ರ ಶಾಸನ	ಕಾಲ	ಜಿಲ್ಲೆ	ತಾಲ್ಲೂಕು ಮತ್ತು ಸ್ಥಳ	ಅರಸರು	ಉಲ್ಲೇಖ
1	ಶಿಲಾ	-	1340	ಕರ್ನೂಲು	ಕೋಡುವಮುಡು	ಹರಿಹರ I	ಎಂ.ಎನ್ ಕಟ್ಟಿ, "ವಿಜಯನಗರ ಎಪಿಗ್ರಾಫ್ಸ್ ಡಿಸ್ಕವರ್ಡ್ ಡ್ಯೂರಿಂಗ್ ರೀಸೆಂಟ್ ಡಿಕೇಡ್ಸ್" ಕ್ವಾಜಮಿಸೊ, 75, ಪು. 345
2	ಶಿಲಾ	-	1347	ದ.ಕ.	ಕೇರಗಲ್	ವಾಲೆಯ ದಂಡನಾಯಕ	ಅದೇ
3	ಶಿಲಾ	-	1380	ಉ.ಆರ್ಕಾಟ್	ಮೇಲ್‌ಪಟ್ಟಿ	ಹರಿಹರ II	ಅದೇ
4	-	ತಾಮ್ರ	1380	ದ.ಕ.	ಕಂಬದ ಕೋಣೆ		ಅದೇ
5	ಶಿಲಾ	-	1382	ರಾಮನಾಥಪುರ	ಕೋವಿಲೂರು		ಅದೇ, ಪು. 346
6	ಶಿಲಾ	-	1387	ಬಳ್ಳಾರಿ	ಹಂಪಿ		ಅದೇ
7	-	ತಾಮ್ರ	1388	ಕರ್ನೂಲು	ಪ್ಯಾಲಕುರ್ತಿ	ಸಾಳುವ ನರಸಿಂಹ	ಅದೇ
8	-	ತಾಮ್ರ	1391	ಗೋವ	ಪಂಜಿಮ್	ಹರಿಹರ II	ಅದೇ, ಪು. 347
9	ಶಿಲಾ	-	1418	ದ.ಕ.	ಬೆಳ್ಮಂಜೆ	ದೇವರಾಯ I	ಅದೇ
10	-	ತಾಮ್ರ	1406 1422	ಮದರಾಸ್	ಸರಕಾರಿ ಮ್ಯೂಜಿಯಂ	ದೇವರಾಯ I	ಅದೇ
11	-	ತಾಮ್ರ	1430	ದ.ಕ.	ಸುರತ್ಕಲ್	ದೇವರಾಯ II	ಅದೇ, ಪು. 347-348
12	ಶಿಲಾ	-	1441	ದ.ಕ.	ಕೋಡಲೂರು	ದೇವರಾಯ II	ಅದೇ, ಪು. 348
13	ಶಿಲಾ	-	1424-1443	ದ.ಕ.	ಕಲ್ಯಾಣಪುರ	ದೇವರಾಯ II	ಅದೇ
14	ಶಿಲಾ	-	1446-1465	ಚಿಂಗಲ್‌ಪುಟ್	ಮಾಡಂಬಾಕ್ಕಂ	ಮಲ್ಲಿಕಾರ್ಜುನ	ಅದೇ, ಪು. 349
15	ಶಿಲಾ	-	1466	ತಂಜಾವೂರು	ತಿರುಕಟ್ಟುಪಲ್ಲಿ	ವಿರೂಪಾಕ್ಷ III	ಅದೇ
16	ಶಿಲಾ	-	1470	ಉ.ಆರ್ಕಾಟ್	ಅಗರಂ	ಮಲ್ಲಿಕಾರ್ಜುನ	ಅದೇ
17	ಶಿಲಾ	-	1471	ಉ.ಆರ್ಕಾಟ್	ಅಗರಂ	ಮಲ್ಲಿಕಾರ್ಜುನ	ಅದೇ
18	ಶಿಲಾ	-	1516	ಅನಂತಪುರ	ಕಾಡವಕ್ಕಲ್ಲು	ಕೃಷ್ಣದೇವರಾಯ	ಅದೇ, ಪು. 350
19	ಶಿಲಾ	-	1544	ದ.ಕ.	ಬನ್ನಾಡಿ	ಅಚ್ಯುತರಾಯ	ಅದೇ, ಪು. 352
20	ಶಿಲಾ	-	1541	ಕರ್ನೂಲು	ಇಲ್ಲೂರು ಕೋಟವೇಟೆ	ಸದಾಶಿವದೇವರಾಯ	ಅದೇ
21	ಶಿಲಾ	-	1549	ಧಾರವಾಡ	ಕ.ಸಂ.ಸಂಸ್ಥೆ	ಸದಾಶಿವದೇವರಾಯ	ಅದೇ
22	ಶಿಲಾ	-	1550-51	ಅನಂತಪುರ	ಚಾಲವೇಮುಲ	ಸದಾಶಿವದೇವರಾಯ	ಅದೇ
23	ಶಿಲಾ	-	1553	ಮಹಬೂಬ್ ನಗರ	ಆಯಿಜೆ	ಸದಾಶಿವದೇವರಾಯ	ಅದೇ, ಪು. 353

24	ಶಿಲಾ	-	1561	ಅನಂತಪುರ	ಅರಕಟವೇಮುಲ	ಸದಾಶಿವದೇವರಾಯ	ಅದೇ
25	-	ತಾಮ್ರ	1561	ದ.ಕ.	ಕಲ್ಯಾಣಪುರ	ಸದಾಶಿವದೇವರಾಯ	ಅದೇ, ಪು. 353
26	ಶಿಲಾ	-	1592	ಉ.ಕ.	ಬಿಳಗಿ		ಅದೇ, ಪು. 354
27	ಶಿಲಾ	-	16ನೇ ಶತಮಾನ	ಉ.ಅರ್ಕಾಟ್	ಅಗರಂ		ಅದೇ, ಪು. 355
28	ಶಿಲಾ	-	1606	ಧರ್ಮಪುರಿ	ಗುಮ್ಮಲಾಪುರ		ಅದೇ
29	ಶಿಲಾ	-	17ನೇ ಶತಮಾನ	ಉ.ಅರ್ಕಾಟ್	ತಿರುಪ್ಪನಂಗಾಡು	ವೆಂಕಟ I (II?)	ಅದೇ
30	ಶಿಲಾ	-	1621	ತಿರುಚ್ಚಿರಪಳ್ಳಿ	ಮಂಜನ್‌ಕುಂಚ್ಚಿ	ಶ್ರೀರಂಗ III	ಅದೇ
31	ಶಿಲಾ	-	1516	ದ.ಕ.	ಕಂಬದಕೋಣೆ	ಕೃಷ್ಣದೇವರಾಯ	ಕೆ.ಜಿ.ವಸಂತ ಮಾಧವ, 1991, *ವೆಸ್ಟರ್ನ್ ಕರ್ನಾಟಕ - ಇಟ್ಸ್ ಅಗ್ರಾರಿಯನ್ ರಿಲೇಶನ್ಸ್ ಎಡಿ 1500-1800,* ನ್ಯೂ ಡೆಲ್ಲಿ, ಪು. 190
32	-	ತಾಮ್ರ	1540	ದ.ಕ.	ಉಪ್ಪುಂದ	ಅಚ್ಯುತರಾಯ	ಅದೇ, ಪು. 192
33	ಶಿಲಾ	-	1560	ದ.ಕ.	ಉಡುಪಿ	ಸದಾಶಿವರಾಯ + ಸದಾಶಿವನಾಯಕ (ಕೆಳದಿ)	ಅದೇ, ಪು. 196
34	ಶಿಲಾ	-	1545	ಶಿವಮೊಗ್ಗ	ಹಿರೇಕಲಗೋಡು ಚಂದ್ರಗುತ್ತಿ	(ವೆಂಕಟಾದ್ರಿರಾಜ)	ಎಚ್.ಆರ್.ರಘುನಾಥ ಭಟ್, 1977, *ಕರ್ನಾಟಕ ಶಾಸನ ಕಲೆ,* ಮೈಸೂರು, ಪು. 59
35	ಶಿಲಾ	-	1484	ತುಮಕೂರು	ಅಮೃತೂರು	ವಿರೂಪಾಕ್ಷ III	*ಇತಿಹಾಸದರ್ಶನ,* ಸಂಪುಟ 10:1995, ಪು. 91. ಇದೇ ನಿಟ್ಟಿನಲ್ಲಿ ಕೆಳದಿ ಮ್ಯೂಜಿಯಂ ನಲ್ಲಿರುವ ವಿರೂಪಾಕ್ಷನ ತಾಮ್ರ ಶಾಸನವನ್ನೂ ಗಮನಿಸಬಹುದು.
36	ಶಿಲಾ	-	1356-1377	ಉ.ಕ.	ಭಾವಿಕೇರಿ	ವೀರಬುಕ್ಕರಾಯ I	*ಜಐಸೊಇಂ.,* 13, 1986, ಪು. 87

ಇದನ್ನು ಮಾದರಿಗಾಗಿ ವಿದ್ವಾಂಸರ ಅವಲೋಕನೆಗೆ ಸಿದ್ಧಪಡಿಸಿದ್ದಾಗಿದ್ದು ಅಪೂರ್ಣವಾಗಿದೆ.

ಅಡಿ ಟಿಪ್ಪಣಿಗಳು

1. ಬಿ.ಆರ್.ಗೋಪಾಲ, *ವಿಜಯನಗರ ಇನ್ಸ್‌ಕ್ರಿಪ್‌ಶನ್ಸ್,* ಸಂಪುಟ 1 (1985), 2 (1986) ಮತ್ತು 3 (1990), ಮೈಸೂರು.
2. ಎಸ್.ವಿ. ಪಾಡಿಗಾರ್, *ಜಐಸೊಇಂ.,* 12, ಪು. 137-139.
3. *ಕ್ವಾಜಮಿಸೊ.,* 76 (3-4), ಜುಲೈ-ಡಿಸೆಂಬರ್ 1985, ಪು. 389-392.

4. ಎಸ್. ರಾಧಾಕೃಷ್ಣಮೂರ್ತಿ, 1995, *ಶಿವತತ್ವ ರತ್ನಾಕರ ಆಫ್ ಕೆಳದಿ ಬಸವ ಭೂಪಾಲ - ಎ ಕಲ್ಚರಲ್ ಸ್ಟಡಿ*, ಕೆಳದಿ. ಈ ಶಾಸನ ಕೆಳದಿ ವಸ್ತುಸಂಗ್ರಹಾಲಯದಲ್ಲಿದೆ.

5. ಬಿ.ಆರ್. ಗೋಪಾಲ, *ವಿಜಯನಗರ ಇನ್ಸ್‌ಕ್ರಿಪ್‌ಶನ್ಸ್*, ಸಂಪುಟ 3, ಸಂ. 1969.

6. *ಅದೇ*, ಸಂ. 1993.

7. *ಆರಿಸೌಇಂಎ.*, 1928-29, ಸಂ. ಎ 12.

8. ಇದು ಕೆಳದಿ ವಸ್ತು ಸಂಗ್ರಹಾಲಯದಲ್ಲಿದೆ.

9. *ಜಏಸೊಇಂ.*, 6, ಪು. 20-24.

10. ಅನುಬಂಧ ನೋಡಿರಿ.

11. ವಾಲ್ಟರ್ ಎಲ್ಲಿಯಟ್, *ತೆಲುಗು ಇನ್ಸ್‌ಕ್ರಿಪ್‌ಶನ್ಸ್*, ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿ, ಮದ್ರಾಸ್.

12. ಎಂ.ಎಂ.ಕಲ್ಬುರ್ಗಿ, 1994, *ಕರ್ನಾಟಕದ ಕೈಫಿಯತ್ತುಗಳು*, ಕನ್ನಡ ವಿಶ್ವವಿದ್ಯಾಲಯ, ಹಂಪೆ, ಪು. 237, 259.

13. ಕೆಳದಿ ವೆಂಕಟೇಶ, ''ಅನ್ನೋಟೇಸ್ಡ್ ವಿಜಯನಗರ ಇನ್ಸ್‌ಕ್ರಿಪ್‌ಶನ್ ಫೌಂಡ್ ಇನ್ ದೂರ್ವಾಸಪುರಂ'' ಕ್ವಾಜಮಿಸೊ, 83 (4), ಅಕ್ಟೋಬರ್-ಡಿಸೆಂಬರ್ 1992.

14. ವೇಲೂರು ಕೆಳದಿ ಶಿವಪ್ಪನಾಯಕನ ಅಧೀನದಲ್ಲಿದ್ದ ಕಾಲದಲ್ಲಿಯೇ ಇದನ್ನು ನೀಡಿದುದು ಗಮನಾರ್ಹವಾದುದು.

15. ಕೆಳದಿ ವೆಂಕಟೇಶ, *ಪೂರ್ವೋಕ್ತ*.

16. ಇವುಗಳ ಜೆರಾಕ್ಸ್ ಪ್ರತಿ ಪಡೆಯಲು ನನ್ನ ಪ್ರಯತ್ನ ಸಫಲವಾಗಿಲ್ಲ.

10. ಬಾದಾಮಿಯ ಪರಿಸರದ ವಿಜಯನಗರ ಕಾಲದ ಶಾಸನಗಳು

ಶ್ರೀನಿವಾಸ ಪಾಡಿಗಾರ

ಬಾದಾಮಿ - ಪ್ರಾಚೀನ ಬಾದಾವಿ, ವಾತಾಪಿ - ಚಾಲುಕ್ಯರ ರಾಜಧಾನಿಯಾಗಿ ಇನ್ನೂರು ವರ್ಷಗಳಿಗೂ ಹೆಚ್ಚು ಕಾಲ ವೈಭವಯುತವಾಗಿ ಮೆರೆದ ಸ್ಥಳ. ಚಾಲುಕ್ಯರ ಪ್ರೋತ್ಸಾಹದೊಂದಿಗೆ ನಿರ್ಮಾಣಗೊಂಡ ಉತ್ಕೃಷ್ಟ ಗುಹಾಲಯಗಳಿಗೆ ಅದು ಜಗದ್ವಿಖ್ಯಾತವಾಗಿದೆ. ಚಾಲುಕ್ಯ ಕಾಲದ ಅಭಿಜಾತ ಕಲಾ ಪರಂಪರೆಯ ಉತ್ತಮೋತ್ತಮ ಉದಾಹರಣೆಗಳು ಅಲ್ಲಿವೆ. ಅಂತಾಗಿ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಅಷ್ಟೇ ಅಲ್ಲ, ಭಾರತೀಯ ವಾಸ್ತು-ಶಿಲ್ಪ-ಚಿತ್ರಕಲಾ ಇತಿಹಾಸದಲ್ಲಿ ಬಾದಾಮಿಗೆ ನಿರ್ದಿಷ್ಟ ಸ್ಥಾನವಿದೆ. ಇತಿಹಾಸ ರಚನೆಯಲ್ಲಿ ಬಹುತೇಕ ಪ್ರಶ್ನಾತೀತ ಪುರಾವೆಗಳೆನಿಸಿರುವ ಶಾಸನಗಳ ದೃಷ್ಟಿಯಿಂದಲೂ ಬಾದಾಮಿ ಬಡವಾಗಿಲ್ಲ. ಸುಮಾರು ಇನ್ನೂರರಷ್ಟು ಚಿಕ್ಕ, ದೊಡ್ಡ ವೈವಿಧ್ಯಮಯ ವಿಷಯಗಳನ್ನೊಳಗೊಂಡ ಶಾಸನಗಳಿಲ್ಲಿವೆ. ಕೆಲವು ರಾಜಕೀಯ ಇತಿಹಾಸದ ದೃಷ್ಟಿಯಿಂದ, ಇನ್ನು ಕೆಲವು ಧಾರ್ಮಿಕ ಸ್ಥಿತಿಗತಿಯ ದೃಷ್ಟಿಯಿಂದ, ಮತ್ತೆ ಕೆಲವು ವಾಸ್ತು-ಶಿಲ್ಪ ಚರಿತ್ರೆಯ ದೃಷ್ಟಿಯಿಂದ ಇನ್ನೂ ಕೆಲವು ಕನ್ನಡ ಭಾಷೆ, ಸಾಹಿತ್ಯಕ ದೃಷ್ಟಿಯಿಂದ - ಹೀಗೆ ಇತಿಹಾಸದ ಕೆಲವು ವರ್ಣಮಯ ಮುಖಗಳಿಗೆ ಹಿಡಿದಿರುವ ಕೈಗನ್ನಡಿಯಂತಿವೆ ಇಲ್ಲಿಯ ಶಾಸನಗಳು. ಚಾಲುಕ್ಯರ ಆಡಳಿತದ ಕಾಲಘಟ್ಟಕ್ಕೆ ಮಾತ್ರ ಇವು ಸೀಮಿತವಾಗಿಲ್ಲ. ಚಾಲುಕ್ಯಾನಂತರದ ಶಾಸನಗಳೂ ಸಾಕಷ್ಟು ಸಂಖ್ಯೆಯಲ್ಲಿ ಇಲ್ಲಿ ದೊರೆತಿವೆ. ಇವುಗಳಲ್ಲಿ ವಿಜಯನಗರ ಕಾಲದಲ್ಲಿ ಹೊರಟ ಹಲವು ಶಾಸನಗಳಿವೆ. ಬಾದಾಮಿ - ಬನಶಂಕರಿ ಪರಿಸರದಲ್ಲಿ ವಿಜಯನಗರ ಕಾಲದ ಚಟುವಟಿಕೆಗಳನ್ನು ತಿಳಿಯಲು ಇವು ಬಹಳಷ್ಟು ಪ್ರಯೋಜಕವಾಗಿವೆ. ಇವುಗಳನ್ನು ಮಹತ್ವ ಸಹಿತ ಪರಿಚಯಿಸುವ ಒಂದು ಪ್ರಯತ್ನವಿಲ್ಲಿದೆ.

ಬಾದಾಮಿ - ಬನಶಂಕರಿ ಪರಿಸರದಲ್ಲಿ ಗಮನಿಸಲ್ಪಟ್ಟಿರುವ ವಿಜಯನಗರ ಕಾಲದ ಶಾಸನಗಳನ್ನು ವಿಷಯ - ವಸ್ತು ದೃಷ್ಟಿಯಿಂದ ಮೂರು ಪ್ರಮುಖ ಗುಂಪುಗಳನ್ನಾಗಿ ವರ್ಗೀಕರಿಸಬಹುದು:

1. ಕೋಟೆ, ಕೊತ್ತಲಗಳ ನಿರ್ಮಾಣ, ಜೀರ್ಣೋದ್ಧಾರ ಇತ್ಯಾದಿಗಳನ್ನು ಸೂಚಿಸುವ ಶಾಸನಗಳು.
2. ಧಾರ್ಮಿಕ ಚಟುವಟಿಕೆಗಳನ್ನು ತಿಳಿಸುವ ಶಾಸನಗಳು.
3. ನಾವಿದ ಜನಸಮುದಾಯದ ಮೇಲಿನ ತೆರಿಗೆ ಮಾನ್ಯ ಮಾಡಿದುದನ್ನು ದಾಖಲಿಸುವ ಶಾಸನಗಳು.

ಮೊದಲ ಗುಂಪಿನ ಶಾಸನಗಳು ಕುತೂಹಲಕಾರಿಯಾಗಿವೆ. ಚಾಲುಕ್ಯ ವಲ್ಲಭೇಶ್ವರ ಪೊಲೆಕೇಸಿ ಕ್ರಿ.ಶ. 543/4ರಲ್ಲಿ ವಾತಾಪಿಯ ಬೆಟ್ಟವನ್ನು ಅಭೇದ್ಯ ದುರ್ಗವನ್ನಾಗಿ ಪರಿವರ್ತಿಸಿದ ಸಂಗತಿ ಸರ್ವವಿದಿತ. ತದನಂತರ ಮತ್ತೊಮ್ಮೆ ಬಾದಾಮಿಯ ದುರ್ಗ ಚಿತ್ರದಲ್ಲಿ ಬರುವುದು ವಿಜಯನಗರ ರಾಜ್ಯೋದಯದ ಆರಂಭಿಕ ಘಟ್ಟದಲ್ಲಿಯೇ. ತಟ್ಟುಕೋಟೆ ಮಾರುತಿ ಗುಡಿಯ (ಇದನ್ನು ಭತ್ತೇರಪ್ಪನ ಗುಡಿ ಎಂದೂ ಕರೆಯುತ್ತಾರೆ) ಪಕ್ಕದ ಬೃಹತ್ ಬಂಡೆಯ ಮುಖದಲ್ಲಿ ಬರೆದಿರುವ ಈ ಶಾಸನ ಸಂಗಮ ವಂಶದ ಮೊದಲನೇ ಹರಿಹರನದು.[1] ಮಿತಿ ಫೆಬ್ರವರಿ 29, ಕ್ರಿ.ಶ. 1340. ಮಹಾಮಂಡಲೇಶ್ವರ, ಅರಿರಾಯ ವಿಭಾಡ, ಭಾಸೆಗೆ ತಪ್ಪುವ ರಾಯರ ಗಂಡ, ಪೂರ್ವ-ಪಶ್ಚಿಮ ಸಮುದ್ರಾಧಿಪತಿ, ಶ್ರೀ ವೀರಹರಿಯಪ್ಪವೊಡೆಯನ ನಿರೂಪದಿಂದ ಮಹಾನಾಯಕಾಚಾರ್ಯ, ಗಜಸಿಂಹ, ಅಡಿಯಂಕ ಭೀಮ ಶ್ರೀ ಚಾಮೆಯ ನಾಯಕನು ಬಾದಾಮಿಯನ್ನೂ ಮುಂಡನೂರನ್ನೂ ಇತ್ಸಾಸಿರ್ವರಿಗೆ ಭೂತನಾಥ ದೇವರ ಸನ್ನಿಧಿಯಲ್ಲಿ ಸರ್ವಮಾನ್ಯವಾಗಿ ಕೊಟ್ಟು ಬಾದಾಮಿಯ ದುರ್ಗ ಮತ್ತು ಮೂಡಣ ''ಪಾರಟ''ವನ್ನು ರಚಿಸಿದನೆಂದು ಈ ಶಾಸನ ಅರುಹುತ್ತದೆ.

ಇಲ್ಲಿ ಗಮನಾರ್ಹ ಅಂಶವೆಂದರೆ ಬಾದಾಮಿಯ ದುರ್ಗವನ್ನು ''ರಚಿಸಿದ''ನೆಂಬ ಉಲ್ಲೇಖ; ಜೀರ್ಣೋದ್ಧಾರವಿದಲ್ಲ. ಮೂಲ ಬಾದಾಮಿ ದುರ್ಗ ಕಿರಿದಾಗಿದ್ದು, ವಿಜಯನಗರದ ಆರಂಭ ಕಾಲದಲ್ಲಿ ಹೊಸ ಗೋಡೆ, ಕೊತ್ತಲ, ದ್ವಾರ ಮುಂತಾದವುಗಳನ್ನು ''ರಚಿಸಿ'' ವಿಸ್ತೃತಗೊಳಿಸಿದ ಪರೋಕ್ಷ ಸೂಚನೆ ಇಲ್ಲಿದೆ. ವಿಜಯನಗರ ರಾಜ್ಯದ ಉತ್ತರ ಮೇರೆಯಲ್ಲಿದ್ದ ಬಾದಾಮಿ ಆ ಹೆಸರಿನ ''ಸೀಮೆ'' ಯಾಗಿದ್ದು, ಸುತ್ತ ಮುತ್ತಣ ಪ್ರದೇಶದ ಆಡಳಿತ ಕೇಂದ್ರವಾಗಿತ್ತು. ನೈಸರ್ಗಿಕವಾಗಿ ಸೈನಿಕ ದೃಷ್ಟಿಯಿಂದ ಆಯಕಟ್ಟಿನ ಸ್ಥಳವೂ ಆಗಿತ್ತು. ತುಸು ಉತ್ತರಕ್ಕಿದ್ದ ವಿಜಾಪುರ ಆಗಲೇ ಮುಸ್ಲಿಂ ಪ್ರಭುತ್ವದ ಆಗರವಾಗಿತ್ತು.[2] ಹೀಗಾಗಿ ಬಾದಾಮಿಯ ಸೀಮೆಯ ಮೇಲೆ ಬಿಗಿ ಹಿಡಿತವನ್ನು ನೆಲೆಗೊಳಿಸುವುದಕ್ಕಾಗಿ ಹಾಗೂ ರಾಜ್ಯ ಮೇರೆಯ ರಕ್ಷಣೆಗೋಸ್ಕರ ಅದನ್ನು ಪ್ರಬಲ ಆಯಕಟ್ಟಿನ ಸ್ಥಳನನ್ನಾಗಿಸುವುದಕ್ಕಾಗಿ

ದುರ್ಗವನ್ನು ವಿಸ್ತೃತಗೊಳಿಸುವ, ದೃಢೀಕರಿಸುವ ಕಾರ್ಯವನ್ನು ತಮ್ಮ ಇತಿಹಾಸದ ಆರಂಭ ಘಟ್ಟದಲ್ಲಿಯೇ ವಿಜಯನಗರದ ಅರಸರು ಪ್ರಾರಂಭಿಸಿದರೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಬಾದಾಮಿಯ ಉತ್ತರ ಕೋಟೆಯ ಪರಿಸರದಲ್ಲಿ ಪುರಾತತ್ವ ವಸ್ತು ಸಂಗ್ರಹಾಲಯದ ಹಿಂಗಡೆ ಮೆಟ್ಟಿಲುಗಳನ್ನೇರಿ ಮೇಲೆ ಹೋದರೆ ಕಡಿದಾದ ಮಾರ್ಗದ ಎಡಕ್ಕಿರುವ ಬಂಡೆಯ ಮುಖದಲ್ಲಿ ವಿಜಯನಗರ ಕಾಲದ ಇನ್ನೊಂದು ಶಾಸನವಿದೆ.[3] ಐದು ಸಂಸ್ಕೃತ ಪದ್ಯಗಳಿಂದ ರಚಿತವಾದ ಇದು ಬಹುಶಃ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ಹೊರಟದ್ದು. ಭೈಯಿಪೇಂದ್ರನೆಂಬ ಅಧಿಕಾರಿ ಶಿಥಿಲವಾಗಿದ್ದ ಬಾದಾಮಿಯ ಕೋಟೆಯ ಭಾಗಗಳನ್ನು ಅಪಾರ ಹಣ ವೆಚ್ಚಮಾಡಿ ದೃಢೀಕರಿಸಿದ್ದಲ್ಲದೆ ಅಶ್ವಾಧೀಶ, ಗಜಾಧೀಶ, ನರಾಧೀಶಾದಿಗಳಿಗೆ ದುರ್ಘರವಾದ ''ವನದುರ್ಗ'' ವನ್ನು ರಚಿಸಿ ದುರ್ಗದ ಸುತ್ತಲು ''ಗಂಗೆ''ಯನ್ನು ನಿರ್ಮಿಸಿ ''ಜಲದುರ್ಗ''ವಾಗಿ ಮಾಡಿಸಿದನೆಂಬ ವಿಷಯ ಈ ಶಾಸನದಿಂದ ತಿಳಿಯುತ್ತದೆ. ಇದರ ಪೂರ್ತಿ ಪಾಠ ಇನ್ನೂ ಪ್ರಕಟವಾಗಬೇಕಿದೆ. ಬಾದಾಮಿಯ ಕೋಟೆಯ ಹೊರಸುತ್ತಿನ ಗೋಡೆ ಮತ್ತು ಅದರ ಅಂಚಿಗುಂಟ ಸಾಗುವ ಅಗಳು (''ಗಂಗೆ'') ಈ ಕಾಲದಲ್ಲಿ ನಿರ್ಮಾಣವಾಯಿತೆಂದು ಊಹಿಸಬಹುದು. ಭೂತನಾಥ ಹೊಂಡದಿಂದ ಮಿಕ್ಕಿದ ನೀರು ಈ ಅಗಳನ್ನು ಸೇರುವ ವ್ಯವಸ್ಥೆ ಮಾಡಲಾಗಿತ್ತೆಂದು ಅಧ್ಯಯನದಿಂದ ತಿಳಿಯುತ್ತದೆ.

ಅಚ್ಯುತದೇವರಾಯನ ಕಾಲದಲ್ಲಿ ಇನ್ನೊಮ್ಮೆ ಬಾದಾಮಿಯ ದುರ್ಗ ಚಿತ್ರದಲ್ಲಿ ಬರುತ್ತದೆ. ಕ್ರಿ.ಶ. 1532ರಲ್ಲಿ ಬರಸಲಾದ ಬನಶಂಕರಿಯಲ್ಲಿ ದೊರೆತ ಶಾಸನ[4] ತಿಳಿಸುವಂತೆ ಆಗ ಬಾದಾಮಿಯ ದುರ್ಗ ಹಾಗೂ ಬನದ ಮಹಾಮಾಯೆಯ ದೇಗುಲ ಸಹಿತ ಅನೇಕ ದೇವಾಲಯಗಳು ಖಿಲವಾಗಿದ್ದವು. ಇವುಗಳ ಜೀರ್ಣೋದ್ಧಾರ ಮಾಡಿಸಲೆಂದು ಸೇನಾಧಿಪತಿ ಚಿಂನಪನಾಯಕನು ತನ್ನ ತಮ್ಮ ಕುಮಾರ ಚಿಕ್ಕ-ಚಿಂನಪನಾಯಕನನ್ನು ಕಳಿಸಿದನು. ಆತ ಈ ನಿರೂಪವನ್ನು ಕಾರ್ಯಗತ ಮಾಡಿದನೆಂದು ಶಾಸನ ತಿಳಿಸುತ್ತದೆ. ಬಹುಶಃ ಈ ಜೀರ್ಣೋದ್ಧಾರ ಕಾರ್ಯದ ಅಂಗವಾಗಿ ಬಾದಾಮಿಯ ತ್ರಿಕೂಟ (ಜಂಬುಲಿಂಗ) ದೇವಾಲಯದ ಇಟ್ಟಿಗೆ ಗಾರೆಯ ಶಿಖರ ನಿರ್ಮಾಣವಾದಂತೆ ತೋರುತ್ತದೆ.

ತರುವಾಯ, ಇನ್ನು ಹತ್ತು ವರ್ಷಗಳ ನಂತರ, ಕ್ರಿ.ಶ. 1542ರಲ್ಲಿ, ಸದಾಶಿವರಾಯನ ಆಳ್ವಿಕೆಯಿದ್ದಾಗ ಕೆಲವು ಕೊತ್ತಲಗಳು ಬಾದಾಮಿಯಲ್ಲಿ ನಿರ್ಮಿಸಲ್ಪಟ್ಟವು. ಇವುಗಳಲ್ಲಿ ಒಂದು ಮೂರನೆಯ ಗುಹಾಲಯದ ಎದುರುಗಡೆ (ಅಥವಾ ಆ ಗುಹೆಯಿರುವ ಬಂಡೆಯ ಮೇಲ್ಗಡೆ?) ಕೊಂಡರಾಜ ಅರಸನೆಂಬ ಅಧಿಕಾರಿಯ ಅಧಿವೀಕ್ಷಣೆಯಲ್ಲಿ ಕಟ್ಟಲ್ಪಟ್ಟಿತು.[5] ಮತ್ತೊಂದು ಅದೇ ಅಧಿಕಾರಿಯ ಅದ್ದಿಕದಲ್ಲಿ ಸದಾಶಿವರಾಯನ ಹಡಪದ ಎರಕೃಷ್ಣಪ್ಪ ನಾಯಕನಿಂದ ಮಾಲಗಿತ್ತಿ ಶಿವಾಲಯದ ಎದುರುಗಡೆ ನಿರ್ಮಿತವಾಯಿತು.[6]

ಒಟ್ಟಾರೆ ಬಾದಾಮಿಯ ದುರ್ಗದ ಕುರಿತಾದ ಶಾಸನೋಲ್ಲೇಖಗಳು ವಿಜಯನಗರ ಅರಸರು ಆಗಿಂದಾಗ್ಗೆ ರಾಜ್ಯೋದಯ ಕಾಲದಿಂದಲೇ ಇಲ್ಲಿಯ ದುರ್ಗ ನಿರ್ಮಾಣ, ವಿಸ್ತರಣೆ, ದೃಢೀಕರಣ, ಜೀರ್ಣೋದ್ಧಾರಗಳಿಗೆ ಗಮನಹರಿಸುತ್ತಿದ್ದುದನ್ನು ಸ್ಪಷ್ಟಪಡಿಸುತ್ತವೆ. ಆದ್ದರಿಂದ ವಿಜಯನಗರ ರಾಜ್ಯದ ಉತ್ತರ ಮೇರೆಯ ಪ್ರಬಲ ಸೈನಿಕ ಠಾಣ, ಆಯಕಟ್ಟಿನ ಸ್ಥಳವಾಗಿ ಬಾದಾಮಿ ಪ್ರಮುಖ ಪಾತ್ರವಹಿಸಿತ್ತೆಂಬುದು ವಿದಿತವಾಗುತ್ತದೆ.

ಬಾದಾಮಿ - ಬನಶಂಕರಿಯ ಪರಿಸರದಲ್ಲಿ ವಿಜಯನಗರ ಕಾಲದ ಧಾರ್ಮಿಕ ಚಟುವಟಿಕೆಗಳ ಮೇಲೆ ಬೆಳಕು ಚೆಲ್ಲುವ ಕೆಲವು ಶಾಸನಗಳಿವೆ. ಅಚ್ಯುತದೇವರಾಯನ ಕಾಲದಲ್ಲಿ ಬಾದಾಮಿಯ ಖಿಲ ದೇವಾಲಯಗಳು ಹಾಗೂ ಬನಶಂಕರಿಯ ಮಹಾಮಾಯೆಯ ದೇವಾಲಯದ ಜೀರ್ಣೋದ್ಧಾರ ನಡೆದುದನ್ನು ಮೇಲೆ ಉಲ್ಲೇಖಿಸಿದೆ. ಬಾದಾಮಿಯಲ್ಲಿ ಕೊತ್ತಲವನ್ನು ಕಟ್ಟಿದ ಸದಾಶಿವದೇವರಾಯನ ಹಡಪದ ಎರಕೃಷ್ಣಪ್ಪನಾಯಕನು ಕ್ರಿ.ಶ. 1542ರಲ್ಲಿ ಬನದ ಮಹಾಮಾಯೆಯ ಅಮೃತಪಡಿ, ಅಂಗವೈಭವಕ್ಕೆಂದು ಬಾದಾಮಿಯ ಸೀಮೆಗೆ ಸಲುವ ಮಲಪ್ರಭಾ ತೀರದ ದಾಣಕ ಸಿರಿವೂರ (=ಢಾಣಕಸಿರೂರ) ಗ್ರಾಮವನ್ನು ನೀಡಿದ ವಿಷಯ ಬನಶಂಕರಿಯ ಮತ್ತೊಂದು ಶಾಸನದಿಂದ ಗೊತ್ತಾಗುತ್ತದೆ.

ಬಾದಾಮಿಯ ಮೂರನೆಯ, ಅಂದರೆ ವೈಷ್ಣವ ಗುಹಾಲಯದಲ್ಲಿ ವಿಜಯನಗರ ಕಾಲದ ಮೂರು ತೆಲುಗು ಶಾಸನಗಳಿವೆ. ಇವೆಲ್ಲ ಕ್ರಿ.ಶ. 16ನೇ ಶತಮಾನದ ಪೂರ್ವಾರ್ಧಕ್ಕನ್ವಯಿಸುತ್ತವೆ. ಒಂದು ಕ್ರಿ.ಶ. 1553ರದು. ಬಾದಾಮಿಯ ವಿಠಲನ ಸಂನಿಧಿಯಲ್ಲಿ ಹರಿಲರಡ ವೆಂಕಟಯ್ಯನು ಹನ್ನೆರಡು ಆಳ್ವಾರರ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿದುದನ್ನು ಈ ಶಾಸನ ಅರಹುತ್ತದೆ.[8] ಇದು ಎರಡು ದೃಷ್ಟಿಯಿಂದ ಮಹತ್ವದ್ದಾಗಿದೆ. ಒಂದು, ಆ ಗುಹಾಲಯದ ಗರ್ಭಗೃಹದಲ್ಲಿದ್ದ ಚಾಲುಕ್ಯ ಕಾಲದ ವಿಷ್ಣು ಪ್ರತಿಮೆಯನ್ನು ''ವಿಠ್ಠಲ'' ನದೆಂದು ಆ ಕಾಲದಲ್ಲಿ ಭಾವಿಸಲಾಗಿತ್ತು ಎಂಬುದು. ಎರಡು, ಆಳ್ವಾರರ ಪ್ರತಿಮೆಗಳು ಇಲ್ಲಿ ಪ್ರತಿಷ್ಠಾಪಿತವಾದ ಉಲ್ಲೇಖ ಶ್ರೀವೈಷ್ಣವ ಮತ

ಬಾದಾಮಿಯವರೆಗೂ ಹರಡಿತ್ತೆಂಬುದನ್ನು ಸೂಚಿಸುವಂತಿದೆ. ವಿಜಯನಗರದ ತುಳುವ ವಂಶದ ಅರಸರ ಆಳ್ವಿಕೆಯಲ್ಲಿ ಶ್ರೀವೈಷ್ಣವ ಮತಕ್ಕೆ ಬಹಳಷ್ಟು ಪ್ರೋತ್ಸಾಹ ದೊರೆಯಿತೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಇದೇ ಗುಹಾಲಯದ ಇನ್ನೊಂದು ತೆಲುಗು ಶಾಸನ ಕೂಡ ಸುಮಾರಾಗಿ ಅದೇ ಕಾಲದ್ದು.[9] ವಿಠ್ಠಲನ ಸಂನಿಧಿಯಲ್ಲಿ ಚೆಂತಿಕುಪ್ಪ ರಂಗಯ್ಯನು ರುಕ್ಮಿಣೀ-ಸತ್ಯಭಾಮೆಯರ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ ಉಲ್ಲೇಖ ಇದರಲ್ಲಿದೆ. ಗುಹಾಲಯದ ಗರ್ಭಗೃಹದಲ್ಲಿ ಮೂರು ಪ್ರತಿಮೆಗಳನ್ನಿರಿಸಲು ಪೀಠಗಳಿವೆ. ಇವುಗಳಲ್ಲಿ ಮಧ್ಯದ ಪೀಠ ಬಂಡೆಯ ಮೂಲ ಶಿಲೆಯಿಂದಲೇ ಕಟೆದು ನಿರ್ಮಿಸಲಾದದ್ದು. ಇನ್ನೆರಡು ನಂತರ ನಿರ್ಮಿಸಿ ಸೇರಿಸಲ್ಪಟ್ಟವುಗಳು.[10] ಪ್ರಸ್ತುತ ಶಾಸನದ ಹಿನ್ನೆಲೆಯಲ್ಲಿ ಮೂಲಪೀಠದ ಮೇಲೆ ಚಾಲುಕ್ಯ ಕಾಲದ ಸ್ಥಾನಕ ವಿಷ್ಣು ಪ್ರತಿಮೆ ನಿಂತಿತ್ತೆಂದೂ ಇದನ್ನು "ವಿಠ್ಠಲ"ನೆಂದು ಭಾವಿಸಿ[11] ಒಂಟಿಯಾಗಿದ್ದ ವಿಷ್ಣುವಿನ ಇಕ್ಕೆಲಗಳಲ್ಲಿ ರುಕ್ಮಿಣೀ-ಸತ್ಯಭಾಮೆಯರ ಪ್ರತಿಮೆಗಳನ್ನು 16ನೇ ಶತಮಾನದಲ್ಲಿ ಸೇರಿಸಲಾಯಿತೆಂದು ವಿವರಿಸಲು ಸಾಧ್ಯವಾಗುತ್ತದೆ. ಚೆಂತಿಕುಪ್ಪ ರಂಗಯ್ಯನು ದೇವರಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಿರುವ ಸಾಂಕೇತಿಕ ಶಿಲ್ಪವನ್ನು ಈ ಗುಹಾಲಯದ ಒಳ ಹೊಸ್ತಿಲಲ್ಲಿ ಈಗಲೂ ಕಾಣಬಹುದು.

ಬಾದಾಮಿಯ ಚಾಲುಕ್ಯ ಗುಹಾಲಯಗಳ ಶ್ರೇಣಿಯಲ್ಲಿ ಒಂದು ಜೈನ ಗುಹಾಲಯವೂ ಇದೆಯೆಂಬುದು ತಿಳಿದಿರುವ ವಿಷಯ. ಜೈನರ ಚಟುವಟಿಕೆಗಳು ವಿಜಯನಗರ ಕಾಲದಲ್ಲೂ ಮುಂದುವರೆದಿದ್ದವೆಂಬುದಕ್ಕೆ ಕನಿಷ್ಠ ಒಂದು ಶಾಸನ ನಮಗೆ ಪುರಾವೆ ನೀಡುತ್ತದೆ. ಗುಹಾಲಯಗಳಿರುವ ಬಂಡೆಯ ನೆತ್ತಿಯಲ್ಲಿ ಬಂಡೆ ಆಸರೆಯೊಂದರ ಮುಖದಲ್ಲಿ ಕ್ರಿ.ಶ. 1557ರ ಕಿರು ಶಾಸನವಿದೆ.[12] ವರ್ಧಮಾನದೇವರು ಮುಡಿಪಾದುದನ್ನು ಇದು ತಿಳಿಸುತ್ತದೆ. 16ನೇ ಶತಮಾನದಲ್ಲಿ ಜೈನ ಮುನಿಗಳು ಇಲ್ಲಿ ಕ್ರಿಯಾಶೀಲರಾಗಿದ್ದರೆಂಬುದರ ಸ್ಪಷ್ಟ ಪುರಾವೆ ಇಲ್ಲಿದೆ.

ಇನ್ನು ಮೂರನೆಯ ಗುಂಪಿನ ಶಾಸನಗಳು. ಸದಾಶಿವರಾಯನ ಆಡಳಿತಾವಧಿಯಲ್ಲಿ ಕ್ರಿ.ಶ. 1547-1553ರ ನಡುವೆ ವಿಜಯನಗರ ಸಾಮ್ರಾಜ್ಯದ ಉತ್ತರ ಭಾಗದಲ್ಲಿ ನಾವಿದರ ಮೇಲಿನ ತೆರಿಗೆ ವಿನಾಯಿತಿ ಮಾಡಿದ್ದನ್ನು ದಾಖಲಿಸುವ ಅನೇಕ ಶಾಸನಗಳು ವಿವಿಧ ಸ್ಥಳಗಳಲ್ಲಿ ದೊರೆತಿವೆ.[13] ಬಾದಾಮಿ ಇದಕ್ಕೆ ಹೊರತಾಗಿಲ್ಲ. ಬಾದಾಮಿಯ ತಿಮ್ಮೋಜ, ಕಂಡೋಜ ಮತ್ತು ಭದ್ರಿ ಎಂಬ ಮೂವರು ಅರಸನನ್ನು ಮೆಚ್ಚಿಸಿ ಉಳಬಿಯ ನಾವಿದರ ಮೇಲಿನ ತೆರಿಗೆ ಮಾನ್ಯ ಮಾಡಿದುದಾಗಿ ಕ್ರಿ.ಶ. 1547ರ ಶಾಸನದಲ್ಲಿ ತಿಳಿಸುತ್ತದೆ.[14] ಸದಾಶಿವರಾಯ, ರಂಗರಾಜ, ರಾಮರಾಜಯ್ಯ, ಎರೆಮರಾಜಯ್ಯ, ವೆಂಕಟಾದ್ರಿರಾಜಯ್ಯ ಇವರು ಸಹ ಶಾಸನದಲ್ಲಿ ಉಲ್ಲೇಖಿತರಾಗಿದ್ದಾರೆ. ಬಾದಾಮಿಯ ಇನ್ನೊಂದು ತ್ರುಟಿತ ಶಾಸನ ಬಾದಾವಿ ಸ್ಥಳದ ನಾವಿಲ ದೇಚಯ್ಯನಿಗೆ ಕೊಟ್ಟ ಹೊಲದ ಮಾನ್ಯವನ್ನು ದಾಖಲಿಸಿದೆ.[15]

ಈ ಕಿರುಸಮೀಕ್ಷೆ ವಿಜಯನಗರ ಕಾಲದ ಬಾದಾಮಿಯ ರಾಜಕೀಯ-ಸಾಂಸ್ಕೃತಿಕ ಪರಿಸರದ ಕೆಲವು ಸೆಳಕುಗಳನ್ನಾದರು ಪರಿಚಯಿಸಿರಬೇಕು. ಈ ಶಾಸನಗಳ ಹಿನ್ನೆಲೆಯಲ್ಲಿ ಬಾದಾಮಿಯ ರಕ್ಷಣಾ ವಾಸ್ತು ಬೆಳವಣಿಗೆಯ ಪರಿಯನ್ನು ಸರಿಯಾಗಿ ಅಧ್ಯಯನ ಮಾಡಬೇಕಿದೆ.[16] ಮೂರನೆಯ ಗುಹಾಲಯದಲ್ಲಿ ಈ ಕಾಲದ ಚಟುವಟಿಕೆ ಕೇವಲ ಧಾರ್ಮಿಕ ಭಾವನೆಯಲ್ಲಿ ಹೊಸ ವ್ಯವಸ್ಥೆಯ ಪ್ರಭಾವದ ದ್ಯೋತಕವಾಗಿರುವುದಷ್ಟೇ ಅಲ್ಲದೆ ಅಲ್ಲಿರುವ ಪ್ರಮುಖ ಶಿಲ್ಪಗಳು ಪುನರಪಿ ವಿಜಯನಗರ ಕಾಲದ ಶಿಲ್ಪಿಗಳ ಕೈವಾಡದ ಝಳಕು ಕಂಡಿರಬಹುದೆಂಬುದಕ್ಕೆ ಪರೋಕ್ಷ ಪುರಾವೆಗಳನ್ನು ಒದಗಿಸುತ್ತದೆ.[17]

ಅಡಿ ಟಿಪ್ಪಣಿಗಳು

1. *ಇಎಂ.*, 10, ಪು. 63.
2. ವಿಜಾಪುರದ ಕರೀಮುದ್ದೀನ್ ಮಸೀದಿಯಲ್ಲಿ ಕ್ರಿ.ಶ. 1320ರ ಶಾಸನದಿಂದ ಅಲಾಉದ್ದೀನ್ ಖಿಲ್ಜಿಯ ಪುತ್ರ ಕುತ್ಬುದ್ದೀನನು ರಾಜ್ಯವಾಳುತ್ತಿದ್ದಾಗ ಆತನ ಅಧಿಕಾರಿ ಕರೀಮುದ್ದೀನನು ವಿಜಯಪುರದಲ್ಲಿ ತಂದೆಗೆ ಮಸೀದಿಯನ್ನು ಕಟ್ಟಿಸಿದ್ದು ತಿಳಿಯುತ್ತದೆ. *ಮೆಮೊಯರ್ಸ್ ಆಫ್ ದಿ ಆರ್ಕಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ*, 49, ಪು. 25. ಸೀತಾರಾಮ ಜಾಗೀರ್‌ದಾರ್, 1990, *ಸಾಪೇಕ್ಷ*, ಬೆಂಗಳೂರು, ಪು. 48-49ರಲ್ಲಿ ಮರು ಉಲ್ಲೇಖಿತ.
3. *ಸೌಇಂಇ.*, 15, ಸಂ. 706. ಆದರೆ ಈ ಪಾಠ ಸರಿಯಾಗಿಲ್ಲ ಹಾಗೂ ಪೂರ್ತಿಯಾಗಿಲ್ಲ.
4. *ಇಎಂ.*, 5, ಪು. 19-20.
5. *ಅದೇ*, 10, ಪು. 64. *ಸೌಇಂಇ.*, 20, ಸಂ. 237.

6. ಇಂಎಂ., 10, ಪು. 64.

7. *ಅದೇ,* ಪು. 66-67.

8. ಶ್ರೀನಿವಾಸ ವಿ. ಪಾಡಿಗಾರ, ''ಥ್ರೀ ಅನ್‌ಪಬ್ಲಿಶ್‌ಡ್ ಇನ್ಸ್‌ಕ್ರಿಪ್‌ಶನ್ಸ್ ಫ್ರಾಂ ಬದಾಮಿ'', *ದಿ ಕ್ವಾರ್ಟರ್ಲಿ ಜರ್ನಲ್ ಆಫ್ ದಿ ಮಿಥಿಕ್ ಸೊಸಾಯಿಟಿ,* 79/3, ಪು. 290-95.

9. *ಅದೇ.*

10. ಅ. ಸುಂದರ ಅವರು ಈ ಆಧಾರದ ಮೇಲೆ ಇದು ಮೂಲತಃ ತ್ರೈಪುರುಷ ದೇವಾಲಯವಾಗಿತ್ತೆಂದು ತಪ್ಪಾಗಿ ಅಭಿಪ್ರಾಯ ನೀಡಿದ್ದಾರೆ.

11. ಚಾಲುಕ್ಯ ಕಾಲದ ಸ್ಥಾನಕ ವಿಷ್ಣು ಪ್ರತಿಮೆಗಳಲ್ಲಿ ಸಮಸ್ಥಾನಕ ಭಂಗಿಯಲ್ಲಿ ನಿಂತಿರುವ ಚತುರ್ಭುಜ ವಿಷ್ಣು ಮೇಲಣ ಕೈಗಳಲ್ಲಿ ಚಕ್ರ (ಬಲ), ಶಂಖ (ಎಡ)ಗಳನ್ನು ಹಿಡಿದು ಕೆಳ ಕೈಗಳನ್ನು ಕಟಿಯ ಸಮೀಪ ಇರಿಸಿರುವಂತೆ ತೋರಿಸಲಾಗಿರುತ್ತದೆ. ಹೀಗಾಗಿ ಇದನ್ನು 'ವಿಠ್ಠಲ'ನೆಂದು ತಪ್ಪಾಗಿ ಭಾವಿಸಿದಂತೆ ಕಾಣುತ್ತದೆ.

12. ಇಂಎಂ., 10, ಪು. 65.

13. ನೋಡಿ, ಬಿ.ಆರ್.ಗೋಪಾಲ, *ವಿಜಯನಗರ ಇನ್ಸ್‌ಕ್ರಿಪ್‌ಶನ್ಸ್,* 1, ಸಂ. 283, 295, 303, 403, 409, 426-27.

14. ಇಂಎಂ., 10, ಪು. 64-65

15. ಸೌಇಂಇ., 15, ಸಂ. 677.

16. ಪ್ರಾಚೀನ ಕರ್ನಾಟಕದ ರಕ್ಷಣಾ ವಾಸ್ತು ಕುರಿತ ಅಧ್ಯಯನದಲ್ಲಿ ಎಸ್.ಕೆ. ಜೋಶಿಯವರು ವಿಜಯನಗರ ಕಾಲದ ಕೋಟೆ ನಿರ್ಮಿತಿಗಳನ್ನು ಗುರುತಿಸಿದ್ದಾರಾದರೂ ಈ ಶಾಸನಗಳನ್ನು ಬಳಸಿದಂತೆ ತೋರುವುದಿಲ್ಲ. ಎಸ್.ಕೆ. ಜೋಶಿ, 1985, *ಡಿಫೆನ್ಸ್ ಆರ್ಕಿಟೆಕ್ಚರ್ ಇನ್ ಅರ್ಲಿ ಕರ್ನಾಟಕ,* ಡೆಲ್ಲಿ.

17. ಮೂರನೇ ಗುಹಾಲಯದ ಶೇಷಾಸೀನ ವಿಷ್ಣು, ತ್ರಿವಿಕ್ರಮ ಮುಂತಾದ ಬೃಹತ್ ಶಿಲ್ಪಗಳ ಮುಖಗಳಿಗೆ ವಿಜಯನಗರ ಕಾಲದ ಶಿಲ್ಪಿಗಳು ತುಸು ಸಂಸ್ಕಾರ ನೀಡಿದ್ದಾರೆಂಬುದನ್ನು ನನ್ನ ಅಧ್ಯಯನದಲ್ಲಿ ಕಂಡುಕೊಂಡಿದ್ದೇನೆ.

11. ಶಾಸನಗಳಲ್ಲಿ ಕಂಡಂತೆ ವಿಜಯನಗರ ಪಟ್ಟಣದ ನೀರಿನ ವ್ಯವಸ್ಥೆ

ಚನ್ನಬಸಪ್ಪ ಎಸ್. ಪಾಟೀಲ

ದಕ್ಷಿಣ ಭಾರತದಾದ್ಯಂತ ವ್ಯಾಪಿಸಿದ್ದ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ವಿಜಯನಗರ ಪಟ್ಟಣವು ಸುಮಾರು 25 ಚ.ಕಿ.ಮೀ. ಗಳಷ್ಟು ದೊಡ್ಡದಾಗಿತ್ತು. ಪಟ್ಟಣದ ಸುತ್ತ ಅನೇಕ ಜನನಿಬಿಡ ಉಪನಗರ ಪ್ರದೇಶಗಳೂ ಇದ್ದವು. ರಾಜಧಾನಿ ಮತ್ತು ಸುತ್ತಲಿನ ಉಪನಗರ ಪ್ರದೇಶಗಳಿಗೆ ಉತ್ತಮವಾದ ನೀರಿನ ಸೌಕರ್ಯವಿದ್ದುದು ಇತಿಹಾಸಕಾರರಿಗೆ ತಿಳಿದಿರುವ ವಿಷಯವೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಶಾಸನಗಳ ಉಲ್ಲೇಖಗಳ ಕಡೆಗೆ ಗಮನ ಹರಿಸುವುದೇ ಈ ಪ್ರಬಂಧದ ಉದ್ದೇಶ. ಜನರ ದೈನಂದಿನ ಉಪಯೋಗಕ್ಕೆ, ಹೊಲ, ಗದ್ದೆ, ತೋಟಗಳಿಗೆ ಮತ್ತು ಪ್ರವಾಸಿಗಳಿಗೆ ಒದಗಿಸಿದ್ದ ನೀರಿನ ಸೌಕರ್ಯಗಳನ್ನು ಗಮನದಲ್ಲಿಟ್ಟುಕೊಂಡು ಅಣೆಕಟ್ಟು, ಕಾಲುವೆ, ಕೆರೆ, ಬಾವಿ, ಅರವಟ್ಟಿಗೆ ಮುಂತಾದವುಗಳನ್ನು ಇಲ್ಲಿ ಪರಿಶೀಲಿಸಲಾಗಿದೆ.

ಜನರಿಗೆ, ಪ್ರಾಣಿಗಳಿಗೆ ಮತ್ತು ವ್ಯವಸಾಯಕ್ಕೆ ನೀರಿನ ವ್ಯವಸ್ಥೆಯನ್ನು ಒದಗಿಸುವುದು ಒಂದು ಸಾಮಾಜಿಕ ಜವಾಬ್ದಾರಿಯಾಗಿತ್ತೆಂಬುದು ಹಂಪೆಯ ಕಡಲೆಕಾಳು ಗಣೇಶನ ಗುಡಿಯ ಮುಂದಿರುವ ಅಗುಸೆಯಲ್ಲಿರುವ ಶಾಸನದಿಂದ ತಿಳಿಯುತ್ತದೆ. ವಿಜಯನಗರದ ಪ್ರೌಢ ಪ್ರತಾಪ ದೇವರಾಯನ ಮಂತ್ರಿಯಾದ ಲಕ್ಷ್ಮೀಧರನ ಶಾಸನವೆಂದು ಪ್ರಸಿದ್ಧವಾಗಿರುವ ಈ ಶಾಸನದ ಕಾಲ ಕ್ರಿ.ಶ. 1411. ದೇವರಾಯನ (ಕ್ರಿ.ಶ. 1406-22) ಮಂತ್ರಿಗಳಾದ ಮಾದರಸ ಮತ್ತು ಸಾಯಣರ ಬಗ್ಗೆ ಶಾಸನವು ಕೆಳಗಿನಂತೆ ಉಲ್ಲೇಖಿಸುತ್ತದೆ:[1]

''ತೋಡದ ಬಾವಿಯಿಲ್ಲ ಮರೆಕಟ್ಟದ ಪೆರ್ಗ್ಗೆರೆಯಿಲ್ಲ
ಲೀಲೆಯಿಂ ಮಾಡದ ದೇವತಾಭವನಮಿಲ್ಲೊಲವಿಂ ಬಿಡದಗ್ರಹಾರಮಿ
ಲ್ಲಾಡಲದೇನೊ ಭೂಭುವನಭುಂಭುಕಮಾದುದು ಕೀರ್ತಿಬಾಪು
ನಾ ಪಾಡಿಯೆ ಸೈಪು ಮಾದರಸ ಸಾಯಣರೆಂಬ ಮಹಾಪ್ರಧಾನರಾ ॥ ''

ಇದೇ ಶಾಸನದಲ್ಲಿ ಲಕ್ಷ್ಮೀಧರ ಕೂಸಾಗಿದ್ದಾಗ ಅವನ ತಾಯಿ ಹಾಡಿ ಹಾಲೆರೆಯುತ್ತಾ ಕಿವಿಯಲ್ಲಿ ಹೇಳಿದ ಒಂದು ಪದ್ಯ ಹೀಗಿದೆ:

''ಕೆರೆಯಂ ಕಟ್ಟಿಸು ಬಾವಿಯಂ ಸವಸು ದೇವಾಗಾರಮಂ
ಮಾಡಿಸಜ್ಜೆರೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯಿ
ನಂಬಿದರ್ಗ್ಗೆರೆವಟ್ಟಾಗಿರು ಶಿಷ್ಟರಂ ಪೊರೆಯೆನುತ್ತಿಂತೆಲ್ಲವಂ
ಪಿಂದೆ ತಾಂಯೆರದಲ್ಪಾಲೆರವಂದು ತೊಟ್ಟು ಕಿವಿಯೊಳ್
ಲಕ್ಷ್ಮೀಧರಾಮಾತ್ಯನಾ ।''

ಅಣೆಕಟ್ಟು:

ವಿಜಯನಗರ ಪಟ್ಟಣದ ಪಕ್ಕದಲ್ಲಿಯೇ ಹರಿಯುತ್ತಿರುವ ತುಂಗಭದ್ರಾ ನದಿಗೆ ವಿಜಯನಗರ ಕಾಲದಲ್ಲಿ ಕಟ್ಟಿದ ಅನೇಕ ಅಣೆಕಟ್ಟುಗಳು ಈಗಲೂ ಉಪಯೋಗದಲ್ಲಿವೆ. ಇವುಗಳಲ್ಲಿ ಈಗ ''ವಿಜಯನಗರ ತುರ್ತಾ ಕಾಲುವೆ ಅಣೆಕಟ್ಟು ನಂ. 1'' ಎಂದು ಕರೆಯಲಾಗುವ ಅಣೆಕಟ್ಟನ್ನು ಚಿಂತಾಯಕ ದೇವಣ್ಣನು ಕಟ್ಟಿಸಿದನೆಂದೂ ಮತ್ತು ಕಟ್ಟಿದವನು ಬೊಮ್ಮೋಜನೆಂದೂ ಅಲ್ಲಿಯ ಶಾಸನದಿಂದ ತಿಳಿಯುತ್ತದೆ.[2] ಈ ಅಣೆಕಟ್ಟು ಹಂಪೆಯಿಂದ ಪಶ್ಚಿಮಕ್ಕೆ ಸುಮಾರು ಮೂರು ಕಿ.ಮೀ. ದೂರದಲ್ಲಿದ್ದು, ಈಗಲೂ ಸುಸ್ಥಿತಿಯಲ್ಲಿದೆ.

ಕಾಲುವೆಗಳು:

ವಿಜಯನಗರ ತುರ್ತಾ ಕಾಲುವೆ ಅಣೆಕಟ್ಟಿನಿಂದ ಪ್ರಾರಂಭವಾಗುವ ಕಾಲುವೆ ಅಣೆಕಟ್ಟಿನಿಂದ 6.2 ಕಿ.ಮೀ. ದೂರದಲ್ಲಿ ಮತಂಗ ಪರ್ವತದ ಪೂರ್ವಕ್ಕೆ ಒಂದು ಕಲ್ಲು ಗುಂಡನ್ನು ಸೀಳಿಕೊಂಡು ಮುಂದೆ ಸಾಗುತ್ತದೆ. ಗುಂಡನ್ನು ಒಡೆಸಿ ಕಾಲುವೆಯನ್ನು ಕಟ್ಟಿಸಿದ್ದು



1. ಚಿಂತಾಯಕ ದೇವಣ್ಣನು ಅಣೆಕಟ್ಟನ್ನು ಕಟ್ಟಿಸಿದ ವಿಷಯ ತಿಳಿಸುವ ಶಾಸನ



2. ಚಿಂತಾಯಕ ದೇವಣ್ಣನು ಕಟ್ಟಸಿದ ಅಣೆಕಟ್ಟು. ಅಣೆಕಟ್ಟಿನ ಕೊನೆಯಲ್ಲಿರುವ ಕಲ್ಲಿನ ಮೇಲೆ ಶಾಸನವಿದೆ.

ಪಕ್ಕದಲ್ಲಿಯ ಮತ್ತೊಂದು ಗುಂಡಿನ ಮೇಲಿರುವ ಶಾಸನದಿಂದ ತಿಳಿಯುತ್ತದೆ. ವಿಜಯನಗರ ಅರಸ ವಿರೂಪಾಕ್ಷರಾಯರ (ಕ್ರಿ.ಶ. 1404-06) ಆದೇಶದ ಮೇರೆಗೆ ಹೆಗಡೆ ಹಿತ್ತಲಬಾಗಿಲ ಬಸವಣ್ಣ ಅಣ್ಣ ಗುಂಡನ್ನು ಒಡೆಸಿ (ಕಾಲುವೆಯನ್ನು) ಕಟ್ಟಿಸಿದನೆಂದು ಶಾಸನವು ತಿಳಿಸುತ್ತದೆ.[3] ಕಾಲುವೆಯನ್ನು ಗುಡ್ಡದ ಬದಿಯಲ್ಲಿ ನಿರ್ಧಾರಿತ ಮಟ್ಟದಲ್ಲಿಯೇ ಹರಿಸಬೇಕಾದುದರಿಂದ ಕಾಲುವೆಗೆ ಅಡ್ಡ ಬಂದ ಗುಂಡನ್ನು ಒಡೆಸಿ ಕಾಲುವೆಯನ್ನು ನಿರ್ಮಿಸಲಾಗಿದೆ. ಕಲ್ಲನ್ನು U ಆಕಾರದಲ್ಲಿ ಒಡೆದಿರುವುದರಿಂದ ಉಳಿದ ಭಾಗವನ್ನು ಕಾಲುವೆಯ ಎರಡು ಬದಿಗಳಲ್ಲೂ ಮತ್ತು ತಳಭಾಗದಲ್ಲಿಯೂ ನೋಡಬಹುದು.

ಈಗಿನ ತುರ್ತಾ ಕಾಲುವೆಯ ಮೂಲ ಹೆಸರು ಹಿರಿಯ ಕಾಲುವೆ ಆಗಿತ್ತೆಂಬುದು ಶಾಸನಗಳಿಂದ ತಿಳಿಯುತ್ತದೆ. ಕಡಿರಾಂಪುರ - ಹಂಪೆ ರಸ್ತೆಯ ಪೂರ್ವಕ್ಕೆ ತುರ್ತಾ ಕಾಲುವೆಗೆ ಸೇತುವೆಯನ್ನು ನಿರ್ಮಿಸಿ ಅದರ ಮೇಲೆ ದೇವಾಲಯವನ್ನು ಕಟ್ಟಲಾಗಿದೆ. ಈ ಕಾಲುವೆ ಮತ್ತು ದೇವಾಲಯದ ಬಗ್ಗೆ ಉಲ್ಲೇಖಿಸುವ ಶಾಸನವು ಪಕ್ಕದಲ್ಲಿಯೇ ಇದೆ. ವಿಜಯನಗರದ ಅರಸ ಕೃಷ್ಣದೇವರಾಯನ ಕ್ರಿ.ಶ. 1524ರ ಈ ಶಾಸನದ ಪಾಠ ಹೀಗಿದೆ:[4]

''. . . . ತೆರಕಣಂಬಿಯ ವಿರೂಪಾಕ್ಷಭಟರ ಮಕ್ಕಳು ಗೋಪಿನಾಥ ದೀಕ್ಷಿತರು
ಹಿರಿಯ ಕಾಲುವೆಯಲಿ ಪ್ರತಿಷ್ಠೆಯ ಮಾಡಿದ ರಘುನಾಥಗೆ ಪಂಪಾ
ವಿರೂಪಾಕ್ಷದೇವರು ಮಾಡಿದ ಅಮೃತಪಡಿ ಕಟ್ಟಳೆ ದಿನ 1ಕ್ಕೆ . . .''


ಅದೇ ಕಲ್ಲಿನ ಮತ್ತೊಂದು ಬದಿಗೆ ಇರುವ ಶಾಸನವು ಈ ದೇವರನ್ನು ಹಿರಿಯ ಕಾಲುವೆಯ ರಘುನಾಥ ಎಂದು ಸಂಬೋಧಿಸುತ್ತದೆ.[5] ಇಲ್ಲಿಂದ ಕಾಲುವೆಯು ಪೂರ್ವಾಭಿಮುಖವಾಗಿ ಹರಿದು ಉದ್ದಾನ ವೀರಭದ್ರ ದೇವಾಲಯದ ಹತ್ತಿರ ಸಾಗುತ್ತದೆ. ಉದ್ದಾನ ವೀರಭದ್ರ ದೇವಾಲಯದಲ್ಲಿರುವ ಸದಾಶಿವರಾಯನ ಕಾಲದ ಕ್ರಿ.ಶ. 1545ರ ಶಾಸನವು ''ಕೃಷ್ಣಾಪುರದ ಪೇಟೆಯ ಹಿರಿಯ ಕಾಲುವೆಯ ಛತ್ರದ ಬಳಿಯಲೂ ಕಟಿಸ್ತಂಥಾ ಮುದುವೀರಂಣನ ಪ್ರತಿಷ್ಠೆಯನೂ ಮಾಡಿ . . . .'' ಎಂದು ಉಲ್ಲೇಖಿಸುತ್ತದೆ.[6] ಇದೇ ಸ್ಥಳದಲ್ಲಿರುವ ಚಂಡಿಕೇಶ್ವರ ದೇವಾಲಯದಲ್ಲಿರುವ ಇದೇ ಕಾಲದ ಶಾಸನವು ''ಕ್ರುಷ್ಣಾಪುರದ ಪೇಟೆಯ ಹಿರಿಯಕಾಲುವೆಯ ಛತ್ರದ ಬಳಿಯಲು ಕಟಿಸ್ತಂಥಾ ತಿರು . . . .' ಎಂದು ಉಲ್ಲೇಖಿಸುತ್ತದೆ.[7] ಉದ್ದಾನ ವೀರಭದ್ರ (ಮೂಲ ಹೆಸರು ಮುದುವೀರಂಣ) ಮತ್ತು ಚಂಡಿಕೇಶ್ವರ (ಮೂಲ ಹೆಸರು ತಿರುವೆಂಗಳನಾಥ) ದೇವಾಲಯಗಳ ಪಕ್ಕದಲ್ಲಿ ಸುಮಾರು ಆರು ನೂರು ಕಂಬಗಳಿರುವ ದೊಡ್ಡ ಮಂಟಪವಿದೆ. ಇದೇ ಹಿರಿಯ ಕಾಲುವೆಯ ಛತ್ರ. ಹತ್ತಿರದಲ್ಲಿಯೇ ಹರಿಯುವ ತುರ್ತಾ ಕಾಲುವೆಯೇ ಹಿರಿಯ ಕಾಲುವೆ.

ಕ್ರಿ.ಶ. 1559ರಲ್ಲಿ ವಿಠಲ ದೇವಾಲಯಕ್ಕೆ ದಾನವಾಗಿ ಕೊಟ್ಟ ತೋಟದ ಚತುಸ್ಸೀಮೆಯ ವಿವರ ನೀಡುವಾಗ ಪೂರ್ವಕ್ಕೆ ಬೊಮ್ಮದೇವರ ಗುಡಿ ಮುಂದಣ ಕಾಲುವೆ, ದಕ್ಷಿಣಕ್ಕೆ ಅಸಗರ ಕಾಲುವೆ ಮತ್ತು ಉತ್ತರಕ್ಕೆ ಅನಂತನ ಕಾಲುವೆ ಇದ್ದುದನ್ನು ಶಾಸನವು ತಿಳಿಸುತ್ತದೆ.[8] ಈ ಕಾಲುವೆಗಳನ್ನು ಈಗ ಗುರುತಿಸಲು ಆಗುವುದಿಲ್ಲ.

ಕಮಲಾಪುರದಿಂದ ಹಂಪೆಗೆ ಹೋಗುವ ದಾರಿಯಲ್ಲಿ ಮಹಾನವಮಿ ದಿಬ್ಬವಿರುವ ಆವರಣದ ಬಳಿ ರಸ್ತೆಯ ಎಡಕ್ಕೆ ಭೋಜನಶಾಲೆಯೆಂದು ಕರೆಯುವ ಸ್ಥಳವಿದೆ. ಇಲ್ಲಿ ಒಂದು ಚಿಕ್ಕ ಕಾಲುವೆಯ ದಂಡೆಯ ಮೇಲೆ ಹಸಿರು ಬಣ್ಣದ ಕಲ್ಲು ಚಪ್ಪಡಿಗಳನ್ನು ಜೋಡಿಸಿದೆ. ಚಪ್ಪಡಿಗಳ ಮಧ್ಯದಲ್ಲಿ ತಟ್ಟೆ ಮತ್ತು ಬಾಳೆ ಎಲೆಯ ಆಕಾರದ ತಗ್ಗು ಇದ್ದು ಸುತ್ತಲೂ ಬಟ್ಟಲಿನಾಕಾರದ ತಗ್ಗುಗಳಿವೆ. ಇವುಗಳನ್ನು ಊಟಕ್ಕೆ ಉಪಯೋಗಿಸುತ್ತಿದ್ದರೆಂಬುದು ನಿಸ್ಸಂದೇಹ. ಈ ಕಾಲುವೆಯನ್ನು ಊಟದ ಕಾಲುವೆಯೆಂದು ಕರೆಯುತ್ತಿದ್ದರೆಂದು ತೋರುತ್ತದೆ. ಇಂತಹ ಊಟದ ಕಾಲುವೆಯ ಉಲ್ಲೇಖ ಪೆನುಗೊಂಡೆ ಬಾಗಿಲ ಹತ್ತಿರವಿರುವ ಶಾಸನದಲ್ಲಿದೆ. ಕ್ರಿ.ಶ. 1540ರ ಈ ಶಾಸನ ರಘುನಾಥ ದೇವರಿಗೆ ದಾನವಾಗಿ ಕೊಟ್ಟ ಭೂಮಿಯ ವಿವರವನ್ನು ಕೊಡುವಾಗ ''ಮಾದಲಾಪುರದ ಗ್ರಾಮದ ಕೆರೆವೊಳಗೆ ಊಟಕಾಲುವೆ ಸ್ಥಳದಲ್ಲೂ ಲಕುಮಯ್ಯ ಹೊಂನ್ನಯ್ಯ ಮಲ್ಲಯ್ಯಗಳ ಗದ್ದೆ ಖ 1'' ಎಂದು ಉಲ್ಲೇಖಿಸುತ್ತದೆ.[9] ಮೇಲೆ ವಿವರಿಸಿದ ಊಟದ ಕಾಲುವೆಯೇ ಶಾಸನದಲ್ಲಿ ಉಲ್ಲೇಖಗೊಂಡಿರುವ ಊಟಕಾಲುವೆಯೆಂದು ಹೇಳುವುದಕ್ಕೆ ಆಧಾರವಿಲ್ಲ. ಆದರೆ ಶಾಸನದಲ್ಲಿ ಉಲ್ಲೇಖಗೊಂಡ ಊಟ ಕಾಲುವೆ ಮೇಲೆ ವಿವರಿಸಿದ ಊಟದ ಕಾಲುವೆಯಂತೆಯೇ ಇದ್ದಿರಬಹುದೆಂದು ನಿರ್ಧರಿಸಬಹುದು. ಇದೇ ಶಾಸನದಲ್ಲಿ ಮತ್ತೊಂದು ಕಾಲುವೆಯ ಉಲ್ಲೇಖವಿದೆ. ರಘುನಾಥ ದೇವರಿಗೆ ದಾನವಾಗಿ ಕೊಟ್ಟ ಮತ್ತೊಂದು ಭೂಮಿಯ ವಿವರವನ್ನು ''ಕಳಸಾಪುರದ ಮಾಗಣಿಗೆ ಸಲುವ ರೇವತಾಪುರದ ಗ್ರಾಮದಲ್ಲೂ ಹಾಳ ಕಾಲುವೆಯ ಕೆಳಗೆ ಸೇನಬೋವ ವಿರುಪರಸನು ಮಾಡುವ ಜಲುಗಿನಗದ್ದೆ ಸ್ಥಳಉ ಖ 1'' ಎಂದು ಉಲ್ಲೇಖಿಸುತ್ತದೆ. ಕಳಸಾಪುರವು ಮಾಲ್ಯವಂತ ಪರ್ವತದ ಹತ್ತಿರವಿರುವ ಉದಯಗಿರಿ ಬಾಗಿಲ ಪೂರ್ವಕ್ಕೆ ಇದೆ. ರೇವತಾಪುರವನ್ನು ಈಗ ಗುರುತಿಸಲಾಗುವುದಿಲ್ಲ. ಇಲ್ಲಿರುವ ಕಾಲುವೆಯು ವಿಜಯನಗರ ಕಾಲದಲ್ಲಿಯೇ ಹಾಳಾಗಿದ್ದುದು ಶಾಸನದಿಂದ ತಿಳಿಯುತ್ತದೆ.



3. ಅಣೆಕಟ್ಟಿನ ಕಲ್ಲುಗಳ ಜೋಡಣೆ



4. ಕಲ್ಲನ್ನು ಒಡೆದು ಮಾಡಿದ ಕಾಲುವೆ. ಒಡೆದ ಕಲ್ಲಿನ ಹಿಂದಿರುವ ಕಲ್ಲಿನ ಮೇಲೆ ಶಾಸನವಿದೆ

ಕಲ್ಲನ್ನು ಕಡಿಸಿ ಕಾಲುವೆ ಮಾಡಿಸಿದ ಮತ್ತೊಂದು ಉದಾಹರಣೆ ಬುಕ್ಕಸಾಗರದಲ್ಲಿದೆ. ಇಲ್ಲಿಯ ಕ್ರಿ.ಶ. 1528ರ ಶಾಸನವು ಜಮಾನಖಾನನ ಮಯಿಕದ ರಾಮಸಾಗರದ ಅವಿಕಥವಿತರಸನು ಅರೆಕಡಿಸಿ ಕಾಲುವೆ ಮಾಡಿಸಿದನೆಂದು ತಿಳಿಸಿ ಸಕಲ ಪ್ರಾಣಿಗಳು ಸುಖದಲಿ ಅನುಭವಿಸಲೆಂದು ತಿಳಿಸುತ್ತದೆ.[10]

ಕೆರೆಗಳು:

ಅಚ್ಯುತರಾಯ ದೇವಾಲಯದ ದಕ್ಷಿಣಕ್ಕೆ ಭೂಪತಿ ಕೆರೆ ಇದ್ದುದು ದೇವಾಲಯದಲ್ಲಿಯ ಕ್ರಿ.ಶ. 1534ರ ಶಾಸನದಿಂದ ತಿಳಿಯುತ್ತದೆ.[11] ಈ ಕೆರೆಯು ಈಗ ಹೂತುಹೋಗಿ ಗದ್ದೆಗಳಾಗಿ ಮಾರ್ಪಾಡಾಗಿದೆ. ಮತಂಗ ಪರ್ವತದ ದಕ್ಷಿಣಕ್ಕಿರುವ ಮಂಟಪದಲ್ಲಿಯ ಶಾಸನ[12] ಮತ್ತು ಕೃಷ್ಣದೇವಾಲಯದಲ್ಲಿರುವ ಕ್ರಿ.ಶ. 1515ರ ಶಾಸನ[13] ಸಹ ಈ ಕೆರೆಯನ್ನು ಉಲ್ಲೇಖಿಸುತ್ತವೆ. ವಿಜಯನಗರದಲ್ಲಿಯ ಅತಿ ದೊಡ್ಡ ಕೆರೆ ಕಮಲಾಪುರ ಕೆರೆ. ಪೆನುಗೊಂಡೆ ಬಾಗಿಲ ಹತ್ತಿರದ ರಘುನಾಥ ದೇವಾಲಯದಲ್ಲಿರುವ ಕ್ರಿ.ಶ. 1540ರ ಶಾಸನವು ಕಮಲಾಪುರದ ಕೆರೆಯ ಕೆಳಗೆ ಗದ್ದೆಯನ್ನು ದೇವರಿಗೆ ದಾನವಾಗಿ ಕೊಟ್ಟದ್ದನ್ನು ಉಲ್ಲೇಖಿಸುತ್ತದೆ.[14] ಇದೇ ಶಾಸನವು ಅನಂತಾಪುರದ ಕೆರೆಯನ್ನೂ ಉಲ್ಲೇಖಿಸುತ್ತದೆ. ಮಾಲ್ಯವಂತ ಪರ್ವತದ ಈಶಾನ್ಯಕ್ಕೆ ಕಾಲುವೆಯ ದಂಡೆಯ ಮೇಲಿರುವ ಶಾಸನದಿಂದ ಅಲ್ಲಿ ಕೃಷ್ಣರಾಯ ಸಮುದ್ರವೆಂಬ ಕೆರೆ ಇತ್ತೆಂಬುದು ತಿಳಿಯುತ್ತದೆ.[15] ಕೆರೆಗಳಿದ್ದ ಸ್ಥಳದಲ್ಲೀಗ ಗದ್ದೆಗಳಿವೆ. ಕಡಿರಾಂಪುರದ ಹತ್ತಿರವಿದ್ದ ಕೆರೆಯನ್ನು ರಾಮಾಪುರ ಕೆರೆಯೆಂದು ಕರೆಯುತ್ತಿದ್ದುದು ಪ್ರಸನ್ನ ವಿರೂಪಾಕ್ಷ (ಭೂಮಿಯ ಕೆಳಮಟ್ಟದ) ದೇವಾಲಯದ ಹತ್ತಿರ ಹೊಲದಲ್ಲಿರುವ ಕ್ರಿ.ಶ. 1366ರ ಶಾಸನದಿಂದ ತಿಳಿಯುತ್ತದೆ.[16]

ಕಮಲಾಪುರದ ಪೂರ್ವಕ್ಕೆ ಸೀತಾರಾಮ ತಾಂಡದ ಹತ್ತಿರವಿರುವ ಕ್ರಿ.ಶ. 1539ರ ಶಾಸನವು ನಲತಿಂಮನಬೋಯಿಯು ಅಚ್ಯುತರಾಯನ ಮಗ ವೆಂಕಟಾದ್ರಿ ಚಿಕ್ಕರಾಯನಿಗೆ ಪುಣ್ಯವಾಗಲೆಂದು ಕೆರೆಯನ್ನು ಕಟ್ಟಿಸಿದನೆಂದು ತಿಳಿಸುತ್ತದೆ.[17] ಕೆರೆ ಇರಬೇಕಾಗಿದ್ದ ಸ್ಥಳದಲ್ಲಿ ಈಗ ಹೊಲಗಳಿವೆ.

ಹೊಸಪೇಟೆಯ ಈಶಾನ್ಯಕ್ಕಿರುವ ನಾಗೇನಹಳ್ಳಿಯ ಬಳಿ ಒಂದು ದೊಡ್ಡ ಕೆರೆಯಿದೆ. ಈ ಕೆರೆಯ ಹೆಸರು ನಾಗಾಂಬಿಕಾಸಮುದ್ರ ಅಥವಾ ನಾಗಸಮುದ್ರ. ಇದನ್ನು ಕೃಷ್ಣದೇವರಾಯನ ತಾಯಿ ನಾಗಲಾದೇವಿಯ ಹೆಸರಿನಲ್ಲಿ ಕ್ರಿ.ಶ. 1516ರಲ್ಲಿ ರಂಗನಾಥ ದೀಕ್ಷಿತನು ಕಟ್ಟಿಸಿದನೆಂದು ನಾಗೇನಹಳ್ಳಿಯ ರಂಗನಾಥ ದೇವಾಲಯದಲ್ಲಿನ ಶಾಸನದಿಂದ ತಿಳಿಯುತ್ತದೆ.[18]

ಪಂಪಾಸರಸ್ಸು:

ವಿಠಲ ದೇವಾಲಯಕ್ಕೆ ಹೋಗುವ ದಾರಿಯಲ್ಲಿ ಸೀತಾಕೊಂಡದ ಹತ್ತಿರ ನರಸಿಂಹ ದೇವಾಲಯವಿದೆ. ದೇವಾಲಯದ ಹತ್ತಿರವಿರುವ ಕೊಂಡದ ದಡದಲ್ಲಿರುವ ಕ್ರಿ.ಶ. 1400ರ ಶಾಸನವು ತುಂಗಭದ್ರಾ ತೀರದಲ್ಲಿ ಭಾಸ್ಕರ ಕ್ಷೇತ್ರದಲ್ಲಿ ಪಂಪಾಸರಸ್ಸಿನ ಸಮೀಪವಾದ ನರಸಿಂಹದೇವರ ಸನ್ನಿಧಿಯಲ್ಲಿ ನಾಗೆಯನಾಯಕನು ಕೇಶವಗುಂಡವನ್ನು ಮಾಡಿಸಿದನೆಂದು ತಿಳಿಸುತ್ತದೆ.[19] ಪಂಪಾಸರಸ್ಸು ನರಸಿಂಹ ದೇವಾಲಯದ ಹತ್ತಿರವಿರುವುದೆಂದು ಈ ಶಾಸನ ಸ್ಪಷ್ಟಪಡಿಸುತ್ತದೆ. ಆದರೆ ಈಗಿನ ಪಂಪಾಸರಸ್ಸು ನದಿಯ ಆಚೆಗೆ ಎಡ ದಂಡೆಯಿಂದ ದೂರವಿದೆ. ನರಸಿಂಹ ದೇವಾಲಯವಿರುವುದು ನದಿಯ ಬಲದಂಡೆಯ ಹತ್ತಿರ. ಈಗಿನ ಪಂಪಾಸರಸ್ಸಿನಿಂದ ಮತಂಗ ಪರ್ವತ ಮತ್ತು ಕೋಟಿಲಿಂಗದವರೆಗಿನ ಎಲ್ಲಾ ಪ್ರದೇಶವು ರಾಮಾಯಣ ಕಾಲದಲ್ಲಿ ಜಲಮಯವಾಗಿದ್ದು, ಈ ಪ್ರದೇಶವನ್ನು ಪಂಪಾಸರಸ್ಸೆಂದು ಕರೆಯುತ್ತಿದ್ದರೆಂದು ಸಿ.ಟಿ.ಎಂ. ಕೊಟ್ರಯ್ಯನವರು ಅಭಿಪ್ರಾಯಪಡುತ್ತಾರೆ.[20]

ಕೊಂಡಗಳು:

ಮೇಲೆ ಉಲ್ಲೇಖಿಸಿದ ಶಾಸನವಿರುವ ಕೊಂಡವನ್ನು ನಾಗೆಯನಾಯಕನು ತನ್ನ ತಂದೆಯ ಹೆಸರಿನಲ್ಲಿ ಕೇಶವಗುಂಡವಾಗಿ ಮಾಡಿಸಿದನೆಂಬುದು ತಿಳಿಯುತ್ತದೆ. ಕಲ್ಲನ್ನು ಕಡೆದು ಈ ಕೊಂಡವನ್ನು ಮಾಡಿದೆ. ನರಸಿಂಹ ದೇವಾಲಯದ ಉತ್ತರಕ್ಕೆ ನದಿಯ ದಡದಲ್ಲಿ ಸೀತಾಕೊಂಡವಿದೆ. ಅಚ್ಯುತರಾಯ ಪೇಟೆಯು ಉತ್ತರಕ್ಕೆ ಸೀತಾಕೊಂಡದವರೆಗೆ ವಿಸ್ತರಿಸಿತ್ತೆಂಬುದು ಅಚ್ಯುತರಾಯ



5. ಬಢ್ಢೆಯ ನಾಯಕ ಒರತೆಯ ಕೊಂಡವನ್ನು ಮಾಡಿಸಿದ ವಿಷಯ ತಿಳಿಸುವ ಶಾಸನ



6. ಬಢ್ಢೆಯ ನಾಯಕ ಮಾಡಿಸಿದ ಒರತೆಯ ಕೊಂಡ (ಈಗ ಮುಚ್ಚಿಹೋಗಿದೆ)

ದೇವಾಲಯದಲ್ಲಿಯ ಕ್ರಿ.ಶ. 1534ರ ಶಾಸನದಿಂದ ತಿಳಿಯುತ್ತದೆ.[21] ಬೇಟೆಕಾರರ ಹೆಬ್ಬಾಗಿಲಿನ ಪೂರ್ವಕ್ಕಿರುವ ಒರತೆಯ ಮೈಲಾರದೇವರ ದೇವಾಲಯದ ಹತ್ತಿರ ಒಂದು ಕೊಂಡವಿದೆ. ಕೊಂಡದ ದಡದಲ್ಲಿರುವ ಹರಿಹರರಾಯನ ಕಾಲದ ಕ್ರಿ.ಶ. 1380ರ ಶಾಸನವು ಬೇಟೆಕಾರ ಮಲಗೆಯ ನಾಯಕನ ಮಗ ಬಥ್ಥೆಯ ನಾಯಕನು ಬೇಟೆಕಾರರ ಹೆಬ್ಬಾಗಿಲ ಪೂರ್ವ ದಿಕ್ಕಿಗೆ ಒರತೆಯ ಮೈಲಾರ ದೇವರನ್ನು ಪ್ರತಿಷ್ಠೆ ಮಾಡಿ ದೇವರ ಹಿಂದೆ ವಾಯುವ್ಯ ದಿಕ್ಕಿಗೆ ಒರತೆಯ ಕೊಂಡವನ್ನು ಮಾಡಿಸಿದನೆಂದು ತಿಳಿಸುತ್ತದೆ.[22]

ತೀರ್ಥಗಳು:

ಮೇಲೆ ಉಲ್ಲೇಖಿಸಿದ ನರಸಿಂಹ ದೇವಾಲಯದ ಪಕ್ಕದಲ್ಲಿ ಬಂಡೆಯ ಮೇಲೆ ನೈಸರ್ಗಿಕವಾಗಿರುವ ಚಿಕ್ಕ ತೊಟ್ಟಿಯಾಕಾರದ ತಗ್ಗಿದೆ. ಪಕ್ಕದಲ್ಲಿರುವ ಶಾಸನವು ಈ ತೊಟ್ಟಿಯನ್ನು ಭವನಾಸಿ ತೀರ್ಥವೆಂದು ಉಲ್ಲೇಖಿಸುತ್ತದೆ.[23] ಇದೇ ರೀತಿ ಬೇಟೆಕಾರರ ಹೆಬ್ಬಾಗಿಲ ಈಶಾನ್ಯಕ್ಕಿರುವ ಒಂದು ದೇವಾಲಯದ ಹತ್ತಿರವಿರುವ ನೈಸರ್ಗಿಕ ಒರತೆಯನ್ನು ಪಕ್ಕದಲ್ಲಿರುವ ಶಾಸನವು ಮುಕ್ತಿಋಣ ನಿರ್ಮಲ ತೀರ್ಥವೆಂದು ಉಲ್ಲೇಖಿಸುತ್ತದೆ.[24]


ಬಾವಿಗಳು:

ಹೇಮಕೂಟದ ಪಶ್ಚಿಮಕ್ಕೆ ಇರುವ ಕ್ರಿ.ಶ. 1377 ಮತ್ತು 1390ರ ಎರಡು ಶಾಸನಗಳಲ್ಲಿ[25] ಭಕ್ತರ ನಾಗಪ್ಪನು ಒಂದು ಬಾವಿಯನ್ನು ಕಟ್ಟಿಸಿದ ಉಲ್ಲೇಖವಿದೆ. ವಿರೂಪಾಕ್ಷ ದೇವಾಲಯದ ತೇರುಬೀದಿಯ ಎದುರು ಬಸವನ ದಕ್ಷಿಣಕ್ಕೆ ಮತಂಗ ಪರ್ವತದ ಹತ್ತಿರ ಒಂದು ಬಾವಿಯಿದೆ. ದೊಡ್ಡ ಗುಂಡೊಂದು ಬಾವಿಯನ್ನು ಭಾಗಶಃ ಮುಚ್ಚಿದೆ. ಬಾವಿಯ ಹೆಸರನ್ನು ಗುಂಡಿನ ಮೇಲಿರುವ ಶಾಸನದಲ್ಲಿ ಮಹಾದೇವಿಯಕ್ಕ ಬಾವಿ ಮತ್ತು ಕೆಳಬಾವಿ ಎಂದು ಉಲ್ಲೇಖಿಸಿದೆ.[26] ಹೊದೆಯ ಬಾಗಿಲ ಉತ್ತರಕ್ಕೆ ಗುಡ್ಡದ ಪಕ್ಕದಲ್ಲಿ ಒಂದು ಬದಿಗೆ ಮೆಟ್ಟಿಲಿರುವ ಚಿಕ್ಕ ಬಾವಿಯಿದೆ. ಬಾವಿಯ ಹತ್ತಿರವಿರುವ ಗುಂಡಿನ ಮೇಲಿನ ಶಾಸನದಿಂದ ನರಹರಿದೇವನ ಮಗ ದೇವರಾಯನು ಕ್ರಿ.ಶ. 1411ರಲ್ಲಿ ಈ ಬಾವಿಯನ್ನು ಕಟ್ಟಿಸಿದನೆಂದು ತಿಳಿಯುತ್ತದೆ. ಇದನ್ನು ಬೆನಕನ ಬಾವಿಯೆಂದು ಕರೆಯುತ್ತಿದ್ದುದು ಶಾಸನದಿಂದ ತಿಳಿಯುತ್ತದೆ. ಶಾಸನದ ಪಕ್ಕದಲ್ಲಿ ಗಣೇಶನ ಅಪೂರ್ಣವಾದ ಶಿಲ್ಪವಿದೆ.[27]


ಸಿಂಘಾರದ ಹೆಬ್ಬಾಗಿಲಿನಿಂದ ಈಶಾನ್ಯಕ್ಕೆ ಹೋದಾಗ ಮುಸ್ಲಿಮರು ವಾಸವಾಗಿದ್ದ ಪ್ರದೇಶವನ್ನು ಸೇರುತ್ತೇವೆ. ಇಲ್ಲಿ ಅನೇಕ ಗೋರಿಗಳು ಮತ್ತು ಎರಡು ಮಸೀದಿಗಳಿವೆ. ಒಂದು ಮಸೀದಿಯಲ್ಲಿರುವ ಶಾಸನದಿಂದ ಅದೊಂದು ಧರ್ಮಶಾಲೆಯಾಗಿತ್ತೆಂಬುದು ತಿಳಿಯುತ್ತದೆ. ಈ ಶಾಸನದ ಪ್ರಕಾರ ಈ ಧರ್ಮಶಾಲೆ ಮತ್ತು ಪಕ್ಕದಲ್ಲಿರುವ ಬಾವಿಯನ್ನು ಕಟಿಗೆಯ ಅಹ್ಮದ್‌ಖಾನನು ತನ್ನ ಅರಸ ದೇವರಾಯನಿಗೆ ಧರ್ಮವಾಗಬೇಕೆಂದು ಕ್ರಿ.ಶ. 1439ರಲ್ಲಿ ಕಟ್ಟಿಸಿದನು.[28] ಮಸೀದಿ ಅಥವಾ ಧರ್ಮಶಾಲೆಗೆ ಬರುವವರ ಉಪಯೋಗಕ್ಕಾಗಿ ಈ ಬಾವಿಯನ್ನು ಕಟ್ಟಿಸಿದೆ. ಅಹ್ಮದ್‌ಖಾನನ ಧರ್ಮಶಾಲೆಯ ಪಶ್ಚಿಮಕ್ಕೆ ಗುಡ್ಡದ ಮೇಲಿರುವ ಬಾವಿಯನ್ನು ದೇವರಪಲ್ಲಿ ಮುಮ್ಮಡಿಸೆಟ್ಟಿಗೆ ಪುಣ್ಯವಾಗಲೆಂದು ನಂಜೇದೇವರ ನಿರಾಸಿಮಠಕ್ಕೆ ದಾನಮಾಡಿದ್ದು ಬಾವಿಯ ಪಕ್ಕದಲ್ಲಿರುವ ಶಾಸನದಿಂದ ತಿಳಿಯುತ್ತದೆ.[29] ಅಹ್ಮದ್‌ಖಾನನ ಧರ್ಮಶಾಲೆಯ ದಕ್ಷಿಣಕ್ಕಿರುವ ಶಾಸನವು ಮತ್ತೊಂದು ಬಾವಿಯನ್ನು ಕಬಿರಾವುತನ ಮಗ ಪಿಲಿಕುಂಚಲಕನು ಬಯಿರಾವುತನಿಗೆ ಕೊಟ್ಟದ್ದನ್ನು ಉಲ್ಲೇಖಿಸುತ್ತದೆ.[30]

ಈಗ ತಳವಾರಘಟ್ಟ ಬಾಗಿಲೆಂದು ಕರೆಯುವ ಬಾಗಿಲಿನ ಮೂಲ ಹೆಸರು ಅರೆಶಂಕರಬಾವಿ ಬಾಗಿಲು ಎಂಬುದು ವಿಠಲದೇವಾಲಯದಲ್ಲಿರುವ ಕ್ರಿ.ಶ. 1559ರ ಶಾಸನದಿಂದ ತಿಳಿಯುತ್ತದೆ.[31] ಬಾಗಿಲ ಹತ್ತಿರ ಅರೆಶಂಕರಬಾವಿ ಇತ್ತೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಈ ಪ್ರದೇಶದಲ್ಲಿ ಆಗಸರ ಬಾವಿ ಇದ್ದುದು ಇದೇ ಶಾಸನದಿಂದ ತಿಳಿಯುತ್ತದೆ. ಉದಗಿರಿಯ ಬಾಗಿಲ ಹತ್ತಿರವಿರುವ ಶಾಸನವು ಆ ಪ್ರದೇಶದಲ್ಲಿ ಒಂದು ಬಾವಿ ಇದ್ದುದನ್ನು ಉಲ್ಲೇಖಿಸುತ್ತದೆ.[32] ಸರಸ್ವತಿ ದೇವಾಲಯದ ಹತ್ತಿರವಿರುವ ಶಾಸನದಿಂದ ಒಬ್ಬ ಮಹಿಳೆಯು ಒಂದು ಬಾವಿಯನ್ನು ಕಟ್ಟಿಸಿದ್ದು ತಿಳಿಯುತ್ತದೆ.[33]

ಬೇಟೆಕಾರರ ಹೆಬ್ಬಾಗಿಲ ಈಶಾನ್ಯಕ್ಕೆ ಎರಡು ಬಾವಿಗಳಿವೆ. ಒಂದರ ಹೆಸರು ಲಿಂಗಬಾವಿ ಮತ್ತು ಇನ್ನೊಂದರ ಹೆಸರು ರಂಗನಾಥ ಬಾವಿ ಎಂಬುದು ಅಲ್ಲಿರುವ ಶಾಸನಗಳಿಂದ ತಿಳಿಯುತ್ತದೆ.[34] ರಂಗನಾಥ ಬಾವಿಯನ್ನು ತಿರಿವಿದಿ ಚಿಟಿನಾಗಿನೆನಿಯ ಮಗ ಚಿನ್ನಪನಾಯಂಡು ಕಟ್ಟಿಸಿದನು.



7. ಲಿಂಗಬಾವಿಯ ಉಲ್ಲೇಖವಿರುವ ಶಾಸನ



8. ಲಿಂಗಬಾವಿ



9. ರಂಗನಾಥ ಬಾವಿ



10. ಬೆನಕನ ಬಾವಿ

ದೇವಾಲಯಗಳ ಕೊಳಗಳು:

ಸಾಮಾನ್ಯವಾಗಿ ದೇವಾಲಯಗಳು ತಮ್ಮದೇ ಆದ ಕೊಳ ಅಥವಾ ಬಾವಿಗಳನ್ನು ಹೊಂದಿವೆ. ಹೇಮಕೂಟದ ಮೇಲಿನ ಎರಡು ಶಾಸನಗಳು ಮಾತ್ರ ದೇವಾಲಯದೊಂದಿಗೆ ಕೊಳವನ್ನು ಅಗೆಸಿದ್ದನ್ನು ಉಲ್ಲೇಖಿಸುತ್ತವೆ. ರಾಘವಪಂಡಿತ ಮತ್ತು ಕಮಲಾಂಬರ ಮಕ್ಕಳು ವಿರೂಪಾಕ್ಷಪಂಡಿತ ಮತ್ತು ವಿನಾಯಕ ಪಂಡಿತರು ವಿರೂಪಾಕ್ಷ ಸಿದ್ಧ ಶ್ರೀಪಾದ ಶ್ರೀವಲ್ಲಭರ ದೇವಾಲಯವನ್ನು ಕಟ್ಟಿಸಿ ದೇವಾಲಯದ ಎಡಭಾಗದಲ್ಲಿ ಕೊಳವನ್ನು ಅಗೆಸಿದರು.[35]

ಮಾಳಿಗೆಕೂಪಾರಾಮ:

ಹೊಸಪೇಟೆಯಿಂದ ವಿಜಯನಗರಕ್ಕೆ ಬರುವ ದಾರಿಯಲ್ಲಿ ಮಲಪನಗುಡಿಯ ಹತ್ತಿರ ರಸ್ತೆ ಬದಿಗೆ ಒಂದು ಬಾವಿಯಿದೆ. ಈ ಬಾವಿಯನ್ನು ಸೂಳೆಬಾವಿ ಅಥವಾ ಸುಳಿಬಾವಿಯೆಂದು ಕರೆಯುತ್ತಾರೆ. ಆದರೆ ಊರೊಳಗಿನ ಮಲ್ಲಿಕಾರ್ಜುನ ದೇವಾಲಯದ ಮುಂದಿರುವ ಶಾಸನ ಇದನ್ನು ಅರ್ಥಪೂರ್ಣವಾಗಿ ಮಾಳಿಗೆಕೂಪಾರಾಮವೆಂದು ಉಲ್ಲೇಖಿಸುತ್ತದೆ.[36] ವಿಜಯನಗರದ ಅರಸ ಒಂದನೇ ದೇವರಾಯನ ಕಾಲದಲ್ಲಿ ಕ್ರಿ.ಶ. 1412ರಲ್ಲಿ ಬಿಸಿಲಹಳ್ಳಿಯ ಕಣಿವೆ ಮತ್ತು ಬಡವಲಿಯ ಕಣಿವೆ ಹಾದಿ ಕೂಡಿದ ಮಹಾಪಥದಲ್ಲಿ ಬುಳ್ಳೆನಾಯ್ಕನ ಮಗ ಹೆಗ್ಗಡೆ ಸೋವಣ್ಣ ಅಣ್ಣ ಅರವಟಿಗೆಯನ್ನಿಕ್ಕಿಸಿ ಮಾಳಿಗೆಕೂಪಾರಾಮವನ್ನು ಮಾಡಿಸಿದನು.

ಮಾಳಿಗೆಕೂಪಾರಾಮವು ಮಾಳಿಗೆ, ಕೂಪ ಮತ್ತು ಆರಾಮ ಶಬ್ದಗಳಿಂದ ಕೂಡಿದೆ. ಮಾಳಿಗೆ ಎಂದರೆ ಮೇಲ್ಛಾವಣಿ ಅಥವಾ ಮನೆಯ ಮೇಲಿನ ಹೊದಿಕೆ, ಕೂಪ ಎಂದರೆ ಬಾವಿ ಮತ್ತು ಆರಾಮ ಎಂದರೆ ವಿಶ್ರಾಂತಿಗಾಗಿ ಮಾಡಿದ ತೋಟ ಅಥವಾ ವನ. ಈಗ ಸ್ಥಳದಲ್ಲಿ ನಮಗೆ ಕಾಣುವುದು ಮಾಳಿಗೆ ಮತ್ತು ಕೂಪ ಮಾತ್ರ. ಸುತ್ತಲೂ ಇರಬೇಕಾಗಿದ್ದ ಆರಾಮ ಈಗಿಲ್ಲ. ಆಳವಾದ ಬಾವಿಗೆ ಪೂರ್ವಕ್ಕೆ ಮೆಟ್ಟಿಲುಗಳಿವೆ. ಬಾವಿಯ ಕೆಳಭಾಗ ಚೌಕಾಕಾರವಾಗಿದ್ದು, ಮೇಲ್ಭಾಗ ಅಷ್ಟಭುಜಾಕಾರವಾಗಿದೆ. ಅಷ್ಟಭುಜಾಕಾರದ ಭಾಗದಲ್ಲಿ ಸುತ್ತಲೂ ಕೈಸಾಲೆಯಿದೆ. ಮೆಟ್ಟಿಲುಗಳ ಮೂಲಕ ಕೈಸಾಲೆಯೊಳಗೆ ಹೋಗಬಹುದು. ಕೈಸಾಲೆಯಿಂದ ಕಮಾನುಗಳು ಬಾವಿಯೊಳಕ್ಕೆ ತೆರೆದುಕೊಳ್ಳುತ್ತವೆ. ಕೈಸಾಲೆಯ ಮೇಲಿನ ಮಾಳಿಗೆಯಿಂದ ಮಾಳಿಗೆ ಶಬ್ದವು ಕೂಪದೊಂದಿಗೆ ಸೇರಿ ಸುತ್ತಲೂ ಇದ್ದ ಆರಾಮದೊಂದಿಗೆ ಮಾಳಿಗೆಕೂಪಾರಾಮವಾಗಿದೆ.


ಸೋವಣ್ಣ ಅಣ್ಣನು ಮಾಡಿದ ಭೂದಾನದಿಂದ ಮಾಳಿಗೆಕೂಪಾರಾಮ ಮತ್ತು ಅರವಟಿಗೆಯನ್ನು ಹೇಗೆ ನಿರ್ವಹಿಸಬೇಕೆಂಬುದನ್ನು ಶಾಸನದಲ್ಲಿ ವಿವರವಾಗಿ ತಿಳಿಸಲಾಗಿದೆ.

> ''ಯಿಾ ಮೂರು ವ್ರಿತ್ತಿಯ ಬೆಳೆಯ ಆದಾಯವನು ಮೂರು ಭಾಗವಮಾಡಿ ಆ ಅರವಟಿಗೆಯ ನಡಸುವ ವಿರುಪಂಣಗಳಿಗೆ ವೊಂದು ಭಾಗೆ ಅರವಟಿಗೆಗೆ ನೀರ ಹೊಯಿವದಕ್ಕೆ ಮರಗಳಿಗೆ ನೀರನೆರವದಕ್ಕೆ ಮಾಳಿಗೆ ಗಿಳಿಲಾದರೆ ಕಟ್ಟುವದಕ್ಕೆ ಅರವಟಿಗೆಗೆ ಗುಡಾಣ ಬಿಂದಿಗೆ ಕರಗ ಮೊಘೆಗಳ ಕ್ರಯಕ್ಕೆ ಸುತ್ತಣ ಮನಿ ಅಣಿಮಾಡಿಕೊಂಡು ಯಿಹದಕ್ಕೆ ಬಾವಿ ಹೂಳಿದರೆ ತೋಡುವದಕ್ಕೆ ಯಿಷ್ಟರ ಉಪಕ್ಷಯಕ್ಕೆ ಮಿಕ್ಕ ಎರಡು ಭಾಗೆ ಸಲುಉದು ಯಿಾ ಮರಿಯಾದೆಯಲು ಆ ವಿರುಪಂಣಗಳು ತಂನ ಮಕ್ಕಳು ಮಕ್ಕಳು ತಪ್ಪದೆ ಅರವಟಿಗೆಯ ಧರ್ಮವನು ನಡೆಸುವರು ನಡೆಸದೆ ಉಳಿದರೆ ಆರಾದರೆಉ ಧರ್ಮ್ಮಿಷ್ಟರಾಗಿ ಯಿದ್ದವರು ಯಿಾ ಶಾಸನವನು ವೋದಿಸಿ ನೋಡಿ ಆ ವ್ರಿತ್ತಿಗಳನೂ ವಿಚಾರವ ಮಾಡಿ ಮುಂದೆ ಆ ಅರವಟಿಗೆಯ ಧರ್ಮ್ಮವ ನಡಸುವಾತಗೆ ವೊಂದು ಭಾಗ ಸಲುಉದು ಅರವಟಿಗೆಗೆ ನೀರನೆರವರ ಜೀವಿತ ಮೊದಲಾದ ಎಲ್ಲಾ ಉಪಕ್ಷಯಕ್ಕೆ ಆ ಉಳಿದ ಎರಡು ಭಾಗೆ ಸಲುಉದು.''

ಪ್ರವಾಸಿಗಳಿಗೆ ರಸ್ತೆ ಬದಿಯ ಸೌಲಭ್ಯಗಳು ಹೇಗಿರಬೇಕೆಂಬುದಕ್ಕೆ ಇದೊಂದು ಉತ್ತಮ ಉದಾಹರಣೆ.

ತೊಟ್ಟಿಗಳು:

ವಿಜಯನಗರದಲ್ಲಿ ಏಕಶಿಲೆಯಲ್ಲಿ ಮಾಡಿದ ತೊಟ್ಟಿಗಳನ್ನು ಅಲ್ಲಲ್ಲಿ ಕಾಣುತ್ತೇವೆ. ಇವುಗಳಲ್ಲಿ ಮೂರರ ಬಗ್ಗೆ ಶಾಸನಗಳಲ್ಲಿ ಉಲ್ಲೇಖಗಳಿವೆ. ವಿರೂಪಾಕ್ಷ ತೇರು ಬೀದಿಯಲ್ಲಿ ಕಂಪ್ಲಿಮಠದ ಪಕ್ಕದಲ್ಲಿರುವ ತೊಟ್ಟಿಯನ್ನು ಅಬರಾಜು ತಿಮಪ ಮಾಡಿಸಿದನು.[37]



11. ಮಾಳಿಗೆಕೂಪಾರಾಮ, ತಳವಿನ್ಯಾಸ ಮತ್ತು ಸೀಳುನೋಟ



12. ಮಾಳಿಗೆಕೂಪಾರಾಮ, ಮಲಪನಗುಡಿ



13. ಓಬಯವ್ವೆ ದುರಗಂಟು ರಘುನಾಥ ದೇವರಿಗೆ ಮಾಡಿಸಿದ ತೊಟ್ಟಿ ಮತ್ತು ಶಾಸನ

ಕೋದಂಡರಾಮ ದೇವಾಲಯದ ಹತ್ತಿರವಿರುವ ತೊಟ್ಟಿಯನ್ನು ತುಳುಬನವಾಸಿಯ ಮಗ ಕತ್ತೆಲಬಯ್ಯನು ಮಾಡಿಸಿದನು.[38] ಮಾಲ್ಯವಂತ ಪರ್ವತದ ಈಶಾನ್ಯಕ್ಕೆ ತುರ್ತಾ ಕಾಲುವೆಯ ಬಲದಂಡೆಯ ಹತ್ತಿರ ದೊಡ್ಡ ಕಲ್ಲಿನೊಳಗೆ ಮಾಡಿದ ತೊಟ್ಟಿಯನ್ನು ಓಬಯವ್ವೆಯು ದುರಗಂಟು ರಘುನಾಥ ದೇವರಿಗೆ ಮಾಡಿಸಿದಳು.[39]

ಅರವಟ್ಟಿಗೆ:

ಯಾತ್ರಿಕರ ಅನುಕೂಲಕ್ಕಾಗಿ ರಸ್ತೆ ಬದಿಯಲ್ಲಿ ಅರವಟ್ಟಿಗೆಗಳನ್ನಿಡುವ ಪದ್ಧತಿಯಿತ್ತು. ಮಲಪನಗುಡಿಯಲ್ಲಿದ್ದ ಅರವಟ್ಟಿಗೆಯನ್ನು ಈಗಾಗಲೇ ಗಮನಿಸಿದ್ದೇವೆ. ಆನೆಗೊಂದಿಯ ಉತ್ತರಕ್ಕಿರುವ ಸುಂಕದ ಬಾಗಿಲಿನ ಹತ್ತಿರ ಇದ್ದ ಅರವಟ್ಟಿಗೆಗೆ ಭೂಮಿಯನ್ನು ದಾನವಾಗಿ ಕೊಟ್ಟದ್ದು ಅಲ್ಲಿಯ ಎರಡು ಶಾಸನಗಳಿಂದ ತಿಳಿಯುತ್ತದೆ.[40]

ನೀರಿನ ವ್ಯವಸ್ಥೆಗೆ ಸಂಬಂಧಿಸಿದಂತೆ ವಿವಿಧ ಮಹತ್ವಪೂರ್ಣ ಮಾಹಿತಿಯನ್ನೊಳಗೊಂಡ ಶಾಸನಗಳು ವಿಜಯನಗರದ ನೀರಿನ ವ್ಯವಸ್ಥೆಯನ್ನು ಕೂಲಂಕಷವಾಗಿ ಅಧ್ಯಯನ ನಡೆಸುವುದಕ್ಕೆ ಅತ್ಯಗತ್ಯವಾದ ಪೂರಕ ಮಾಹಿತಿಯನ್ನು ಒದಗಿಸುತ್ತವೆ.

ಅಡಿ ಟಿಪ್ಪಣಿಗಳು

1. *ಸೌಇಂಇ.*, 4, ಸಂ. 267.
2. *ವಿಪ್ರೊರಿೀ.*, 1984-87, ಸಂ. 1.
3. *ಅದೇ,* ಸಂ. 73.
4. *ಅದೇ,* 1983-84, ಸಂ. 16.
5. *ಅದೇ,* ಸಂ. 18.
6. *ಸೌಇಂಇ.*, 4, ಸಂ. 266.
7. *ಅದೇ,* ಸಂ. 265.
8. *ಅದೇ,* 9(2), ಸಂ. 668.
9. *ಅದೇ,* 4, ಸಂ. 245.
10. *ವಿಪ್ರೊರಿೀ.*, 1988-91, ಸಂ. 2
11. *ಸೌಇಂಇ.*, 9(2), ಸಂ. 504
12. *ವಿಪ್ರೊರಿೀ.*, 1983-84, ಸಂ. 43.
13. *ಸೌಇಂಇ.*, 4, ಸಂ. 255.
14. *ಅದೇ,* ಸಂ. 245.
15. *ವಿಪ್ರೊರಿೀ.*, 1984-87, ಸಂ. 129.
16. *ಅದೇ,* ಸಂ. 89.
17. *ಅದೇ,* ಸಂ. 145.
18. *ಸೌಇಂಇ.*, 9(2), ಸಂ. 504.
19. *ವಿಪ್ರೊರಿೀ,* 1983-84, ಸಂ. 12.
20. ಸಿ.ಟಿ.ಎಂ. ಕೊಟ್ರಯ್ಯ, 1995, ''ಪಂಪಾ ಸರಸ್ಸು, ಕಿಷ್ಕಿಂದ ಅಂಡ್ ಹಂಪಿ'' ಎಪಿಗ್ರಾಫಿ, ನ್ಯೂಮಿಸ್ಮಾಟಿಕ್ಸ್ ಆಂಡ್ ಆದರ್ *ಆಸ್ಪೆಕ್ಟ್ಸ್ ಇನ್ ಕರ್ನಾಟಕ,* (ಸಂ.) ಡಿ.ವಿ.ದೇವರಾಜ ಮತ್ತು ಚನ್ನಬಸಪ್ಪ ಎಸ್. ಪಾಟೀಲ, ಮೈಸೂರು, ಪು. 143-148.
21. *ಸೌಇಂಇ.*, 9(2), ಸಂ. 564.
22. *ವಿಪ್ರೊರಿೀ.*, 1984-87, ಸಂ. 105.
23. *ಅದೇ,* 1983-84,. ಸಂ. 58.
24. *ಅದೇ,* 1984-87, ಸಂ. 109.

25 ಅದೇ, ಸಂ. 26-27.
26. ಅದೇ, ಸಂ. 38.
27. ಅದೇ, 1983-84, ಸಂ. 15.
28. ಸೌಇಂಇ., 9(2), ಸಂ. 447.
29. ವಿಪ್ರೊರಿ., 1984-87, ಸಂ. 98.
30. ಅದೇ, ಸಂ. 99.
31. ಸೌಇಂಇ, 9(2), ಸಂ. 668.
32. ವಿಪ್ರೊರಿ, 1984-87, ಸಂ. 138.
33. ಆರಿಇಂಎ., 1938-39, ಸಂ. ಬಿ 444.
34. ವಿಪ್ರೊರಿ, 1984-87, ಸಂ. 107-108, 110.
35. ಆರಿಇಂಎ., 1934-35, ಸಂ. ಬಿ 351.
36. ಸೌಇಂಇ., 9(2), ಸಂ. 436.
37. ವಿಪ್ರೊರಿ., 1984-87, ಸಂ. 33.
38. ಅದೇ, ಸಂ. 68.
39. ಅದೇ, ಸಂ. 128.
40. ಅದೇ, ಸಂ. 166-167.

12. ವಿಜಯನಗರ ಶಾಸನಗಳಲ್ಲಿ ಮಹಿಳೆ

ಎಂ.ಬಿ. ಪದ್ಮ

ಒಂದು ನಾಡಿನ ಸಂಸ್ಕೃತಿಯ ಸತ್ವ ಹಾಗೂ ನಾಗರೀಕತೆಯ ಶ್ರೇಷ್ಠತೆ ಅದರ ಮಹಿಳೆಯರಿಗೆ ನೀಡಿರುವ ಗೌರವಾದರಗಳಲ್ಲಿ ಪ್ರತಿಬಿಂಬಿತವಾಗುತ್ತವೆ ಮತ್ತು ಸಮಾಜದ ಪ್ರಗತಿಯು ಅದರ ಸ್ತ್ರೀ ಸದಸ್ಯರಿಗೆ ಒದಗಿಸಿಕೊಡಲಾಗುವ, ಅವರ ವ್ಯಕ್ತಿತ್ವದ ಸರ್ವತೋಮುಖವಾದ ವಿಕಾಸಕ್ಕೆ ಅತ್ಯಾವಶ್ಯಕವಾದ ಸದವಕಾಶಗಳನ್ನು ಅವಲಂಬಿಸಿರುತ್ತದೆ ಎಂಬ ಹೇಳಿಕೆಗಳು ಮೊದಲಿನಿಂದಲೂ ಕಾಲದ ಆವಾರಗಳಲ್ಲಿ ಪ್ರತಿಧ್ವನಿಸುತ್ತಾ ಬಂದಿವೆ. ಈ ಅರ್ಥಪೂರ್ಣವಾದ ಮಾತುಗಳು ಸತ್ಯವಾದುವುಗಳು ಎಂಬುದನ್ನು ವಿಜಯನಗರ ಕಾಲಕ್ಕೆ ಸೇರಿರುವ ಅಸಂಖ್ಯಾತ ಶಾಸನಗಳಲ್ಲಿ ಸಂರಕ್ಷಿಸಿಡಲಾಗಿರುವ ಮಹಿಳೆಯರನ್ನು ಕುರಿತ ವಿವರಗಳು ಸಮರ್ಥಿಸುತ್ತವೆ. ಕಠಿಣವಾಗಿರುವ ಕಲ್ಲುಗಳನ್ನು ಅಲಂಕರಿಸಿರುವ ಮತ್ತು ಸ್ತ್ರೀಯರ ಬಗ್ಗೆ ಉತ್ಪ್ರೇಕ್ಷೆಗಳಿಂದ ಕೂಡಿದ್ದರೂ ಸತ್ಯವಾಗಿರುವ ಸಂಗತಿಗಳನ್ನು ಅಡಗಿಸಿಟ್ಟುಕೊಂಡಿರುವ ಈ ಕಾಲದ ದಾಖಲೆಗಳು ಧಾರ್ಮಿಕ, ಸಾಮಾಜಿಕ, ರಾಜಕೀಯ, ಆರ್ಥಿಕ, ಕಲೆ, ಸಾಹಿತ್ಯ ಮುಂತಾದ ಸಮಾಜದ ವಿವಿದ ರಂಗಗಳ ಕಾರ್ಯಕ್ರಮಗಳಲ್ಲಿ ಮಹಿಳೆಯರು ವಹಿಸಿದ್ದ ಪಾತ್ರ, ಗಳಿಸಿದ್ದ ಸಾಧನೆ ಹಾಗೂ ನೀಡಿದ್ದ ಕೊಡುಗೆಗಳ ಬಗ್ಗೆ ನಂಬಲರ್ಹವಾದ ವಿಷಯಗಳ ಭಂಡಾರವನ್ನೇ ಒದಗಿಸಿಕೊಡುತ್ತವೆ. ಈ ಭಂಡಾರದ ಒಳಹೊಕ್ಕು ಜಾಗರೂಕತೆಯಿಂದ ವೀಕ್ಷಿಸಿ ವಿಚಾರಮಾಡಿದರೆ ರಾಣಿಯರಿಗೆ ಮಾತ್ರವಲ್ಲದೆ, ಸಮಾಜದ ಎಲ್ಲಾ ಸ್ತರಗಳ ಸ್ತ್ರೀಯರಿಗೆ ಸಮಾಜ ಜೀವನದಲ್ಲಿ ಭಾಗವಹಿಸಿ ತಮ್ಮದೇ ಆದ ರೀತಿಯಲ್ಲಿ ಸೇವೆ ಸಲ್ಲಿಸಲು, ಕೊಡುಗೆಗಳನ್ನು ನೀಡಲು ತಕ್ಕ ಅವಕಾಶಗಳಿದ್ದುವು ಎಂಬುದು ವಿಶದವಾಗುತ್ತದೆ.

ಆರಂಭದಿಂದ ಕರ್ಣಾಟಕ ಸಮಾಜ ಜೀವನದ ವೈಶಿಷ್ಟ್ಯಕ್ಕೆ ಸ್ಫೂರ್ತಿಯೂ, ಪ್ರೇರಕ-ಚಾಲಕ-ಶಕ್ತಿಯೂ ಧರ್ಮವೇ, ಜನರ ವೈಯಕ್ತಿಕ - ಸಾಮಾಜಿಕ ಬದುಕಿನ ಪ್ರಾಣವಾಯು ಧರ್ಮವೇ ಆಗಿರುವುದರಿಂದ, ಅತ್ಯಂತ ಹಿತಕರವಾದ ಧಾರ್ಮಿಕ ಪರಂಪರೆಯನ್ನು ದೇವಾಲಯಗಳ ನಿರ್ಮಾಣ, ಎಲ್ಲಾ ಧರ್ಮಗಳ ದೇಗುಲಗಳಿಗೆ ವಿಭಿನ್ನ ಬಗೆಯ ಕಾಣಿಕೆಗಳ ಅರ್ಪಣೆ ಮಾಡಿ ದೈವಿಕವಾದ ಸಹಿಷ್ಣುತಾ ಸಂಪ್ರದಾಯವನ್ನು ಉಳಿಸುವುದೇ ಮುಂತಾದ ಧಾರ್ಮಿಕ ಕಾರ್ಯಗಳ ಮೂಲಕ ಉಳಿಸಿ, ಬೆಳಸಿಕೊಂಡು ಬರುವುದರಲ್ಲಿ ಈ ಕಾಲದ ಮಹಿಳೆಯರೂ ಸಹ ಹಿಂದೆ ಬೀಳಲಿಲ್ಲ ಎಂಬುದನ್ನು ಶಾಸನಗಳು ದೃಢಪಡಿಸುತ್ತವೆ. ಉದಾಹರಣೆಗೆ, ದೇವರಾಯ ಮಹಾರಾಯನ ರಾಣಿ ಭೀಮಾದೇವಿ ಮಂಗಾಯಿ ಬಸದಿಗಾಗಿ ಶಾಂತಿನಾಥಸ್ವಾಮಿಯ ವಿಗ್ರಹವನ್ನು ಮಾಡಿಸಿದಳು ಎಂಬ ವಿಚಾರ ಕ್ರಿ.ಶ. 1410ರ ಶಾಸನವೊಂದರಲ್ಲಿದೆ.[1] ಭಟ್ಕಳದ ರಾಣಿ ವೀರಾಂಬ ಕಲ್ಲು ಬಸದಿಯಲ್ಲಿ 24 ತೀರ್ಥಂಕರರ ಕಂದುಕಂಚಿನ ಮೂರ್ತಿಗಳನ್ನು ಮಾಡಿಸಿ ಪ್ರತಿಷ್ಠೆ ಮಾಡಿದಳು ಎಂಬುದನ್ನು 1530ರ ಶಿಲಾಶಾಸನ ತಿಳಿಸುತ್ತದೆ.[2] ಅಧಿಕಾರಿ ಅಲ್ಲಪ್ಪ ದಂಡನಾಯಕನ ಭಾಮಿಕಿ-ದಣ್ಣಾಯಕಿ ಹಾಗೂ ಚಾಯವ್ವೆ-ದಣ್ಣಾಯಕಿ ಎಂಬ ಇಬ್ಬರು ಅರ್ಧಾಂಗಿಯರು ತೆರಕಣಾಂಬಿಯಲ್ಲಿ ಗೋಪಿನಾಥ ದೇವರನ್ನು ಪ್ರತಿಷ್ಠಾಪನೆ ಮಾಡಿದರೆ,[3] ಸಮಾಜದ ಮೇಲ್ವರ್ಗಕ್ಕೆ ಸೇರಿದ್ದ ರಂಗನಾಯಕಿ ಮೇಲುಕೋಟೆಯಲ್ಲಿ ಸಂಪತ್ಕುಮಾರ ದೇವರ ಧರ್ಮಪತ್ನಿಯ ಗುಡಿಯ ಮುಂದೆ ರಂಗಮಂಟಪ ಒಂದನ್ನು ನಿರ್ಮಿಸಿದಳು[4] ಎಂಬ ವಿವರಗಳು ಕ್ರಮವಾಗಿ ಕ್ರಿ.ಶ. 1318 ಹಾಗೂ 1458ರ ದಾಖಲೆಗಳಲ್ಲಿ ಸಿಗುತ್ತವೆ. ಸಾಮಾನ್ಯ ಸ್ತ್ರೀಯರಾಗಿದ್ದ ಲಕ್ಷ್ಮಿಬೋಯಿ ಅವ್ವೆ[5] ತರಿಯೂರಿನಲ್ಲಿ ನಂದಿಕೇಶ್ವರ ದೇವರ ಪ್ರತಿಷ್ಠಾಪನೆ ಮಾಡಿದರೆ, ಬಿರ್ಲೆ ಮಲ್ಲಮ್ಮ[6] ಕಡೂತಿಯಲ್ಲಿ ಕಂಬದೈಯ್ಯ, ಅಂದರೆ ನರಸಿಂಹ ಹಾಗೂ ಗೋಪಾಲಕೃಷ್ಣ ದೇವರುಗಳಿಗೆ ಎರಡು ದೇಗುಲಗಳನ್ನೇ ಕಟ್ಟಿಸಿದಳು ಎಂಬುದಾಗಿ ಕ್ರಮವಾಗಿ ಕ್ರಿ.ಶ. 1393 ಹಾಗೂ 1593ರ ಶಾಸನಗಳು ವಿವರಿಸುತ್ತವೆ.

ದೇಗುಲಗಳಿಗೆ ನಾನಾ ಬಗೆಯ ದಾನಗಳನ್ನು ಅರ್ಪಿಸುವುದೂ ಸಹ ಈ ಕಾಲದ ಮಹಿಳೆಯರ ಧಾರ್ಮಿಕ ಜೀವನದ ಇನ್ನೊಂದು ಪ್ರಧಾನ ಮುಖವಾಗಿದ್ದಿತು ಎಂಬುದನ್ನು ಶಾಸನಗಳು ಸ್ಪಷ್ಟೀಕರಿಸುತ್ತವೆ. 2ನೆಯ ದೇವರಾಯನ ರಾಣಿ ಕಮಲಾದೇವಿ ತುಮಕೂರು ಜಿಲ್ಲೆಯ ಬಿದಿರಿಯ ಕಲಿನಾಥ ದೇವರಿಗೆ ಭೂದಾನ ನೀಡಿದರೆ, ಕೃಷ್ಣದೇವರಾಯನ ರಾಣಿಯರಾಗಿದ್ದ ತಿರುಮಲದೇವಿ ಹಾಗೂ ಚಿನ್ನಾದೇವಿ ತಿರುಪತಿಯ ಭಗವಂತನಿಗೆ ಚಿನ್ನದ ಬಟ್ಟಲು, ತಟ್ಟೆ, ಕಂಠಿಹಾರ, ಪದಕದಹಾರ, ಗ್ರಾಮ ಇತ್ಯಾದಿಗಳನ್ನು ಅರ್ಪಿಸಿದರು ಮತ್ತು ಅಚ್ಯುತರಾಯನ ರಾಣಿ ವರದಾಂಬಿಕಾ ಅದೇ ದೇವರ ಪೊಂಗಲ್ ನೈವೇದ್ಯಕ್ಕಾಗಿ ಆರು ಹಳ್ಳಿಗಳನ್ನು ಕಾಣಿಕೆಯಾಗಿ ನೀಡಿದಳು ಎಂಬುದು ತಿರುಮಲೈ ತಿರುಪತಿ ದೇವಸ್ಥಾನದ ದಾಖಲೆ ಹಾಗೂ ಇತರ ಶಾಸನಗಳಿಂದ ಗೊತ್ತಾಗುತ್ತದೆ.[7] ಕ್ರಿ.ಶ. 1401, 1458, 1510ರ ಶಾಸನಗಳು ಮೇಲ್ವರ್ಗಗಳಿಗೆ ಸೇರಿದ್ದ ತುಲುವಕ್ಕ ಹೆಗ್ಗಡತಿ,[8] ತಿಮ್ಮಣ್ಣ ದಂಡನಾಯಕನ ಧರ್ಮಪತ್ನಿ ರಂಗಾಂಬಿಕೆ ಅಥವಾ ರಂಗನಾಯಕಿ ಹಾಗೂ

ಅರಮನೆಯ ಹೊನ್ನಮವ್ವ,[10] ಮತ್ತು ಭೀಮಣ್ಣ ಎಂಬ ಭಂಡಾರಿಯ ಮರಿಮಗಳಾಗಿದ್ದ ಸಂಕಮ್ಮ ಮೊದಲಿತಿ[11] ಕ್ರಮವಾಗಿ ತುಳುವೇಶ್ವರ ಹಾಗೂ ಆ ದೇವರ ಸತ್ರಕ್ಕೆ ಭೂಮಿಗಳನ್ನು, ಮೇಲುಕೋಟೆಯ ತಿರುನಾರಾಯಣ ಭಗವಂತನಿಗೆ ರತ್ನಗಳಿಂದ ಅಲಂಕೃತವಾಗಿದ್ದ ಪಲ್ಲಕ್ಕಿಯನ್ನು, ಮಲ್ಲಿಕಾರ್ಜುನ ದೇವರಿಗೆ ಹಾಗೂ ಐವರು ಜಂಗಮರ ಆಹಾರಕ್ಕಾಗಿ ಜಮೀನುಗಳನ್ನು ಮತ್ತು ಮಹಾದೇವ ದೇವರ ಮೊಸರನ್ನ ನೈವೇದ್ಯಕ್ಕಾಗಿ 60 ವರಾಹಗಳನ್ನು ಅರ್ಪಣೆ ಮಾಡಿದರು ಎಂಬುದನ್ನು ವಿಶದೀಕರಿಸಿವೆ. ಸಮಾಜದ ಕೆಳಗಿನ ಸ್ತರಗಳ ಸದಸ್ಯೆಯರಾಗಿದ್ದ ತಿಪ್ಪಮ್ಮ[12] ಬನ್ನೂರಿನ ಹನುಮಂತದೇವರ ಬೆಳಗಿನ ನೈವೇದ್ಯಕ್ಕೆ ಮೊಸರನ್ನವನ್ನು ತಯಾರಿಸುವ ಉದ್ದೇಶಕ್ಕಾಗಿ ಜಮಿನಾನುಗಳನ್ನು ಹಾಗೂ 900 ಅಡಕೆ ಮರಗಳನ್ನು; ಕುರುಬ ಜಾತಿಯ ಗೋವಿಂದಿ[13] ಶ್ರೀ ವೆಂಕಟೇಶ ಪರಮಾತ್ಮನ 10 ದಿನಗಳ ಬ್ರಹ್ಮೋತ್ಸವದಲ್ಲಿ 7 ದಿನಗಳ ಸೇವೆಗಳಿಗಾಗಿ 2180 ಪಣವನ್ನು ಮತ್ತು ತಿರುಮಲಮ್ಮನ್[14] ತಿರುಪತಿಯ ಶ್ರೀ ಗೋವಿಂದರಾಜ ದೇವಸ್ಥಾನಕ್ಕೆ 400 ಪಣವನ್ನು ಅರ್ಪಿಸಿದಳು ಎಂಬ ವಿವರಗಳು 1541 ಹಾಗೂ 1545ರ ದಾಖಲಾತಿಗಳಲ್ಲಿವೆ. ಕಲ್ಲರಸಿಯಮ್ಮ ಎಂಬ ಧರ್ಮನಿಷ್ಠ ಮಹಿಳೆ ಸಿದ್ಧಮಲ್ಲಿಕಾರ್ಜುನ ದೇಗುಲದ ಜೀರ್ಣೋದ್ಧಾರವನ್ನು ಮಾಡಿದಳಲ್ಲದೆ, ಜಮೀನುಗಳನ್ನು ಮಾತ್ರವಲ್ಲದೆ, ಹಾಡುವವರು ಹಾಗೂ ತಂಬೂರಿ ಮೀಟುವವರನ್ನು ಕಾಣಿಕೆಯನ್ನಾಗಿ ನೀಡಿದಳು. ಇದೊಂದು ವಿಚಿತ್ರವಾಗಿದ್ದ ದಾನ.[15]

ಸಾಮಾಜಿಕ ರಂಗದಲ್ಲಿ ಮಹಿಳೆ ತಾಯಿ, ಸಹೋದರಿ, ಪತ್ನಿ ಹಾಗೂ ಮಗಳಾಗಿ ಗೌರವಾದರಗಳಿಗೆ ಪಾತ್ರಳಾಗಿದ್ದಳು ಎಂಬುದಕ್ಕೆ ಶಾಸನಾಧಾರಗಳಿವೆ. ರಾಜರುಗಳು ಮಾತ್ರವಲ್ಲದೆ ಎಲ್ಲ ಸಾಮಾಜಿಕ ಸ್ತರಗಳ ಸದಸ್ಯರು ತಮ್ಮ ತಮ್ಮ ತಾಯಂದಿರ ಪುಣ್ಯಾರ್ಥವಾಗಿ ಅನೇಕ ರೀತಿಯ ದತ್ತಿಗಳನ್ನು ನೀಡಿರುವುದನ್ನು, ಪುಣ್ಯಕಾರ್ಯಗಳನ್ನು ಎಸಗಿರುವುದನ್ನು ಶಿಲಾ ದಾಖಲೆಗಳಲ್ಲಿ ಗುರುತಿಸಬಹುದು. ದೊರೆಯಾಗಿದ್ದ ಎರಡನೆಯ ಹರಿಹರನು ತನ್ನ ತಾಯಿಯ ಹೆಸರಿನ ಮೇರೆಗೆ ಜಂಬೂರನ್ನು ಹೊನ್ನಲಪುರವೆಂಬುದಾಗಿ ಕರೆದು ಬ್ರಾಹ್ಮಣರಿಗೆ ದಾನ ಮಾಡಿದನು. ಮಹಾಮಂಡಳೇಶ್ವರ ವೀರ ಮಲ್ಲಣ್ಣ ಒಡೆಯರ್ ತನ್ನ ತಾಯಿಗೆ ಪುಣ್ಯಲೋಕ ಲಭ್ಯವಾಗಲಿ ಎಂಬ ಉದ್ದೇಶದಿಂದ ಹಿಡಿಂಬನಾಥ ದೇವರ ಉತ್ಸವಗಳಿಗೆ, ಆ ದೇಗುಲದ ಶಿಲಾ ಗೋಪುರವನ್ನು ಕಟ್ಟುವುದಕ್ಕಾಗಿ ಕಂಚಿಗನಹಳ್ಳಿಯನ್ನು ದಾನಮಾಡಿ, ಅಲ್ಲಿನ ಇಬ್ಬರು ಸಂನ್ಯಾಸಿಗಳನ್ನು ತಮ್ಮ ತಾಯಿಗೆ ಒಳಿತಾಗಲಿ ಎಂದು ಪ್ರಾರ್ಥಿಸಬೇಕೆಂದು ಕೇಳಿಕೊಂಡನು. ವಲ್ಲಭದೇವ ಮಹಾರಾಜ ಎಂಬ ಮತ್ತೊಬ್ಬ ಮಹಾಮಂಡಳೇಶ್ವರನು ತನ್ನ ತಾಯಿ ಕೃಷ್ಣಮ್ಮನ ಪುಣ್ಯಕ್ಕಾಗಿ ಅವಳ ಹೆಸರಿನಲ್ಲಿ 15 ವರಾಹಗಳಿಗೆ ಒಂದು ಜಮಿನಾನು ಕೊಂಡು, ವರದರಾಜ ದೇವರಿಗೆ ಪ್ರತಿದಿನ ಹೂಮಾಲೆ ಸೇವೆಯಾಗಬೇಕೆಂಬ ಉದ್ದೇಶದಿಂದ ಅದನ್ನು ಹೂದೋಟವನ್ನಾಗಿ ಪರಿವರ್ತಿಸಿದನು. ಅಧೀನ ಅಧಿಕಾರಿಯಾಗಿದ್ದ ವಿಠಪ ತನ್ನ ತಾಯಿಯ ಹೆಸರಿನಲ್ಲಿ ಎರಡು ಹಳ್ಳಿಗಳನ್ನು ಅಕ್ಕಾಂಬಿಕಾಪುರ ಎಂಬ ಅಗ್ರಹಾರವಾಗಿ ಬದಲಾಯಿಸಿ ಬ್ರಾಹ್ಮಣರಿಗೆ ದಾನವಾಗಿ ನೀಡಿದನು. ಅರಮನೆಯ ಊಳಿಗದ ಹರಿಯಪ ತನ್ನ ತಾಯಿಗೆ ಬ್ರಹ್ಮಲೋಕ ಪ್ರಾಪ್ತವಾಗಲಿ ಎಂಬ ಉದ್ದೇಶದಿಂದ ಹೆಗ್ಗಡಿತಿಕೊಪ್ಪ ಎಂಬ ಗ್ರಾಮವನ್ನು ಖರೀದಿಸಿ, ಅದನ್ನು ತೀರ್ಥಹಳ್ಳಿಯ ಮಠದ ವಿಶ್ವನಾಥ ದೇವರ ದೀಪೋತ್ಸವ ಮತ್ತಿತರ ಸೇವೆಗಳಿಗಾಗಿ ಹಾಗೂ ಸತ್ರದಲ್ಲಿ ಬ್ರಾಹ್ಮಣರ ಭೋಜನಕ್ಕಾಗಿ ದಾನ ಮಾಡಿದನು. ಮಲ್ಲಪ್ಪಣ್ಣ ಎಂಬ ಸಾಮಾನ್ಯನೊಬ್ಬನು ತನ್ನ ತಾಯಿ ವೀರಮ್ಮನ ಪುಣ್ಯಕ್ಕಾಗಿ ಅಂಗಡಿ ಕಟ್ಟಿ ಅದನ್ನು ಹಾಗೂ ಸುಂಕಾದಾಯವನ್ನು ಸೂರ್ಯನಾರಾಯಣ ದೇವರಿಗೆ ಅರ್ಪಿಸಿದನು. ತಿರುಮಲರಾಯನು ತನ್ನ ತಾಯಿಗೆ ಮಾತ್ರವಲ್ಲದೆ, ಬಹುಶಃ ತನ್ನ ಮಲತಾಯಿಗೂ ಸಹ ಪುಣ್ಯ ಉಂಟಾಗಲಿ ಎಂಬ ಸದುದ್ದೇಶದಿಂದ ಮ್ರೊಂಪುರುವಿನಲ್ಲಿ ಭೈರವ ದೇವಾಲಯದ ಪಶ್ಚಿಮ ಗೋಪುರವನ್ನು ಕಟ್ಟಿಸಿದನು. ಈ ಮೆಚ್ಚುಗೆಗೆ ಪಾತ್ರವಾಗುವ ವಿಷಯಗಳು 1528, 1411, 1549, 1415, 1583, 1528 ಮತ್ತು 1425ರ ಶಾಸನಗಳಲ್ಲಿ ಕಂಡು ಬರುತ್ತವೆ.[17] ತಿರುಮಲರಾಯನು ಈ ಗೋಪುರ ನಿರ್ಮಾಣದಿಂದ ತನ್ನ ಸಹೋದರಿ ತಿರುಮಲದೇವಮ್ಮನಿಗೂ ಪುಣ್ಯ ಸಿಗಬೇಕೆಂದು ಇಚ್ಛಿಸಿದನು. ಅದೇ ರೀತಿ ವರದಾಜಅಮ್ಮನ ಮೂರನೆಯ ಸೋದರನಾಗಿದ್ದ ಸಿಂಗರಾಜನು ತನ್ನ ಸೋದರಿಗೆ ಪುಣ್ಯಾರ್ಜನೆಯಾಗಲಿ ಎಂದು ಶ್ರೀ ವೆಂಕಟೇಶ ದೇವರಿಗೆ ಹಲವಾರು ಕಾಣಿಕೆಗಳನ್ನು ನೀಡಿದನು.[18] ಪತ್ನಿಯಾದವಳು ಸಹ ತನ್ನ ಪತಿಯ ಕಲ್ಯಾಣಕ್ಕಾಗಿ ಈ ಬಗೆಯ ಧಾರ್ಮಿಕ ಕಾರ್ಯಗಳನ್ನು ಕೈಗೊಳ್ಳುತಿದ್ದಳು ಎಂಬುದನ್ನು ಶಾಸನಗಳು ದೃಢಪಡಿಸುತ್ತವೆ. 1550ರ ಶಾಸನವೊಂದರ ಪ್ರಕಾರ ಬ್ರಾಹ್ಮಣ ಸ್ತ್ರೀ ಒಬ್ಬಳು ತನ್ನ ಹಾಗೂ ತನ್ನ ಗಂಡನ ಪುಣ್ಯಕ್ಕಾಗಿ ಅಣ್ಣಾಮಲೈನಾಥನ ದೇಗುಲಕ್ಕೆ ಭೂದಾನಗಳನ್ನು ಮಾಡಿದಳು.[19] ಪತ್ನಿಗಾಗಿ ಪತಿಯಾದವನು ಇದೇ ರೀತಿಯ ದಾನ ಕಾರ್ಯಗಳನ್ನು ಮಾಡುತ್ತಿದ್ದನು ಎಂಬುದನ್ನು ಹಲವಾರು ದಾಖಲೆಗಳು ರುಜುವಾತುಪಡಿಸುತ್ತವೆ. ಮಗಳನ್ನು ಬಹು ಅಕ್ಕರೆಯಿಂದ ನೋಡಿಕೊಳ್ಳಲಾಗುತ್ತಿದ್ದಿತು ಎಂಬುದು ಅವಳ ಕ್ಷೇಮಕ್ಕೆ ಕೈಗೊಳ್ಳುತ್ತಿದ್ದ ದಾನ, ಧಾರ್ಮಿಕ ದತ್ತಿ ಕಾರ್ಯಕ್ರಮಗಳಿಂದ ವಿಶದವಾಗುತ್ತದೆ. ಉದಾಹರಣೆಗೆ, ಕೊಂಡವೀಡು ವಿಭಾಗದ ಮುಖ್ಯಸ್ಥನಾಗಿದ್ದ ರಾಮಯ್ಯ ಒಂದು ಪಟ್ಟಣ ಹಾಗೂ ಕೆರೆಯನ್ನು ನಿರ್ಮಿಸಿ ಅವುಗಳಿಗೆ ತನ್ನ ಮಗಳು ಅಚ್ಯುತಮ್ಮನ ಹೆಸರಿನ ಮೇರೆಗೆ ಅಚ್ಯುತಮ್ಮಪುರ ಹಾಗೂ ಅಚ್ಯುತಮ್ಮ ಸಮುದ್ರ ಎಂಬುದಾಗಿ ನಾಮಕರಣ ಮಾಡಿದನು.[20] ವೆಂಗಲರಾಜು ತನ್ನ ಪುತ್ರಿ ಕೋನಮ್ಮನ ಪುಣ್ಯಕ್ಕಾಗಿ ಕೋನಸಮುದ್ರದ ತಿರುವೆಂಗಳನಾಥ ದೇವರಿಗೆ ಕೋನಸಮುದ್ರ ಗ್ರಾಮವನ್ನು ದಾನವಾಗಿ ಅರ್ಪಿಸಿದನು.

ಬ್ರಾಹ್ಮಣರಿಗೆ ದಾನ ಮಾಡುವುದು, ಕೆರೆ-ಕಟ್ಟೆ ಅಗ್ರಹಾರ ಛತ್ರ ಇತ್ಯಾದಿಗಳ ನಿರ್ಮಾಣ ಮಾಡುವುದೇ ಮುಂತಾದ ಜನೋಪಯೋಗಿ ಕಾರ್ಯಕ್ರಮಗಳಲ್ಲೂ ಈ ಕಾಲದ ಮಹಿಳೆಯರು ಸಕ್ರಿಯವಾಗಿ ಭಾಗವಹಿಸುತ್ತಿದ್ದರು ಎಂಬುದು ಗಮನಾರ್ಹವಾದುದು. ರಾಮಚಂದ್ರಪುರ ಎಂಬ ಅಗ್ರಹಾರವನ್ನು ಕಟ್ಟಿ, ಬಾವಿ ತೋಡಿಸಿದ ರಾಣಿ ಚಿನ್ನಮಾಂಬ, ವೆಂಕಟಕೃಷ್ಣರಾಜ ಅಗ್ರಹಾರದ ಸ್ಥಾಪನೆ ಮಾಡಿದ ಯಲಹಂಕ ನಾಡ ಪ್ರಭುವಿನ ರಾಣಿ ವೆಂಕಟಕೃಷ್ಣರಾಜಮ್ಮ, ಮಲ್ಲಿಕಾರ್ಜುನ ದೇವರ ಶಿಷ್ಯನಿಗೆ ಮಗ್ಗಿಹಳ್ಳಿ ಗ್ರಾಮ ನೀಡಿದ ಗಂಗರಾಜ ಒಡೆಯನ ರಾಜಮಾತೆ, ಕಂಡಾದ ರಾಮಾನುಜ ಅಯ್ಯಂಗಾರ್ ನಡೆಸುತ್ತಿದ್ದ ಛತ್ರದಲ್ಲಿ ಆಹಾರ ದಾನಕ್ಕಾಗಿ ಚಿನ್ನವನ್ನೇ ದಾನ ಮಾಡಿದ ಓರ್ವ ಮಹಾಮಂಡಳೇಶ್ವರನ ರಾಣಿ ನರಸಮ್ಮನ್, ಮೇಲುಕೋಟೆಯ 52 ಜನ ಶ್ರೀವೈಷ್ಣವ ಬ್ರಾಹ್ಮಣರಿಗೆ ದತ್ತಿಗಳನ್ನು ನೀಡಿದ ನಾಚಾರಮ್ಮ ಮತ್ತು ತಾನಿದ್ದ ಮನೆಯನ್ನೇ ಬ್ರಾಹ್ಮಣರಿಗಾಗಿ ಬಿಟ್ಟು ಕೊಟ್ಟಿದ್ದ ಸಂಗಮದೇವಿ ಮುಂತಾದವರನ್ನು 1540, 1599, 1511, 1497, 1471 ಹಾಗೂ 1430 ಶಾಸನಗಳು ಸ್ತುತಿಸಿವೆ.[21] ಜರ್ಲೆ ಮಲ್ಲಮ್ಮ ಎಂಬ ಸಾಮಾನ್ಯ ಸ್ತ್ರೀಯು ಒಂದು ಗ್ರಾಮದ ಉದ್ಧಾರಕ್ಕಾಗಿ ಕೈಗೊಂಡ ಕಾರ್ಯಗಳು ಒಂದು ಶಿಲೆಯಲ್ಲಿ ದಾಖಲಾಗಿವೆ. ಅವಳು ಗ್ರಾಮ ಕಟ್ಟಲು ಕಂಬೆಗೌಡ ಮೊದಲಾದವರು ಮಾಡಿದ್ದ ಸಾಲ ತೀರಿಸಿದಳು, ಕಡೂತಿಯ ದೇಗುಲದ ಎದುರು ಬಾವಿ ತೋಡಿಸಿದಳು, ಎಲ್ಲಾ ಕುಶಲ ಕೆಲಸಗಾರರಿಗೆ ಕಾಣಿಕೆಗಳನ್ನು ಕೊಟ್ಟಳು, ಆ ಸಂದರ್ಭದಲ್ಲಿ ಎಲ್ಲರಿಗೂ ಆಹಾರದಾನ ಮಾಡಿದಳು ಮತ್ತು ಆ ಹಳ್ಳಿಯಲ್ಲಿ ಯಾರು ಯಾರು ಯಾವ ಯಾವ ಜವಾಬ್ದಾರಿಗಳನ್ನು ನಿರ್ವಹಿಸಬೇಕು ಎಂಬುದನ್ನು ನಿರ್ಣಯಿಸಿದಳು. ಹಾಗೆಯೇ ಹಾಳಾಗಿದ್ದ ಗೌಡಿಗೆಹಳ್ಳಿಯನ್ನು ಉದ್ಧಾರವಾಗಬೇಕು ಎಂಬುದಾಗಿ ನಾಗಿಯ ಎಂಬಾತನು ಮನವಿ ಸಲ್ಲಿಸಿದಾಗ ಬಾಸಾತಾಯಿ ತನ್ನ ಜಮಿನನ್ನೇ ಬಿಟ್ಟುಕೊಟ್ಟುಬಿಟ್ಟಳು.[22]

ಇದರೊಂದಿಗೆ, ರಾಜ್ಯವಾಳುತ್ತಿದ್ದ ಚೆನ್ನಭೈರಾದೇವಿ, ಕಾಳಲದೇವಿ, ಹೆಗ್ಗಡಿತಿಯಾಗಿದ್ದ ತೊಳುವಕ್ಕ, ಭೂಮಾಲಿಕತ್ವ ಹೊಂದಿದ್ದ ಗುಮ್ಮಟನಾಯಿಕಿತಿ, ಬಂಜರು ಭೂಮಿಯನ್ನು ಫಲವತ್ತಾಗಿ ತೋಟ ಮಾಡಿದ್ದ ವೊಟ್ಟೊಬರಸಿ, ನೀರಾವರಿ ವ್ಯವಸ್ಥೆಗೆ ಅನುಕೂಲವಾಗುವಂತೆ ಕಾಲುವೆ ತೋಡಿಸಿದ್ದ ಶ್ರೀರಂಗಾಂಬದೇವಿ, ಕೆರೆ ಕಟ್ಟೆ ಆ ಪುಣ್ಯಕಾರ್ಯಕ್ಕಾಗಿ ಕಟ್ಟುಕೊಡಗಿಯಾಗಿ ಭೂಮಿಯನ್ನು ಬಹುಮಾನ ಪಡೆದ ಮುದ್ದಯ್ಯನ ಮಗಳು ಮೊದಲಾದ ಅನೇಕ ಮಹಿಳೆಯರ ಬಗ್ಗೆ ಶಾಸನಗಳಲ್ಲಿ ದೊರಕುವ ಮಾಹಿತಿಗಳ ಆಧಾರದ ಮೇಲೆ ಮಹಿಳೆಯರು ಈ ಕಾಲದಲ್ಲಿ ರಾಜಕೀಯ ಹಾಗೂ ಆರ್ಥಿಕ ಕ್ಷೇತ್ರಗಳಲ್ಲೂ ಸ್ವಾತಂತ್ರ್ಯ ಸಮಾನತೆ ಪಡೆದಿದ್ದರು ಎಂಬ ತೀರ್ಮಾನಕ್ಕೆ ಬರಬಹುದು. ಶಿಲ್ಪಕಲೆ ಹಾಗೂ ಕೆಲವು ಶಾಸನಗಳ ನಿರೂಪಣೆಯಿಂದ ಕಲೆ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ[23] ಮಹಿಳೆ ಗಣನೀಯವಾದ ಕೊಡುಗೆಗಳನ್ನು ನೀಡಿದ್ದಳು ಎಂಬುದಾಗಿ ಹೇಳಬಹುದು.

ಇಷ್ಟುಮಾತ್ರವಲ್ಲದೆ ಮಹಿಳೆಯ ಸ್ಥಾನಮಾನದ ಹಾದಿಯಲ್ಲಿ ಮುಳ್ಳಾಗಿದ್ದ ವೇಶ್ಯ ವೃತ್ತಿ, ದೇವದಾಸಿ, ನಾಯಕಸಾನಿ ಸಂಸ್ಥೆ ಹಾಗೂ ಸತಿ ಸಹಗಮನ ಪದ್ಧತಿ ಮುಂತಾದ ಅನಿಷ್ಟಗಳು ಈ ಸಮಾಜದಲ್ಲಿ ಪ್ರಬಲವಾಗಿದ್ದವು ಎಂಬುದು ಗಮನಿಸಬೇಕಾದ ಅಂಶ. ಆದರೂ ದೇವದಾಸಿಯರು ಸಂಗೀತ ನೃತ್ಯಾದಿ ಕಲೆಗಳಲ್ಲಿ ಪರಿಣಿತರಾಗಿದ್ದರು, ಅವರಿಗಾಗಿ ಸಮಾಜದ ಎಲ್ಲ ವರ್ಗದವರು ದಾನಗಳನ್ನು ಕೊಡುತ್ತಿದ್ದರು ಮತ್ತು ಅವರೂ ಸಹ ಪವಿತ್ರಾಲಯಗಳಿಗೆ ಕಾಣಿಕೆಗಳನ್ನು ಕೊಡಲು ಅವಕಾಶವಿದ್ದಿತು ಎಂಬುದೂ ಮತ್ತು ಸತಿಯರ ಸಂಖ್ಯೆ ಹೆಚ್ಚಾಗಿದ್ದಂತೆ ತೋರಿಬಂದರೂ ಸಮಾಜ ಯಾವ ನಿರ್ಬಂಧವನ್ನೂ ಅವರ ಮೇಲೆ ಹೇರಿರಲಿಲ್ಲ ಎಂಬುದೂ ಸಹ ಗಮನಾರ್ಹವಾದ ಸಂಗತಿಗಳು.

ಒಟ್ಟಿನಲ್ಲಿ ವಿಜಯನಗರ ಕಾಲದಲ್ಲಿ ಗಣನೀಯವಾದ ಪ್ರಗತಿ ಉಂಟಾಗಿ ಸಮಾಜದ ಎಲ್ಲಾ ವಲಯಗಳಲ್ಲಿ ಸಂಕೀರ್ಣತೆ ಹೆಚ್ಚಾಗುತ್ತಿದ್ದರೂ ಮಹಿಳೆಗೆ ಗೌರವಾದರಯುಕ್ತ ಸ್ಥಾನಮಾನವಿದ್ದಿತು ಮತ್ತು ಎಲ್ಲಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದಕ್ಕೆ ಅವಳಿಗೆ ಸಮಾನಾವಕಾಶಗಳಿದ್ದವು, ಹಿಂದಿನಿಂದ ಬಂದಿದ್ದ ಹಿತಕರ ಪರಂಪರೆಯನ್ನು ಉಳಿಸಿ, ಬೆಳಸಿ, ಮುಂದುವರಿಸುವುದರಲ್ಲಿ ಅವಳು ಗಣನೀಯವಾಗಿದ್ದ ಪಾತ್ರವಹಿಸಿ ಅಚ್ಚುಕಟ್ಟಾಗಿ ನಿರ್ವಹಿಸಿದಳು ಎಂಬುದು ಈ ಆಯ್ದ ಕೆಲವು ಶಾಸನಾಧಾರಗಳು ಸ್ಪಷ್ಟಪಡಿಸುತ್ತವೆ.

ಅಡಿ ಟಿಪ್ಪಣಿಗಳು

1. ಎಕ., 2, ಸಂ. 337.
2. ಆರಿಸೌಇಂಎ., 1965, ಸಂ. 366.
3. ಎಕ., 4, ಚಾಮರಾಜನಗರ 93, ಪು. 23.

4 ಅದೇ, 3, ಶ್ರೀರಂಗಪಟ್ಟಣ 97, ಪು. 28, 59, 86.

5. ಅದೇ, 12, ಸಿರಾ 105, ಪು. 103, 174, 304.

6. ಆರಿಮೈಆಡಿ., 1929, ಸಂ. 97, ಪು. 181-182.

7. ಎಕ., 12, ಗುಬ್ಬಿ 56. *ತಿರುಪತಿ ತಿರುಮಲ ದೇವಸ್ಥಾನಂ ಇನ್ಸ್‌ಕ್ರಿಪ್‌ಶನ್ಸ್*, ಸಂಪುಟ. 4, ಪು. 59; ಸಂಪುಟ 3, ಪು. 164, 171; ಸೌಇಂಇ., 4, ಪು. 295.

8. ಸೌಇಂಇ., 9(2), ಸಂ. 424, ಪು. 431-32.

9. ಎಕ., 3, ಶ್ರೀರಂಗಪಟ್ಟಣ, ಪು. 27.

10. ಸೌಇಂಇ., 9(2), ಸಂ. 458, ಪು. 470.

11. ಅದೇ, ಸಂ. 479, ಪು. 493-95.

12. ಎಕ., 3, ಟಿ.ನರಸೀಪುರ 120, ಪು. 92, 307, 176.

13. *ತಿರುಪತಿ ತಿರುಮಲ ದೇವಸ್ಥಾನಂ ಇನ್ಸ್‌ಕ್ರಿಪ್‌ಶನ್ಸ್*, ಪು. 81.

14. ಅದೇ, ಪು. 80.

15. ಎಕ., 12, ಗುಬ್ಬಿ 29, 30, ಪು. 22-23.

16. ಅದೇ, 6, ಸಂ. 25.

17. ಸೌಇಂಇ., 9(2), ಸಂ. 523, ಪು. 538-39; ಸಂಪುಟ 16, ಸಂ. 28, 172, ಪು. 30, 179; ಎಕ., 8, ತೀರ್ಥಹಳ್ಳಿ 218, 219, ಪು. 210; ಸಂಪುಟ 11, ಚಿತ್ರದುರ್ಗ 14, ಪು. 6, 13-14, 9-10.

18. *ತಿರುಪತಿ ತಿರುಮಲ ದೇವಸ್ಥಾನಂ ಇನ್ಸ್‌ಕ್ರಿಪ್‌ಶನ್ಸ್*, ಸಂ. 455.

19. ಆರಿಎ., 1911, ಸಂ. 397.

20. ಸೌಇಂಇ., 9(2), ಸಂ. 593, ಪು. 605-06.

21. ಸೌಇಂಇ., 16, ಸಂ. 121, ಪು. 133-34; ಎಕ., 12, ಕುಣಿಗಲ್ 12, ಪು. 34, 90-91, 55; ಎಕ., 14, ಯಳಂದೂರು 15, ಪು. 31; ಶ್ರೀರಂಗಪಟ್ಟಣ 86, ಪು. 26; ಎಕ., 8, ತೀರ್ಥಹಳ್ಳಿ 33, ಪು. 169-170; ಆರಿಸೌಇಂಎ., 1938-39, ಸಂ. ಬಿ 5, ಪು. 11.

22. ಆರಿಮೈಆಡಿ., 1929, ಸಂ. 97, ಪು. 181-82; ಎಕ., 5, ಮಂಜರಾಬಾದ್ 48, ಪು. 211, 816, 547.

23. ಆರಿಸೌಇಂಎ., 1929-30, ಸಂ. 418, 542; ಎಕ., 6, ಕೊಪ್ಪ 47, ಪು. 19-21; ಕಇ., 3(1), ಸಂ. 11; ಎಇಂ., 29, ಪು. 208-09; *ತಿರುಪತಿ ತಿರುಮಲ ದೇವಸ್ಥಾನಂ ಇನ್ಸ್‌ಕ್ರಿಪ್‌ಶನ್ಸ್*, 1, ಸಂ. 25; ಎಕ., 5, ಚನ್ನರಾಯಪಟ್ಟಣ 256.

13. ಕುಮಾರರಾಮ ಮತ್ತು ಸಂಗಮ ವಂಶ

ಸೂರ್ಯನಾಥ ಕಾಮತ್

ಕುಮಾರರಾಮನು ನಿರ್ವಿವಾದವಾಗಿಯೂ ವಿಜಯನಗರದ ಅಸ್ತಿತ್ವಕ್ಕೆ ಸಾಕಷ್ಟು ಸ್ಫೂರ್ತಿ ನೀಡಿದವನು. ವಿಜಯನಗರ ಹಾಗೂ ಅದರ ಉತ್ತರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದ ಮೂರು ಗಣ್ಯ ಶಿಷ್ಟ ಕಾವ್ಯಗಳೂ (ಕೃತಿಕಾರರು ನಂಜುಂಡ ಕವಿ - ಸು. 1512; ಪಾಂಚಾಳ ಗಂಗ - ಸು. 1630 ಹಾಗೂ ಮಹಲಿಂಗಸ್ವಾಮಿ - ಸು. 1800ರ ನಂತರ)[1] ಹಲವಾರು ಜಾನಪದ ಕೃತಿಗಳೂ ಅನೇಕ ಯಕ್ಷಗಾನ ಕೃತಿಗಳೂ ಆ ಕಾಲದ ಕೈಫಿಯತ್ತುಗಳೂ ಅವನ ಗುಣಗಾನ ಮಾಡುವಲ್ಲಿ ಮೈಮರೆತಿವೆ. ಈ ಬಗ್ಗೆ 'ಕುಮಾರರಾಮನ ಸಾಂಗತ್ಯಗಳು' ಎಂಬ ಡಾಕ್ಟರೇಟ್ ಪ್ರಬಂಧದಲ್ಲಿ ಜ. ವರದರಾಜರಾಯರು ವಿವರವಾಗಿ ಚರ್ಚೆ ಮಾಡಿದ್ದಾರೆ.[2] ದಕ್ಷಿಣ ಭಾರತದಲ್ಲಿ ಹಿಂದೂ ಆಡಳಿತವನ್ನು ರಕ್ಷಿಸುವಲ್ಲಿ ಕಂಪಿಲರಾಯ ಮತ್ತು ಕುಮಾರರಾಮನು ನಡೆಸಿದ ಪ್ರಯತ್ನ ಹಾಗೂ ಅವರು ಯುದ್ಧದಲ್ಲಿ ವೀರಸ್ವರ್ಗ ಪಡೆದ ಸಂಗತಿಯು ಜನಮನದಲ್ಲಿ ಭಾರೀ ದುರಂತ ಪ್ರಕರಣವಾಗಿ ಅಚ್ಚಳಿಯದೆ ಉಳಿಯಿತು. ಆದರೆ ಮುಂದೆ ಅದೇ ರೀತಿ ಹೋರಾಡಿದ ಇನ್ನೂ ಘನವಂತಿಕೆಯ ದೊರೆಯಾದ ಮೂರನೆಯ ಬಲ್ಲಾಳ ಹಾಗೂ ಅವನ ಮಗ ವಿರೂಪಾಕ್ಷ ಬಲ್ಲಾಳನ ಬಗ್ಗೆ ಯಾವುದೇ ಉಲ್ಲೇಖನೀಯ ಸಾಹಿತ್ಯ ಕೃತಿ ಪ್ರಕಟವಾಗಲಿಲ್ಲ. ಒಂದು ವೇಳೆ ಕುಮಾರರಾಮನಂತೆ ತರುಣ ವಯಸ್ಸಿನವನಾಗಿರದೆ ತೀರ ವೃದ್ಧನಾಗಿದ್ದುದರಿಂದ ಬಲ್ಲಾಳನ ಬಗ್ಗೆ ಜನರಲ್ಲಿ ಸಹಾನುಭೂತಿ ಉಳಿಯದೇ ಹೋಯಿತೆ? ಇಲ್ಲವೇ ತನಗೆ ಶರಣಾಗಿದ್ದ ಮುಸಲ್ಮಾನ ಸೇನಾನಿ ಬಹಾಉದ್ದೀನನ್ನು ರಕ್ಷಿಸಲು ಹೋರಾಡಿ ಕುಮಾರರಾಮನು ಮಡಿದುದು ಹಾಗೂ ಅದೇ ಶರಣಾದ ವ್ಯಕ್ತಿಗೆ ರಕ್ಷಣೆ ನೀಡಲಾರದೆ ವೀರಬಲ್ಲಾಳನು ದೆಹಲಿಯ ಸೇನೆಗೆ ಶರಣಾದುದು ಜನರ ಮೆಚ್ಚುಗೆಗೆ ಎರವಾದ ಪ್ರಕರಣವೇ? ಹೇಗಿದ್ದರೂ ಕುಮಾರರಾಮನನ್ನು ವೀರನೆಂದೂ ಹುತಾತ್ಮನೆಂದೂ ಪರಿಗಣಿಸಿ ನೆನೆಯುತ್ತ ಮಧುರೆಯ ಸುಲ್ತಾನರ ಜೊತೆ ಹೋರಾಡುತ್ತಾ ಮಡಿದ ವೀರಬಲ್ಲಾಳನನ್ನು ಜನ ಮರೆತುದು ಒಂದು ವಿಶೇಷ ಸಂಗತಿ.

ಸಾಮಾನ್ಯ ಜನರ ಮನಸ್ಸಿನಲ್ಲಿ ಕುಮಾರರಾಮನ ಬಗ್ಗೆ ಇದ್ದ ಗೌರವವು ಸಾಹಿತ್ಯ ರೂಪದಲ್ಲಿ ಅವನ ದೈವೀಕರಣದ ರೂಪದಲ್ಲಿ ಪ್ರಟವಾದುದನ್ನಷ್ಟೇ ನಾವು ಗಮನಿಸಿದರೆ ಸಾಲದು. ಶಾಸನಗಳು ವಿಶೇಷತಃ ವಿಜಯನಗರದ ಆಡಳಿತದ ಶಾಸನಗಳು, ಅವನ ನೆನಪನ್ನು ಹಸಿರಾಗಿಡಲು ಯತ್ನಿಸಿದ್ದು ಉಲ್ಲೇಖನೀಯ. ವಾಸ್ತವವಾಗಿ ವಿಜಯನಗರದ ಸಂಗಮ ಸೋದರರು ಕುಮಾರರಾಮ ಮತ್ತು ಅವನ ತಂದೆ ಕಂಪಿಲರಾಯನ ಆಡಳಿತಕ್ಕೆ ಒಳಪಟ್ಟ ಪ್ರದೇಶಕ್ಕೆ ಸುಲಭವಾಗಿ ಉತ್ತರಾಧಿಕಾರಿಗಳಾಗಿರಬೇಕು. ಇದಕ್ಕೆ ಕಾರಣ ಅವರು ಆರಂಭದಲ್ಲಿ ಕಂಪಿಲರಾಯನ ಆಸ್ಥಾನದಲ್ಲೇ ಇದ್ದವರಾಗಿರಬೇಕು. ಕಂಪಿಲರಾಯನಿಗೂ ಓರಂಗಲ್‌ನವರಿಗೂ ತೀರ ಶತ್ರುತ್ವವಿದ್ದು ಕುಮಾರರಾಮ ಮಡಿದುದು ಓರಂಗಲ್‌ನ ನಾಶದ ನಂತರ.

ಇಲ್ಲಿ ಕಂಪಿಲರಾಯನ ವಂಶದ ಬಗ್ಗೆ ಮುಖ್ಯವಾಗಿ ಗಮನಿಸಬೇಕಾದ ಒಂದು ಸಂಗತಿಯಿದೆ. ಮೂಲತಃ ಅವರು ದೇವಗಿರಿಯ ಸೇಉಣ ಅಥವಾ ಯಾದವರ ಮಾಂಡಲೀಕರು. 1287ರ ಲಕ್ಷ್ಮೇಶ್ವರದ ಶಾಸನದಲ್ಲಿ ಸೇಉಣ ರಾಮಚಂದ್ರ (1271-1312) ಕುಮ್ಮಟದ ಸಿಂಗೆಯನಾಯಕನ ಜೊತೆ ಹೋರಾಡಿ ಸೋತು ಅವನ ಜೊತೆ ಸ್ನೇಹ ಮಾಡಿಕೊಂಡ ಉಲ್ಲೇಖವಿದೆ. ಈ ಶಾಸನದಲ್ಲಿ ಸೇಉಣ ಸೇನಾನಿ ದಾಮೆಯನಾಯಕನು ಈ ಯುದ್ಧ ಮಾಡಿದನೆಂದೂ ತಿಳಿಸಿದೆ. ಮುಂದೆ ಸಿಂಗೆಯನ ಮಗ ಕಂಪಿಲ ಅಥವಾ ಖಂಡೆರಾಯನು ರಾಮಚಂದ್ರನ ಅನೇಕ ದಂಡಯಾತ್ರೆಗಳಲ್ಲಿ ಸಹಕರಿಸಿದ. 1304ರವರೆಗೂ ರಾಮಚಂದ್ರನು ಹೊಯ್ಸಳ ಬಲ್ಲಾಳನ ವಿರುದ್ಧ ಹೋರಾಡಿದ್ದನ್ನು ಗಮನಿಸಿದರೆ ತುಂಗಭದ್ರೆಯ ಪರಿಸರದಲ್ಲಿ ಅವನ ಅಧಿಕಾರ ಮುಂದುವರಿಯಿತೆಂದು ಭಾವಿಸಬಹುದು. ಎರಡನೆಯ ಸೇವುಣ ಸಿಂಘಣನ ಕಾಲದಿಂದಲೂ (1200-47) ಧಾರವಾಡ ಜಿಲ್ಲೆಯಲ್ಲಿ ಸೇಉಣರ ಶಾಸನಗಳಿದ್ದು ಹೊಯ್ಸಳರ ಅಧಿಕಾರ ಅಲ್ಲಿ ಖಾಯಂ ಆಗಿ ಉಳಿಯಲಿಲ್ಲ. ಸಿಂಘಣನು 1213ರಲ್ಲಿ ಲಕ್ಕುಂಡಿಯನ್ನು ಗೆದ್ದು ಎರಡನೆಯ ಬಲ್ಲಾಳನನ್ನು ತುಂಗಭದ್ರೆಯ ದಕ್ಷಿಣಕ್ಕೆ ಅಟ್ಟಿದ. ಆಮೇಲೆ ಹೊಯ್ಸಳರು ಹೆಚ್ಚುಕಮ್ಮಿಯಾಗಿ ಧಾರವಾಡ, ಬಳ್ಳಾರಿ ಜಿಲ್ಲೆಗಳಲ್ಲಿ ಯಾವುದೇ ಅಧಿಕಾರವನ್ನು ಸ್ಥಿರವಾಗಿ ಪಡೆಯಲಿಲ್ಲ. ಈ ಪ್ರದೇಶದಲ್ಲಿ 13ನೆಯ ಶತಮಾನದ ಕೊನೆಗೆ ಸೇಉಣರ ಪರವಾಗಿ ಕಂಪಿಲರಾಯನ ವಂಶದವರೇ ಆಳುತ್ತಿದ್ದರು. ಮುಮ್ಮಡಿ ಸಿಂಗೆಯನಾಯಕ, ಅವನ ಮಗ ಕಂಪಿಲರಾಯ ಅಥವಾ ಖಂಡೆರಾಯ ಮತ್ತು ಕಂಪಿಲರಾಯನ ಮಗ ಕುಮಾರರಾಮ ಇವರು ಶಾಸನೋಕ್ತರಾದ ಈ ವಂಶದ ವ್ಯಕ್ತಿಗಳು. ಕೆಲವು ಕೈಫಿಯತ್ತುಗಳಲ್ಲಿ ಕಂಪಿಲರಾಯನಿಗೂ ಹಿಂದಿನ ಈ ವಂಶಜರ ವಿಚಾರ ಬಂದರೂ ಅವರು ಅಷ್ಟೊಂದು ಪ್ರಬಲರಲ್ಲ. ಆದರೆ ಕೈಫಿಯತ್ತುಗಳಲ್ಲಿ ಈ ವಂಶದ ಬಗ್ಗೆ ಬಂದ ವಿವರಗಳನ್ನು ಜ. ವರದರಾಜರಾಯರು ಈ ರೀತಿ

ಸಂಗ್ರಹಿಸಿ ಹೇಳಿದ್ದಾರೆ: ''ಮುಮ್ಮಡಿ ಸಿಂಗನೆಂಬಾತನು ತನ್ನ ದಾಯಾದಿಗಳ ಕಾಟವನ್ನು ತಡೆಯಲಾರದೆ ರಾಜ್ಯವನ್ನೆಲ್ಲ ಅವರಿಗೆ ಹಂಚಿಕೊಟ್ಟು ತಾನು ದೇವಗಿರಿಯ ರಾಮದೇವರಾಯನನ್ನು ಆಶ್ರಯಿಸಿದನು.'' ಅಲ್ಲದೆ ರಾಮದೇವರಾಯನೇ ಅವನಿಗೆ 'ಮುಮ್ಮಡಿ' ಎಂಬ ಬಿರುದನ್ನು ಇತ್ತನು.[3]

ಇಲ್ಲಿ 'ಮುಮ್ಮಡಿ' ಎಂಬ ಶಬ್ದ ಹಿಡಿದು ಈ ವಂಶದಲ್ಲಿ ಹಿಂದೆ ಆಳಿದ್ದಿರಬಹುದಾದ ಇಮ್ಮಡಿ ಅಥವಾ ಮೊದಲನೆಯ ಸಿಂಗೆಯನಾಯಕನೆಂಬ ಪೂರ್ವಜರು ಇದ್ದಿರಬಹುದೆಂಬ ಸಂಶಯವೂ ನಿವಾರಣೆಯಾಗುತ್ತದೆ. ಮುಮ್ಮಡಿ ಸಿಂಗೆಯ ನಾಯಕನೇ ಈ ಮನೆತನದ ಉಲ್ಲೇಖನೀಯ ಮಾಂಡಲಿಕ. ಇವನು ಕಾಮಗೇತಿ ವಂಶದ ಕಸ್ತೂರಿ ರಂಗಪ್ಪನಾಯಕನ ವಂಶದವನೆಂದು ಮಹಲಿಂಗಸ್ವಾಮಿ ಹೇಳಿರುವುದು ಹಾಸ್ಯಾಸ್ಪದ. 13-14ನೆಯ ಶತಮಾನದಲ್ಲಿ ಕಾಮಗೇತಿ ನಾಯಕರು ಪ್ರಾಧಾನ್ಯ ಹೊಂದಿರಲಿಲ್ಲ.

'ದಾಯಾದಿಗಳ ಕಾಟವನ್ನು ತಾಳಲಾರದೆ' ಎಂಬ ಇಲ್ಲಿನ ಶಬ್ದ ಗಮನಾರ್ಹ. ಸಿಂಗೆಯ ನಾಯಕನ ವಂಶ ಯಾವುದು? ಸೀತಾರಾಮ್ ಜಾಗಿರ್ದಾರರು ಈ ಬಗ್ಗೆ ಒಂದು ಮಹತ್ವದ ಶೋಧ ಮಾಡಿದ್ದಾರೆ. ಕುಮ್ಮಟದಲ್ಲಿ ದೊರೆತ ಒಂದು ಶಾಸನ (1315ರದು) ದಲ್ಲಿ ಕಂಪಿಲರಾಯನನ್ನು ಹೊಯ್ಸಳ ವಂಶದವನೆಂದು ಹೇಳಿದೆಯಲ್ಲದೆ ಹೊಯ್ಸಳರ ಬಿರುದುಗಳನ್ನು ಅವನಿಗೆ ಜೋಡಿಸಿದೆ. ''ಯಾದವ ನಾರಾಯಣ ಬುಜಬಲ ಪ(ರಾ)ಕ್ರಮ ಪ್ರತಾಪ ಚಕ್ರವರ್ತಿ ಶ್ರೀಮನ್ ಮಹಾಮಾಂಡಲಿಕ ಹೊಯ್ಸಣ ವೀರ ಕಂಪಿಲದೇವರಾಯನು* ಕುಮುಟದಲಿ ರಾಜ್ಯಂಗೆಯುತ್ತಿರೆ'' ಎಂದು ಶಾಸನ ಹೇಳುತ್ತದೆ.[4] ಇದು ಒಂದು ವೀರಗಲ್ಲಾಗಿದ್ದು 'ಕುತಬಿಸುರತಾನ ಖಾನಗಳು ನೇಮಿ ಸಹಿತ ನಡದು ಬಂದಲ್ಲಿ' ಎಂಬ ಈ ಶಾಸನದಲ್ಲಿನ ಭಾಗವು, ನೇಮಿಖಾನನೆಂಬಾತನ ದಾಳಿಯನ್ನು ಉಲ್ಲೇಖಿಸುತ್ತದೆ. ಕಂಪಿಲರಾಯನ ವಿರುದ್ಧ ದೆಹಲಿ ಸುಲ್ತಾನನು ನೇಮಿಖಾನನನ್ನು ಕಳುಹಿಸಿದ್ದನೆಂದು ನಂಜುಂಡನ ಕೃತಿಯೂ ಹೇಳುತ್ತದೆ.[5] ಹೀಗಾಗಿ ಈ ಶಾಸನದ ವಿಶ್ವಾಸನೀಯತೆ ಹೆಚ್ಚಿದೆ.

ವಿಜಯನಗರದ ಸಂಗಮ ವಂಶದವರು ಕುಮಾರರಾಮನ ಹೆಸರನ್ನು ಚೆನ್ನಾಗಿ ಬಳಸಿಕೊಂಡಿದ್ದಾರೆ. ಅವರ ಕಾಲದಲ್ಲಿ ಧಾರವಾಡ ಜಿಲ್ಲೆಯಲ್ಲೇ ಕುಮಾರರಾಮನ ಆರಾಧನಾ ಕೇಂದ್ರಗಳನ್ನು ನಾಲ್ಕುಕಡೆಯಾದರೂ ಸ್ಥಾಪಿಸಿದ್ದು ಕಾಣಬರುತ್ತದೆ. 1327-28ರಲ್ಲಿ ಕುಮಾರರಾಮ ಮತ್ತು ಕಂಪಿಲರಾಯನ ಮರಣ ಘಟಿಸಿದಾಗ ಕಂಪಿಲರಾಯನ ರಾಜ್ಯದ ಮೇಲೆ ದೆಹಲಿ ಸುಲ್ತಾನನ ಹಿಡಿತವೇನೂ ಬಿಗಿಯಾಗಿದ್ದಂತೆ ಇಲ್ಲ. ಸೇಉಣ ಮೂರನೆಯ ಸಿಂಘಣನು 1318ರಲ್ಲಿ ಕೊಲ್ಲಲ್ಪಟ್ಟ. ಅಲ್ಲಿಗೆ ಸೇಉಣರ ಸ್ವತಂತ್ರ ಆಡಳಿತ ಮುಗಿಯಿತು. ಅವನ ನಂತರ ಸೇಉಣರು ದೇಹಲಿಯ ಸುಲ್ತಾನರ ಮಾಂಡಳಿಕರಾಗಿದ್ದು, ಅವರ ಮೂರನೆಯ ಮಲ್ಲುಗಿಯ ಏಕಮಾತ್ರ ಶಾಸನ (1334ರದು) ಸಿಕ್ಕಿದೆ. ಧಾರವಾಡ, ಬಳ್ಳಾರಿ, ವಿಜಾಪುರ ಪ್ರದೇಶಗಳಲ್ಲಿ ಅವನ ಪ್ರಭಾವ ಇದ್ದಂತಿಲ್ಲ. ಆಗ ಬಹುಶಃ ಕಂಪಿಲರಾಯನ ಸೇನೆಯಲ್ಲಿ ಇದ್ದ ಗಣ್ಯ ಸೇನಾನಿ ಸಂಗಮನ ಮಕ್ಕಳು ಈ ಪ್ರದೇಶದಲ್ಲಿ ಪ್ರಬಲಿಸಿರಬೇಕು.

ಕುಮಾರರಾಮನ ಬಗೆಗಿನ ಮೂರು ಸಾಂಗತ್ಯಗಳಲ್ಲಿ ಭಾವ ಸಂಗಮನನ್ನು ಗಣ್ಯ ಅಧಿಕಾರಿಯೆಂದು ಉಲ್ಲೇಖಿಸಿದೆ. ಬೈಚೆಯನು ಕಂಪಿಲನ ಮಂತ್ರಿ ಹಾಗೂ ಹೆಂಡತಿಯ ಸೋದರ ಅವರ ಜೊತೆ ಸಂಗಮ ಸೇನಾನಿಯನ್ನು ವಿಜಯನಗರ ಕಾಲದಲ್ಲಿ ಬರೆದ ಕಾವ್ಯಗಳಲ್ಲಿ ಉಲ್ಲೇಖಿಸಬೇಕಾದರೆ ಆತನು ಗಣ್ಯ ವ್ಯಕ್ತಿಯಾಗಿದ್ದು, ಅವನೇ ಹರಿಹರಾದಿ ಸೋದರರ ತಂದೆ ಸಂಗಮನಾಗಿರಬೇಕು. ನಂಜುಂಡನ ಕಥನದಲ್ಲಿ ಹುಳಿಯಾರಿನಲ್ಲಿ ಬಲ್ಲಾಳನ ವಿರುದ್ಧ ನಡೆದ ಯುದ್ಧದಲ್ಲಿ[6] ಭಾವಸಂಗಮನು ಕಂಪಿಲನ ಜೊತೆ ಇದ್ದ; ಆ ಯುದ್ಧದಲ್ಲಿ ಕಾಟಣ್ಣನ ನೆರವಿಗೂ ಭಾವ ಸಂಗಮನನ್ನು ರಾಮನು ಕಳುಹಿಸಿದ;[7] ನೇಮಿಖಾನನೊಡನೆ ನಡೆದ ಯುದ್ಧದಲ್ಲಿ ರಾಮನು ಜೊತೆಯೂ ಅವನು ಇದ್ದ;[8] ಮುಂದೆ ಕುಮಾರರಾಮನು ನೇಮಿಯ ಜೊತೆ ನಡೆಸಿದ ಯುದ್ಧದಲ್ಲಿ ಅವನಿದ್ದ.[9] ಮಾತಂಗಿಯ ಜೊತೆ ನಡೆದ ಕೊನೆಯ ಯುದ್ಧದಲ್ಲಿ ರಾಮನಿಗೆ ಮೊದಲೇ ಭಾವಸಂಗಮನೂ ಹತನಾದ.[10] ಮಹಾಲಿಂಗಸ್ವಾಮಿಯ ಕೃತಿಯಲ್ಲಿ ಆತ ''ಭಾವನ

---

* ಶಾಸನವು ''ಶ್ರೀಯಾದವ ನಾರಾಯಣ ಭುಜಬಳ ಮ.. ಳ ಪ್ರತಾಪ ಚಕ್ರವರ್ತಿ ಶ್ರೀಮನು ಮಹಾನಾಯಕಾಚಾರ್ಯ ಶ್ರೀ ವೀರ ಕಂಪಿಲದೇವನು'' ಎಂದು ಹೇಳುತ್ತದೆ. ನೋಡಿ ಚನ್ನಬಸಪ್ಪ ಎಸ್. ಪಾಟೀಲ, 1991, ''ಕುಮ್ಮಟ'', *ವಿಜಯನಗರ: ಪ್ರೊಗ್ರೆಸ್ ಆಫ್ ರೀಸರ್ಚ್ 1987-88,* (ಸಂ.) ಡಿ.ವಿ. ದೇವರಾಜ್ ಮತ್ತು ಚನ್ನಬಸಪ್ಪ ಎಸ್. ಪಾಟೀಲ, ಮೈಸೂರು, ಪು. 199-216. ಪಾಟೀಲರು ಕಂಪಿಲರಾಯ ಮತ್ತು ವಿಜಯನಗರ ಸ್ಥಾಪನೆಯ ಸಂಬಂಧದ ಕಗ್ಗಟ್ಟನ್ನು ಬಿಡಿಸುವ ದಿಸೆಯಲ್ಲಿ ವ್ಯಾಪಕವಾದ ಕ್ಷೇತ್ರಕಾರ್ಯವನ್ನು ಕೈಗೊಂಡಿದ್ದಾರೆ. ಈಗಾಗಲೇ ಇದಕ್ಕೆ ಸಂಬಂಧಿಸಿದ ನಾಲ್ಕು ಲೇಖನಗಳನ್ನು ಪ್ರಕಟಿಸಿದ್ದಾರೆ. ನೋಡಿ ''ಮುಮ್ಮಡಿ ಸಿಂಗ, ಕಂಪಿಲ ಮತ್ತು ಕುಮಾರರಾಮ'', *ಅದೇ,* ಪು. 179-198; ''ಹೊಸಮಲೆದುರ್ಗ'', *ವಿಜಯನಗರ: ಪ್ರೊಗ್ರೆಸ್ ಆಫ್ ರೀಸರ್ಚ್ 1988-91,* (ಸಂ.) ಡಿ.ವಿ.ದೇವರಾಜ್ ಮತ್ತು ಚನ್ನಬಸಪ್ಪ ಎಸ್. ಪಾಟೀಲ, ಮೈಸೂರು, ಪು. 236-242; ''ದೊರವಡಿ'', *ಅದೇ,* ಪು. 243-247 (ಸಂಪಾದಕರು).

ಸಂಗಯ್ಯ''ನಾಗಿದ್ದಾನೆ. ಈತನು ಕುಮಾರರಾಮನ ಸೋದರಿ ಮಾರಮ್ಮನ ಪತಿಯಾಗಿ ಭಾವಸಂಗಮನೆನಿಸಿದ್ದಾನೆ. ಈತನು ಹರಿಹರ, ಬುಕ್ಕರ ತಂದೆ, ಸಂಗಮನೇ ಇರಬೇಕೆಂದು ಹುಲ್ಲೂರು ಶ್ರೀನಿವಾಸ ಜೋಯಿಸರ ಅಭಿಪ್ರಾಯ.[11] ಆದರೆ ಎಸ್. ಶ್ರೀಕಂಠಯ್ಯ, ರೈಸ್ ಮುಂತಾದವರು ಇದನ್ನು ತಿರಸ್ಕರಿಸಿದ್ದಾರೆ.[12] ಜ. ವರದರಾಜರಾಯರೂ ''ಮೂರು ಕಾವ್ಯಗಳಲ್ಲಿಯೂ, ಹರಿಹರ ಮತ್ತು ಬುಕ್ಕರಂತೆಯೇ ಭಾನಸಂಗಮನ ಹೆಸರನ್ನು ಹೇಳಿರುವುದು ಬಿಟ್ಟರೆ ಹೆಚ್ಚು ವಿಚಾರಗಳೇನೂ ತಿಳಿದು ಬರುವುದಿಲ್ಲ'' ಎಂದಿದ್ದಾರೆ. ಈ ಕಾವ್ಯಗಳಲ್ಲಿ ಬರುವ ಭಂಡಾರಿ ಹರಿಹರ ಮತ್ತು ಭಂಡಾರಿ ಬುಕ್ಕರು ಸಂಗಮನ ಮಕ್ಕಳೆಂದೂ ಎಲ್ಲಿಯೂ ಹೇಳಿಲ್ಲ. ಹೀಗಾಗಿ ಈ ಹರಿಹರ ಬುಕ್ಕರೇ ವಿಜಯನಗರದ ಸ್ಥಾಪಕರೆಂದು ಹೇಳಲು ಬಾರದು.

ಆದರೆ ಕಂಪಿಲರಾಯನ ಆಡಳಿತಕ್ಕೆ ಒಳಪಟ್ಟ ಈ ಪ್ರದೇಶದಲ್ಲಿ ಅವನ ವಂಶ ನಾಶವಾದ ಒಂದು ದಶಕದೊಳಗೇ ಹರಿಹರ ಬುಕ್ಕರು ಪ್ರಾಬಲ್ಯ ಪಡೆಯಬೇಕಾದರೆ ಅವರಿಗೂ ಕಂಪಿಲರಾಯನಿಗೂ ಸಂಬಂಧ ಇದ್ದೇ ಇರಬೇಕು. ಕಂಪಿಲರಾಯನ ಆಳ್ವಿಕೆ ಸೂಚಿಸುವ 1323ರ ಬಳ್ಳಾರಿ ಜಿಲ್ಲೆಯ ರಾಮುಗಡ ಶಾಸನ[13] ಮತ್ತು ಹಂಪೆಯ ಶಾಸನ[14] ಹಾಗೂ ಲಕ್ಷ್ಮೇಶ್ವರದಲ್ಲಿನ ಒಂದು ಶಾಸನದಲ್ಲಿ ಆ ಪ್ರದೇಶದಲ್ಲಿ ಕಂಪಿಲರಾಯನು ಆಳುತ್ತಿದ್ದನೆಂದು ಹೇಳಿ ಮುಂದೆ ಅವನ ಮರಣಕ್ಕಾಗಿ ಆ ಊರವರು ಸಂತಾಪ ಸೂಚಿಸಿದ ವಿಜಯನಗರದ ಕಾಲದ ಒಂದು ಶಾಸನ[15] ಇವೆಲ್ಲ ಇವೆ.

ಧಾರವಾಡ, ಬಳ್ಳಾರಿ ಜಿಲ್ಲೆಗಳಲ್ಲಿ ಯಾವುದೇ ವಿರೋಧವಾಗದೆ ಹರಿಹರ ಬುಕ್ಕರ ಅಧಿಕಾರ ಸ್ಥಾಪನೆಗೆ ಅವಕಾಶವಾದುದು ಅವರು ಕಂಪಿಲನ ಸಂಬಂಧಿಗಳೆಂಬ ಕಾರಣದಿಂದ ಇರಬೇಕು. ಸೇಉಣರಿಂದ ಕಂಪಿಲನಿಗೆ ಸಂದ ಅಧಿಕಾರ ಹರಿಹರಾದಿಗಳಿಗೆ ಹಸ್ತಾಂತರವಾಗಲು ಯಾವ ತೊಂದರೆಯೂ ಇರಲಿಲ್ಲ. ಹರಿಹರನು 1339ರಲ್ಲಿ ಅಧಿಕಾರ ಹೊಂದಿದ್ದ ಗುತ್ತಿಯ? ಶಾಸನ ಪ್ರಸಿದ್ಧ. ಧಾರವಾಡ ಜಿಲ್ಲೆಯಲ್ಲಿ 1349ರ ಹರಿಹರನ ಮೊದಲ ಶಾಸನ ಅಬ್ಬಲೂರಿನಲ್ಲಿದ್ದು ಇದರಲ್ಲಿ ಸಮುದ್ರ ಸಾಳ್ವನೆಂಬ ಅಧಿಕಾರಿಯ ಉಲ್ಲೇಖವಿದೆ. ಸಾಳ್ವ ವಂಶದವರು ಸೇಉಣರಲ್ಲಿ ಅಧಿಕಾರದಲ್ಲಿ ಹಿಂದೆ ಇದ್ದು, ಸಹಜವಾಗಿ ಕಂಪಿಲನ ರಾಜ್ಯದ ಜೊತೆ ಕೂಡ ಸಂಬಂಧ ಹೊಂದಿರಬಹುದು. 1353ರಲ್ಲಿ ಸಾವಣ್ಣ ಒಡೆಯನೆಂಬ ಬಹುಶಃ ರಾಜವಂಶಜನೇ ಆದವನು (ಕಂಪಣನ ಮಗ) ಲಕ್ಷ್ಮೇಶ್ವರದಲ್ಲಿ ಅಧಿಕಾರಿಯಾಗಿದ್ದು ಆಗ ಧ್ವಂಸವಾಗಿದ್ದ ಅಲ್ಲಿನ ಸೋಮೇಶ್ವರ ದೇವಾಲಯದ ಜೀರ್ಣೋದ್ಧಾರ ಮಾಡಿದ ದಾಖಲೆ ಇದು. ಇದೇ ಊರಿನ 1412ರ ಒಂದು ಶಾಸನದಲ್ಲಿ ಹರಿಹರನ ಕಾಲದಿಂದ ಆ ಊರು ವಿಜಯನಗರದ ವಶದಲ್ಲಿತ್ತೆಂದು ತಿಳಿಯುತ್ತದೆ. 1357ರಲ್ಲಿ ವಿಜಯನಗರದ ವಿರುಪಣ್ಣ ಒಡೆಯನು ಅಧಿಕಾರಿಯಾಗಿರುವ ಹಿರೇಕೆರೂರು ತಾಲೂಕು ಚಟ್ಟನಹಳ್ಳಿಯ ಶಾಸನವಿದೆ.

ಕಂಪಿಲನ ಆಡಳಿತಕ್ಕೆ ಉತ್ತರಾಧಿಕಾರಿಗಳಾಗಿ ಬಂದುದರಿಂದಲೇ ಈ ಪ್ರದೇಶದಲ್ಲಿ ಅಧಿಕಾರ ಹಸ್ತಾಂತರ ಸುಲಭವಾಯಿತು. ಅಲ್ಲದೆ ಕುಮಾರರಾಮನ ಆರಾಧನೆಯ ಕೇಂದ್ರಗಳು ವಿಜಯನಗರದ ಕಾಲದಲ್ಲಿ ಸ್ಥಾಪನೆಗೊಂಡಂತೆ ಧಾರವಾಡ ಜಿಲ್ಲೆಯಲ್ಲಿ ನಾಲ್ಕು ಇವೆ. ಬಳ್ಳಾರಿ ಜಿಲ್ಲೆಯ ರಾಮುಗಡದಲ್ಲಿ ಕೂಡ ಒಂದಿದೆ. ಕುಮಾರರಾಮನ ಜನಪ್ರಿಯತೆಯ ಲಾಭ ಪಡೆಯಲು ವಿಜಯನಗರದ ಅರಸರು ಯತ್ನಿಸಿದ್ದು ಸ್ಪಷ್ಟ. ಬಿದರಕಟ್ಟೆ, ವೀರಾಪುರ, ಸಂಗೂರು, ಲಕ್ಷ್ಮೇಶ್ವರಗಳಲ್ಲಿ ಕುಮಾರರಾಮನ ಪ್ರತಿಮೆಗಳು ಸ್ಥಾಪನೆಯಾದ ಬಗ್ಗೆ ಶಾಸನಗಳಿವೆ.[16] ಸಂಗೂರಿನಲ್ಲಿ ಪ್ರತಿಮೆ ಸ್ಥಾಪಿಸಿದ್ದು ದೇವರಾಯನ ಕಾಲದಲ್ಲಿ (1407). ಇದನ್ನು ಸ್ಥಾಪಿಸಿದವನು ''ಕಂಪಿಲರಾಯನ ಬಾಹತ್ತರ ನಿಯೋಗಾಧಿಪತಿ ಪತಿಕಾರ್‍ಯಧುರಂಧರನುಮಪ್ಪ ಬೈಚವೆಗ್ಗಡೆಯ ಮೊಮ್ಮ ಸೇನಾಧಿಪತಿ ಸಂಗಮನ ಕುಮಾರ ಮಾದರಸು''.[17] ಬೈಚವೆಗ್ಗಡೆ ಅಥವಾ ಬೈಚರಸನು ಕಂಪಿಲರಾಯನ ಮಂತ್ರಿ, ಈತನ ಮೊಮ್ಮಗ (ಮೊಮ್ಮ) ಸೇನಾಧಿಪತಿ ಸಂಗಮನ ಮಗ ಈ ಮಾದರಸ. ವಿಜಯನಗರದ ಕಾಲದಲ್ಲಿನ ಸಂಗಮನೆಂಬ ಸೇನಾನಿಯು ಕಂಪಿಲನ ಅಧಿಕಾರಿಗಳ ವಂಶಸ್ಥನಾಗಿದ್ದುದು ಇಲ್ಲಿ ಗಮನಿಸಬೇಕಾದ ವಿಷಯ.

1346ರ ಶೃಂಗೇರಿ ಶಾಸನದಲ್ಲಿ ಅಳಿಯ ಬಲ್ಲಪ್ಪನ ಉಲ್ಲೇಖವಾಗಿದ್ದು ಇವನು ಹರಿಹರನ ಅಳಿಯ. ಈ ಬಲ್ಲಪ್ಪ ಹೊಯ್ಸಳ ಸೇನಾನಿ ಸೋಮದಂಡನಾಯಕನ ಪುತ್ರ. ಈ ಬಗ್ಗೆ ಸಾಕಷ್ಟು ಸಂಶೋಧನೆಯಾಗಿದೆ. ಈ ಬಲ್ಲಪ್ಪ ಬೆಂಗಳೂರು ಜಿಲ್ಲೆಯಲ್ಲಿ ಅಧಿಕಾರಿಯಾಗಿದ್ದ.[18] ದೊಡ್ಡಕನ್ನೆಲ್ಲಿಯ 1346ರ ಶಾಸನದಲ್ಲಿ ಈತನು ಹರಿಹರನ ಅಧಿಕಾರಿಯೆಂದು ಹೇಳಿದೆ.[19] ಅದೇ ರೀತಿ 1356ರ ಶಾಸನವೂ ಇದೆ.[20] ಹರಿಹರಾದಿ ಸೋದರರ ಜೊತೆ ಶೃಂಗೇರಿಯಲ್ಲಿ 1346ರಲ್ಲಿ ಈ ಬಲ್ಲಪ್ಪನೂ ನೀಡಿದ್ದ ದಾನದ ಶಾಸನದ ಶಿಲೆಯಲ್ಲೇ ಹೊಯ್ಸಳ ಬಲ್ಲಾಳನ ರಾಣಿ ಕೃಷ್ಣಾಯಿ ತಾಯಿ ಅದೇ ದಿನ ಭಾರತೀ ತೀರ್ಥರಿಗೇ ದಾನಮಾಡಿದ ಶಾಸನವಿದೆ. ಆಗ ವಿರೂಪಾಕ್ಷ ಬಲ್ಲಾಳನ ಅಂತ್ಯವಾಗಿ ಹೊಯ್ಸಳರು ಅಸ್ತಂಗತರಾಗಿದ್ದರು (1346). ಅನೇಕ ಹೊಯ್ಸಳ ಸೇನಾನಿಗಳೂ, ಅಧಿಕಾರಿಗಳೂ ಹರಿಹರನ ಅಧಿಕಾರವನ್ನು ಮಾನ್ಯ ಮಾಡಿದ್ದರು.

ತುಂಗಭದ್ರೆಯ ಪರಿಸರದಲ್ಲಿ ಕಂಪಿಲ ಹಾಗೂ ಕುಮಾರರಾಮನ ಆಶ್ರಿತರಾಗಿ ಹರಿಹರಾದಿಗಳಿಗೆ ಅಧಿಕಾರ ಪಡೆಯಲು ಸುಲಭವಾಯಿತು. ದಕ್ಷಿಣದಲ್ಲಿ ಹೊಯ್ಸಳರ ಜೊತೆ ರಕ್ತ ಸಂಬಂಧ ಬೆಳೆದಿದ್ದರಿಂದ ಕಾರ್ಯ ಸುಲಭವಾಯಿತು.

ಇನ್ನು ಕುಮಾರರಾಮನ ಸೋಲು ಹಾಗೂ ಮರಣಕ್ಕೆ ಕಾರಣಗಳಾದ ದಿಲ್ಲಿಯ ಸುಲ್ತಾನನ ಸೇನೆಯ ನಾಯಕಿಯ ಬಗ್ಗೆ ಒಂದು ಪರ್ಶಿಯನ್ ಮೂಲದಿಂದ ದೊರೆತ ಮಾಹಿತಿಯನ್ನು ಹೇಳಬೇಕು. ಇದನ್ನು ಈಟನ್ ಎಂಬ ಅಮೇರಿಕನ್ ವಿದ್ವಾಂಸರು ಉಲ್ಲೇಖಿಸಿದ್ದಾರೆ. ಸೊಲ್ಲಾಪುರ ಜಿಲ್ಲೆಯ ಸಾಗರ್ ಎಂಬ ಊರಲ್ಲಿ ನೆಲೆನಿಂತ ಸೂಫಿ ಸಂತನೆನಿಸಿದ ಶೇಕ್ ಸರ್‌ಮಸ್ತನ ವಿಚಾರ ತಾರಿಖ್-ಯಿ-ಔಲಿಯಾ ಎಂಬ ಗ್ರಂಥದಲ್ಲಿ ಹೇಳಿದೆ. ಅದರಂತೆ 'ಕುಮಾರಾಮ್'ನ ವಿರುದ್ಧ ನಡೆದ ಹೋರಾಟದಲ್ಲಿ ಈ ಸರ್‌ಮಸ್ತ್ ಮುಖ್ಯ ಪಾತ್ರವಹಿಸಿದ. ಅವನ ಮಗಳು ಕುಮಾರರಾಮನನ್ನು ಕೊಂದಳು ಎಂದು ಮೇಲೆ ಹೇಳಿದ ಕೃತಿ ತಿಳಿಸುತ್ತದೆ.[21] ಕುಮಾರರಾಮನು ಉಗ್ರ ಮುಸ್ಲಿಂ ದ್ವೇಷಿಯಾಗಿದ್ದ ಎಂದು ಈ ಸಂತರ ಕಥಾನಕದಲ್ಲಿ ಬಣ್ಣಿಸಿದೆ.

ಅಡಿ ಟಿಪ್ಪಣಿಗಳು

1. ನಂಜುಂಡ ಕವಿ, ಕುಮಾರರಾಮ *ಚರಿತ*, ಕನ್ನಡ ಸಾಹಿತ್ಯ ಪರಿಷತ್ತಿನ ಹಸ್ತಪ್ರತಿ; ಪಾಂಚಾಳಗಂಗ, *ಚನ್ನರಾಮನ ಸಾಂಗತ್ಯ*, ಹಸ್ತಪ್ರತಿ ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು; ಮಹಲಿಂಗಸ್ವಾಮಿ, *ಬಾಲರಾಮನ ಸಾಂಗತ್ಯ*, ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು.
2. ಜಿ. ವರದರಾಜರಾವ್, 1966, *ಕುಮಾರರಾಮನ ಸಾಂಗತ್ಯಗಳು*, ಮೈಸೂರು.
3. ಅದೇ, ಪು. 263.
4. ಎಸ್.ಎಸ್. ಜಾಗೀರ್‌ದಾರ್, ''ನ್ಯೂಲೈಟ್ ಆನ್ ದಿ ಹೊಯ್ಸಳಾಸ್'', *ಕ್ವಾಜಮಿಸೊ.*, 81(1), ಪು. 9-10.
5. ವರದರಾಜರಾವ್, *ಅದೇ*, ಪು. 48.
6. *ಅದೇ*, ಪು. 3.
7. *ಅದೇ.*
8. *ಅದೇ*, ಪು. 49.
9. *ಅದೇ*, ಪು. 72.
10. *ಅದೇ*, ಪು. 77.
11. ಶ್ರೀನಿವಾಸ ಜೋಯಿಸ್ ಹುಲ್ಲೂರು, 'ಕುಮಾರರಾಮನ ಸಾಂಗತ್ಯಗಳು', *ಸಾಹಿತ್ಯ ಪರಿಶತ್ಪತ್ರಿಕೆ*, 26, 1.
12. ರೈಸ್ ಅವರು ಸಂಗಮನ ಸತಿಯರೆಂದು ಶಾಸನಗಳಲ್ಲಿ ಉಲ್ಲೇಖಿಸಿದ್ದ ಶಾರದಾ, ಮಾಲಾಂಬಿಕಾ, ಗೌರಾಂಬಿಕಾ, ಗಲಾಂಬಿಕಾ, ಕಾಮಾಂಬಿಕಾ, ಕಾಮಾಯಿ, ಕಾಮಾಕ್ಷಿ ಎಂಬ ಹೆಸರುಗಳಲ್ಲಿ (*ಎಕ.*, 5, ಬೇಲೂರು 3; *ಎಕ.*, 10, ಗೌರಿಬಿದನೂರು 46; ಮುಳಬಾಗಲ 158 ಮುಂ.) ಕುಮಾರರಾಮನ ಸೋದರಿಯಾದ (ನಂಜುಂಡ ಹೇಳಿರುವ) ಮಾರಾಂಬೆಯ ಹೆಸರಿಲ್ಲವೆಂದು ಎಸ್. ಶ್ರೀಕಂಠಯ್ಯ ಉಲ್ಲೇಖಿಸಿದ್ದಾರೆ. ಮಾರಾಂಬೆಯ ವಿನಾ ಬೇರೆ ಸತಿಯರು ಸಂಗಮನಿಗೆ ಇರಲಾಗದೆ? ಸಾಹಿತ್ಯ ಕೃತಿಯಲ್ಲಿ ಬಂದ ಹೆಸರೇ ಸರಿ ಎನ್ನಬೇಕೆ? ಶಾಸನಗಳು ಉಲ್ಲೇಖಿಸಿದ ಸತಿಯರು ಅವನಿಗೆ ಇರಲಾಗದೆ? ಈ ಶಾಸನಗಳಾದರೋ 1340ರ ನಂತರದವು. ಆಗ ಸಂಗಮನು ಜೀವಿಸಿರಲಿಲ್ಲ. ಅವನು ಕುಮಾರರಾಮನ ಜೊತೆ ಮಡಿದಾಗ ಅವನ ಸತಿಯರೂ ಸಹಗಮನ ಮಾಡಿರಬಹುದು. ಸಂಗಮ ವಂಶದವರು ಕುಮಾರರಾಮನಿಗೆ ಹತ್ತಿರದವರಾಗಿ ಜನರಿಗೆ ಕಾಣಿಸಿ ಅವರಿಗೆ ಜನರು ಬೆಂಬಲ ನೀಡಲು ಅವರು ರಾಮನ ವಂಶಕ್ಕೆ ನಿಕಟವಾಗಿದ್ದಿರಬೇಕು. ರಾಮನು ಕಾಕತೀಯರ ವಿರುದ್ಧ ಉಗ್ರ ಹೋರಾಟ ನಡೆಸಿದ್ದರಿಂದ ಇವರು ಕಾಕತೀಯರ ಸಂಬಂಧ ಹೊಂದಿರಲಾರರು.
13. *ಆರಿಇಎಂಎ.*, 1943-44, ಪು. 79.

14. ಎಇಂ., 23, ಪು. 185.

15. ಸೌಇಂಇ., 20, ಪು. 271.

16. ಸೂರ್ಯನಾಥ ಕಾಮತ್, 1994, *ಧಾರವಾಡ ಜಿಲ್ಲಾ ಗ್ಯಾಸೆಟಿಯರ್.*

17. ಎಇಂ., 23, ಪು. 181.

18. ಸೂರ್ಯನಾಥ ಕಾಮತ್, 1994, *ಬೆಂಗಳೂರು ಡಿಸ್ಟ್ರಿಕ್ಟ್ ಗ್ಯಾಸೆಟಿಯರ್*

19. ಎಕ., 9, ಬೆಂಗಳೂರು 47.

20. ಅದೇ, ಬೆಂಗಳೂರು 101.

21. ಆರ್.ಎಮ್. ಈಟನ್, 1978, *ಸೂಫಿಸ್ ಆಫ್ ಬಿಜಾಪುರ,* ಪ್ರಿನ್ಸ್‌ಟನ್.

14. ಕೃಷ್ಣದೇವರಾಯನ ಇತಿಹಾಸಕ್ಕೆ ಒಂದು ಹೊಸ ಆಕರ

ಜಿ.ಎಸ್. ದೀಕ್ಷಿತ್

ಟಾಮ್ ಪಿರೇಸ್ (Tome Pires) ಎನ್ನುವ ಪೋರ್ಚುಗೀಸ್ ಲೇಖಕನು ದಿ ಸುಮಾ ಓರಿಯಂಟಲ್ (The Suma Oriental) ಎನ್ನುವ ಪ್ರವಾಸ ಕಥನವನ್ನು ಕ್ರಿ.ಶ. 1512-1515ರಲ್ಲಿ ಬರೆದನು. ಇದೇ ಸಮಯದಲ್ಲಿ ಬಾರ್ಬೋಸಾನು ತನ್ನ ಕಥನವನ್ನು ಬರೆದನು. ವಿಜಯನಗರದ ಇತಿಹಾಸಕಾರರು ಬಾರ್ಬೋಸಾನ ಕಥನವನ್ನು ಬಳಸಿಕೊಂಡಿದ್ದಾರೆ. ಆದರೆ ಟಾಮ್ ಪಿರೇಸನ ಬರಹವನ್ನು ಭಾರತೀಯ ಇತಿಹಾಸಕಾರರು ಉಪೇಕ್ಷಿಸಿದ್ದಾರೆ. 1982ರಲ್ಲಿ ಪ್ರಕಟವಾದ ತಪನ್ ರಾಯಚೌಧರಿ ಮತ್ತು ಇರ್ಫಾನ್ ಹಬೀಬ್ ಇವರು ಸಂಪಾದಿಸಿರುವ ಕೇಂಬ್ರಿಡ್ಜ್ ಇಕಾನಮಿಕ್ ಹಿಸ್ಟರಿ ಆಫ್ ಇಂಡಿಯಾದ ಮೊದಲ ಸಂಪುಟದ ಕೊನೆಗೆ ಕೊಟ್ಟಿರುವ ಪುಸ್ತಕಗಳ ಪಟ್ಟಿಯಲ್ಲಿ ಈ ಲೇಖಕ ಮತ್ತು ಅವನ ಪುಸ್ತಕದ ಹೆಸರುಗಳಿವೆ. ಆದರೆ ಆ ಗ್ರಂಥದಲ್ಲಿ ಈ ಪುಸ್ತಕದಲ್ಲಿರುವ ಮಾಹಿತಿಯನ್ನು ಅಲಕ್ಷಿಸಿದ್ದಾರೆ. ಟಿ.ವಿ. ಮಹಾಲಿಂಗಂ ಇವರ ಆಡ್ಮಿನಿಸ್ಟ್ರೇಶನ್ ಆಂಡ್ ಸೋಶಿಯಲ್ ಲೈಫ್ ಆಫ್ ವಿಜಯನಗರ, ಸಂಪುಟ 1 (1969) ಮತ್ತು ಸಂಪುಟ 2 (1975) - ಈ ಗ್ರಂಥಗಳಲ್ಲಿ ಪಿರೇಸನ ಬರಹದ ಉಲ್ಲೇಖವಿಲ್ಲ. ಅವನ ಗ್ರಂಥದ ಇಂಗ್ಲೀಷ್ ಭಾಷಾಂತರವು ಲಂಡನ್ನಿನಿಂದ 1944ರಲ್ಲಿ ಪ್ರಕಟವಾಗಿದ್ದುದರಿಂದ, ಇದಕ್ಕೆ ಮುಂಚೆ ಬರೆದ ಬಿ.ಎ. ಸಾಲೆತೊರೆ, ಎನ್. ವೆಂಕಟರಮಣಯ್ಯ ಮತ್ತು ಎ. ಅಪ್ಪಾದೊರೈ ಇವರುಗಳಿಗೆ ಪಿರೇಸನ ಬರಹ ಗೊತ್ತಿರಲು ಸಾಧ್ಯವಿಲ್ಲ. ಶ್ರೀ ಹೆಚ್.ಎಲ್. ನಾಗೇಗೌಡರ ''ಪ್ರವಾಸಿ ಕಂಡ ಇಂಡಿಯಾ''ದಲ್ಲಿ ಪಿರೇಸನ ಬರಹದ ಭಾಷಾಂತರವಿಲ್ಲ.

ಟಾಮ್ ಪಿರೇಸ್ ಒಬ್ಬ ಸಣ್ಣ ಔಷಧಿ ವ್ಯಾಪಾರಿಯಾಗಿ ತನ್ನ ಜೀವನವನ್ನು ಆರಂಭಿಸಿ ಸ್ವಪ್ರತಿಭೆಯಿಂದ ಚೀನಾಕ್ಕೆ ಪೋರ್ಚುಗೀಸ್ ರಾಯಭಾರಿಯಾಗಿ ನೇಮಕವಾದನು. ಅಲ್ಲಿಯೇ 1540ರಲ್ಲಿ ನಿಧನವಾದ. 16ನೆ ಶತಮಾನದ ಪೂರ್ವಾರ್ಧದಲ್ಲಿ ಏಷ್ಯಾದ ದೇಶಗಳ ಬಗೆಗೆ ಬರೆದ ಯೂರೋಪಿನ ಪ್ರವಾಸಿಗಳಲ್ಲಿ ಇವನು ಅಗ್ರಗಣ್ಯ. ಇವನ ಹೊಸ ಹೊಸ ವಿಷಯಗಳನ್ನು ತಿಳಿದುಕೊಳ್ಳುವ ಕುತೂಹಲ, ಕಂಡದ್ದನ್ನು ಕಂಡ ಹಾಗೆ ಬರೆಯುವ ಕೌಶಲ್ಯ - ಇವುಗಳನ್ನು ವಿಮರ್ಶಕರು ಗುರುತಿಸಿದ್ದಾರೆ.

ಇವನ ಬರಹಗಳಲ್ಲಿ ವಿಜಯನಗರ ಸಾಮ್ರಾಜ್ಯದ ಎರಡು ಭಾಗಗಳ ವರ್ಣನೆಯಿದೆ. ಮೊದಲನೆಯ ಭಾಗವನ್ನು ಕೆನರಾ ಎಂದು ಕರೆದಿದ್ದಾನೆ. ಇದರಲ್ಲಿ ಈಗಿನ ಉತ್ತರ ಮತ್ತು ದಕ್ಷಿಣ ಕನ್ನಡಗಳಿವೆ. ಎರಡನೆಯ ಭಾಗವನ್ನು 'ನರಸಿಂಗ' ಎಂದು ಕರೆದಿದ್ದಾನೆ. ಪೋರ್ಚುಗೀಸರಿಗೆ ಮೊದಲು ವಿಜಯನಗರ ಪರಿಚಯವಾದಾಗ 'ವೀರ ನರಸಿಂಗ'ಎನ್ನುವ ರಾಜನು ಆಳುತ್ತಿದ್ದನು. ಆದ್ದರಿಂದ ಎಲ್ಲಾ ಪೋರ್ಚುಗೀಸ್ ಪ್ರವಾಸಿಗಳು ಅವನ ರಾಜ್ಯವನ್ನು ನರಸಿಂಗನೆಂದೇ ಕರೆದಿದ್ದಾರೆ. ಪಿರೇಸನು 'ನರಸಿಂಗ' ಎನ್ನುವ ಭಾಗದಲ್ಲಿ ಕೃಷ್ಣದೇವರಾಯ ಮತ್ತು ಅವನ ಆಸ್ಥಾನದ ಬಗ್ಗೆ ಬರೆದಿದ್ದಾನೆ. ಈ ಎರಡು ಭಾಗಗಳಲ್ಲಿಯ ಮುಖ್ಯವಾದ ಮಾಹಿತಿಯನ್ನು ಕೆಳಗೆ ಕಂಡಂತೆ ಸಂಗ್ರಹಿಸಬಹುದು.

ಕೆನರಾ:

ಇದರ ಉತ್ತರಕ್ಕೆ ಗೋವಾ ಮತ್ತು ಅಂಜದೀವ್, ದಕ್ಷಿಣಕ್ಕೆ ಮಲಬಾರ್, ಪೂರ್ವಕ್ಕೆ ವಿಜಯನಗರಗಳಿವೆ. ಕೆನರಾ ಕೂಡ ವಿಜಯನಗರ ಸಾಮ್ರಾಜ್ಯದ ಒಂದು ಭಾಗವಾಗಿದ್ದರೂ ಅದರ ಪ್ರಕೃತಿ ಲಕ್ಷಣಗಳು ವಿಶಿಷ್ಟವಾಗಿದ್ದುದರಿಂದ ಎಲ್ಲಾ ಪೋರ್ಚುಗೀಸ್ ಪ್ರವಾಸಿಗಳು ಅದನ್ನು ವರ್ಣನೆ ಸಲುವಾಗಿ ಪ್ರತ್ಯೇಕವೆಂದು ಪರಿಗಣಿಸುತ್ತಾರೆ. ತೀರ ಪ್ರದೇಶದಲ್ಲಿ ಇಬ್ಬರು ರಾಜರು ಮತ್ತು ಕೆಲವು ತುಂಡರಸರು ಇದ್ದರು. ಅವರೆಲ್ಲಾ ಹಿಂದೂಗಳು ಮತ್ತು ವಿಜಯನಗರ ಅಧೀನರು. ಅಲ್ಲಿಯ ಜನರೆಲ್ಲಾ ಸುಸಂಸ್ಕೃತರು, ಭೂಮಿ ಮತ್ತು ಸಮುದ್ರಗಳ ಮೇಲೆ ಯುದ್ಧಮಾಡಬಲ್ಲವರಾಗಿದ್ದರು.

ಈ ತೀರ ಪ್ರದೇಶದಲ್ಲಿ ಅಂಜದೀವಿನಿಂದ ಮಂಗಳೂರುವರೆಗೆ ಮಿರ್ಜಾನ್, ಹೊನ್ನಾವರ, ಭಟಕಳ್, ಬಸ್ರೂರು, ಬಾರಕೂರು, ಉಡುಪಿ, ಮಂಗಳೂರು ಬಂದರುಗಳಿದ್ದವು. ಹೊನ್ನಾವರದಿಂದ ಅಂಜದೀವ್‌ವರೆಗಿನ ಪ್ರದೇಶ ಗೇರುಸೊಪ್ಪೆ ರಾಜನಿಗೆ ಸೇರಿತ್ತು.

ಬಟಕಳ್ ಮತ್ತು ಬಸ್ರೂರು ಮತ್ತು ಅವುಗಳ ಹತ್ತಿರವಿರುವ ಒಳಗಡೆ ಊರುಗಳು - ಇವುಗಳು ಇನ್ನೊಬ್ಬ ರಾಜನಿಗೆ ಸೇರಿದ್ದವು. ಉಳಿದ ಬಂದರುಗಳಲ್ಲಿ ಕಪ್ತಾನರಿದ್ದರು. ಇವರೆಲ್ಲಾ ವಿಜಯನಗರಕ್ಕೆ ಕಪ್ಪ ಕೊಡುತ್ತಿದ್ದರು.

ಗೇರುಸೊಪ್ಪೆ ರಾಜನು ಒಬ್ಬ ಮುಖ್ಯ ರಾಜ. ಅವನ ಹತ್ತಿರ ಸುಮಾರು 3000 ಸವಾರರು ಇದ್ದರು. ಹೊನ್ನಾವರ (ಶರಾವತಿ) ನದಿಯಿಂದ ಐದು ಹರಿದಾರಿ ಒಳಗಿನ ಪ್ರದೇಶವು ಗೇರುಸೊಪ್ಪೆ ರಾಜನದಾಗಿತ್ತು. ಅಲ್ಲಿ ಒಂದು ತಂಪಾಗಿದ್ದ ಸಣ್ಣ ಊರಿನಲ್ಲಿ ತಿಮ್ಮೋಜನು ವಾಸಿಸುತ್ತಿದ್ದನು. ಅವನು ಈ ರಾಜನ ಸಂಬಂಧಿ. ಮೊದಲು ಅವನು ಹೊನ್ನಾವರದಲ್ಲಿ ವಾಸಿಸುತ್ತಿದ್ದ. ಅವನು ವಿಜಯನಗರದ ಆಸ್ಥಾನಕ್ಕೆ ಹೋಗಿ ಬರುತ್ತಿದ್ದನು. ಅವನು ಒಬ್ಬ ವಿಧೇಯ ಅಧೀನ ರಾಜನಾಗಿದ್ದನು. ಈ ನದಿಯ ಎರಡು ಪಕ್ಕಗಳಲ್ಲಿಯೂ ಜನವಸತಿ ಹೆಚ್ಚಾಗಿತ್ತು. ಈ ನದಿಯ ಮೇಲೆ ಹಡಗುಗಳು ಸಂಚರಿಸುತ್ತಿದ್ದವು. ಈ ಹಡಗು ಪಡೆಯ ಸಹಾಯದಿಂದ ತಿಮ್ಮೋಜನು ಸಮುದ್ರದಲ್ಲಿ ಇತರ ಹಡಗುಗಳನ್ನು ಲೂಟಿ ಮಾಡುತ್ತಿದ್ದನು. ಇವನಿಗೆ ಇತರ ನಾವಿಕರು ಹೆದರುತ್ತಿದ್ದರು. ಅವನು ಗೇರುಸೊಪ್ಪೆ ರಾಜನಿಗೆ ಸಹಾಯ ಮಾಡುತ್ತಿದ್ದನು.

ಭಟಕಳಿನ ರಾಜನು ಕನ್ನಡ ಹಿಂದೂ. ಗೇರುಸೊಪ್ಪೆ ರಾಜನಿಗಿಂತ ಬಲಾಢ್ಯ. ಅವನ ರಾಜ್ಯ ಒಳದೇಶದಲ್ಲಿ ಬಹಳ ಹರಡಿತ್ತು. ಈ ಬಂದರು ಗೋವಾ ಮತ್ತು ಚೌಲ್ ಬಂದರುಗಳಷ್ಟು ಮುಖ್ಯವಲ್ಲದಿದ್ದರೂ, ಇಲ್ಲಿಯೂ ಬೇಕಾದಷ್ಟು ವ್ಯಾಪಾರ ನಡೆಯುತ್ತಿತ್ತು. ಅದು ವಿಜಯನಗರ ಸಾಮ್ರಾಜ್ಯದ ಮುಖ್ಯ ಬಂದರು. ಹೊರಗಿನಿಂದ ಅಲ್ಲಿಗೆ ಕುದುರೆಗಳು ಬರುತ್ತಿದ್ದವು. ಈ ಪಟ್ಟಣದಲ್ಲಿ ಹಿಂದೂ ಮತ್ತು ಮುಸ್ಲಿಂ ವರ್ತಕರು ವಾಸಿಸುತ್ತಿದ್ದರು. ಬಂದರು ದೊಡ್ಡದು. ಅನೇಕ ಪರದೇಶಗಳಿಂದ ವರ್ತಕರು ಇಲ್ಲಿಗೆ ಬಂದು ಹೋಗುತ್ತಿದ್ದರು. ಇಲ್ಲಿಯ ರಾಜನು ಒಳಗಡೆ ಒಂದು ಊರಿನಲ್ಲಿ ವಾಸಿಸುತ್ತಿದ್ದನು. ಅವನ ಪರವಾಗಿ ದಾಮಜೆಟ್ಟಿ ಎನ್ನುವ ರಾಜ್ಯಪಾಲನಿದ್ದನು. ಇವನು ಭಾರೀ ಶ್ರೀಮಂತ ವರ್ತಕ. ಮುಸ್ಲಿಮರ ರಾಜ್ಯಪಾಲ ಕೈಜಾರ್, ಇವನು ಆರ್ಮುಜನವನು. ಅಲ್ಲಿ ವಾಸಿಸುತ್ತಿದ್ದ ಮುಸ್ಲಿಮರು ಬೇರೆ ಬೇರೆ ದೇಶದವರು. ಗೋವಾ ಪೋರ್ಚುಗೀಸರ ವಶವಾಗುವ ಮುಂಚೆ ಭಟಕಳ್ ಅದಕ್ಕಿಂತ ದೊಡ್ಡ ವ್ಯಾಪಾರ ಸ್ಥಳವಾಗಿತ್ತು. ನಂತರ ಅದಕ್ಕೆ ಎರಡನೆ ಸ್ಥಾನದಲ್ಲಿತ್ತು.

ಈ ಬಂದರಿಗೆ ವಿಜಯನಗರದ ಅರಸರಿಗೆ ಬೇಕಾಗುವ ಕುದುರೆಗಳು ಹೊರಗಡೆಯಿಂದ ಬರುತ್ತಿದ್ದವು. ಕುದುರೆಗಳಲ್ಲದೆ ಇತರ ಸಾಮಾನುಗಳು ಬರುತ್ತಿದ್ದವು. ಇವುಗಳನ್ನು ತರುವ ವರ್ತಕರು ಹೆಚ್ಚು ಪ್ರಮಾಣದಲ್ಲಿ ತೆರಿಗೆ ಕೊಡಬೇಕಾಗಿತ್ತು. ಇಲ್ಲಿಂದ ವಾಪಸ್ಸು ಹೋಗುವಾಗ ಅಕ್ಕಿಯನ್ನು ತೆಗೆದುಕೊಂಡು ಹೋಗುತ್ತಿದ್ದರು. ಅಲ್ಲಿ ಅತ್ಯುತ್ತಮವಾದ ಅಕ್ಕಿ ಸಿಗುತ್ತಿತ್ತು. ಜಿರಸಾಲ್ ಎನ್ನುವ ಅಕ್ಕಿಯು ಅತ್ಯಂತ ಬೆಳ್ಳಗೆ, ತೆಳ್ಳಗೆ ಭಾರೀ ದುಬಾರಿ ಇರುತ್ತಿತ್ತು. ಇದೇ ಶ್ರೇಷ್ಠ ದರ್ಜೆಯ ಅಕ್ಕಿ. ಇದರ ತರುವಾಯ ಚಂಬಸಾಲ್, ಅದರ ತರುವಾಯ ಗೋವಾ ಮತ್ತು ದಖನ್ನಿನಿಂದ ಬರುವ ಪಚರಿ ಅಕ್ಕಿ. ಇವಲ್ಲದೆ, ಕಬ್ಬಿಣ ಮತ್ತು ಸಕ್ಕರೆಗಳನ್ನು ಒಯ್ಯುತ್ತಿದ್ದರು. ಇಲ್ಲಿ ಬಹಳ ಸಕ್ಕರೆ ಸಿಗುತ್ತಿತ್ತು. ಅದನ್ನು ಬಹಳ ದಿನ ಉಪಯೋಗಿಸಲು ಬರುವ ಹಾಗೆ ಮಾಡುವ ಪದ್ಧತಿಗಳು ಭಟಕಳದಲ್ಲಿ ಜಾರಿಯಲ್ಲಿದ್ದವು. ಮಲಬಾರಿನಿಂದಲೂ ಇಲ್ಲಿಗೆ ಅನೇಕ ವರ್ತಕರು ಬರುತ್ತಿದ್ದರು. ಕೆನರಾದಲ್ಲಿ ವಿಜಯನಗರ ಚಕ್ರವರ್ತಿಯ ಅತ್ಯಮೌಲ್ಯ ಆಸ್ತಿ ಭಟ್‌ಕಳ್ ಆಗಿತ್ತು.

ಇತರ ಬಂದರುಗಳಾದ ಬಾರಕೂರು, ಉಡುಪಿ, ಮಂಗಳೂರುಗಳಿಂದಲೂ ಗುಜರಾತ್, ಗೋವಾ, ದಖನ್ ಮತ್ತು ಆರ್ಮುಜ್‌ಗಳ ಜತೆಗೆ ವ್ಯಾಪಾರ ನಡೆಯುತ್ತಿತ್ತು ಈ ಬಂದರುಗಳ ಕಪ್ತಾನರ ಹತ್ತಿರ ಸೈನ್ಯವಿರುತ್ತಿತ್ತು. ಕೆನರಾ ರಾಜ್ಯ ಸುಭಿಕ್ಷ ದೇಶ. ಇತರ ಬೆಳೆಗಳ ಜೊತೆಗೆ ವೀಳೇದೆಲೆ ಅಡಿಕೆಗಳನ್ನು ಬೆಳೆಯುತ್ತಿದ್ದರು.

ನರಸಿಂಗ ಅಥವಾ ವಿಜಯನಗರ :

ಈ ಚಕ್ರಾಧಿಪತ್ಯದ ರಾಜಧಾನಿ ವಿಜಯನಗರ. ಈ ಚಕ್ರವರ್ತಿ (ಕೃಷ್ಣದೇವರಾಯ) ಕೆನರಾದ ಹಿಂದೂ. ಆತನ ಅಸ್ಥಾನದಲ್ಲಿ ಅವನು ತೆಲುಗು. ಆಸ್ಥಾನದಲ್ಲಿ ಅನೇಕ ಭಾಷೆಗಳನ್ನು ಮಾತನಾಡುತ್ತಿದ್ದರು. ಆತನ ಸಹಜವಾದ ಭಾಷೆ ಕನ್ನಡ. ಆತನು ಒಳ್ಳೆಯ ಯೋಧ. ಆತನು ಯುದ್ಧಕ್ಕೆ ಹೋಗುವಾಗ 40,000 ರಾವುತರು ಮತ್ತು ಅನೇಕ ಕಾಲ್ದಳಗಳ ಜೊತೆಗೆ ಹೋಗುತ್ತಿದ್ದನು. ಅವನ ಹತ್ತಿರ 500 ಆನೆಗಳಿದ್ದವು. ಇವುಗಳಲ್ಲಿ 200 ಆನೆಗಳನ್ನು ಯುದ್ಧದಲ್ಲಿ ಉಪಯೋಗಿಸುತ್ತಿದ್ದನು. ಅವನು ಸದಾ ಯುದ್ಧದಲ್ಲಿ ನಿರತನಾಗುತ್ತಿದ್ದನು - ಕೆಲವು ಸಲ ಒರಿಸ್ಸಾದ ಜೊತೆಗೆ, ಕೆಲವು ಸಲ ದಖನ್ನಿನ ಜೊತೆಗೆ ಮತ್ತು ಕೆಲವು ಸಲ ತನ್ನ ದೇಶದಲ್ಲಿಯೇ ಯುದ್ಧ

ಮಾಡುತ್ತಿದ್ದನು. ಅವನು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದುದು ವಿಜಯನಗರದಲ್ಲಿ. ವಿಜಯನಗರದ ಜನಸಂಖ್ಯೆ 20,000. ಅವನ ಸಾಮಂತರ ಮನೆಗಳು ಅಲಂಕಾರಗಳಿಂದ ಶೋಭಿಸುತ್ತಿದ್ದವು. ಚಕ್ರವರ್ತಿಯ ಅರಮನೆಗಳು ವಿಸ್ತಾರವಾಗಿ ಗಟ್ಟಿಮುಟ್ಟಾಗಿದ್ದವು. ಚಕ್ರವರ್ತಿಯನ್ನು ಎಲ್ಲರೂ ಗೌರವದಿಂದ ಕಾಣುತ್ತಿದ್ದರು. ಅವನ ಆಸ್ಥಾನದಲ್ಲಿ 1000 ನರ್ತಕಿಯರು, ಗಾಯಕರಿದ್ದರು. 4-5000 ಪುರುಷರೂ ಇದೇ ವೃತ್ತಿಯಲ್ಲಿದ್ದರು. ಇವರೆಲ್ಲಾ ತೆಲುಗು ಜನರು. ಇವರು ರಾಜ್ಯದ ಇತರ ಜನಗಳಿಗಿಂತ ಲಲಿತ ಕಲೆಗಳಲ್ಲಿ ಹೆಚ್ಚು ನಿಷ್ಣಾತರಾಗಿದ್ದರು. ಇವರು ಸಾಮ್ರಾಜ್ಯದ ವಿವಿಧ ಭಾಗಗಳಿಗೆ ವಲಸೆ ಹೋಗಿ ನೆಲೆಸಿದ್ದರು. ವಿಜಯನಗರದ ವರ್ಣನೆಯಾದ ಮೇಲೆ ಪಿರೇಸನು ಮಲಬಾರನ್ನು ವರ್ಣಿಸುತ್ತಾನೆ.

ಕೃಷ್ಣದೇವರಾಯನು ಕೆನರಾ ಅಥವಾ ತುಳುನಾಡಿನವನು, ಅವನ ಸಹಜವಾದ ಭಾಷೆ ಕನ್ನಡ, ಆಸ್ಥಾನದಲ್ಲಿ ಅವನು ತೆಲುಗಿನಲ್ಲಿ ಮಾತನಾಡುತ್ತಿದ್ದುದು ಅವನ ಅರಮನೆಯಲ್ಲಿ ಕಲಾಕಾರರು ತೆಲುಗು - ಈ ವಿಷಯಗಳನ್ನು ಇಷ್ಟು ಸ್ಪಷ್ಟವಾಗಿ ಬೇರೆ ಯಾರೂ ಹೇಳುವುದಿಲ್ಲ. ಆಮುಕ್ತಮಾಲ್ಯದ ಒಂದು ಈ ಹೇಳಿಕೆಗೆ ವ್ಯತಿರಿಕ್ತ. ಅದರಲ್ಲಿ ಕೃಷ್ಣರಾಯನಿಗೆ ಬಿದ್ದ ಕನಸಿನಲ್ಲಿ ಶ್ರೀಕಾಕುಳದ ಮಧುಸೂದನ ದೇವರು ನೀನು ತೆಲುಗಿನಲ್ಲಿ ನನಗೆ ಒಂದು ಕಾವ್ಯವನ್ನು ಬರೆದುಕೊಡು; ತೆಲುಗಿನಲ್ಲಿಯೇ ಯಾಕೆ ಬರೆಯಬೇಕೆಂದರೆ ಪಿರೇಸನು ಹೇಳಿದ ಹಾಗೆ ನಿನ್ನ ಆಸ್ಥಾನದಲ್ಲಿ ಅನೇಕ ಭಾಷಿಕರಿದ್ದಾರೆ ಅವರ ಜೊತೆಗೆ ನೀನು ತೆಲುಗಿನಲ್ಲೆ ಮಾತನಾಡುತ್ತಿಯೆಂದು ಹೇಳಿದರು. ಈ ರೀತಿ ಪಿರೇಸನ ಬರಹದಿಂದ, ಕೆನರಾ ಮತ್ತು ಕೃಷ್ಣರಾಯನ ಬಗ್ಗೆ ಮೌಲಿಕವಾದ ಮತ್ತು ಖಚಿತವಾದ ಮಾಹಿತಿ ಸಿಗುತ್ತದೆ.

ಆಕರ

ಟಾಮ್‌ಪಿರೇಸ್, 1944, *ದಿ ಸಮಾ ಓರಿಯಂಟಲ್*, ಲಂಡನ್, ಪು. 60-65.

15. ವಿಜಯನಗರ ಚರಿತ್ರೆಯಲ್ಲಿ ಕೆಳದಿ ಅರಸರು

ಕೆ.ಜಿ. ವೆಂಕಟೇಶ್ ಜೋಯಿಸ್

ನಮ್ಮ ದೇಶದ ಪೂರ್ವೇತಿಹಾಸವನ್ನು ಅರಿತುಕೊಳ್ಳುವಾಗ ಆ ಕಾಲದಲ್ಲಿ ಪ್ರವರ್ಧಮಾನದಲ್ಲಿದ್ದ ಸಣ್ಣ ರಾಜ್ಯಗಳ ಚರಿತ್ರೆಯನ್ನು ಕಡೆಗಣಿಸುವಂತಿಲ್ಲ. ಇತಿಹಾಸ ಎಂಬುದು ಕೇವಲ ದೊಡ್ಡ ಸಾಮ್ರಾಜ್ಯಕ್ಕೆ ಸೀಮಿತವಾಗಿರದೆ ಅದು ಆ ಸಾಮ್ರಾಜ್ಯಗಳ ಇತಿಹಾಸದಲ್ಲಿ ಚಿಕ್ಕ ರಾಜ್ಯಗಳನ್ನು ಸಮ್ಮಿಳಿತಗೊಳಿಸಿಕೊಂಡಿರುತ್ತದೆ. ಇದಕ್ಕೆ ಉದಾಹರಣೆಯಾಗಿ ವಿಜಯನಗರ ಸಾಮ್ರಾಜ್ಯದ ಇತಿಹಾಸ ಹಾಗೂ ಅಂದಿನ ಸಣ್ಣ ರಾಜ್ಯಗಳ ಚರಿತ್ರೆ ಗಾಢವಾದ ಸಂಬಂಧ ಹೊಂದಿದ್ದುದನ್ನು ಗುರುತಿಸಬಹುದು. ಅಂತಹ ಸಣ್ಣ ಸಂಸ್ಥಾನಗಳಲ್ಲಿ ಒಂದಾದ ಕೆಳದಿ ಪಾಳೆಯಪಟ್ಟು (ಕ್ರಿ.ಶ. 1499-1763) ವಿಜಯನಗರ ಸಾಮ್ರಾಜ್ಯಕ್ಕೆ ತೋರಿದ ಗೌರವ, ಅಮೋಘ ಸೇವೆ ಗಮನಿಸುವಂತಹದು. ವಿಜಯನಗರವು ಅವನತಿಯ ಹಂತದಲ್ಲಿದ್ದಾಗ ಕೆಳದಿಯ ಪ್ರಸಿದ್ಧ ದೊರೆ ಶಿವಪ್ಪನಾಯಕನು ಅದನ್ನು ಪುನರುಜ್ಜೀವನಗೊಳಿಸಲು ನಡೆಸಿದ ಪ್ರಯತ್ನ ಸ್ತುತ್ಯಾರ್ಹವಾದುದು.

ಹದಿನಾಲ್ಕನೆಯ ಶತಮಾನದಿಂದ ಹದಿನೇಳನೇ ಶತಮಾನದವರೆಗೆ ಆಳಿದ ವಿಜಯನಗರ ಸಾಮ್ರಾಜ್ಯ ಹಾಗೂ ಹದಿನೆಂಟನೇ ಶತಮಾನದ ದ್ವಿತೀಯಾರ್ಧದವರೆಗೆ ಪ್ರಖ್ಯಾತವಾಗಿದ್ದ ಕೆಳದಿ ಸಂಸ್ಥಾನ ಈ ಎರಡೂ ಸಾಮ್ರಾಜ್ಯಗಳ ಸಂಬಂಧವನ್ನು ವಿವರವಾದ ಅಧ್ಯಯನಕ್ಕೆ ಒಳಪಡಿಸಿಲ್ಲವೆಂದೇ ಹೇಳಬೇಕು. ಅದು ರಾಜಕೀಯ ಸಂಬಂಧದ ಜೊತೆಗೇ ಅಂದಿನ ಆಡಳಿತ, ಸಾಂಸ್ಕೃತಿಕ ಚಟುವಟಿಕೆಗಳ ಮೇಲೂ ಸಾಕಷ್ಟು ಬೆಳಕನ್ನು ಚೆಲ್ಲುತ್ತದೆ. ಇಂತಹ ಪ್ರಯತ್ನವು ದಕ್ಷಿಣ ಭಾರತದ ಇತಿಹಾಸಕ್ಕೆ ಉತ್ತಮ ಕಾಣಿಕೆಯಾಗುವುದರಲ್ಲಿ ಅಚ್ಚರಿಯಿಲ್ಲ. ಆ ನಿಟ್ಟಿನಲ್ಲಿ ಕೆಳದಿ - ವಿಜಯನಗರ ಸಂಬಂಧ ಕುರಿತಂತೆ ಚರ್ಚಿಸುವುದು ಈ ಪ್ರಬಂಧದ ವಸ್ತು.

ಮೂಲ ಆಕರಗಳು:

ಕೆಳದಿ - ವಿಜಯನಗರ ಸಂಬಂಧವನ್ನು ಅಭ್ಯಸಿಸುವಲ್ಲಿ ನಮಗೆ ಸಾಕಷ್ಟು ಮೂಲ ಆಕರಗಳು ದೊರೆಯುತ್ತವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಕೆಳದಿ ಆಸ್ಥಾನ ಕವಿಯಾದ ಲಿಂಗಣ್ಣ ಕವಿಯು ರಚಿಸಿರುವ ಕೆಳದಿ ನೃಪವಿಜಯ (ಕ್ರಿ.ಶ. 1763-1804) ಮತ್ತು ಕ್ರಿ.ಶ. 1709ರಲ್ಲಿ ಕೆಳದಿಯ ಹದಿನಾಲ್ಕನೆಯ ದೊರೆ ಹಿರಿಯ ಬಸಪ್ಪನಾಯಕನು ರಚಿಸಿದ ಶಿವತತ್ವ ರತ್ನಾಕರ ಎಂಬ ಉದ್ಗ್ರಂಥವು ಪ್ರಮುಖವಾದುದು. ಅಲ್ಲದೆ ಎಂ.ಎಸ್.ಪುಟ್ಟಣ್ಣನವರ ಇಕ್ಕೇರಿ ಸಂಸ್ಥಾನ ಚರಿತ್ರೆ, ರೈಸ್‌ರವರ ಎಪಿಗ್ರಾಫಿಯ ಕರ್ನಾಟಿಕ ಸಂಪುಟಗಳು, ರಾಬರ್ಟ್ ಸಿವೆಲ್ ಅವರ ಫಾರ್ಗಾಟನ್ ಎಂಪಾಯರ್, ರಾಯವಾಚಕಮು, ಕೃಷ್ಣರಾಯ ವಿಜಯಮು, ಹೆರಾಸ್ ಅವರ ಅರವೀಡು ಡೈನಾಸ್ಟಿ, ಎಸ್. ಕೃಷ್ಣಸ್ವಾಮಿ ಅಯ್ಯಂಗಾರರ ಸೋರ್ಸೆಸ್ ಆಫ್ ವಿಜಯನಗರ ಹಿಸ್ಟರಿ, ಬ್ರಿಗ್ಸ್‌ರ ಫೆರಿಸ್ತಾ III, ನರಸಭೂಪತಿಯಮು, ನಗಮ್ ಅಯ್ಯ ಅವರ ತ್ರಾವಂಕೂರ್ ಸ್ಟೇಟ್ ಮಾನ್ಯುವಲ್, ಆರ್ಕೈವೊ ಪೊರ್ತುಗೀಜ್ ಓರಿಯಂಟಲ್, ಟ್ರಾವೆಲ್ಸ್ ಆಫ್ ಪಿಯತ್ರೊ ದೆಲ್ಲಾ ವಲ್ಲೆ, ಮ್ಯಾಕ್ಲಾಯ್ಡ್ ಅವರ ಡಿ ಊಸ್ತ್ ಇಂಡಿಸ್ಚೆ ಕಂಪಾಗಿ, ವಿಜಯನಗರ ಸೆಕ್ಸ್ ಸೆಂಟನರಿ ಕಮೆಮೊರೇಶನ್ ವಾಲ್ಯೂಮ್ ಮುಂತಾದವು. ಇವುಗಳಲ್ಲಿ ಆಯಾ ಕಾಲದಲ್ಲಿ ಜರುಗಿದ ಘಟನೆಗಳನ್ನು ತರ್ಕಬದ್ಧವಾಗಿ ಚರ್ಚಿಸಿರುವುದು ದೊರೆಯುತ್ತದೆ. ಕೆಳದಿ - ವಿಜಯನಗರ ಸಂಬಂಧವನ್ನು ನಿಖರವಾಗಿ ಗುರುತಿಸಲು ನಮಗೆ ಸಹಕಾರಿಯಾಗಿದೆ.

ಆರಂಭ:

ಕೆಳದಿ ಸಂಸ್ಥಾನದ ಉದಯವನ್ನು ಕುರಿತು ಭಿನ್ನಾಭಿಪ್ರಾಯವುಳ್ಳ ಅನೇಕ ಐತಿಹ್ಯಗಳಿವೆ. ಶಿವತತ್ವ ರತ್ನಾಕರ ಹಾಗೂ ಕೆಳದಿ ನೃಪವಿಜಯಗಳ ಆಧಾರದಂತೆ ಹಳ್ಳಿ-ಬೈಲು ಎಂಬಲ್ಲಿ ವಾಸಿಸುತ್ತಿದ್ದ ಚೌಡಪ್ಪ-ಭದ್ರಪ್ಪ ಎಂಬ ಸಹೋದರರಿಗೆ ಸುದೈವದಿಂದ ದೊರೆತ ನಿಕ್ಷೇಪವೇ ಕೆಳದಿ ಸಂಸ್ಥಾನದ ಉದಯಕ್ಕೆ ಕಾರಣವಾಯಿತು ಎನ್ನಬಹುದು. ವಿಜಯನಗರ ಸಾಮ್ರಾಟನು ಪ್ರಬಲರಾಗುತ್ತಿದ್ದ ಈ ಸಹೋದರರನ್ನು ತನ್ನ ಓಲಗಕ್ಕೆ ಕರೆಸಿ ''ನೀವೆಮ್ಮ ಕಜ್ಜಂಗಳಿಗನುಕೂಲಿಗಳಾಗಿ ಸಮೀಪದೊಳಿರಲ್ವೇಳ್ಕೆಂದು''[1] ಅವರಿಗೆ ಹೇಳಿಕೊಂಡನೆಂದು ತಿಳಿಯುತ್ತದೆ. ಈ ಸಹೋದರರು ವಿಜಯನಗರಕ್ಕೆ ಉಪಟಳ ಕೊಡುತ್ತಿದ್ದ ಚಿಕ್ಕ ಪಾಳೆಯಗಾರರನ್ನು ಸೋಲಿಸಿ

ಕೆಲವರನ್ನು ಸೆರೆ ಹಿಡಿದು ರಾಯನಿಗೆ ಒಪ್ಪಿಸಿದರು.[2] ಇದರಿಂದ ರಾಯರ ಕೃಪೆಗೆ ಪಾತ್ರರಾಗಿದ್ದರು. ಕೆಲಕಾಲದ ನಂತರ ವಿಜಯನಗರದ ಸಾಮ್ರಾಟನು ತುರುಷ್ಕರ ದಾಳಿಯ ಸಂಭವವನ್ನು ಅನುಲಕ್ಷಿಸಿ ಸಹೋದರರನ್ನು ಉತ್ತರ ಗಡಿಯ ರಕ್ಷಣೆಗೆ ನೇಮಿಸಿದನು. ಆಗ ರಾಯನು ಚಂದ್ರಗುತ್ತಿ, ಕೆಳದಿ, ಇಕ್ಕೇರಿ, ಪೆರ್ಬಯಲು ಎಲಗಳಲೆ, ಮೋದೂರು, ಕಲಸೆ ಮತ್ತು ಲಾತವಾಡಿ ಎಂಬ ಎಂಟು ಮಾಗಣಿಯನ್ನು ಅವರಿಗೆ ಕೊಟ್ಟು ಅವುಗಳನ್ನು ಪಾರಂಪರ್ಯವಾಗಿ ಅನುಭವಿಸಿಕೊಂಡು ಬರುವಂತೆ ಹಾಗೂ ವಿಜಯನಗರದ ಅರಸರಿಗೆ ಸಹಾಯಕರಾಗಿ ಇರತಕ್ಕದ್ದೆಂದು ಶಾಸನ ಬರೆಸಿದನು. ಇದು ಶಾ.ಶ. 1422ನೇ ಸಿದ್ದಾರ್ಥಿ ಸಂ. ಮಾಘ ಶು. 3 (ದಿನಾಂಕ 8-1-1500)ರಲ್ಲಿ ನಡೆಯಿತು.[3] ಈ ಸಮಯದಲ್ಲಿ ವಿಜಯನಗರದ ನರಸಿಂಗರಾಯನು ಆಡಳಿತ ನಡೆಸುತ್ತಿದ್ದ ಬಗ್ಗೆ ಇತಿಹಾಸ ತಿಳಿಸುತ್ತದೆ.

ಈ ಕಾಲದಲ್ಲಿ ವಿಜಯನಗರದಲ್ಲಿ ಆಳಿದ ಅರಸರ ಹೆಸರಿನ ಬಗ್ಗೆ ಭಿನ್ನಾಭಿಪ್ರಾಯವಿದೆ. ಅಲ್ಲಿ ಕಂಡುಬರುವ ಕಾಲಮಾನಕ್ಕೂ ಕೃಷ್ಣದೇವರಾಯನ ಆಡಳಿತದ ಕಾಲಮಾನಕ್ಕೂ ವ್ಯತ್ಯಾಸ ಕಂಡುಬರುತ್ತದೆ. ಕೃಷ್ಣದೇವರಾಯನ ಆಡಳಿತದ ಕಾಲವು ಕ್ರಿ.ಶ. 1509-1530.[4] ಅವನ ಹಿಂದೆ ಆಡಳಿತ ನಡೆಸಿದ ವೀರ ನರಸಿಂಹನ ಕಾಲವು ಕ್ರಿ.ಶ. 1505-1509. ಇವನ ಹಿಂದಿನವನು ಸಾಳುವ ವಂಶದ ದಮ್ಮರಾಯ ಅಥವಾ ಇಮ್ಮಡಿ ನರಸಿಂಹ (ಕ್ರಿ.ಶ. 1491-1505).[5] ಕೆಳದಿ ಸಂಸ್ಥಾನದ ಉದಯವು ಈವರೆಗಿನ ಸಂಶೋಧನೆಯಿಂದ ಸ್ಪಷ್ಟವಾಗಿರುವಂತೆ ಕ್ರಿ.ಶ. 1500 ರಲ್ಲಿ. ಇದನ್ನು ಗಮನಿಸಿದಾಗ ಕೆಳದಿ ಉದಯದ ಕಾಲಕ್ಕೆ ಕೃಷ್ಣದೇವರಾಯನು ವಿಜಯನಗರದ ರಾಜನಾಗಿದ್ದನೇ? ಎಂಬುದು ಕುತೂಹಲಕ್ಕೆಡೆಮಾಡಿದೆ.

ಮೈಸೂರು ಪುರಾತತ್ವ ವರದಿ 1928, ನಂ. 65ನೇ ಶಾಸನ ವಿಜಯನಗರ ಹಾಗೂ ಕೆಳದಿ ಆರಂಭ ಕುರಿತು ಹಲವು ಮಾಹಿತಿ ನೀಡುತ್ತದೆ.[6] ಕೆಳದಿಯ ಆರಂಭದ ಚರಿತ್ರೆಯಲ್ಲಿ ಕೆಳದಿ ಹಾಗೂ ಕೃಷ್ಣದೇವರಾಯನ ಅಸ್ಪಷ್ಟ ಮಾಹಿತಿಯೊಂದು ರಾಯವಾಚಕಮು ಮತ್ತು ಕೃಷ್ಣರಾಯ ವಿಜಯಮು ಎಂಬ ತೆಲುಗು ಕೃತಿಗಳಲ್ಲಿ ಕಂಡುಬರುತ್ತದೆ. ಇದರಲ್ಲಿ ಕಂಡುಬರುವ ಸಕ್ಕುಲನಾಯಕನು ಕೆಳದಿ ರಾಜಪರಿವಾರದವನೇ ಎಂಬುದಾಗಿ ತರ್ಕಿಸಲಾಗಿದೆ.[7] ಈ ಸಕ್ಕುಲನಾಯಕನು ಯಾರೆಂದು ಇನ್ನೂ ನಿರ್ಧಾರವಾಗಿಲ್ಲ. ಈತನು ಕೆಳದಿ ಚೌಡಪ್ಪನಾಯಕನ ಸೇನಾಧಿಪತಿಯಾಗಿರಬಹುದೇ? ಇದನ್ನು ನಿರ್ಧಾಸಿಸಬೇಕಾಗಿದೆ.

ಕೆಳದಿ ಸದಾಶಿವನಾಯಕ ಮತ್ತು ವಿಜಯನಗರ:

ಕೆಳದಿಯ ಸದಾಶಿವನಾಯಕನ ಕಾಲದಲ್ಲಿ ವಿಜಯನಗರ - ಕೆಳದಿ ತಂದೆ ಮಗನೋಪಾದಿಯಲ್ಲಿ ಬಾಂಧವ್ಯವನ್ನು ಹೊಂದಿದ್ದವು. ಈತನು ವಿಜಯನಗರದ ಕೃಷ್ಣದೇವರಾಯನ ಸಮಕಾಲೀನನಾಗಿದ್ದನು. ಇವನ ಸಹಾಯದಿಂದಲೇ ಕೆಳದಿ ನೃಪವಿಜಯದಲ್ಲಿ ಉಲ್ಲೇಖಿಸಿರುವಂತೆ

ಎಸೆವಾ ತಾಲಿತಖಾನನೊಂದು ಕಡೆಯಾಳ್ ಫೆರೋಜಖಾನಂ ದಲೊಂ
ದೆಸೆಯೊಳ್ ದಸ್ತುರಖಾನನೊಂದುಮೊಗದೊಳ್ ಶಾತೇಯನೊಂದಿಕ್ಕಿನೊಳ್
ಮಿಸುಪಾ ಸಂಜನಖಾನನೊಮ್ಮೊಗದೆ ವಜ್ರಾಖ್ಯಂಳ ಮುನಿಲ್ಪಾನ ಬೊ
ಕ್ಕಸಿಗಂ ರವುತಖಾನರೌಂಕಿ ಖತಿಯಿಂ ಕೈಗೆಯ್ದರಂದಾಜಿಯೋಳ್

ಇಂತಪ್ಪವಜೀರರ್ಕಳೆಣ್ದೆಸೆಗಳೊಳಾತ್ಮಸೈನ್ಯಂವರಸೊರ್ಮೆ ಮುತ್ತಿ ಮುಸುಂಕಿ
ಕೈಗೆಯ್ಯುತ್ತುಮಿರಲಾಗಳಾ ಸದಾಶಿವನಾಯಕಂ ಧೈರ್ಯಗುಂದದೆ ನಿತ್ತರಿಸಿ
ನಿಂದು ಮಹಾಯುದ್ಧಮಂ ರಚಿಸಿ[8]

ತಾಲಿತಖಾನನ ಸಮರದ
ಲೀಲೆಯನುರೆ ನಿಲಿಸಿ ಕುಂತದಿಂ ದಸ್ತುರನಂ
ಕೀಲಿಸಿ ಫೆರೋಜನ ಕ
ಣ್ಣಾಲಿಗೆ ನೀರ್ವರಿಸಿ ಕೆಡಪಿದಂ ಶಾತೆಯನಂ

ಭೀಕರ ಕರರಿಪುಸೇನಾ
ನೀಕವನಸಿಯರೆಯುತಧಿಕ ಶೌರ್ಯದೊಳಬಿ
ಲ್ದಾ ಕಲುಬುರುಗಿಯ ದುರ್ಗವ
ನೇಕ ಮುಹೂರ್ಶದೊಳೆ ತನ್ನೃಪಂ ಸಾಧಿಸಿದಂ[10]

ಅಹಮದ್‌ನಗರದ ಸುಲ್ತಾನರು, ಬೈರೆ ನಿಜಾಮಪಾತುಶಾಹ (ಹುಸೇನ್ ನಿಜಾಮ ಪಾಸಾ) ಕಲ್ಯಾಣ ಕಲ್ಬುರ್ಗಿ, ಫಿರೋಜಖಾನ್, ತಾಲಿತ್‌ಖಾನ್, ಸಂಜರ್‌ಖಾನ್, ಸಾತೇಖಾನ್, ಮುನಿಲಾಖಾನ್, ವಜ್ರಖಾನ್, ರಾವಿತಖಾನ್ ಮತ್ತು ಬೊಕ್ಕಸಿಂಗ್[11] ಮುಂತಾದ ಅತಿರಥ ಮಹಾರಥರನ್ನು ಜಯಿಸಿ ತನ್ನ ಸಾಮರ್ಥ್ಯದಿಂದ ಜಯವನ್ನು ಗಳಿಸಿ ಬೊಕ್ಕಸಿಂಗನನ್ನು ಸೆರೆಹಿಡಿದು ವಿಜಯನಗರದ ರಾಮರಾಜನಿಗೆ ಒಪ್ಪಿಸಿದನು. ಈ ಮಧ್ಯೆ ಕಲ್ಯಾಣ, ಕಲ್ಬುರ್ಗಿ ಕಡೆಯಿಂದ ಬಲವಾದ ಪ್ರತಿರೋಧವನ್ನು ರಾಮರಾಜ ಹಾಗೂ ಸದಾಶಿವನಾಯಕರೀರ್ವರೂ ಎದುರಿಸಿ ಹಿಮ್ಮೆಟ್ಟಿಸಿದರು. ಸದಾಶಿವನಾಯಕನು ಜಮುವಾಡಿ ಕೋಟೆಯನ್ನು ಸ್ವಾಧೀನಪಡಿಸಿ ರಾಯನಿಗೆ ಒಪ್ಪಿಸಿದನು. ಹರ್ಷಗೊಂಡ ರಾಯನು ನಾಯಕನಿಗೆ 'ಕೋಟೆ ಕೋಲಾಹಲ'[12] ಮತ್ತು 'ರಾಯನಾಯಕ' ಎಂಬ ಬಿರುದನ್ನಿತ್ತು ಗೌರವಿಸಿದನು.[13] ಇಂತಹ ಅನೇಕ ಸಂದರ್ಭಗಳನ್ನು ಸಮರ್ಥ ಸೇನಾನಿಯಾಗಿದ್ದ ಸದಾಶಿವನಾಯಕನು ವಿಜಯನಗರ ಚಕ್ರವರ್ತಿಗೆ ಸಹಾಯ ಮಾಡಿದುದನ್ನು ಹೆರಾಸ್ ತಮ್ಮ ಅರವೀಡು ಡೈನಾಸ್ಟಿಯಲ್ಲಿ ಪ್ರಸ್ತಾಪಿಸಿದ್ದಾರೆ.[14]

ಬಿಜಾಪುರದ ಸುಲ್ತಾನನು ವಿಜಯನಗರಕ್ಕೆ ನೀಡಬೇಕಾಗಿದ್ದ ಪೊಗದಿ ಸಲ್ಲಿಸದೆ ಇದ್ದುದರಿಂದ ಅವನು ಕಳುಹಿಸಿದ್ದ ಸಾಹೇಯಖಾನನನ್ನು ಸದಾಶಿವನಾಯಕನು ಯುದ್ಧದಲ್ಲಿ ಸೋಲಿಸಿದನು.

ವರಜಂಬುಖಂಡಿಯೆಡೆಯೊಳ್
ತರುಬಿದ ತೌರುಷ್ಕ ಪತಿಯ ಖಾನರನೆಲ್ಲಂ
ಕುರಿದರಿದು ಬೊಕ್ಕಸಿಂಗನ
ಸೆರೆವಿಡಿದೆಳ್ತಂದು ರಾಯರಿಂಗೊಪ್ಪಿಸಿದಂ[15]

ಹೀಗೆ ಬಿಜಾಪುರದ ಇಬ್ರಾಹಿಂ ಆದಿಲ್‌ಷಹಾ, ಮಹಮ್ಮದ್ ನಗರದ ಬರ್ಹಾಂ ನಿಜಾಂಷಾ ಮುಂತಾದವರನ್ನು ಸದಾಶಿವನಾಯಕನ ಸಹಾಯದಿಂದ ಪರಾಭವಗೊಳಿಸಿ ವಿಜಯನಗರಕ್ಕೆ ಸೇರಿಸಿಕೊಳ್ಳಲಾಯಿತು. ಫೆರಿಸ್ತನ ಇತಿಹಾಸದಲ್ಲಿಯೂ ಸಹ ಈ ಕುರಿತು ಹಲವಾರು ಅಂಶಗಳಿವೆ. ಬಿದರೆಯ ಬಾರೀದ್‌ಷಹನೂ ಈತನಿಂದ ಪರಾಭವಗೊಂಡದ್ದು ಕೆಳದಿ ನೃಪವಿಜಯ ಹಾಗೂ ಶಿವತತ್ವ ರತ್ನಾಕರದಲ್ಲಿ ಉಲ್ಲೇಖಗೊಂಡಿವೆ.[16] ಬಾರೀದ್‌ಷಹನನ್ನು ಸೆರೆಹಿಡಿದು ವಜ್ರದ ಉಂಗುರ, ಛತ್ರ, ಚಾಮರ, ಆನೆಗಳನ್ನು ವಶಪಡಿಸಿಕೊಂಡು ರಾಮರಾಯನಿಗೆ ಒಪ್ಪಿಸಿದನು. ಇದರಿಂದ ಹರ್ಷಗೊಂಡ ಚಕ್ರವರ್ತಿಯು ಕೆಳದಿ ಸದಾಶಿವನಿಗೆ 'ಮೇಘಡಂಬರ ದಿವಾ ಪ್ರದೀಪ ಶತ್ರುಸಪ್ತಾಂಗ ಹರಣ' ಎಂಬ ಬಿರುದನ್ನಿತ್ತು ಸನ್ಮಾನಿಸಿದನು. ಹೀಗೆಯೇ ಅರುಣಧ್ವಜ, ವಾದ್ಯಪಂಚಕ ಮುಂತಾದ ಸನ್ಮಾನಗಳೂ ಅಪಾರವಾದ ಸಂಪತ್ತುಗಳೂ ಕೈಸೇರಿದವು.

ಈ ಕಾಲದಲ್ಲಿ ವಿಠಲನೊಂದಿಗೆ ತಿರುವಾಡಿ ರಾಜ್ಯ (ಭೂತಳ ವೀರ ಕೇರಳವರ್ಮ)ಗಳೂ ಕೈಸೇರಿತ್ತು. ಮಧುರೆಯ ವಿಶ್ವನಾಥನಾಯಕನು ಇದಕ್ಕೆ ಸಹಾಯ ನೀಡಿದನು.[17]

ಕೆಳದಿಯ ಸಂಸ್ಥಾಪಕ ಚೌಡಪ್ಪನಾದರೆ, ಸದಾಶಿವನು ವಿಜಯನಗರದ ಸಹಾಯದಿಂದ ಕೆಳದಿಗೆ ಅಧಿಪತಿಯಾಗಿದ್ದಾನೆ. ವಿಜಯನಗರ ಹಾಗೂ ಕೆಳದಿಗೆ ಕಳಸಪ್ರಾಯನಾದ ಈ ನಾಯಕನನ್ನು ಕೆಳದಿಯ ಲಿಂಗಣ್ಣ ಕವಿಯು

ಭೀಮಂ ಸಂಗರದೊಳ್ ಸು
ತ್ರಾಮಂ ಭೋಗದೊಳ್ ಶಾಂತಿಗುಣದೊಳ್ ಸೋಮಂ
ರಾಮಂ ನನ್ನಿಯೊಳೆಂದೀ
ಭೂಮಿಜನಂ ಪೊಗಳೆ ಬಾಳ್ದನಾ ನಾರನಾಥಂ

ಮತ್ತಮದಲ್ಲದೆ

ಅಪರಿಮಿತ ಗುಣಗಣಾಲಯ
ನುಪಮಾತೀತ ಪ್ರತಾಪನೆಂದೆನಿಸಿ ಧರಾ
ಧಿಪರತ್ನನಾ ಸದಾಶಿವ
ನೃಪನತಿಸದ್ಧರ್ಮದಿಂದಮಿಳೆಯಂ ಪೊರೆದಂ

ಎಂಬುದಾಗಿ ಈತನನ್ನು ವರ್ಣಿಸಿದ್ದಾನೆ.[18] ವಿಜಯನಗರವನ್ನು ಉದ್ಧರಿಸುವಲ್ಲಿ ಕೆಳದಿ ಸದಾಶಿವನಾಯಕನ ಪಾತ್ರವು ಇತಿಹಾಸದಲ್ಲಿ ಉಜ್ವಲ ಪರಂಪರೆಗೆ ಸೇರಿದೆ.

ದೊಡ್ಡ ಸಂಕಣ್ಣನಾಯಕ:

ಇಮ್ಮಡಿ ಸದಾಶಿವ ನಾಯಕನ ನಂತರ[19] ದೊಡ್ಡ ಸಂಕಣ್ಣನಾಯಕನ ಕಾಲದಲ್ಲಿ ವಿಜಯನಗರ ಚಕ್ರವರ್ತಿಯ ಅನುಮತಿ ಇಲ್ಲದೆ ದೊಡ್ಡ ಸಂಕಣ್ಣನು ಜಂಬೂರು ಮತ್ತು ಉಡುಗಣಿಯನ್ನು (ಕೋಟೆ) ಸ್ವಾಧೀನಪಡಿಸಿದ್ದರಿಂದ ಚಕ್ರವರ್ತಿಯು ಕೆಳದಿ ನಾಯಕನನ್ನು ವಿಜಯನಗರಕ್ಕೆ ಬರಲು ಆದೇಶಿಸಿದ್ದರಿಂದ ಆ ಮೇರೆಗೆ ಚಕ್ರವರ್ತಿಯನ್ನು ಭೇಟಿ ಮಾಡಿ ಅಲ್ಲಿ ಹಲವು ಕಾಲ ಇದ್ದನು.[20] ಈ ಕಾಲದಲ್ಲಿ ಚಕ್ರವರ್ತಿಯ ಕೋರಿಕೆಯಂತೆ ಸೇನಾಧಿಪತಿ ವಿಠಲರಾಯನ ಸಂಗಡ ಗೋವೆಯನ್ನು ಮುತ್ತಿಗೆ ಹಾಕಿ ಪೋರ್ಚುಗೀಸ್ ಗವರ್ನರನನ್ನು ಸೆರೆ ಹಿಡಿದು ರಾಯನಿಗೆ ಒಪ್ಪಿಸಿದನು. ಸಂತುಷ್ಟಿಗೊಂಡ ರಾಯನು ಮಾಲೇನಹಳ್ಳಿ ಮತ್ತು ಮಹದೇವಪುರವನ್ನಿತ್ತು ದೊಡ್ಡ ಸಂಕಣ್ಣನನ್ನು ಬಹುವಾಗಿ ಸನ್ಮಾನಿಸಿದನು. ಕೆಳದಿ ನೃಪವಿಜಯ, ಶಿವತತ್ವ ರತ್ನಾಕರಗಳು ಈ ವಿಷಯವನ್ನು ಸಮರ್ಥಿಸಿವೆ.

ಶ್ರೀ ವಿಠ್ಠಲರಾಯರ ಕೂ
ಡಾ ವಿಭುವರನೈದಿ ದಾಳಿವರಿದಂಬುಧಿಮ
ಧ್ಯಾವಷ್ಟಂಭನಮೆನಿಸಿದ
ಗೋವೆಯ ಗಡವಂ ಸಮೀಕದೊಳ್ ಸಾಧಿಸಿದಂ

ಇಂತು ಗೋವೆಯ ಗಡವಮಂ ಕೊಂಡು ಮರಳ್ಕೆಡವಾ ಸಂಕಣ್ಣನಾಯಕಂ ರಾಯರಂ ಕಾಣಲತ್ಯಂತ ಪ್ರಮುದಿತಮಾನಸರಾಗಿ ಮಾಲೇನಹಳ್ಳಿ ಹೊಬಳಿಯನುಚಿತಮಾಗಿತ್ತನರ್ಘ್ಯರತ್ನಾಭರಣಾಂಬರತಾಂಬೂಲಮಂ ಭುಜಕೀರ್ತಿ ಮುಂತಾದ ಬಿರುದುಗಳುಮಂ ತತ್ಪುತ್ರರ್ಗುಚಿತಮಾದುಡುಗೊರೆ ವೀಳ್ಯಂಗಳು ಮನಿತ್ತಾದರಿಸಿ ಬೀಳ್ಕೊಡಲಪ್ಪಣೆಗೊಂಡತ್ಯಂತ ಹರ್ಷದಿಂ ಸ್ವಕುಟುಂಬಸಹಿತಂ ವಿದ್ಯಾನಗರಿಯಿಂ ತೆರಳ್ದೈತಂದಿಕ್ಕೇರಿಪುರವರಮಂ . . . .[21]

ಚಿಕ್ಕ ಸಂಕಣ್ಣನಾಯಕ ಮತ್ತು ವಿಜನಗರ (1550-1586):

ರಾಮರಾಜನಾಯಕ ಹಾಗೂ ಚಿಕ್ಕ ಸಂಕಣ್ಣನಾಯಕರು ಒಟ್ಟಿಗೆ ಕೆಳದಿ ರಾಜ್ಯಾಡಳಿತ ನಡೆಸುತ್ತಿದ್ದ ಸಂದರ್ಭದಲ್ಲಿಯೇ ರಕ್ಕಸತಂಗಡಿ (ಕ್ರಿ.ಶ. 1565) ಯುದ್ಧವು ಜರುಗಿದ್ದು, ಆ ನಂತರವೂ ಮುಂದುವರೆದುದು ಕೆಳದಿ ನೃಪವಿಜಯ ಉಲ್ಲೇಖಿಸಿದೆ.[22] ಇದರಲ್ಲಿ ಉಲ್ಲೇಖಿತವಾಗಿರುವ ಈ ಕೆಳಗಿನ ಅಂಶಗಳು ಇತರ ಸಮಕಾಲೀನ ಗ್ರಂಥಗಳಲ್ಲಿ ಭಿನ್ನಾಭಿಪ್ರಾಯಕ್ಕೆಡೆಯೀಯುವುದಾಗಿದ್ದು ಕುತೂಹಲಕರವಾಗಿರುವುದಾಗಿ ಅ. ಸುಂದರರು ಅಭಿಪ್ರಾಯ ಪಟ್ಟಿದ್ದಾರೆ.

. . . . ಅಮದಾನಗರದ ಬೈರಿನಿಜಾಮಶಾಹನುಂ ನಂಬುಗೆಯಾದೊಡೆ ಸಂಧಾನಮುಖದಿಂದೈತಂದು ಕಾಣ್ಬೆವೆಂದು ಹುಸಿಯ ವರ್ತಮಾನಮಂ ಪುಟ್ಟಿಸಿ ನಚ್ಚುಹಾಕಿ ರಾಯರಂ ಮೈಮರೆಸಿ ಸಮಯಸಾಧನೆಯಂ ರಚಿಸಿ ಬಳಿಕ್ಕಂ ವಿಜಾಪುರದ ಅಲ್ಲಿ ಅದುಲಶಾಹನ ಸಂಚಿನ ಮೇಲಾ ಪಾತುಶಾಹರೊಂದಾಗಿ ಮೋಸದ ಮೇಲೆ ಶಾಲಿವಾಹನ ಶಕ ವರ್ಷ 1487ನೆಯ ರಕ್ತಾಕ್ಷಿ ಸಂವತ್ಸರದ ಮಾಘ ಬಹುಳದಲ್ಲಿ ರಕ್ಕಸದಂಗಡಿಯೆಂಬ ಸ್ಥಳದಲ್ಲಿ ರಾಮರಾಯರಂ ಪಿಡಿದು ಶಿರಚ್ಛೇದನಂಗೈದು ಆಶಿರಮಂ ಕಾಶಿಗೆ ಕಳುಹಿ . . . .[23]

ಪೋರ್ಚುಗಲ್‌ನ ದೊರೆ ಎರಡನೇ ಫಿಲಿಪ್‌ನ ಪತ್ರವೊಂದು ವಿಜಯನಗರ-ಕೆಳದಿ ಕುರಿತು ಈ ರೀತಿ ಹೇಳಿದೆ.

"You say that the queen of Botincala has not paid the tribute due for many years and that she is now in a great distress on account of one Naique (Chikka) formerly a subject of king Narasinga of Vijayanagar but now risen to power and who gives clear proofs of his ambition to become the paramount lord over all those neighbouring kings."[24]

ಹಿರಿಯ ವೆಂಕಟಪ್ಪನಾಯಕ ಮತ್ತು ವಿಜಯನಗರ (1586-1629):

ಹಿರಿಯ ವೆಂಕಟಪ್ಪನಾಯಕ ಹಾಗೂ ವಿಜಯನಗರದ ಸಂಬಂಧವನ್ನು ಕುರಿತಂತೆ ಅಷ್ಟಾಗಿ ಪ್ರಸ್ತಾಪಗಳು ಉಪಲಬ್ಧವಿಲ್ಲದಿದ್ದರೂ ಕ್ರಿ.ಶ. 1623ರಲ್ಲಿ ಕೆಳದಿ ರಾಜಧಾನಿಗೆ ಪ್ರವಾಸಿಯಾಗಿ ಆಗಮಿಸಿದ್ದ ಇಟಲಿ ಪ್ರವಾಸಿ ಪಿಯತ್ರೋಡೆಲ್ಲವಲ್ಲೆಯು

"This Prince Venkatappa Naicka was sometimes vassal of one of the ministers of the great king of Vidia Nagar . . . . but after the down fall of the king . . . . Venkatappa Naicka remained absolute prince of the state of which he was governor which also being a good soldier, he hath much enlarged".[25]

ಕೆಳದಿ ಶಿವಪ್ಪನಾಯಕನಿಂದ ವಿಜಯನಗರ ಜೀರ್ಣೋದ್ಧಾರ (1645-1660)

ಕ್ರಿ.ಶ. 1649ರವರೆಗೆ ಪೆನುಗೊಂಡೆಯಲ್ಲಿ ವಿಜಯನಗರ ರಾಜ್ಯಭಾರ ಮಾಡಿದ ಶ್ರೀರಂಗರಾಯನ ಕಾಲದಲ್ಲಿ ಜಿಂಜಿ, ತಂಜಾವೂರು ಹಾಗೂ ವಿಜಾಪುರದವರಿಂದ ಕಿರುಕುಳ ಉಂಟಾಯಿತು. ಬಿಜಾಪುರ ಸೇನೆಯು ಬೆಂಗಳೂರು ತುಮಕೂರು ಹಾಗೂ ಇವುಗಳ ವಿಶಾಲ ಪ್ರದೇಶಗಳೂ ವಿಜಯನಗರದವರಿಗೆ ದಕ್ಕದಂತೆ ಸನ್ನಹ ನಡೆಸಿದವು. ಕ್ರಿ.ಶ. 1646-47ರಲ್ಲಿ ಬಿಜಾಪುರದ ಸೇನಾಧಿಪತಿ ಮುಸ್ತಫಾಖಾನನು ಶಿವಗಂಗೆಯಲ್ಲಿ ಶ್ರೀರಂಗರಾಯನನ್ನು ಎದುರಿಸಿ ಮಧುರೆ ಜಿಂಜಿ, ತಂಜಾವೂರು ಅರಸರು ಮುಸ್ತಫಾಖಾನನೊಂದಿಗೆ ಸೇರಿ ಪ್ರತಿಭಟಿಸಿದ್ದರಿಂದ ಶ್ರೀರಂಗರಾಯನಿಗೆ ದಿಕ್ಕೇ ತೋಚದಂತಾಯಿತು. ವಿಜಯನಗರಕ್ಕೆ ಸೇರಿದ್ದ ಕೃಷ್ಣಗಿರಿ, ವೀರಭದ್ರನದುರ್ಗ ಮತ್ತು ದೇವದುರ್ಗ ಶತ್ರುಗಳ ಪಾಲಾಗಿದ್ದರಿಂದ 1627ರ ಫೆಬ್ರವರಿಯಲ್ಲಿ ಶ್ರೀರಂಗನು ವೆಲ್ಲೂರಿಗೆ ಬಂದನು. ಇದೇ ಸಂದರ್ಭದಲ್ಲಿ ವೆಲ್ಲೂರಿಗೂ ಬೆನ್ನಟ್ಟಿದ್ದ ಗೋಲ್ಕೊಂಡದ ಮಿರ್‌ಜುಮ್ಲಾ ಮತ್ತು ವಿಜಾಪುರವನ್ನು ಎದುರಿಸಲು ವೆಲ್ಲೂರಿನ ಸ್ತ್ರೀಯರ ಆಭರಣ ಹಾಗೂ ತಿರುಪತಿಯ ಹಣವನ್ನು ಖರ್ಚುಮಾಡಬೇಕಾಯಿತು. 1667ರಲ್ಲಿ ಮುಸ್ತಫಾಖಾನನು ಶ್ರೀರಂಗನಿಗೆ ಸೇರಿದ್ದ ಅಂಬೂರು, ತಿರುಪತ್ತೂರು, ಕಾವೇರಿಪಟ್ಟಣ, ಹಾಸನ, ರಾಯದುರ್ಗ, ಕಂಕಗಿರಿ, ರತ್ನಗಿರಿ, ಮೇಳಗಿರಿ, ಅರ್ಜುನಕೋಟೆ, ಧೂಳೀಕೋಟೆಗಳನ್ನು ಕೈವಶ ಮಾಡಿಕೊಂಡನು. ಈ ಮಧ್ಯೆ ಹಬ್ಬ ಹರಿದಿನಗಳು ಸುಖಲೋಲುಪತೆಯಲ್ಲಿ ಕಳೆಯುತ್ತಿದ್ದ ಚಕ್ರವರ್ತಿಗೆ ರಾಜ್ಯವಿಲ್ಲದೆ ನಾಮಕಾವಾಸ್ತೆ ಚಕ್ರವರ್ತಿಯಂತಾಯಿತು.[26] ತನ್ನ ರಕ್ಷಣೆಗೈಯಲು ಮೈಸೂರಿಗೆ ಹೊರಟನು.

ಇಂತಹ ಪರಿಸ್ಥಿತಿಯ ಕ್ರಿ.ಶ. 1646-1667ರ ಮಧ್ಯೆ ವಿಜಯನಗರದ ಶ್ರೀರಂಗರಾಯನು ಕೆಳದಿ ಶಿವಪ್ಪನಾಯಕನ ಮೊರೆ ಹೊಕ್ಕನು. ವಿಜಯನಗರ ಖಿಲವಾದುದ್ದನ್ನು ಕಂಡು ಆ ಚಕ್ರವರ್ತಿಗಳ ಅಧಿಕಾರವನ್ನು ಧಿಕ್ಕರಿಸಿ ಶಿವಮೊಗ್ಗ ಮೊದಲಾದ ಸೀಮೆಗಳನ್ನು ಜಯಿಸಿಕೊಂಡಿದ್ದ ಈ ಶಿವಪ್ಪನಾಯಕನೇ ವಿಜಯನಗರ ಮಹಾ ಸಂಸ್ಥಾನವನ್ನು ಪುನಃ ಊರ್ಜಿತಮಾಡಲು ಉದ್ಯುಕ್ತನಾದನು. ಈ ದಿಸೆಯಲ್ಲಿ ತಮ್ಮ ವೆಂಕಟಪ್ಪನಾಯಕನನ್ನು ಆಡಳಿತದಲ್ಲಿರಿಸಿ ರಾಯನಿಗೆ ಸಕ್ಕರೆಪಟ್ಟಣದ ಆಡಳಿತ ನೀಡಿದನು. ವೇಲೂರಿಗೆ ಮುತ್ತಿಗೆ ಹಾಕಿ ಅದನ್ನು ಸ್ವಾಧೀನ ಪಡಿಸಿಕೊಂಡನು. ಅತ್ಯಾನಂದ ಭರಿತನಾದ ಶ್ರೀರಂಗರಾಯನು ಕೆಳದಿ ದೊರೆಗೆ ಭಾರಿಯಾದ ನೀಲದ ಮಣಿ, ಮುತ್ತಿನ ಮಣಿ ಮುಂತಾದ[27] ಅಪಾರ ವಜ್ರವೈಢೂರ್ಯಗಳನ್ನಿತ್ತು ಸನ್ಮಾನಿಸಿದನು. ಇವರಿಬ್ಬರ ಖ್ಯಾತಿ ಎಲ್ಲೆಡೆಗೆ ಹರಡಿತು. ಈ ಪ್ರಕರಣವು ಲಿಂಗಣ್ಣ ಕವಿಯ ಕೆಳದಿ ನೃಪವಿಜಯದಲ್ಲಿ ಹೀಗೆ ವರ್ಣಿಸಲ್ಪಟ್ಟಿದೆ:

ಇಂತು ನೆಗಳ್ತೆವೆತ್ತ ಭುಜಬಲಪ್ರತಾಪಾತಿಶಯದಿಂ ಸದ್ಧರ್ಮದಿಂ ರಾಜ್ಯವಾಳುತ್ತಿರ್ದಾ ಶಿವಪ್ಪನಾಯಕಂ ವಿಕಾರಿ ಸಂವತ್ಸರದಲ್ಲಿ ರಾಯಸಂಸ್ಥಾನವನ್ನುದ್ಧರಿಸಲ್ವೇಳ್ಕೆಂದು ಮನಂದಂದು ಸೋದೆ ಬಿಳಗೆ ತರಿಕೆರೆ ಹರಪುರ ಮುಂತಾದ ನಾಡ ದೊರೆಗಳ ಸೈನ್ಯ ಸ್ವಸೈನ್ಯಂಬೆರಸುತೆರಳ್ದು ಬೇಲೂರಂ ತೆಗೆದುಕೊಂಡು ಶ್ರೀರಂಗರಾಯರ್ಗಿತ್ತು ರಾಯಸಂಸ್ಥಾನಮಂ ನೆಲೆಗೊಳಿಸಿ ನಿಲಿಸಿ ತದ್ರಾಯರಿಂ

ಶಂಖಚಕ್ರ ಸ್ಥೂಲನೀರಪರಿಶೋಭಿತ ವಜ್ರಖಚಿತ ಕರ್ಣಾಭರಣಂ ಮುಂತಾದ ಬಿರುದುಗಳಂ ಪಡೆದು ರಾಮಬಾಣನೆಂಬಾನೆಯಂ ಕೊಡಲದಂ ಪರಿಗ್ರಹಿಸಿ ನಿಲಿಸಿ ಪಟ್ಟಣದ ಮುಖಕ್ಕೆ ದಂಡಂ ತೆರಳ್ದೆಗ್ರಾಮದ ಸಮೀಪವಂ ಸಾರ್ದು ಪಾಳಯವನಿಳಿದಿರಲಾ ಪ್ರಸ್ತಾವದೊಳ್.[28]

ಶ್ರೀರಂಗಪಟ್ಟಣದಲ್ಲಿ ವಿಜಯನಗರದ ಕಡೆಯದೊರೆ ತಿರುಮಲ ನಾಯಕನು ದುರ್ಬಲನಾಗಿದ್ದರಿಂದ ಮೈಸೂರಿನ ರಾಜ ಒಡೆಯರು ಅವನನ್ನು ನಿಗ್ರಹಿಸಿ ಶ್ರೀರಂಗಪಟ್ಟಣವನ್ನು ಸ್ವಾಧೀನ ಪಡಿಸಿಕೊಂಡನು. ಈತನ ಹೆಂಡತಿ ಅಲಮೇಲಮ್ಮನು ಕ್ರಿ.ಶ. 1610ರಲ್ಲಿ ಪ್ರಬಲರಾದವರ ಹಿಂಸೆಯನ್ನು ತಾಳಲಾರದೆ ಮಾಲಿಂಗಿ ಮಡುವಿಗೆ ಬಿದ್ದು ಪ್ರಾಣತ್ಯಾಗ ಮಾಡಿಕೊಂಡಳು. ಈ ವಿಷಯವು ಮೈಸೂರು ಇತಿಹಾಸದಲ್ಲಿ ವಿಶದವಾಗಿದೆ. ಇದೂ ದುರ್ದೈವದಿಂದ ವಿಜಯನಗರದವರ ಕೈತಪ್ಪಿ ಹೋಯಿತು.[29]

ಉಪಸಂಹಾರ:

ವಿವಿಧ ಹಂತಗಳಲ್ಲಿ ಪ್ರಸ್ತಾಪಿಸುವುದರೊಂದಿಗೆ ಹಾಸುಹೊಕ್ಕಾಗಿ ಬೆಳೆದ ಕೆಳದಿ-ವಿಜಯನಗರ ರಾಜಕೀಯ ಸಂಬಂಧವು ಅವರ ಉತ್ಕರ್ಷ ಕಾಲದಲ್ಲಿ ಆರಂಬಿಸಿ ಅದರ ಅವನತಿಯವರೆಗೂ ಕೃಷ್ಣದೇವರಾಯ, ರಾಮರಾಯನ ಕಾಲ ಮತ್ತು ಕ್ರಿ.ಶ. 16ನೇ ಶತಮಾನದಿಂದ ಪ್ರಾರಂಭಿಸಿ 17ನೇ ಶತಮಾನದ ಮೂರನೆಯ ಶ್ರೀರಂಗರಾಯನವರೆಗೆ ಹೊಂದಿದ್ದ ಸಂಬಂಧವು ಐತಿಹಾಸಿಕ ಹಿನ್ನೆಲೆಯಲ್ಲಿ ವಿವರವಾಗಿ ಚರ್ಚೆಗೆ ಒಳಪಟ್ಟಿಲ್ಲ. ಕೇವಲ ರಾಜಕೀಯ ಸಂಬಂಧವೇ ಪ್ರಮುಖವೆಂದಾದರೂ ಅಂದಿನ ಆಡಳಿತಾತ್ಮಕ ಹಾಗೂ ಸಾಂಸ್ಕೃತಿಕ ಇತಿಹಾಸದಲ್ಲಿಯೂ ಈ ಬಾಂಧವ್ಯವು ತೆರೆಮರೆಯಲ್ಲಿ ಬೆರೆತಿರುವುದನ್ನು ಗುರುತಿಸಬಹುದು. ಈ ವಿಷಯ ಕುರಿತು ದೀರ್ಘವಾಗಿ ಅಭ್ಯಾಸ ನಡೆಸಲು ಅವಕಾಶವಿದೆ. ಪ್ರೌಢ ಪ್ರಬಂಧ ರಚನೆಗೆ ಪೂರಕವೆನಿಸುವ ಅಂದಿನ ಆಕರಗಳನ್ನು ಆಧರಿಸಿ ವಿವರವಾಗಿ ಅಭ್ಯಾಸ ನಡೆದಲ್ಲಿ ಅದು ಮಧ್ಯ ಕಾಲೀನ ಭಾರತದ ಇತಿಹಾಸಕ್ಕೆ ಉತ್ತಮ ಕಾಣಿಕೆಯಾಗುವುದರಲ್ಲಿ ಅನುಮಾನವಿಲ್ಲ.

ಅಡಿ ಟಿಪ್ಪಣಿಗಳು

1. ಕೆಳದಿ ಗುಂಡಾಜೋಯಿಸ್, 1976, *ಕೆಳದಿ ನೃಪವಿಜಯ* (ಗದ್ಯಾನುವಾದ), ಕಸಾಪ, ಬೆಂಗಳೂರು, ಪು. 43.
2. ರಾಧಾ ಕೃಷ್ಣಮೂರ್ತಿ, *ಶಿವತತ್ವ ರತ್ನಾಕರ ಎ ಕ್ರಿಟಿಕಲ್ ಸ್ಟಡಿ*, ಕೆಳದಿ ವಸ್ತು ಸಂಗ್ರಹಾಲಯ, ಪು. 103-104.
3. ಎಂ.ಎಂ. ಕಲಬುರ್ಗಿ ಮತ್ತು ಬಿ.ಎಸ್ ರಾಮಭಟ್ಟ (ಸಂ.), 1994, *ಕೆಳದಿ ಸಂಸ್ಥಾನ ಸಮಗ್ರ ಅಧ್ಯಯನ*, ಆನಂದಪುರ, ಪು. 178.
4. ರಾಬರ್ಟ್ ಸಿವೆಲ್, 1992, *ಮರೆತುಹೋದ ಸಾಮ್ರಾಜ್ಯ*, ಕನ್ನಡ ವಿಶ್ವವಿದ್ಯಾಲಯ, ಹಂಪೆ, ಪು. 131.
5. *ಕರ್ನಾಟಕ ಪರಂಪರೆ*, 1992,, ಸಂ. 2, ಪು. 45.
6. ಕೆಳದಿ ಜೋಯಿಸರಿಗೆ ಸೇರಿದ ಈ ಶಾಸನ ಕೆಳದಿ ವಸ್ತು ಸಂಗ್ರಹಾಲಯದಲ್ಲಿದೆ. ಇದನ್ನು *ಆರಿಸೌಇಂಎ.*, 1928-29, ಸಂ. 487ನೇ ಶಾಸನಕ್ಕೆ ಸಮೀಕರಿಸಬಹುದು.
7. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, *ಸೋರ್ಸಸ್ ಆಫ್ ವಿಜಯನಗರ್ ಹಿಸ್ಟರಿ*, ಪು. 111-131. ತೆಲುಗು ಶಾಸನ, ಸಾಹಿತ್ಯಗಳಲ್ಲಿಯೂ ಮಾಹಿತಿ ದೊರೆಯುವುದಾಗಿ ಡಾ. ಶೇಷಾಶಾಸ್ತ್ರಿ, ಡಾ. ಗಣೇಶ್ ತಿಳಿಸುತ್ತಾರೆ.
8. *ಕೆಳದಿ ನೃಪ ವಿಜಯ*, ಪು. 56.
9. *ಅದೇ*, ಪು. 56.
10. *ಅದೇ*, ಪು. 59.
11. ಬೊಕ್ಕಸಿಂಗ ವಿಷಯ ಕುತೂಹಲಕರವಾದುದು.
12. *ಕೆಳದಿ ನೃಪ ವಿಜಯ*, ಭಾಗ 2, ಬರ್ನೆನ್ ಇದನ್ನು ಸಮರ್ಥಿಸಿದ್ದಾನೆ. *ಇಂಎಂ.*, 50, ಪು. 105.

13. ಕೆಳದಿ ಶಾಸನದಲ್ಲಿ ಅವಲೋಕಿಸಬಹುದು. *ಎಕ.*, 8, ನಗರ 77, *ಆರಿಸೌಇಂಎ.*, 1927-28, ಸಂ. 433.

14. *ಹೆರಾಸ್, ಅರವೀಡು ಡೈನಾಸ್ಟಿ*, ಪು. 79.

15. *ಕೆಳದಿ ನೃಪ ವಿಜಯ*, ಪು. 57.

16. ನಗಮ್ ಅಯ್ಯ, *ಟ್ರಾವಾಂಕೂರ್ ಸ್ಟೇಟ್ ಮ್ಯಾನ್ಯುಯಲ್*, ಪು. 297.

17. ಕೆಳದಿ ವಸ್ತು ಸಂಗ್ರಹಾಲಯದಲ್ಲಿ ಮಧುರೆ ಇತಿಹಾಸದ ಹಸ್ತಪ್ರತಿ ಇದೆ.

18. *ಕೆಳದಿ ನೃಪ ವಿಜಯ*, ಪು. 71.

19. ಇಮ್ಮಡಿ ಸದಾಶಿವನಾಯಕನನ್ನು ಕುರಿತು ಡಾ: ಬಿ.ಆರ್. ಗೋಪಾಲ್‌ರವರು ಸಾತೇನಹಳ್ಳಿಯ ನೂತನ ಶಾಸನವನ್ನು ಆಧರಿಸಿ ಹೊಸ ಅಂಶ ಕುರಿತು ವಾದ್ವಾಂಸರ ಗಮನ ಸೆಳೆದಿದ್ದಾರೆ. *ಕ್ವಾಜಮಿಸೊ.*, 55 (3-4).

20. ಕೆಳದಿಯ ಮೊದಲ ಕೆಲವು ಶಾಸನಗಳಲ್ಲಿ ಇದಕ್ಕೆ ಸಂಬಂಧಿಸಿದಂತೆ ವ್ಯತಿರಿಕ್ತ ಅಭಿಪ್ರಾಯವೂ ಕಂಡುಬರುತ್ತದೆ. ಸಾಲೆತೊರರವರ ಅಭಿಪ್ರಾಯ ಇದನ್ನು ಪ್ರತಿಪಾದಿಸುವುದಿದೆ.

21. *ಕೆಳದಿ ನೃಪ ವಿಜಯ*, ಪು. 75.

22. *ಅದೇ*, ಪು. 105-106, ಇದರಲ್ಲಿ ಕರಾರುವಾಕ್ಕಾಗಿ ಉಲ್ಲೇಖಿಸಿದ ಕಾಲಮಾನವೂ ಕುತೂಹಲವಾಗಿದ್ದು ಗಮನಾರ್ಹವಾಗಿದೆ.

23. *ಅದೇ.*, ಪು. 105-106.

24. Letters from King Philip II to Viceroy Carde De Vidigueira cited in *Archivo Portuguese Oriental*, III, pt. II, p. 916.

25. ಎಡ್ವರ್ಡ್ ಗ್ರೆ (ಸಂ.), *ಟ್ರಾವೆಲ್ಸ್ ಆಫ್ ಪಿಯತ್ರೊ ದೆಲ್ಲಾ ವಲ್ಲೆ*, ಸಂ. 1, ಪು. 191.

26. ಮೆಕ್ಲಿಯೊಡ್, *ದಿ ಈಸ್ಟ್ ಇಂಡಿಸ್ಟ್ ಕಂಪಾಗಿ*, 2, ಪು. 403.

27. ಕೆಳದಿ ರಾಣಿ ಚನ್ನಮ್ಮಾಜಿಯಲ್ಲಿದ್ದ ಇದು ಅವಳಿಂದ ಕೊಲ್ಲೂರು ಮೂಕಾಂಬಿಕೆಗೆ ಅರ್ಪಿತವಾಗಿದ್ದು ಈಗಲೂ ಅಲ್ಲಿದೆ.

28. *ಕೆಳದಿ ನೃಪ ವಿಜಯ*, ಪು. 167.

29. *ಶಿವತತ್ವ ರತ್ನಾಕರ ಎ ಕಲ್ಚರಲ್ ಸ್ಟಡಿ*, ಪು. 111-112, 115-116.

16. ಕರಾವಳಿ ಕರ್ನಾಟಕದ ತುಂಡರಸುಗಳು ಮತ್ತು ವಿಜಯನಗರದ ಚಕ್ರವರ್ತಿಗಳು - ಒಂದು ವಿಶ್ಲೇಷಣೆ

ಕೆ.ಜಿ. ವಸಂತಮಾಧವ

1. ಪ್ರಸ್ತಾವನೆ:

ಕರಾವಳಿ ಕರ್ನಾಟಕದ ತುಂಡರಸುಗಳು ಮತ್ತು ಅವರು ವಿಜಯನಗರ ಸಾಮ್ರಾಜ್ಯದೊಂದಿಗೆ ಹೊಂದಿಕೊಂಡ ರಾಜಕೀಯ ಸಂಬಂಧಗಳ ಕುರಿತಾಗಿ ವಿದ್ವಾಂಸರುಗಳು[1] ವರ್ಣಾತ್ಮಕವಾಗಿ ತಿಳಿಸಿದ್ದಾರೆ. ಆದರೆ ಇದರ ವಿಶ್ಲೇಷಣಾತ್ಮಕವಾದ ಚರ್ಚೆ ನಡೆದದ್ದು ಬಹಳ ಅಪರೂಪ. ಇದನ್ನು ತಿಳಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಇದಕ್ಕೆ ಮುಖ್ಯವಾದ ಆಧಾರಗಳು - ಶಾಸನಗಳ ವ್ಯಾಖ್ಯಾನ, ಸಮಕಾಲೀನ ಸಾಹಿತ್ಯ ಕೃತಿಗಳ ಅಧ್ಯಯನ ಮತ್ತು ಪೋರ್ಚ್‌ಗೀಸ್ ಬರಹಗಾರರಾದ ಬ್ಯಾರೋಸ್ (Barros), ಕೆಸ್ಟೆಂಡಾ (Castanheda), ಗ್ಯಾಸ್ಪರ್ ಕೊರೆಯಾ (Gasper Correa) ಮತ್ತು ಕುಟೊ (Couto)[2] ಹಾಗೂ ಪ್ರವಾಸಿಗರಾದ ಟೊಮಿ ಪೆರೀಸ್ (Tome Pires), ಬಾರ್ಬೋಜಾ (Barbosa), ನ್ಯೂನಿಜ್, ಮತ್ತು ಸೀಜರ್ ಫ್ರೆಡರಿಕ್‌ರ ವರದಿಗಳು.

2. ಕರಾವಳಿ ಕರ್ನಾಟಕದ ಅರಸು ಮನೆತನ ಸ್ವರೂಪ:

ಕರಾವಳಿ ಕರ್ನಾಟಕದಲ್ಲಿ ಹದಿನಾಲ್ಕನೇ ಶತಮಾನದ ಮಧ್ಯಾವಧಿಯ ಪೂರ್ವದಲ್ಲಿ ಹಲವಾರು ಅರಸುಗಳು ಆಳಿಕೊಂಡಿದ್ದರು. ಈ ಅರಸುಗಳು ಹೆಚ್ಚಿನ ಸಂಖ್ಯೆ ಈಗಿನ ಉತ್ತರ ಕನ್ನಡ ಜಿಲ್ಲೆಯಲ್ಲಿದ್ದರು,[3] ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಳಿಕೊಂಡಿದ್ದವರು ಮುಖ್ಯವಾಗಿ ಆಳುಪರು, ಘಟ್ಟದ ಅಂಚಿನಲ್ಲಿ ಶಾಂತರಸರು ಮತ್ತು ಸುರಾಲಿನ ತೊಳಹರು. ಕೊನೆಯ ಎರಡು ಅರಸುಮನೆತನದವರು ಆಳುಪರೊಂದಿಗೆ ನಿಕಟ ರಾಜಕೀಯ ಸಂಪರ್ಕವನ್ನು ಹೊಂದಿದ್ದರು. ಇವರೆಲ್ಲಾ ತುಂಡರಸರೇ. ಏಕೆಂದರೆ ಇವರನ್ನು ಕರ್ನಾಟಕದ ಚಕ್ರವರ್ತಿಗಳು ನೇಮಿಸಿರಲಿಲ್ಲ. ಈ ತುಂಡರಸುಗಳು ಪಟ್ಟಕ್ಕೆ ಬರುವುದು ವಂಶಪರಂಪರೆಯಾಗಿ. ಹೆಚ್ಚಾಗಿ ಇದು ನಡೆಯುವುದು ಅಳಿಯ ಮತ್ತು ಸ್ತ್ರೀ ಸಂತತಿಯಂತೆ. ಕ್ರಿ.ಶ. 1336ರ ಹಿಂದೆ ಈ ಕರಾವಳಿಯಲ್ಲಿ ಆಳಿಕೊಂಡಿದ್ದ ಅರಸುಮನೆತನಗಳು ಕರ್ನಾಟಕದ ಚಕ್ರವರ್ತಿಗಳ ಸಾರ್ವಭೌಮತೆಯನ್ನು ಒಪ್ಪಿಕೊಂಡದ್ದು ತಿಳಿದು ಬರುವುದು ಕರಾವಳಿಯ ಹೊರಗಿನ ಶಾಸನಗಳಿಂದ. ಇದರಿಂದ ಇಲ್ಲಿನ ಅರಸು ಮನೆತನಗಳು ತಮ್ಮ ಪ್ರತ್ಯೇಕತೆ ಮತ್ತು ಹೆಚ್ಚಿನ ರಾಜಕೀಯ ಅಧಿಕಾರಗಳನ್ನು ಹೊಂದಿದ್ದರೆಂದು ತಿಳಿಯಬಹುದು.

3. ವಿಜಯನಗರ ಚಕ್ರವರ್ತಿಗಳು ಮತ್ತು ಕರಾವಳಿಯ ತುಂಡರಸುಗಳು:

ಹದಿನಾಲ್ಕನೇ ಶತಮಾನದ ಮಧ್ಯಾವಧಿಯಲ್ಲಿ ಕರಾವಳಿ ಕರ್ನಾಟಕವು ವಿಜಯನಗರ ಸಾಮ್ರಾಜ್ಯದ ಉದಯವನ್ನು ಕಂಡಿತು. ಕೆಲವೇ ದಶಕಗಳಲ್ಲಿ ಈ ಸಾಮ್ರಾಜ್ಯವು ವಿಶಾಲವಾಗಿ ಹರಡಿ ಬೆಳೆಯಿತು. ಕ್ರಿ.ಶ. 1362ರ ನಂತರ ಈ ಸಾಮ್ರಾಜ್ಯ ಸಮಗ್ರ ಕರಾವಳಿ ಕರ್ನಾಟಕದಲ್ಲಿ ಪ್ರಸರಿಸಿತು. ಇದನ್ನು ಅಂಕೋಲೆಯ ಭಾವಿಕೇರಿ ಕೆಂದ ಮಾಸ್ತಿಯಲ್ಲಿ ಸಿಕ್ಕ ಶಾಸನ ಶಕ 1284 (ಕ್ರಿ.ಶ. 1362) ಮತ್ತು ಖಂಬದಕೋಣೆ (ದ.ಕ.)ಯಲ್ಲಿ ಸಿಕ್ಕ ತಾಮ್ರ ಶಾಸನ ಶಕ 1302 (ಕ್ರಿ.ಶ. 1380)[4] ಇವುಗಳು ಸಮರ್ಥಿಸುತ್ತವೆ. ಕ್ರಿ.ಶ. 1366ರಲ್ಲಿ ನಂತರ ವಿಜಯನಗರ ಸಾಮ್ರಾಜ್ಯ ಕಾಳಿನದಿಯ ಉತ್ತರಕ್ಕೆ ಹಬ್ಬಿ ಕರಾವಳಿಯಲ್ಲಿ ತನ್ನ ಸ್ಥಾನವನ್ನು ಭದ್ರಮಾಡಿಕೊಂಡಿತು. ಈ ಅವಧಿಯಲ್ಲಿ ಇಲ್ಲಿನ ತುಂಡರಸುಗಳು ತಮ್ಮ ಪ್ರತ್ಯೇಕತೆಯನ್ನು ಕಳೆದುಕೊಂಡು ಈ ಸಾಮ್ರಾಜ್ಯದ ಪ್ರಭಾವಕ್ಕೆ ಒಳಗಾದರು. ಒಟ್ಟಿನಲ್ಲಿ ಇಲ್ಲಿನ ತುಂಡರಸುಗಳು ವಿಜಯನಗರದ ಘನತೆಯನ್ನು ಗೌರವಿಸಿ, ಈ ಸಾಮ್ರಾಜ್ಯದ ಏರುಪೇರುಗಳಲ್ಲಿ ಸಹಭಾಗಿಗಳಾಗಿದ್ದರೆಂಬ ಸಂಗತಿಯನ್ನು ಐತಿಹಾಸಿಕ ದಾಖಲೆಗಳು ತಿಳಿಸಿವೆ.[5] ಈ ಅವಧಿಯಲ್ಲಿ ವಿಜಯನಗರ ಅರಸರುಗಳು ಕರಾವಳಿಯ ತುಂಡರಸರ ಅವಿಧೇಯತೆ ಮತ್ತು ಮನಸ್ತಾಪಗಳನ್ನು[6] ಸಮರ್ಥವಾಗಿ ಎದುರಿಸಿದರು. ತಾವು ನೇಮಿಸಿದ ರಾಜ್ಯಪಾಲಕರ ಮುಖಾಂತರ ವಿಜಯನಗರ ಅರಸರುಗಳು ಈ ತುಂಡರಸುಗಳನ್ನು ತಮ್ಮ ಅಂಕಿತದಲ್ಲಿಟ್ಟುಕೊಂಡು ಸಾಮ್ರಾಜ್ಯದ ಅಖಂಡತೆಯನ್ನು ಕಾಪಾಡಿಕೊಂಡು ಬಂದರು.

ಕ್ರಿ.ಶ. 1472ರಲ್ಲಿ ಗೋವೆ ವಿಜಯನಗರ ಅರಸರ ಹಿಡಿತದಿಂದ ತಪ್ಪಿಹೋಯಿತು. ಬಹಮನಿ ಸುಲ್ತಾನರ ಆಳ್ವಿಕೆಗೆ ಈ ಪ್ರದೇಶವು ಒಳಗಾಯಿತು. ಈ ಘಟನೆಯ ನಂತರ ಕರಾವಳಿಯ ಕಾಳಿಯ ನದಿಯ ಉತ್ತರಕ್ಕೆ ಇರುವ ಪ್ರದೇಶದಲ್ಲಿ ವಿಜಯನಗರದ ಆಳ್ವಿಕೆ ನಶಿಸಿ ಹೋಯಿತು.[7] ಕ್ರಿ.ಶ. 1529ರ ನಂತರ ಗಂಗಾವಳಿಯ ಉತ್ತರ ಭಾಗದಲ್ಲೂ ಈ ಸಾಮ್ರಾಜ್ಯದ ವರ್ಚಸ್ಸು ಇಲ್ಲವಾಯಿತು. ಈ ಪ್ರದೇಶವನ್ನು ತಿರುಗಿ ವಶಪಡಿಸುವ ಯತ್ನದಲ್ಲಿ ವಿಜಯನಗರ ಅರಸರುಗಳು ಯಶಸ್ಸು ಪಡೆಯದೇ ಹೋದರು. ಇಲ್ಲಿ ಆಳಿಕೊಂಡಿದ್ದ ನಾಯಕರು ಆದಿಲ್‌ಶಾಹಿಗಳೊಂದಿಗೆ ಹೊಂದಿಕೊಂಡರು.[8]

ಕ್ರಿ.ಶ. 1498ರಲ್ಲಿ ವ್ಯಾಪಾರಕ್ಕೆಂದು ಬಂದ ಪೋರ್ಚುಗೀಸರು ವಿಜಯನಗರ ಚಕ್ರವರ್ತಿಗಳ ಮಿತ್ರರೆಂದು ಹೇಳಿಕೊಂಡಿದ್ದರೂ ಈ ಸಾಮ್ರಾಜ್ಯದ ಶಕ್ತಿಯನ್ನು ಊರ್ಜಿತಗೊಳಿಸಲು ಸಹಕಾರ ನೀಡಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಪೋರ್ಚುಗೀಸರು ಲೂಟಿಯುಕ್ತ ವ್ಯಾಪಾರ ನಡೆಸಿ ಕರಾವಳಿಯ ತುಂಡರಸರೊಂದಿಗೆ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಂಡರು. ಈ ಒಪ್ಪಂದಗಳು ವಿಜಯನಗರ ಸಾರ್ವಭೌಮತೆಯನ್ನು ಅಲಕ್ಷಿಸಿದಂತೆ ಇವೆ.[9] ಇದರಿಂದಾಗಿ ಕರಾವಳಿಯ ತುಂಡರಸರಿಗೆ ತಮ್ಮ ರಾಜಾಧಿರಾಜ ವಿಜಯನಗರ ಚಕ್ರವರ್ತಿಗಳ ಶಕ್ತಿಯ ಮೇಲೆ ವಿಶ್ವಾಸ ಕುಂದಿತು. ಕೃಷ್ಣದೇವರಾಯನ ಆಳ್ವಿಕೆಯ ಅವಧಿಯಲ್ಲಿ (ಕ್ರಿ.ಶ. 1509-1529) ಕರಾವಳಿಯಲ್ಲಿರುವ ತುಂಡರಸರು ವಿಜಯನಗರದ ಸಾರ್ವಭೌಮತೆಯನ್ನು ಒಪ್ಪಿಕೊಳ್ಳಬೇಕಾಗಿ ಬಂತು.[10] ಆದರೆ ಕೃಷ್ಣದೇವರಾಯನ ಆಳ್ವಿಕೆಯ ನಂತರ ವಿಜಯನಗರ ಚಕ್ರವರ್ತಿಗಳ ಹಿಡಿತ ಕರಾವಳಿ ತುಂಡರಸರ ಮೇಲೆ ಸಡಿಲವಾಯಿತು. ಕರಾವಳಿಯಲ್ಲಿ ಕಳೆದುಕೊಂಡಿದ್ದ ಪ್ರದೇಶವನ್ನು ವಿಜಯನಗರ ಚಕ್ರವರ್ತಿಗಳು ಹಿಂದೆ ಪಡೆಯಲಾಗಲಿಲ್ಲ. ಇಲ್ಲಿನ ಹೆಚ್ಚಿನ ತುಂಡರಸುಗಳು ವಿಜಯನಗರದ ಅಸ್ತಿತ್ವವನ್ನು ಅಲಕ್ಷಿಸಿ ಅಥವಾ ಉಪೇಕ್ಷಿಸಿ ಆಳಿಕೊಂಡಿದ್ದರು. ಕೆಲವು ತುಂಡರಸುಗಳು ಮುಖ್ಯವಾಗಿ ಗೇರಸೊಪ್ಪೆ ಮತ್ತು ಹಾಡುವಳ್ಳಿಯ ಸಾಳ್ವರು, ಕದರಿ ಬಗವಾಡಿ ಗಂಗೊಳ್ಳಿ ಮತ್ತು ಬಸ್ರೂರು ಸಮೀಪದ ಪ್ರದೇಶ (ಕುಂದಾಪುರ ತಾಲ್ಲೂಕು)ಗಳನ್ನು ಆಳಿಕೊಂಡಿದ್ದ ಹೊನ್ನೆಯಕಂಬಳಿಯರಸರು ತಮ್ಮ ಶಾಸನಗಳಲ್ಲಿ ವಿಜಯನಗರದ ಚಕ್ರವರ್ತಿಗಳ ಹೆಸರುಗಳನ್ನು ನಮೂದಿಸಿದ್ದರೂ,[11] ಇವುಗಳು ಈ ಸಾಮ್ರಾಜ್ಯದ ಘನತೆಯನ್ನು ಏರಿಸಲು ಸಹಾಯಕವಾಗಿಲ್ಲ. ಒಟ್ಟಿನಲ್ಲಿ ವಿಜಯನಗರ ಸಾಮ್ರಾಜ್ಯ ಮತ್ತು ಸ್ಥಳೀಯ ತುಂಡರಸುಗಳ ರಾಜಕೀಯ ಸಂಬಂಧ ಒಂದು ರೀತಿಯ ಅತಂತ್ರ ಸ್ಥಿತಿಯಲ್ಲಿದ್ದಿತ್ತು. ಇಂತಹ ಸ್ಥಿತಿಯಲ್ಲಿ ವಿಜಯನಗರದ ಅಧಿಕಾರಿಗಳು ಚಕ್ರವರ್ತಿ ಸದಾಶಿವರಾಯನ ಹೆಸರಿನಲ್ಲಿ ಒಂದು ರಾಜಕೀಯ ಯುಕ್ತಿಯನ್ನು ಮಾಡಿದರು. ಇದೇ ಮಂಗಳೂರು, ಬಾರಕೂರು ತುಳುರಾಜ್ಯವನ್ನು ಕೆಳದಿ ಸದಾಶಿವನಾಯಕನಿಗೆ ಅಮರ ಮಾಗಣಿಯಾಗಿ ಬಿಟ್ಟುಕೊಟ್ಟದ್ದು. ಕೆಳದಿ ಸದಾಶಿವನು ಇದನ್ನು ಪಡೆದು ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡನು.[12] ಈ ಘಟನೆ ಕ್ರಿ.ಶ. 1551ರ ನಂತರ ಆಗಿರಬೇಕು. ಇದರ ನಂತರ ಸ್ಥಳೀಯ ತುಂಡರಸರುಗಳು ಮತ್ತು ವಿಜಯನಗರ ಸಾಮ್ರಾಜ್ಯದ ರಾಜಕೀಯ ಸಂಬಂಧವು ಇನ್ನೊಂದು ಮುಖವನ್ನು ಕಂಡಿತು.

ಉಪಸಂಹಾರ:

1. ವಿಜಯನಗರ ಆಳ್ವಿಕೆ ಕಾಲದಲ್ಲಿ (ಸುಮಾರು 250 ವರ್ಷಗಳಿಗೂ ಹೆಚ್ಚು ಕಾಲ) ಕರಾವಳಿಯ ಕರ್ನಾಟಕದಲ್ಲಿ ಹೆಚ್ಚು ಸಂಖ್ಯೆಯ ತುಂಡರಸರು ಕಾಣಿಸಿಕೊಂಡು ಸ್ಥಳೀಯ ರಾಜಕೀಯ ವ್ಯವಹಾರಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ತಮ್ಮ ಮೇಲಧಿಕಾರವನ್ನು ವಿಜಯನಗರ ಚಕ್ರವರ್ತಿಗಳಿಗೆ ಒಪ್ಪಿಸಿದ್ದರು. ಆದರೂ, ಕೆಲವು ಸಂದರ್ಭಗಳಲ್ಲಿ ಮುಖ್ಯವಾಗಿ ಬಲಹೀನ ಅರಸುಗಳ ಆಳ್ವಿಕೆಯ ಕಾಲದಲ್ಲಿ ಕಳೆದು ಹೋಗಿದ್ದ ತಮ್ಮ ಸ್ವಾತಂತ್ರ್ಯವನ್ನು ಪುನಃ ಪಡೆಯಲು ಇವರು ಪ್ರಯತ್ನಿಸಿದರು.[13] ಈ ಪ್ರಯತ್ನಗಳನ್ನು ಸಾಮ್ರಾಜ್ಯದ ಹಿತಕಾರಿಗಳು ಬಲಾತ್ಕಾರ ಪ್ರಯೋಗದಿಂದ ಭಂಗಗೊಳಿಸಿ ಈ ಪ್ರದೇಶವು ಸಾಮ್ರಾಜ್ಯದಿಂದ ಹೊರ ಹೋಗದಂತೆ ನೋಡಿಕೊಂಡರು. ಶಾಸನಗಳನ್ನಾಧರಿಸಿ ಅಧ್ಯಯನಮಾಡಿದಾಗ ಈ ತುಂಡರಸರುಗಳು ಸಾಮ್ರಾಜ್ಯಕ್ಕೆ ತೋರಿಸುತ್ತಿದ್ದ ನಿಷ್ಠೆ ಗೌರವಗಳಲ್ಲಿ ವ್ಯತ್ಯಾಸ ಮತ್ತು ತದ್ವಿರುದ್ಧತೆ ತೋರಿ ಬರುತ್ತದೆ. ಉತ್ತರ ಕನ್ನಡ ಜಿಲ್ಲೆ ಕರಾವಳಿಯಲ್ಲಿ ಆಳಿಕೊಂಡಿದ್ದ ತುಂಡರಸರುಗಳಾದ ಚಂದಾವರ ಕದಂಬರು, ಅನಾಮಧೇಯ ಚೌಟರು,[14] ಗೇರಸೊಪ್ಪೆ ಮತ್ತು ಸಂಗೀತಪುರದ ಸಾಳ್ವರು ಸಾಮ್ರಾಜ್ಯ ವಿಸ್ತಾರವನ್ನು ಮೊದಲಿನ ಹಂತದಲ್ಲಿ ಪ್ರತಿಭಟಿಸಿದರು. ಈ ಸಾಮ್ರಾಜ್ಯವು ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಥಮವಾಗಿ ಎದುರಿಸಿದ್ದು ಕ್ರಿ.ಶ. 1347ರಲ್ಲಿ. ಇದರ ನೇತೃತ್ವವನ್ನು ಚಂದಾವರ ಕದಂಬರು ವಹಿಸಿದ್ದರೆಂದೂ, ಆದರೆ ಇದನ್ನು ವಿಜಯನಗರ ಅರಸರ ಸಹೋದರ ಮಾರಪ್ಪನು ಭಗ್ನಗೊಳಿಸಿದನೆಂದೂ ಶಿಕಾರಿಪುರದ ಶಾಸನದಿಂದ ತಿಳಿದುಬರುತ್ತದೆ.[15] ನಂತರ ಕ್ರಿ.ಶ. 1398ರಲ್ಲಿ ಇನ್ನೊಂದು ಇಂತಹ ಪ್ರಯತ್ನ ಚೌಟರಿಂದ ನಡೆದು, ಅದೂ ಅಯಶಸ್ವಿಯಾಯಿತು. ಇದೇ ರೀತಿ ಗೇರಸೊಪ್ಪೆಯ ಸಾಳ್ವರ ಪ್ರಯತ್ನವೂ ವಿಫಲವಾಯಿತು. ಕೆಲವು ಸಂದರ್ಭಗಳಲ್ಲಿ ಗೇರಸೊಪ್ಪೆ ಸಾಳ್ವರು ವಿಜಯನಗರ ಸಾಮ್ರಾಜ್ಯದ ಹಿತಾಸಕ್ತಿಗೆ ವಿರುದ್ಧವಾಗಿ ವರ್ತಿಸಿದ ಘಟನೆಗಳು ಇವೆ. ಉದಾ: ಕ್ರಿ.ಶ. 1427ರಲ್ಲಿ ವಿಜಯನಗರ

ಸಾಮ್ರಾಜ್ಯದ ಹಿತಾಸಕ್ತಿಗೆ ವಿರುದ್ಧವಾಗಿದ್ದ ಕಾಸರಗೋಡಿನ ಹಂಜಮಾನರಿಗೆ, ನಗರಿಯ (ಗೇರಸೊಪ್ಪೆ) ಸಂಗೀರಾಯ ಒಡೆಯನು ಸಹಕರಿಸಿದನು.[16] ಸಾಮ್ರಾಜ್ಯ ವಿಸ್ತಾರದ ಮೊದಲ ಹಂತದಲ್ಲಿ ವಿಜಯನಗರ ಅರಸರು ಸ್ಥಳೀಯ ತುಂಡರಸರನ್ನು ಬಗ್ಗುಬಡೆಯುವುದಕ್ಕೋಸ್ಕರ ಮುಸ್ಲಿಂರ ಸಹಕಾರವನ್ನು ಪಡೆದಿದ್ದರೆಂಬ ಸಂಗತಿ ಆ ಕಾಲದಲ್ಲಿ ಬಂದ ವಿದೇಶಿ ಪ್ರವಾಸಿಗರ ಬರಹಗಳಿಂದ ತಿಳಿದುಬರುತ್ತದೆ. ಉದಾ: ಇಬ್ಬನಬಟೂಟಾ (ಟಾಂಜನಿಯ, ಉತ್ತರ ಆಫ್ರಿಕಾ)ನ ಹೇಳಿಕೆಯಂತೆ ಕ್ರಿ.ಶ. 1341ರ ಕಾಲದಲ್ಲಿ ಹೊನ್ನಾವರದಲ್ಲಿ ಜಲಾಲದ್ದೀನ (Jalala Din)ನೆಂಬ ತುರುಕನು ಹರಿಯಬ (-ವಿಜಯನಗರದ ಹರಿಹರರಾಯ)ನ ಸಾರ್ವಭೌಮತೆಯನ್ನು ಒಪ್ಪಿಕೊಂಡು ಮಲಬಾರಿಗಳಿಂದ ನಿರ್ದಿಷ್ಟ ಪ್ರಮಾಣದಲ್ಲಿ ಕಪ್ಪವನ್ನು ಪಡೆದು ಈ ಪ್ರದೇಶವನ್ನು ನೋಡಿಕೊಂಡಿದ್ದನು. ಇವನ ಪ್ರಭಲ ಸಮುದ್ರಶಕ್ತಿಯಿಂದಾಗಿ ಮಲಬಾರಿಗಳು ಹೆದರಿಕೊಂಡಿದ್ದರು. ಇವರ ಹತ್ತಿರ 6000 ಅಶ್ವ ಮತ್ತು ಕಾಲಾಳು ಸೈನ್ಯವಿದ್ದಿತ್ತು.[17] ಕ್ರಿ.ಶ. 1480ರವರೆಗೆ ಉ.ಕ. ದಲ್ಲಿದ್ದ ತುಂಡರಸರು ವಿಜಯನಗರ ಸಾಮ್ರಾಜ್ಯದ ಶಕ್ತಿಯನ್ನು ಅಯಶಸ್ವಿಯಾಗಿ ಪ್ರತಿಭಟಿಸುತ್ತಿದ್ದರು. ಆದರೆ ದ.ಕ. ಕರಾವಳಿಯಲ್ಲಿದ್ದ ತುಂಡರಸರ ಪ್ರತಿಕ್ರಿಯೆ ವ್ಯತಿರಿಕ್ತವಾಗಿತ್ತು. ಇಲ್ಲಿನ ರಾಜಕೀಯ ಪರಿಸ್ಥಿತಿ ಒಂದು ರೀತಿಯ ವಿಲಕ್ಷಣವಾಗಿತ್ತು. ಅದೇನೆಂದರೆ ಕ್ರಿ.ಶ. 1345-1348ರವರೆಗೆ ಇಲ್ಲಿ ಪರಸ್ಪರ ಸಂಬಂಧಗಳಿಲ್ಲದ ಮೂರು ಅರಸು ಮನೆತನಗಳ ಅಧಿಪತ್ಯಕ್ಕೊಳಗಾಗಿತ್ತು.[18] ಇಂತಹ ಪರಿಸ್ಥಿತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ತುಂಡರಸುಗಳು (ಕಳಸ, ಕಾರ್ಕಳ, ಭೈರರಸರನ್ನು ಹೊರತುಪಡಿಸಿ) ಕ್ರಿ.ಶ. 1468ರವರೆಗೆ ಹೋರಾಟವಿಲ್ಲದೆ, ವಿಜಯನಗರ ಸಾಮ್ರಾಜ್ಯದಲ್ಲಿ ಸೇರಿಕೊಂಡದ್ದಲ್ಲದೆ, ಆ ಸಾಮ್ರಾಜ್ಯದ ಆಗು ಹೋಗುಗಳಲ್ಲಿ ಸಹಭಾಗಿಗಳಾಗಿದ್ದರು. ಇಷ್ಟಲ್ಲದೆ ಕೆಲವು ತುಂಡರಸುಗಳು (ಬಂಗ, ಅಬಿಲ, ಚೌಟ) ವಿಜಯನಗರ ರಾಜ್ಯಪಾಲರ ವಡ್ಡೋಲಗದಲ್ಲಿ ಭಾಗವಹಿಸುತ್ತಿದ್ದರೆಂಬ ಸಂಗತಿ ಶಾಸನಗಳ ಅಧ್ಯಯನದಿಂದ ತಿಳಿದುಬರುತ್ತದೆ. ಕೆಲವು ಸಂದರ್ಭಗಳಲ್ಲಿ ಇಲ್ಲಿನ ಕೆಲವು ತುಂಡರಸುಗಳು ತಮ್ಮ ಶಾಸನಗಳಲ್ಲಿ ವಿಜಯನಗರದ ಚಕ್ರವರ್ತಿಗಳ ಹೆಸರುಗಳನ್ನು ಉಲ್ಲೇಖಿಸುತ್ತಿದ್ದರು.[19] ಕ್ರಿ.ಶ. 1469ರಲ್ಲಿ ಪ್ರಥಮವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಳಿಕೊಂಡಿದ್ದ ತುಂಡರಸುಗಳಲ್ಲಿ ಒಬ್ಬರಾದ ಬಂಗರಸರಿಗೂ ಮತ್ತು ವಿಜಯನಗರದ ಮಂಗಳೂರು ರಾಜ್ಯಪಾಲಕನಿಗೆ ವೈಮನಸ್ಸು ಬಂದುದು ಉಜ್ರೆಯ ಶಾಸನದಿಂದ ತಿಳಿದು ಬರುತ್ತದೆ.[20] ಕೊನೆಗೆ ಇದು ಸಂವಾದದಿಂದ ಪರಿಹಾರವಾಯಿತು.

ಇನ್ನೊಂದು ಕುತೂಹಲಕಾರಿ ಸಂಗತಿಯೇನೆಂದರೆ, ಹದಿನೈದನೇ ಶತಮಾನದ ಉತ್ತರಾರ್ಧ ಕಾಲದಲ್ಲಿ ಸಿಕ್ಕಿದ ಶಾಸನಗಳು ದಕ್ಷಿಣ ಕನ್ನಡ ಜಿಲ್ಲೆಯ ತುಂಡರಸರು ವಿಜಯನಗರವನ್ನು ಉಪೇಕ್ಷಿಸಿ ಆಳ್ವಿಕೆ ನಡೆಸಿದ್ದನ್ನು ತಿಳಿಸುತ್ತವೆ. ಈ ಕೃತ್ಯದಲ್ಲಿ ಮಂಗಳೂರು ರಾಜ್ಯದಲ್ಲಿರುವ ತುಂಡರಸುಗಳಾದ ಬಂಗ, ಕಳಸ ಕಾರ್ಕಳ, ಚೌಟ, ಸಾವಂತರು ಮೈಲುಗೈಯಾಗಿದ್ದರು. ಈ ತುಂಡರಸುಗಳು ಇಳಿಮುಖವಾಗಿದ್ದ ಸಾಮ್ರಾಜ್ಯದ ಅಧಿಕಾರವನ್ನು ಧಿಕ್ಕರಿಸುವಷ್ಟು ಪ್ರಬಲರಾಗಿದ್ದರು. ಆದರೆ ಬಾರಕೂರು ರಾಜ್ಯದಲ್ಲಿರುವ ತೋಳಹಾರ, ಹೊನ್ನೆಕಂಬಳಿ ತುಂಡರಸುಗಳು ಕೇವಲ ಮೂರು ವರ್ಷಗಳಷ್ಟೇ ಕಾಲ ಸಾಮ್ರಾಜ್ಯದಿಂದ ಬೇರಾಗಿದ್ದರು. ಇನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿದ್ದ ಗೇರಸೊಪ್ಪೆ ಮತ್ತು ಸಂಗೀತಪುರಗಳನ್ನು ಆಳಿಕೊಂಡಿದ್ದ ಸಾಳ್ವರು ವಿಜಯನಗರ ಆಳ್ವಿಕೆಯಿಂದ ಹೊರಗೆ ಇದ್ದರು. ಇದನ್ನು ಕಾಯ್ಕಿಣಿ ಶಾಸನಗಳು ಸಮರ್ಥಿಸುತ್ತವೆ. ಈ ಶಾಸನಗಳಂತೆ ಗೇರಸೊಪ್ಪೆ ದೇವರಸ ಒಡೆಯನು ಕ್ರಿ.ಶ. 1494ರಲ್ಲಿ ಚಕ್ರವರ್ತಿಗಳಿಗನುಗುಣವಾದ ಬಿರುದುಗಳನ್ನು ಸ್ವೀಕರಿಸಿದ್ದನು.[21] ಆದರೆ ಕ್ರಿ.ಶ. 1522ರಲ್ಲಿ ಬಾರಕೂರು, ಮಂಗಳೂರು, ಹೊನ್ನಾವರಗಳಲ್ಲಿದ್ದ ತುಂಡರಸರುಗಳು ವಿಜಯನಗರದ ಮೇಲಾಧಿಕಾರವನ್ನು ಒಪ್ಪಿಕೊಳ್ಳಬೇಕಾಗಿ ಬಂತು. ಇದು ಕ್ರಿ.ಶ. 1527ರವರೆಗೆ ಮುನ್ನಡೆಯಿತು.[22] ಕ್ರಿ.ಶ. 1529ರ ನಂತರ ವಿಜಯನಗರದ ಚಕ್ರವರ್ತಿಗಳಿಗೆ ಕರಾವಳಿಯ ತುಂಡರಸುಗಳ ಮೇಲಿದ್ದ ಹಿಡಿತ ಸಡಿಲವಾಯಿತು.

2. ಈ ಅಧ್ಯಯನವು ಸೂಚಿಸುವ ಇನ್ನೊಂದು ಗಮನಾರ್ಹ ಸಂಗತಿಯೇನೆಂದರೆ, ಮೇಲಧಿಕಾರಿಗಳೊಂದಿಗೆ ಘರ್ಷಣೆ ಹೊಂದಾಣಿಕೆಯ ಅವಧಿಗಳಲ್ಲೂ ಕರಾವಳಿಯ ತುಂಡರಸರು ತಮ್ಮ ತಮ್ಮ ಸೀಮೆಗಳಲ್ಲಿ ತಮ್ಮದೇ ಆದ ರಾಜಕೀಯ ಚಟುವಟಿಕೆಗಳನ್ನು ಕಾಪಾಡಿಕೊಂಡು ಬಂದಿದ್ದರು. ಸಾಮ್ರಾಜ್ಯಕ್ಕೆ ತೋರಿಸುತ್ತಿದ್ದ ರಾಜಭಕ್ತಿ ಶಾಸ್ತ್ರೋಕ್ತ ಮತ್ತು ಅಲಂಕಾರಿಕವಾಗಿತ್ತು (Ritualistic and Ornamental).[23] ಇದರಲ್ಲೇ ವಿಜಯನಗರ ಚಕ್ರವರ್ತಿಗಳು ತೃಪ್ತಿಹೊಂದಿದ್ದರೆಂಬ ಸಂಗತಿಗಳು ವಿದೇಶಿ ಆಕರಗಳಿಂದ ತಿಳಿದುಬರುತ್ತದೆ.[24] ನಿರ್ದಿಷ್ಟ ಪ್ರಮಾಣದ ಕಪ್ಪವನ್ನು ವಿಜಯನಗರ ಚಕ್ರವರ್ತಿಗಳಿಗೆ ಈ ತುಂಡರಸರು ವಾರ್ಷಿಕವಾಗಿ ಕೊಡುತ್ತಿದ್ದುದನ್ನು ಮೇಲೆ ತಿಳಿಸಿದ ಐತಿಹಾಸಿಕ ದಾಖಲೆಗಳಿಂದ ಗೊತ್ತಾಗುತ್ತದೆ.

3. ಮುಸ್ಲಿಂ ರಾಜಕೀಯ ಶಕ್ತಿ (ಬಹಮನಿ ಮತ್ತು ಆದಿಲ್ ಶಾಹಿ) ಮತ್ತು ಪೋರ್ಚುಗೀಸ್ ಲೂಟಿಯುಕ್ತ ವ್ಯಾಪಾರ ನೀತಿ ಕರಾವಳಿಯಲ್ಲಿದ್ದ ತುಂಡರಸರಿಗೆ ತಮ್ಮ ಸಾರ್ವಭೌಮರಾದ ವಿಜಯನಗರ ಚಕ್ರವರ್ತಿಗಳ ಮೇಲೆ ವಿಶ್ವಾಸ ದುರ್ಬಲಗೊಳಿಸಲು ಒಂದು ಮುಖ್ಯ ಹೇತುವಾಗಿ ಪರಿಣಮಿಸಿತು. ಇದರಿಂದಾಗಿ ವಿಜಯನಗರದ ಆದಿಪತ್ಯ ಇಲ್ಲಿ ಒಂದು ಸಂದಿಗ್ಧ ಪರಿಸ್ಥಿತಿಗೆ ಸಿಕ್ಕಿಹಾಕಿಕೊಂಡಿತು.

ಇದರಿಂದ ನುಣಚಿಕೊಳ್ಳಲು ವಿಜಯನಗರ ಅಧಿಕಾರಿಗಳು ಚಕ್ರವರ್ತಿಯ ಅನುಮತಿ ಪಡೆದು ಕೆಳದಿ ನಾಯಕರ ಪ್ರಭುತ್ವ ಕರಾವಳಿಯಲ್ಲಿ ಸ್ಥಾಪಿಸಲು ಕಾರಣರಾದರು.

4. ಕ್ರಿ.ಶ. 1345ರಿಂದ 1565ರವರೆಗೆ ವಿಜಯನಗರ ಮತ್ತು ಕರಾವಳಿಯ ತುಂಡರಸುಗಳ ಸಾರ್ವಭೌಮತೆ ಶಾಸ್ತ್ರೋಕ್ತ ಮತ್ತು ಅಲಂಕೃತವಾಗಿದ್ದರೆ, 1565ರಿಂದ 1610ರವರೆಗೆ ಇದು ಶಾಬ್ದಿಕವಾಗಿತ್ತು.

ಅಡಿ ಟಿಪ್ಪಣಿಗಳು

1. ಬಿ.ಎ. ಸಾಲೆತೂರ್, "ಡಿಡ್ ತುಳುವ ರಿವೊಲ್ಟ್ ಆಫ್ಟರ್ ದಿ ಬ್ಯಾಟಲ್ ಆಫ್ ರಕ್ಕಸ-ತಂಗಡಿ". ಇದೇ ವಿದ್ವಾಂಸರ ಮತ್ತೊಂದು ಲೇಖನ "ವಿಜಯನಗರ ಆಂಡ್ ತುಳುವಾಸ್", *ಮದ್ರಾಸ್ ಗೆಜೆಟಿಯರ್-ಎ ಸಪ್ಲೆಮೆಂಟ್ ಟು ದಿ ಟೂ ಡಿಸ್ಟ್ರಿಕ್ಟ್ ಮಾನುವಲ್ಸ್ ಫಾರ್ ಸೌತ್ ಕೆನರ ಡಿಸ್ಟ್ರಿಕ್ಟ್*, ಜೆ.ಎಫ್.ಹಾಲ್, (ಸಂ.), ಮದ್ರಾಸ್ 1938, ಪು. 176-178. ಸೂರ್ಯನಾಥ್ ಕಾಮತ್, *ತುಳುವಾಸ್ ಇನ್ ವಿಜಯನಗರ ಟೈಮ್ಸ್* (ಅಪ್ರಕಟಿತ ಪಿಎಚ್.ಡಿ ಪ್ರಬಂಧ, ಬೊಂಬಾಯಿ ವಿಶ್ವವಿದ್ಯಾಲಯ 1965). ಇವರ ಇನ್ನೊಂದು ಸಂಪಾದಿತ ಕೃತಿ, *ಉತ್ತರ ಕನ್ನಡ ಡಿಸ್ಟ್ರಿಕ್ಟ್, ಕರ್ನಾಟಕ ಸ್ಟೇಟ್ ಗೆಜೆಟಿಯರ್*, ಬೆಂಗಳೂರು 1985, ಪು. 124-129. ಕೆ.ವಿ.ರಮೇಶ್, 1970, *ಎ ಹಿಸ್ಟರಿ ಆಫ್ ಸೌತ್ ಕೆನರ*, ಧಾರವಾಡ, ಪು. 150-240, 310-313. ಪಿ.ಗುರುರಾಜ ಭಟ್ಟ, 1975, *ಸ್ಟಡೀಸ್ ಇನ್ ತುಳುವ ಹಿಸ್ಟರಿ ಆಂಡ್ ಕಲ್ಚರ್*, ಮಣಿಪಾಲ, ಪು. 41-141. ಕೆ.ಜಿ. ವಸಂತಮಾಧವ, *ಪೊಲಿಟಿಕಲ್ ಹಿಸ್ಟರಿ ಆಫ್ ಕೆನರ 1565-1763 (ಮೇನ್ಲಿ ಬೇಸ್ಡ್ ಆನ್ ಇನ್ಸ್‌ಕ್ರಿಪ್‌ಶನ್ಸ್)*, ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ 1976, ಪು. 24-25, 84-91.

2. ಇಲ್ಲಿ ತಿಳಿಸಿದ ಪೋರ್ತುಗೀಜ ಚರಿತ್ರಗಾರರ, ವಿವರಗಳು ಬಿ.ಎಸ್. ಶಾಸ್ತ್ರಿಯವರ ಅಪ್ರಕಟಿತ ಪಿಎಚ್.ಡಿ. ಪ್ರಬಂಧವಾದ *ದಿ ಪೊರ್ತುಗೀಜ್ ಇನ್ ಕೆನರಾ 1498-1763*, ಬೊಂಬಾಯಿ ವಿಶ್ವವಿದ್ಯಾಲಯ 1969 ರಿಂದ ಎರವು ಪಡೆದುಕೊಂಡಿದೆ. ಇಲ್ಲಿ ತಿಳಿಸಿದ ಪೊರ್ತುಗೀಜ ಬರಹಗಾರರು ವಿಜಯನಗರ ಆಳ್ವಿಕೆಯ ಅವಧಿಯಲ್ಲಿ ಗೋವೆಯಲ್ಲಿದ್ದರು. ಆದರೆ ಬ್ಯಾರೋಸ್ ಭಾರತಕ್ಕೆ ಬರದಿದ್ದರೂ, ಇಲ್ಲಿನ ವ್ಯವಹಾರಗಳನ್ನು ಲಿಸ್ಬನ್‌ನಿಂದ ಪಡೆದಿದ್ದನು.

3. ಉ.ಕ. ಜಿಲ್ಲೆಯಲ್ಲಿ ಆಳಿದ ಅರಸುಮನೆತನದವರುಗಳಲ್ಲಿ ಪ್ರಮುಖರಾದವರು ಕೈಕಯರು, ಭೋಜರು, ಪಲ್ಲವರು, ಚಂದಾವರ ಕದಂಬರು. ನೋಡಿ ಆರ್.ಗುರುವ, 1975, *ಕಾರವಾರ ಜಿಲ್ಲೆಯ ಶಾಸನಗಳು*, ಧಾರವಾಡ, ಪು. 8-15.

4. *ಜವಿಸೊಇಂ.*, 13, ಪು. 87-90, *ಆರಿಇಂಎ.*, 1961-62, ಸಂ. ಎ 37. ಈ ಶಾಸನದ ಪಾಠ ಡಾ. ಪ್ರಕಾಶ್ ಕೊಡಂಟ ಖಂಬದಕೋಣೆ ಇವರಿಂದ ದೊರೆತಿದೆ.

5. *ಕಇ.*, 1, ಸಂ. 1939-40ರ 34, 35, 44, 50, ಪು. 81, 84, 102, 103, 118, 119; *ಅದೇ*, ಸಂಪುಟ 5, ಸಂ. 48, 49, ಪು. 190-191, *ಅದೇ*, ಸಂಪುಟ 6, ಸಂ. 60, 61, 62, 63, 64, 65 ಪು. 162-181 ಮುಸ್ಲಿಂ ಇತಿಹಾಸಕಾರ ಫೆರಿಸ್ತ ಇದನ್ನು ಸಮರ್ಥಿಸುತ್ತಾನೆ. ನೋಡಿ ಜೆ. ಬ್ರಿಗ್ಸ್ (1908-10 ಪುನರ್ ಮುದ್ರಿತ), *ಹಿಸ್ಟರಿ ಆಫ್ ದಿ ರೈಜ್ ಆಫ್ ಮಹಮ್ಮದನ್ ಪವರ್ ಇನ್ ಇಂಡಿಯಾ*, ಕಲ್ಕತ್ತ, ಸಂ. 2, ಪು. 337-38. ಹೆಚ್ಚಿನ ವಿವರ ನೋಡಿ ಎಚ್. ಹೆರಾಸ್ "ಗೋವ ವೀರಗಲ್ ಆಫ್ ದಿ ಟೈಮ್ಸ್ ಆಫ್ ಹರಿಹರ II ಆಫ್ ವಿಜಯನಗರ, *ಕ್ವಾಜಮಿಸೊ.*, 19, ಪು. 1-28.

6. *ಕಇ.*, 1, ಸಂ. 35, 36, 56. *ಆರಿಇಂಎ.*, 1928-29, ಸಂ. 482. *ಎಕ.*, 7, ಶಿಕಾರಿಪುರ 375. ನೋಡಿ ಕಾಮತ್, *ಉತ್ತರ ಕನ್ನಡ ಡಿಸ್ಟ್ರಿಕ್ಟ್ ಗೆಜೆಟಿಯರ್*, ಪು. 124-127.

7. *ದಿ ಬುಕ್ ಆಫ್ ದುರಾತೆ ಬಾರ್ಬೊಸ 'ಆನ್ ಅಕೌಂಟ್ ಆಫ್ ದಿ ಕಂಟ್ರೀಸ್ ಬಾರ್ಡರಿಂಗ್ ಆನ್ ಇಂಡಿಯನ್ ಓಷನ್ ಆಂಡ್ ದೇರ್ ಇನ್‌ಹ್ಯಾಬಿಟಂಟ್ಸ್ ಅಬೌಟ್ ದಿ ಇಯರ್ 1518'*, ಸಂಪುಟ 1, ನೆಂದೆಲ್ನ್ ಲಿಕ್ಟೆನ್‌ಸ್ಟೀನ್, 1967 (ಪುನರ್ ಮುದ್ರಿತ), ಪು. 181-182.

8. *ಕ್ವಾಜಮಿಸೊ.*, 12, ಪು. 53-57.

9. ಬಿ.ಎಸ್. ಶಾಸ್ತ್ರಿ, 1981, *ಸ್ಟಡೀಸ್ ಇನ್ ಇಂಡೋ-ಪೊರ್ತುಗೀಜ್ ಹಿಸ್ಟರಿ*, ಬೆಂಗಳೂರು, ಪು. 88-91.

10. *ಎಕ.*, 6, ಮೂಡಿಗೆರೆ 41, 62. *ಆರಿಸೌಇಂಎ.*, 1930-31, ಸಂ. 336. *ಅದೇ*, 1921-22, ಸಂ. ಎ 6-7, *ಕಇ.*, 3, ಸಂ. 9. ಹೆಚ್ಚಿನ ವಿವರ ನೋಡಿ ಡಾ. ಕೆ.ವಿ.ರಮೇಶ್, 1969, *ತುಳುನಾಡಿನ ಇತಿಹಾಸ* (ಉಡುಪಿ), ಪು. 103-112.

11. ಈ ರೀತಿ ನಮೂದಿಸಿದ ವಿಜಯನಗರ ಹೆಸರುಗಳು ಸ್ಥಳೀಯ ತುಂಡರಸರ ಲಾಭಕ್ಕೆ ಆಗಿತ್ತೆಂದು ಡಾ. ಕೆ.ವಿ. ರಮೇಶ್‌ರ ಅಭಿಪ್ರಾಯ. ನೋಡಿ, ಅದೇ ಗ್ರಂಥ, ಪು. 114.

12. *ಸೌಇಂಇ.*, 9(2), ಸಂ. 655, 659, 674, ಲಿಂಗಣ್ಣ ಕವಿ, *ಕೆಳದಿ ನೃಪ ವಿಜಯ*, ಮೈಸೂರು, 1973, ಪು. 36-37.

13. ನೋಡಿ ಕೆ.ವಿ. ರಮೇಶ್, *ತುಳುನಾಡಿನ ಇತಿಹಾಸ*, ಪು. 82, 101.

14. ಇವರನ್ನು ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರಿ ಚೌಟರೆಂದು ಕೆಲವು ವಿದ್ವಾಂಸರರು ತಪ್ಪಾಗಿ ತಿಳಿಸಿದ್ದಾರೆ. ನೋಡಿ ಆರ್.ಎಸ್. ಪಂಚಮುಖಿ, *ಕಇ.*, 1, ಪು. xii. ಕೆ.ವಿ.ರಮೇಶ್, *ತುಳುನಾಡಿನ ಇತಿಹಾಸ*, ಪು. 85. ಕಾಯ್ಕಿಣಿ ಮತ್ತು ಮೂಡಬಿದ್ರೆಯ ಭೌಗೋಳಿಕ ಸನ್ನಿವೇಶ ಮತ್ತು ಅಂತರವನ್ನು ವೀಕ್ಷಿಸಿದಾಗ ಇಲ್ಲಿ ತಿಳಿಸಿದ ಚೌಟರು ಕಾಯ್ಕಿಣಿ ಸಮೀಪದಲ್ಲೇ ಇದ್ದಿರಬೇಕು ಎಂದು ತಿಳಿದುಬರುತ್ತದೆ. ಶಾಸನಗಳಲ್ಲಿ ತಿಳಿಸಿದ ತುಳುನಾಡು, ಭಟ್ಕಳ, ಹಾಡುವಳ್ಳಿ ಮತ್ತು ಗೇರಸೊಪ್ಪೆ ಪ್ರದೇಶ. ನೋಡಿ ಪಿ. ಗುರುರಾಜ ಭಟ್, *ಸ್ಟಡೀಸ್ ಇನ್ ತುಳುವ ಹಿಸ್ಟರಿ ಅಂಡ್ ಕಲ್ಚರ್*, ಪು. 65-69.

15. *ಎಕ.*, 8, ಶಿಕಾರಿಪುರ 375. ನೋಡಿ ಕಾಮತ್, *ಉತ್ತರ ಕನ್ನಡ ಡಿಸ್ಟ್ರಿಕ್ಟ್ ಗೆಜೆಟಿಯರ್*, ಪು. 122-124.

16. *ಕಇ.*, 1, ಸಂ. 48.

17. ಗಿಬ್ (ಸಂ), 1992 (ಪುನರ್ ಮುದ್ರಿತ), *ಟ್ರಾವೆಲ್ಸ್ ಇನ್ ಏಸಿಯಾ ಅಂಡ್ ಆಫ್ರಿಕ*, ನ್ಯೂಡೆಲ್ಲಿ, ಪು. 230-231. ನೋಡಿ ಈ ವಿಚಾರದ ಚರ್ಚೆ ಜ.ಎಂ.ವೊರಸ್ ''ಹರ್ಯಬ್ ಆಫ್ ಇಬ್ನ್ ಬತೂತ'' *ಜಬಾಬ್ರ್ಯಾಂರಾಏಸೊ*, 15, ಪು. 37-42. ಆರ್.ಎನ್.ಸಾಲೆತ್ತೊರ ''ಹರ್ಯಬ್ ಆಫ್ ಇಬ್ನ್ ಬತೂತ'' *ಕ್ವಾಜಮಿಸೊ.*, 31, ಪು. 384-406.

18. ಈ ಮೂರು ಮನೆತನಗಳು ಆಳೂಪ, ಹೊಯ್ಸಳ ಮತ್ತು ವಿಜಯನಗರ. ಹೆಚ್ಚಿನ ವಿವರ ನೋಡಿ ಕೆ.ವಿ.ರಮೇಶ್, *ಹಿಸ್ಟರಿ ಆಫ್ ಸೌತ್ ಕೆನರ*, ಪು. 145-149, 309.

19. *ಸೌಇಂಇ.*, 7, ಸಂ. 182, 259, 261, 265. *ಅದೇ*, 9(2) ಸಂ. 470. *ಆರಿಸೌಇಂಎ.*, 1929, ಸಂ. 467. *ಅದೇ*, 1930-31, ಸಂ. 344.

20. *ಆರಿಸೌಇಂಎ.*, 1928-29, ಸಂ. 482.

21. *ಕಇ.*, 1, ಸಂ. 67. .

22. *ಸೌಇಂಇ.*, 7, ಸಂ. 228. *ಆರಿಸೌಇಂಎ.*, 1930-31, ಸಂ. 340. *ಕಇ.*, 1, ಸಂ. 68, 69. *ಅದೇ*, 3, ಸಂ. 7, ಪು. 14-15.

23. ನೋಡಿ ಬರ್ಟನ್ ಸ್ಟೀನ್, 1989, *ವಿಜಯನಗರ*, ಕೇಂಬ್ರಿಜ್ ಯುನಿವರ್ಸಿಟಿ, ಪು. xi, 140-143.

24. ಬಿ.ಎಸ್.ಶಾಸ್ತ್ರಿ, *ದಿ ಪೊರ್ತುಗೀಜ್ ಇನ್ ಕೆನರ*, ಪು. 6, 197. ರಾಬರ್ಟ್ ಸಿವೆಲ್, 1992 (ಪುನರ್‌ಮುದ್ರಿತ), *ಎ ಫಾರ್ಗಾಟನ್ ಎಂಪಾಯರ್*, ಪು. 374. *ಕೂತೋ ದ ಏಷಿಯಾ*, 8, ಪು. 278-279. ನೋಡಿ ಬಿ.ಎಸ್. ಶಾಸ್ತ್ರಿ, 1987, ''ಎ ಗ್ಲಿಂಪ್ಸ್ ಆಫ್ ಸೋಷಿಯೋ ಎಕನಾಮಿಕ್ ಕಂಡೀಶನ್ಸ್ ಆಫ್ ಪೋರ್ಟ್ಸ್ ಟೌನ್ ಆಫ್ ಕೋಸ್ಟಲ್ ಕರ್ನಾಟಕ'' *ಸ್ಟಡೀಸ್ ಇನ್ ಕರ್ನಾಟಕ ಹಿಸ್ಟರಿ ಅಂಡ್ ಕಲ್ಚರ್*, ಮೈಸೂರು, ಪು. 99-103.

17. ಕುಮಾರವ್ಯಾಸನ ಗಜನಗರ, ವಿಜ(ಯ)ನಗರವೆ?

ಇಟಗಿ ಈರಣ್ಣ

ಕವಿ ಕುಮಾರವ್ಯಾಸನ ಕಾಲವನ್ನು 13ನೇ ಶತಮಾನದಿಂದ 17ನೇ ಶತಮಾನದವರೆಗೆ ಪಂಡಿತರು ಎಳೆದಾಡಿದ್ದಾರೆ. ಸದ್ಯ ನಿಖರವಾದ ಯಾವುದೇ ಇಸ್ವಿಯನ್ನು ಹೇಳದೆ, 'ಸುಮಾರು 15ನೇ ಶತಮಾನದ ಕವಿ' ಎಂಬುದನ್ನು ಎಲ್ಲರೂ ನಿರ್ವಿವಾದವಾಗಿ ಈಚೆಗೆ ಒಪ್ಪಿಕೊಂಡಿದ್ದಾರೆ. ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾಮಂಜರಿ'ಯ[1] ಅಂತಃ ಪ್ರಮಾಣಗಳನ್ನು ಗಮನಿಸಿದಾಗ, ವಿಜಯನಗರವನ್ನೂ ವಿಜಯನಗರದ ಅರಸರ ಅರಮನೆಯನ್ನೂ, ಅದರ ಉಚ್ಛ್ರಾಯ ಕ್ಷಿತಿಯಲ್ಲೇ ಕವಿ ಕಂಡಿದ್ದಾನೆ ಎಂಬುದು ಮೇಲು ನೋಟಕ್ಕೇ ಸಾಬೀತಾಗುತ್ತದೆ. ಬಹುಶಃ ದೇವರಾಯ II ಅಥವಾ ಕೃಷ್ಣದೇವರಾಯನ ಆಡಳಿತಾವಧಿಯಲ್ಲಿಯೇ ಕುಮಾರವ್ಯಾಸ ವಿಜಯನಗರದ ಒಡ್ಡೋಲಗಕ್ಕೆ ಬಂದು ಇದ್ದು ನೋಡಿ ಹೋಗಿರುವ ಸಾಧ್ಯತೆ ಆತನ ಕಾವ್ಯದ ಒಡ್ಡೋಲಗ ವರ್ಣನೆಯಲ್ಲಿ ಲಭ್ಯವಾಗುತ್ತದೆ.

ಕನಕದಾಸರ ಹಾಗೂ ರತ್ನಾಕರವರ್ಣಿಯ ಕಾವ್ಯದಲ್ಲಿ ಬರುವ ವಿಜಯನಗರದ ವರ್ಣನೆಯನ್ನು ಎಲ್ಲರೂ ಒಪ್ಪುತ್ತಾರೆ. ಆದರೆ, ಅವರಿಗಿಂತ ಹೆಚ್ಚು ನಿಖರವಾಗಿ ಕುಮಾರವ್ಯಾಸ ವಿಜಯನಗರವನ್ನು ಕಂಡು, ಅದರ ವರ್ಣನೆಯನ್ನು ತನ್ನ ಕಾವ್ಯದಲ್ಲಿ ಬಳಸಿಕೊಂಡಿರುವುದನ್ನು ಅದೇಕೋ ಬಹಳ ಜನ ಗಮನಿಸಿಲ್ಲ. ಆ ಕಡೆಗೆ ನಾವು ಒಂದಿಷ್ಟು ದೃಷ್ಟಿ ಬೀರೋಣ. ನಾನು ಯಾವುದೇ ನಿರ್ಣಯವನ್ನು ಈ ಲೇಖನದಲ್ಲಿ ಹೇಳದೇ ಇದ್ದರೂ, ವಿವರಣೆಗಳು ತಾವೇ ನಿರ್ಣಯಿಸಬೇಕಾದುದನ್ನು ನಿರ್ಣಯಿಸಿ ಬಿಡುತ್ತವೆ ಎಂಬುದನ್ನು ನಾನು ಈ ಪ್ರಾರಂಭದಲ್ಲಿಯೇ ಹೇಳಿ ಬಿಡುತ್ತೇನೆ. ವಿದೇಶೀ ಪ್ರವಾಸಿಗರ ವರ್ಣನೆ ಈಗಾಗಲೇ ನಿಮ್ಮ ಗಮನದಲ್ಲಿ ಇರುವುದರಿಂದ ಅದನ್ನು ತೌಲನಿಕವಾಗಿಯೂ ನಾನಿಲ್ಲಿ ತೆಗೆದುಕೊಳ್ಳಲು ಹೋಗದೇ ನೇರನಾಗಿ ಕುಮಾರವ್ಯಾಸನ ಹೇಳಿಕೆಗಳನ್ನು ನಿಮ್ಮ ಮುಂದೆ ಇಡುವ ಪ್ರಯತ್ನ ಮಾಡುತ್ತೇನೆ. ಈ ವರ್ಣನೆಗಳು ನಿಮಗೆ ವಿದೇಶೀ ಪ್ರವಾಸಿಗರ ವರ್ಣನೆಗಳನ್ನು ನೆನಪಿಗೆ ತಂದರೆ, ನನ್ನ ಈ ಪ್ರಬಂಧ ಸಾರ್ಥಕವಾಯಿತು ಎಂದೇ ನಂಬುತ್ತೇನೆ. ''ಕರ್ನಾಟಕ ಕೃಷ್ಣರಾಯ ಭಾರತ''ವನ್ನು ಬರೆದ ''ತಿಮ್ಮಣ್ಣ'' ಕವಿಯನ್ನು ನಾನು ಇಲ್ಲಿ ಕೈಬಿಟ್ಟಿದ್ದೇನೆ. ಮಧ್ಯಕಾಲೀನ ಮುಸಲ್ಮಾನ ದೊರೆಗಳು ತಮ್ಮ ಹೆಸರಿನ ಮುಂದೆ ''ಶಾಹ್'' ಶಬ್ದವನ್ನು ಹಚ್ಚಿಕೊಂಡ ಹಾಗೆ, ವಿಜಯನಗರದ ಅರಸರು ''ರಾಯ'' ಪದವನ್ನು ತಮ್ಮ ಹೆಸರಿನ ಜತೆಗೆ ಸೇರಿಸಿಕೊಂಡರು. ಫಿರೋಜ್‌ಶಾಹ್, ಆದಿಲ್‌ಶಾಹ್ ಇತ್ಯಾದಿಗಳಂತೆ ಹಕ್ಕರಾಯ, ಬುಕ್ಕರಾಯ, ದೇವರಾಯ, ಕೃಷ್ಣರಾಯ, ಅಚ್ಯುತರಾಯ, ನರಸಿಂಹರಾಯ, ರಾಮರಾಯ ಇತ್ಯಾದಿ.

ಕುಮಾರವ್ಯಾಸನು ಶ್ರೀಕೃಷ್ಣನಿಗೂ, ಧರ್ಮನಂದನನಿಗೂ, ಭೀಮನಿಗೂ, ಕೌರವರಿಗೂ ''ರಾಯ'' ಪದ ಸೇರಿಸಿ - ಕೃಷ್ಣರಾಯ, ಧರ್ಮರಾಯ, ಭೀಮರಾಯ, ಕುರುರಾಯ - ಇತ್ಯಾದಿಗಳ ಬಳಕೆಗಳನ್ನು ತನ್ನ ಕಾವ್ಯದಲ್ಲಿ ಹೇರಳವಾಗಿಯೇ ಮಾಡಿದ್ದಾನೆ. 'ದಿವಿಜ' 'ನಿರ್ಜರ' ಪದಗಳಿಗೆ 'ದೇವ' ಎಂಬ ಅರ್ಥ ಇರುವುದರಿಂದ ಒಮ್ಮೊಮ್ಮೆ ದಿವಿಜರರಾಯ, ನಿರ್ಜರರಾಯ, ಎಂಬುದನ್ನು 'ದೇವರಾಯ' ಪದಕ್ಕೆ ಪರ್ಯಾಯವಾಗಿ ಬಳಸಿ, ದೇವ=ಕೃಷ್ಣನೆಂಬ ಅರ್ಥದಲ್ಲಿ ಬಳಸಿರುವುದು ಕಂಡುಬರುತ್ತದೆ.

''ಜೀಯ ಸಿಂಹಾಸನಕೆ ದಿವಿಜರ ರಾಯನೋ . . . .''
''ನೆಲೆಗೊಂಡ ನಿರ್ಜರರಾಯನಾರೆಂದೆನುತ . . . . '' ಪು. 291

ಹಾಗೆಯೇ

''. . . . . ಕೃಷ್ಣರಾಯನ ಪುರಕೆ ಪರಿತೋಷದಲಿ ಹೊಕ್ಕರು . . . .'' ಪು. 293.
''. . . . . ಕೃಷ್ಣರಾಯನ ಕರುಣದಳತೆಯ ಬಿನ್ನವಿಸಿದರು . . . .'' ಪು. 294.
''. . . . . ಕೃಷ್ಣರಾಯನ ಪಾದ ದರುಶನವಾಗಲಿಮ್ಮ ಡಿಸಿತ್ತು . . . .'' ಪು. 297.
''. . . . . . . ಕೃಷ್ಣರಾಯಬಿಜಯಂಗೈದನೊಲವಿನಲಿ . . . .'' ಪು. 328.
''. . . . . . ಕೃಷ್ಣರಾಯನ ಬರವ ಹಾಕೇಳ್ದು . . . .'' ಪು. 331.
''. . . . . . ಪರಮ ಪುರುಷನು ಕೃಷ್ಣರಾಯನು . . . .'' ಪು. 337.

"..... ಕೃಷ್ಣರಾಯನ ಕೆರಳಿಚುವರೆ? ....." ಪು. 339.

".... ಕೃಷ್ಣರಾಯನ ಮಂಗಳ ಶ್ರೀಮೂರ್ತಿ ...." ಪು. 340.

- ಹೀಗೆ ಕಾವ್ಯದ ಉದ್ದಕ್ಕೂ "ಕೃಷ್ಣರಾಯ"ನೇ ಬರುತ್ತಾನೆ.

ಮಹಾಭಾರತಯುದ್ಧ ಮಾಡಿದ ಶ್ರೀಕೃಷ್ಣ - "ನೀಲ-ಮೇಘವರ್ಣ-ಶ್ಯಾಮ" ವರ್ಣದವನಾಗಿದ್ದರೆ, ನಮ್ಮ ಕುಮಾರವ್ಯಾಸನ ಕೃಷ್ಣರಾಯ

"ಬಲದ ಪದಘಟ್ಟಣೆಯ ರಜದಿಂ
ಬೆಳಪಡಗಿದಂಬರದ ಮಾರ್ಗದ
ಝಳದ ಕಿರುಬೆಮರುಗಳ ಲಲಿತ ಕಪೋಲಮಂಡಲದ
ಕೆಲದ ಪಾಯವಧಾರುಗಳ ಕಳ
ಕಳದ ಕರುಣಾರಸವ ಸೂಸುವ
ಮೆಲುನಗೆಯ ಸಿರಿಮೊಗದ ಕೃಷ್ಣನ ಕಂಡುದಾ ಸೇನೆ" ಪು. 294.

"ಸಿರಿಮೊಗದ ಕಿರುಬೆಮರ ತೇಜಿಯ
ಖುರಪುಟದ ಕೆಂದೂಳಿ ಸೊಂಕಿದ
ಸಿರಿಮುಡಿಯ ಕುಡಿಮಿಸೆಯಲಿ ಕೆಂಪಡರ್ದ ರೇಣುಗಳ
ಖರ ಮರೀಚಿಯ ಝಳಕೆ ಬಾಡಿದ
ತರುಣ ತುಳಸಿಯ ದಂಡೆಯೊಪ್ಪುವ
ಗರುವ ದೇವನು ...." ಪು. 330.

ಈ ಕೃಷ್ಣನು ರಾಜಮಂದಿರವನ್ನು ಹೇಗೆ ಪ್ರವೇಶಿಸುತ್ತಿದ್ದ ಗೊತ್ತೇ ? ಕೇಳಿ:

"ಮೇಲೆ ಬೀಳುವ ಮಂದಿಯನು ಕೈ
ಕೋಲಿನವರಪ್ಪಳಿಸೆ ಲಕ್ಷ್ಮೀ
ಲೋಲನವದಿರ ಜರಿದು ಕಾಣಿಸಿಕೊಳುತ ಪುರಜನವ
ಮೇಲು ನೆಲೆಯುಪ್ಪರಿಗೆಗಳ ವರ
ಬಾಲೆಯರ ಕಡೆಗಂಗಳೆಸೆವ ನಿ
ವಾಳಿಗಳ ಕೈಕೊಳುತ ಹೊಕ್ಕನು ರಾಜಮಂದಿರವ" ಪು. 296.

ಹಾಗೆ ಒಳಗೆ ಬರುತ್ತಲೇ,

ಹಿಡಿದರಾರತಿಗಳನ್ನು "ಬಣ್ಣದ
ಸೊಡರು" ಸುಳಿದವು!

ಬಣ್ಣದ ಸೊಡರು, ಉಪ್ಪಾರತಿ, ಮುಂತಾದವುಗಳು ಇಂದಿಗೂ ಶ್ರೀಸಾಮಾನ್ಯನಿಗಲ್ಲ ಶ್ರೀಮಂತರಿಗೂ ಬರೀ ಉರಿಸಿ ತೋರಿಸಲಸಾಧ್ಯವಾದರೆ, ಕೃಷ್ಣರಾಯನರಮನೆಗೆ ಹಾಗೂ ಕೇರಿಗಳಲ್ಲೂ ಉರಿಸುತ್ತಿರುವ ವರ್ಣನೆ ಸಿಗುತ್ತದೆ ಇಲ್ಲಿ. ಈ ಬಗ್ಗೆ ರಸಾಯನ ಶಾಸ್ತ್ರದ ಜನ ಒಂದಿಷ್ಟು ಬೆಳಕು ಚೆಲ್ಲಬೇಕಾಗಿದೆ.

ನಂತರ ನಮ್ಮ ಕೃಷ್ಣರಾಯನು "ಮಣಿಖಚಿತ ಕೇಸರಿಯ ಪೀಠವ ನಡರಿದನು". (ಪು. 291) ಆಗ,

"ತರುಣಿಯರು ಪರಿಮಳದ ಜಂಗಮ
ಭರಣಿಯರು ಮನುಮಥ ವಿರಿಂಚನ
ತರಣಿಯರು ಕುಳ್ಳಿರ್ದರರಸನ ಹಿಂದೆ ಮೋಹರಿಸಿ (ಪು. 303)

ಆತನ ಒಡ್ಡೋಲಗ ಎಲ್ಲ ಒಡ್ಡೋಲಗಗಳಿಗಿಂತ ಭಿನ್ನವೇ ಆದರೂ ತಿಳಿಯಲೇ ಬೇಕಾದ ಕೆಲವೆರಡು ಮಾತುಗಳಿವೆ.

ಒಡ್ಡೋಲಗದಲ್ಲಿ "ತಾಂಬೂಲಧಾರಕ"ರಿದ್ದಾರೆ! (ಪು. 309) ಅವರು
"ಹೊಂಬಟ್ಟಲಲಿ ವೀಳೆಯವನಿತ್ತರನಿಬರಿಗೆ" (ಪು. 334).
ಕೃಷ್ಣರಾಯನೂ "ವೀಳೆಯವ ತಾ ಕೊಂಡು ನುಡಿದನು" (ಪು. 300).
ಒಂದು ಸಂದರ್ಭದಲ್ಲಿ "ತಂಬುಲ ಸೂಸೆ ನಕ್ಕನು !" (ಪು. 300).

ಶ್ರೀ ಕೃಷ್ಣನು ತಾಂಬೂಲ ತಿನ್ನುತ್ತಿದ್ದನೋ ಬಿಡುತ್ತಿದ್ದನೋ, ನಮ್ಮ ಕುಮಾರ ವ್ಯಾಸನ "ಕೃಷ್ಣರಾಯ"ನಂತೂ, ತಾನೂ ತಿಂದು, ಬಂದವರಿಗೂ ಕೊಟ್ಟು, ಮಾತಾಡಿಸುತ್ತಿದ್ದ. ಈ ತಾಂಬೂಲ ಸೇವನೆಯ ಬಗ್ಗೆ - ವಿಜಯನಗರ ಅರಸರನ್ನು ಉದ್ದೇಶಿಸಿ - ಅನೇಕರು ಬರೆದಿರುವುದನ್ನು ನಾವಿಲ್ಲಿ ನೆನೆಯಬೇಕು (ಪಾನ್-ಸುಪಾರಿ-ಬಜಾರು). ಮತ್ತೊಂದು ವಿಶೇಷವೆಂದರೆ, ಒಡ್ಡೋಲಗದಲ್ಲಿ

"ಕೊಂಕಣ ಗೌಳಗೂರ್ಜರ ವಂಗ ಹಮ್ಮೀರಾ" ದಿಗಳ ಜತೆಯಲ್ಲಿ
"ತುರುಕ" ರೂ ಇದ್ದಾರೆ! (ಪು. 333).

ಸ್ವತಃ ಚತುರ್ಭಾಷಾ ಕವಿಯಾದ ಕುಮಾರವ್ಯಾಸನು[2] ಒಲಗದಲ್ಲಿ "ಚತುರ್ಭಾಷಾ ವಿಶಾರದ ಕವಿಗಳೊಪ್ಪಿದರು" - (ಪು. 336) ಎಂದು ಹೇಳಿದಲ್ಲದೆ,

"ನುಡಿದು ತಲೆದೂಗಿಸುವ ಮರೆಗ
ನ್ನಡಕೆ ಹಾ ಹಾಯೆನಿಸಿ 'ಮೆಚ್ಚ'ನು
ಪಡೆದ ವಾಗ್ಮಿಗಳೋದಿ ಹೊಗಳಿಸಿಕೊಂಬ ಗಮಕಿಗಳು" (ಪು. 333)

ಇತ್ಯಾದಿ ವಿವರಗಳನ್ನು ಕೊಡುತ್ತಾನೆ. ಕನ್ನಡ ಕಾವ್ಯವಾಚನ ಗಜನಗರದಲ್ಲಿ ನಡೆಯುತ್ತಿತ್ತೆ? ಅಥವಾ 'ವಿಜ(ಯ)ನಗರ' ದಲ್ಲಿ ನಡೆಯುತ್ತಿತ್ತೆ? ಇದು ತುಂಬಾ ತಮಾಷೆ ಎನಿಸಿದರೂ ಅಷ್ಟೇ ಮಹತ್ವದ ವಿಷಯವಾಗಿದೆ.

ಪುರಾಣಕ್ಕೆ ಒಂದಿಷ್ಟು ಕುಂದುಂಟಾದರೂ ಇತಿಹಾಸಕ್ಕೆ ಅಪಚಾರವಾಗಿಲ್ಲ. ಇದು ಕುಮಾರವ್ಯಾಸನ ಕನ್ನಡ ಭಾರತ! ಇಲ್ಲಿ ಶ್ರೀ ಕೃಷ್ಣನೂ ಕನ್ನಡ ಕೃಷ್ಣರಾಯ !

ಆವ ದೇಶಿಯಿದಾವ ವಿಸ್ತರ
ಆವ ದೇಶದ ಸಿರಿಯ ಸಡಗರ?
ಆವ ಪರಿಯ ವಿಳಾಸ ಆವ ವಿಡಾಯ ತಾನೆನಲು
ಹಾವು ಹಳವಿಗೆಯಾದ ರಾಯನು! (ಪು. 303)

ಎಂದು ನಾವಿಲ್ಲಿ ಅವನ ಮಾತಿನಂತೆಯೇ ಅಚ್ಚರಿಪಡಬೇಕಾಗಿದೆ. ಧರ್ಮರಾಯನ ಒಡ್ಡೋಲಗದಲ್ಲಿ "ಭರತನಾಟ್ಯ ನಿಪುಣರೂ" ! ಹಾಗೂ "ವಿದೇಶಿಯರೂ" ! ಇದ್ದಾರೆ ಎಂಬುದನ್ನೂ ನಾವು ಗಮನಿಸಬೇಕು (ಪು. 303).

ಇನ್ನು "ಗಜನಗರ" ಹಾಗೂ "ಗಜನಗರದ ಉದ್ಯಾನ"ಗಳ ವರ್ಣನೆಗಳ ಕಡೆಗೂ ಒಂದಿಷ್ಟು ನಾವು ಗಮನ ಹರಿಸಬಹುದು.

ಹಸ್ತಿನಾವತಿಯನ್ನು ನಮ್ಮ ಕುಮಾರವ್ಯಾಸ 'ಗಜಪುರಿ' 'ಗಜನಗರ' ಹಾಗೂ 'ಕೃಷ್ಣರಾಯಪುರ' ಎಂದು ಪದೇ ಪದೇ ಕರೆಯುತ್ತಾನೆ. 'ಗಜನಗರ' ಶಬ್ದ ಕಿವಿಗೆ ಬೀಳುತ್ತಲೇ ಕನ್ನಡಿಗರ ಕಿವಿಗೆ ಅದು 'ವಿಜ(ಯ)ನಗರ' ಎಂದೇ ಕೇಳಿಸುತ್ತದೆ ಎಂದು ಕುಮಾರವ್ಯಾಸನಿಗೆ ಚೆನ್ನಾಗಿ ಗೊತ್ತೇ ಇದೆ. ಇಂದು ಹಾಳುಪಟ್ಟಣದಲ್ಲಿ ಕಣ್ಣಾಡಿಸಿ ಬಂದರೆ, ಕುಮಾರವ್ಯಾಸನ 'ಗಜನಗರ' ಬಹುಶಃ ಇದೇ ಆಗಿದ್ದಿರಬಹುದಾದ ಸಾಧ್ಯತೆ ಬಹಳಷ್ಟಿದೆ. "ಸಮಕಾಲೀನ ಸಮಾಜದ ಪ್ರತಿಬಿಂಬವೋ - ಗತಿಬಿಂಬವೋ ಆಗಿ ಸಾಹಿತ್ಯ ನಿಂತಿರುತ್ತದೆ" - ಎಂಬ ಮಾತನ್ನು ಒಪ್ಪಿಕೊಂಡಿರುವವರಲ್ಲಿ ನಾನೂ ಒಬ್ಬ. ಬಹುಶಃ ಕವಿಯೊಬ್ಬ ತಾನು ಕಂಡುದುದನ್ನು ಹೀಗೆ ಹಿಡಿದು ಇಡುವುದು ಹೊಸದೇನೂ ಅಲ್ಲ. ಆದಕಾರಣವೇ ಸಾಹಿತ್ಯ ಮತ್ತು ಇತಿಹಾಸ ಇವು ಒಂದನ್ನು ಬಿಟ್ಟು ಇನ್ನೊಂದು ಅಪೂರ್ಣ ಎನ್ನಿಸುತ್ತವೆ. ಇದೋ ಗಜನಗರದ ವರ್ಣನೆ ಕೇಳಿ, "ವಿಜ(ಯ)ನಗರ" ಕಾಣುವುದೋ ಇಲ್ಲವೋ ಹೇಳಿ.

''. . . . . . ಪಾತಾಳದ ವಿಳಾಸಿನಿ
ಯರಿಗೆ ಚೌಕಿಗೆಯೋ ಸುದುರ್ಗದ
ಹಿರಿಯಗಳೋ ಬಲುಗೋಟೆಯೋ ನಿಚ್ಚಣಿಕೆಯೋ ದಿವದ
ಮುರಿಮುರಿವ ಹುಲಿಮುಖದ ಹೇಮದ
ತರದ ತೆನೆಗಳ ವಜ್ರಮಯ ಬಂ
ಧುರ ಕವಾಟ ಸ್ಫುಟದಲೆಸೆದುದು . . . . (ಪು. 330).

''ಹೊಗಳುತ್ತೈತಂದಸುರರಿಪು ಗಜ
ನಗರವನು! ಹೊಕ್ಕನು ಸುಯೋಧನ
ನಗಣಿತೈಶ್ವರ್ಯವ ''ಮಹಾದೇವ'' ನುತ ನಲವಿನಲಿ!
ಬಿಗಿದ ಬೀದಿಯ ನಯದ ನೆಲಗ
ಟ್ಟುಗಳ ಮಣಿಮಯ ಹೇಮದುಪ್ಪರಿ
ಗೆಗಳ ಕೇರಿಗಳೊಳಗೆ ಬರುತಿರ್ದನು ಮುರಧ್ವಂಸಿ'' (ಪು. 330).

ಇಲ್ಲಿಯ ಗಜನಗರವನ್ನು ಹೊಕ್ಕು, ಅದರ ಐಶ್ವರ್ಯವನ್ನು ನೋಡಿ, ಕೃಷ್ಣನೇ 'ಮಹಾದೇವ' ಎಂದು ಉದ್ಗಾರ ತೆಗೆದು ಆಶ್ಚರ್ಯಹೊಂದಿದ್ದಾನೆ! ಹಸ್ತಿನಾವತಿಯನ್ನೇ ನೋಡಿದ್ದರೆ, ಕೃಷ್ಣ ಹೀಗೆ ಆಶ್ಚರ್ಯಪಡುತ್ತಿದ್ದನೇ? ''ಸಿರಿಲೋಲನಾದ ಆತ ಸಿರಿಯನ್ನು ಕಂಡು ಗಾಬರಿಗೊಂಡ!'' ಎಂದು ವರ್ಣಿಸಿರುವ ಈ ರೀತಿ, ತುಂಬಾ ಸೂಚ್ಯವಾಗಿದೆ. ಅವನು ಹಸ್ತಿನಾವತಿಯನ್ನು ಮೊದಲ ಸಲ ನೋಡುತ್ತಿಲ್ಲ ತಾನೆ? ಆದರೆ, ಮೊದಲ ಸಲ ಕುಮಾರವ್ಯಾಸ ನೋಡಿದ 'ವಿಜಯನಗರ' 'ಕೃಷ್ಣನ ಬಾಯಿಂದ' ಹೀಗೆ ಬಂದಿದೆ! ಬಹುಶಃ 'ವೀರನಾರಾಯಣನೇ ಕವಿ' 'ಲಿಪಿಕಾರ ಕುವರವ್ಯಾಸ' ಎನ್ನುವ ಮಾತಿನಲ್ಲಿ, ಕುಮಾರವ್ಯಾಸನ ಅಂತರಂಗ-ಬಹಿರಂಗಗಳೆರಡೂ ಕೆಲಸಮಾಡಿ, ಈ ಕಾವ್ಯವನ್ನು ಹೀಗೆಯೇ ಕಟ್ಟುವ-ಕಟ್ಟುತ್ತಿರುವ ಪೂರ್ಣ ಪ್ರಜ್ಞೆಯಲ್ಲಿಯೇ ಹೀಗೆ ನುಡಿದಿರಬೇಕು. ಇದು ದ್ವಂದ್ವವೂ ಅಲ್ಲ. ಗೊಂದಲವೂ ಅಲ್ಲ. ಇದೂ ಒಂದು ಚಂದ! ಅಷ್ಟೇ ಮುಂದೆ ನೋಡೋಣ:

ಮಂದದಲಿ ಸುಳಿವಾನೆ ಕುದುರೆಯ
ಸಂದಣಿಯ ಕೀಲಿಸಿದ ಭೂಮಿಪ
ರಂದಣದ ಸಾಲುಗಳ ತೆಕ್ಕೆಯ ಹಳಿಯದಾಳುಗಳ
ಮಂದಿಯಲಿ ಹೊಗಲನಿಲಗುಬ್ಬಸ!
ವೆಂದರುಳಿದವರಳವೆ? . . . . (ಪು. 330)

ಸೈನ್ಯದ ಕವಾಯಿತು ಅರಮನೆಯ ವಿಶಾಲ ಬಯಲಲ್ಲಿ ಹೇಗೆ ನಡೆಯುತ್ತದೆ ಗೊತ್ತೆ? ಕೇಳಿ:

ಬಾಗಿದವು ಭರಿಕೈಗಳನು ಹಣಿ
ಗಾಗಿ ಮುರುಹಿದವಾನೆಗಳು ತಲೆ
ವಾಗಿ ಗುಡಿಗಟ್ಟಿದವು ಹೇಷಾರವದ ತೇಜಿಗಳು ।
ತೂಗಿ ತನುವನು ಪುಳಕದಲಿಮನ
ಲಾಗುಮಿಗೆ ಮೈಮರೆದು ಹರುಷದ
ಸಾಗರದಲೋಲಾಡುತಿರ್ದುದು ಕೂಡೆ 'ತಳತಂತ್ರ' ॥ (ಪು. 295)

ಕೇರಿ-ಬೀದಿಗಳನ್ನು ಗಮನಿಸಬೇಕೆ? ನೋಡಿ:

ದೇವನೀ ಬಹನೆಂದು ಬಂದರು
ದಾವಣಿಯ ಹವಣರಿದು ಬಳಿಕ ಮ
ಹಾವಿಳಾಸದಲೊಪ್ಪವಿಟ್ಟರು ತಮ್ಮ ನಗರಿಗಳ

ಹೂವಲಿಯ ವೀಧಿಗಳ ನವ ರ
ತ್ನಾವಳಿಯ ಸೂಸಕದ ಭದ್ರದ
ಲೋವೆಗಳ ಲಂಬಳದಲೆಸೆದವು ಕೇರಿಕೇರಿಗಳು (ಪು. 294).

ಚಾರುತರ ಕಸ್ತೂರಿಯ ಸಾದಿನ
ಸಾರಣೆಯ ಕುಂಕುಮದ ರಸಗಳ
ಕಾರಣೆಯ ನವಚಿತ್ರಛತ್ರದ ಬಹಳ ಭಿತ್ತಿಗಳ
ಓರಣದ ಬೀದಿಗಳ ತಳಿಗೆಯ
ತೋರಣದ ಹೊಂಜಗುಲಿಗಳ ಪ
ನ್ನೀರ ಚಳೆಯದ ರಚನೆಯಲಿ ಮನೆಮನೆಗಳೊಪ್ಪಿದವು ॥ (ಪು. 294).

ಕಟ್ಟಿದವು ಗುಡಿ ಮನೆಮನೆಗಳಲಿ ಮೇ
ಲ್ಕಟ್ಟು ಬಿಗಿದವು ಪುರದ ನಾರಿಯ
ರುಟ್ಟು ತೊಟ್ಟರು ಕಳಶ ಕನ್ನಡಿ ಸಹಿತ ದೇಶಿಯಲಿ ।
ಇಟ್ಟಣಿಸಿ ಗಜ ವಾಜಿ ರಥ ಸಾ
ಲಿಟ್ಟು ತೋರುವ . . . . . . (ಪು. 294)

ಒಂದಿಷ್ಟು ಪುರೋದ್ಯಾನಗಳನ್ನು ನೋಡೋಣವೇ? ಬನ್ನಿ!

ಮಘಮಘಿಪ ಹೊಂಬಾಳೆಗಳ ರಸ
ವೊಗುವ ಮಧುರ ಧ್ರಾಕ್ಷೆಗಳ ನಿಡು
ಮುಗಿಲ ತುಡುಕುವ ತೆಂಗುಗಳ ನೆರೆಕಾತಸುಫಲಗಳ
ಬಿಗಿದ ಪಣ್ಗೊನೆವಾಳೆಗಳ ಸೊಂ
ಪೊಗುವ ಕರ್ಪೂರ ದ್ರುಮೌಘದ
ಸೊಗಸು ಸೆಳೆದುದು ಮನವನಾ ಗಜನಗರದುದ್ಯಾನ (ಪು. 329)

ಹೀಗೆಯೇ ಇನ್ನೂ ಅನೇಕ ಪದ್ಯಗಳಲ್ಲಿ ಬರುವ ಗಜನಗರದ ಉದ್ಯಾನವನ್ನು ಅಲ್ಲಿ ಬಾಳೆ ತೆಂಗು ಇತ್ಯಾದಿಗಳನ್ನು ಅಂದೇಕೆ ಇಂದೂ ನೋಡಬಹುದು.

'ಪ್ರೌಢಪ್ರತಾಪಿ' ಎಂಬ ಶಬ್ದವನ್ನು ಬಳಸಿ ಕಾವ್ಯ ಬರೆದಂತೆ 'ಸಾಳುವ' 'ಸಾಳ್ವ' - ಶಬ್ದ ಬಳಕೆಗಳೂ ಕೇವಲ ಆಕಸ್ಮಿಕವೇನೂ ಅಲ್ಲವೆನಿಸುತ್ತದೆ.

''ಪ್ರೌಢ . . . . ಪ್ರತಾಪ . . . . ರೊಪ್ಪಿದರು'' (ಪು. 41).
''ಸಾಳುವನಕೂಡರಗಿಳಿಗೆ ಸಮಮೇಳವೇ? . . . .'' (ಪು. 509).
''ಅಳಲಿದುರಗನನೆರವಿ ಟೊಪ್ಪಿಗೆ ! ಗಳೆದಸಾಳ್ವನ ಹಿಂಡು . . . . '' (ಪು. 357).

ಬೀದಿಗಳ ಹೆಸರುಗಳನ್ನು ಹೇಳುತ್ತ:

''ಎರಡು ಬಾಗಿಲಸೂತ್ರದಲಿ
ವಿಸ್ತರಿಸಿದಂಗಡಿ ಸೋಮವೀಧಿಯ
ತರಣವೀಧಿಯಲವರವರ ಪಾಳಯಕೆ ಮುರಿವುಗಳ
ಸುರರು ಸೃಷ್ಟಿಸಬಾರದಿನ್ನೀ
ನರರುಗಳ ಪಾಡೇನು! - ಪು. (347).

ಕೃಷ್ಣರಾಯನು ಜೋತಿಷರ ಸಲಹೆ ಮೇರೆಗೆ ನಡೆದುಕೊಳ್ಳುವುದಕ್ಕೂ ಹಲವಾರು ಪದ್ಯಗಳಿವೆ.

ಇವೆಲ್ಲವುಗಳನ್ನು ಅಂತಃ ಪ್ರಮಾಣಗಳೆಂದು ಗಮನಿಸಿದಾಗ, ಕುಮಾರವ್ಯಾಸನ ಕಾಲ, ಕುಮಾರವ್ಯಾಸನ "ಗಜನಗರ" ಇವೆಲ್ಲ ಆಚೆ ಈಚೆ ಹೊಯ್ದಾಡದೇ ತಟಸ್ಥವಾಗಿ, ನಿಂತು ನಮ್ಮನ್ನು "ವಿಜಯನಗರ"ದತ್ತ ಕರೆಯುತ್ತವೆ. ಕೇಳುವ-ಕಾಣುವ-ಶಕ್ತಿ ಆಸಕ್ತಿ ನಮಗೆ ಬೇಕಷ್ಟೆ? ಒಟ್ಟಾರೆ 'ಗಜನಗರ' ನೆಪದಲ್ಲಿ ಕುಮಾರವ್ಯಾಸ 'ವಿಜ(ಯ)ನಗರ' ವನ್ನೇ ಕಂಡು ಕಂಡರಿಸಿದ್ದಾನೆ. ಇದು ನನ್ನ ಸ್ಪಷ್ಟ ನಿಲುವು.

ಅಡಿ ಟಿಪ್ಪಣಿಗಳು

1. ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಸಂ.), 1988, *ಕುಮಾರವ್ಯಾಸ ಮಹಾಕವಿಯ ಕರ್ಣಾಟ ಭಾರತ ಕಥಾಮಂಜರಿ*, ಮೈಸೂರು.
2. *ಕನ್ನಡ ವಿಷಯ ವಿಶ್ವಕೋಶ*, ಮೈಸೂರು ವಿಶ್ವವಿದ್ಯಾಲಯ, ಪು. 332-334.

18. ವಿಜಯನಗರ ಮತ್ತು ವಚನ ಸಾಹಿತ್ಯದ ಶಾಸ್ತ್ರೀಕರಣ

ಬಸವರಾಜ ಮಲಶೆಟ್ಟಿ

12ನೇ ಶತಮಾನದಲ್ಲಿ ಬಸವಣ್ಣನ ನೇತೃತ್ವದಲ್ಲಿ ನಡೆದ ಸಾಮಾಜಿಕ-ಧಾರ್ಮಿಕ ಕ್ರಾಂತಿಯ ಉಪಉತ್ಪಾದನೆಯಾಗಿ ವಚನ ಸಾಹಿತ್ಯ ಹುಟ್ಟಿಕೊಂಡಿತು. ವೈಯಕ್ತಿಕ ನೆಲೆಯಲ್ಲಿ ಅನುಭಾವ ಸಂಪನ್ನತೆ, ಸಾಧಕ ಜೀವನದ ಹೋರಾಟದ ವಿವಿಧ ಮಜಲುಗಳು, ವಿಶಿಷ್ಟ ಜೀವನ ದೃಷ್ಟಿ, ಸಾಮಾಜಿಕ ವಿಡಂಬನೆ - ಈ ಮುಂತಾದ ಅಂಶಗಳನ್ನೊಳಗೊಂಡು ವಚನಗಳು ಸೃಷ್ಟಿಯಾದವು. ಸಾಮೂಹಿಕ ನೆಲೆಯಲ್ಲಿ ಅಂದು ಆವಿರ್ಭಾವಗೊಂಡ ಹೊಸ ಧರ್ಮದ ವಿವರಣೆ ಸಮರ್ಥನೆ ತಾತ್ವಿಕಸ್ವರೂಪ ಮೊದಲಾದವುಗಳನ್ನೊಳಗೊಂಡ ವಚನಗಳೂ ರಚನೆಗೊಂಡವು. ಮೊದಲ ಗುಂಪಿನ ವಚನಗಳು ನಿರುದ್ದಿಶ್ಯ ಸೃಜನ ರಚನೆಗಳಾಗಿದ್ದರೆ ಎರಡನೆಯ ಗುಪಿನವು ಬೌದ್ಧಿಕ ಜಜ್ಞಾಸೆಯನ್ನವಲಂಬಿಸಿದ ರಚನೆಗಳಾಗಿದ್ದವು. ಅಂದಿನ ಶಿವಶರಣರು ಅಸಂಖ್ಯಾತ ವಚನಗಳನ್ನು ಬರೆದಿದ್ದರು ನಿಜ. ಅವುಗಳನ್ನು ಹೇಗೆ ಸಂಗ್ರಹಿಸಿ ಇಟ್ಟಿದ್ದರು? ಹೇಗೆ ವರ್ಗೀಕರಿಸಿದ್ದರು? ಎಂಬ ಪ್ರಶ್ನೆಗಳಿಗೆ ನಮ್ಮಲ್ಲಿ ಸಮಾಧಾನಕರ ಉತ್ತರವಿಲ್ಲ.

ಕಲ್ಯಾಣ ಕ್ರಾಂತಿಯ ನಂತರ ಶಿವಶರಣರು ದಿಕ್ಕೆಟ್ಟು ಅತ್ತಿತ್ತ ಓಡಿಹೋದರು. ಆಗ ಅವರ ವಚನ ಸಾಹಿತ್ಯದ ಗತಿ ಏನಾಯಿತು? ಪ್ರಾಣ ಭಯದಿಂದ ತತ್ತರಿಸುತ್ತಿದ್ದ ಶರಣರು ಕೈಗೆ ಸಿಕ್ಕಷ್ಟನ್ನು ತೆಗೆದುಕೊಂಡು ದಿಕ್ಕುದಿಕ್ಕುಗಳಲ್ಲಿ ಚೆಲ್ಲಾಪಿಲ್ಲಿಯಾದರು. ಆ ಸಂದರ್ಭದಲ್ಲಿ ವಚನ ಸಾಹಿತ್ಯದ ಒಂದಿಷ್ಟು ಭಾಗ ಹಾಳಾದುದೂ ಉಂಟು. ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಹರಿದು ಹಂಚಿಹೋದ ವಚನ ಸಾಹಿತ್ಯ ಅಲ್ಲಲ್ಲಿ ಅಡಗಿಕೊಂಡಿದ್ದುಕೊಂಡು ರಕ್ಷಣೆ ಪಡೆಯಬೇಕಾಯಿತು. ಈ ಅವಧಿಯಲ್ಲಿ ಮತ್ತಷ್ಟು ಭಾಗ ಹಾಳಾಗಿರಲು ಸಾಧ್ಯ. ಹೀಗೆ ಅನಾಮಧೇಯವಾಗಿ ತಲೆಮರೆಸಿಕೊಂಡಿದ್ದ ವಚನ ಸಾಹಿತ್ಯ ಪುನಃ ಬಹಿರಂಗಕ್ಕೆ ಬಂದು ತನ್ನ ಅಸ್ತಿತ್ವ ತೋರಿಸಿಕೊಳ್ಳಲು ಸುಮಾರು ಎರಡುನೂರು ವರ್ಷ ಕಾಯಬೇಕಾಯಿತು. ವಿಜಯನಗರದ ಆರಂಭಕಾರರಾದ ಸಂಗಮ ವಂಶದವರು ವೀರಶೈವ ಧರ್ಮ-ಸಂಸ್ಕೃತಿಗಳಿಗೆ ಪ್ರೋತ್ಸಾಹ ನೀಡಿದರು. ಕೆಲವರು ಸ್ವತಃ ವೀರಶೈವ ಧರ್ಮಾವಲಂಬಿಗಳಾಗಿದ್ದರು. ವಿಶೇಷವಾಗಿ ಪ್ರೌಢದೇವರಾಯನು (1424-1446) ವೀರಶೈವ ಧರ್ಮ-ಸಾಹಿತ್ಯಗಳ ಪುನರುಜ್ಜೀವನಕ್ಕೆ ಬಹಳಷ್ಟು ಪ್ರೋತ್ಸಾಹ ನೀಡಿದನು. ಅವನ ಕಾಲದಲ್ಲಿದ್ದರೆಂದು ಭಾವಿಸಲಾಗುವ ನೂರೊಂದು ವಿರಕ್ತರು ಈ ಪುನರುಜ್ಜೀವನದ ಕಾರ್ಯದಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು. ಅವರ ಸಂಘಟನೆ ವೀರಶೈವದ ಪ್ರಚಾರ - ಪ್ರಸಾರಕ್ಕೆ ತುಂಬಾ ಶ್ರಮಿಸಿತು.

ಪ್ರೌಢದೇವರಾಯ ನೀಡಿದ ಪ್ರೋತ್ಸಾಹದ ಸ್ವರೂಪ ವಿಶಿಷ್ಟವಾದುದು. ಸಾಮಾನ್ಯವಾಗಿ ಅರಸರು ವಿದ್ವಾಂಸರು-ಕವಿಗಳು-ಕಲಾವಿದರು ಮುಂತಾದವರಿಗೆ ಆಶ್ರಯ ನೀಡಿರುತ್ತಾರೆ. ಆಶ್ರಯಿತರು ಆಶ್ರಯದಾತನನ್ನು ಹೊಗಳುವಂಥ ಸಾಹಿತ್ಯ ರಚಿಸುತ್ತಾರೆ. ನೇರವಾಗಿ ಹೊಗಳದಿದ್ದರೂ ತಮ್ಮ ಕಾವ್ಯ ಕೃತಿಗಳಲ್ಲಿ ಆಶ್ರಯದಾತನನ್ನು ಯಾವ ಯಾವದೋ ನೆಪದಿಂದ ವರ್ಣಿಸುತ್ತಾರೆ. ಆದರೆ ಪ್ರೌಢದೇವರಾಯನ ಸಮಕಾಲೀನ ವೀರಶೈವ ವಿದ್ವಾಂಸರಿಗೆ ಅಂಥ ಒತ್ತಡ ಯಾವುದೂ ಇರಲಿಲ್ಲ. ತಮ್ಮ ಧರ್ಮ-ಸಾಹಿತ್ಯಗಳ ಶ್ರೇಯಸ್ಸಿನ ಚಿಂತನೆಯೊಂದೇ ಅವರಿಗಿದ್ದುದು. ಹೀಗಾಗಿ ಅವರು ಸ್ವತಂತ್ರ ಮನೋಧರ್ಮದಿಂದ ವಚನ ಸಾಹಿತ್ಯವನ್ನು ಸಂಕಲಿಸುವ ವ್ಯಾಖ್ಯಾನಿಸುವ ಕಾಯಕ ಕೈಕೊಂಡರು. ಘನ ಉದ್ದೇಶದಿಂದ ಕೈಕೊಂಡ ಈ ಕಾರ್ಯದಲ್ಲಿ ವಚನ ಸಾಹಿತ್ಯ ತನ್ನ ಸೃಜನ ಛಾಯೆಯನ್ನು ಮಂಕುಗೊಳಿಸಿಕೊಂಡು ಶಾಸ್ತ್ರೀಯತೆಯ ಚೌಕಟ್ಟಿನೊಳಗೆ ಪ್ರಕಟಗೊಂಡಿತು.

ಹನ್ನೆರಡನೆಯ ಶತಮಾನದ ಚಳುವಳಿಯ ಫಲವಾಗಿ ಜನ್ಮ ತಳೆದ ವೀರಶೈವ ಧರ್ಮಕ್ಕೆ ಖಚಿತ ತಾತ್ವಿಕ ನೆಲೆಗಟ್ಟು ಪ್ರಾಪ್ತವಾಗುವ ಮೊದಲೇ ಅದು ರಾಜಸತ್ತೆಯ ಅವಕೃಪೆಗೆ ಒಳಗಾಯಿತು. ಚೆನ್ನಬಸವಣ್ಣನಂಥ ಮೇಧಾವಿಗಳು ಆ ಕಾಲಕ್ಕಾಗಲೇ ತಾತ್ವಿಕ ಸ್ವರೂಪ ನೀಡಲು ಪ್ರಯತ್ನಿಸಿದ್ದರೂ ಅದಕ್ಕೆ ಸ್ಪಷ್ಟ ಆಕಾರ ಪ್ರಾಪ್ತವಾಗಲಿಲ್ಲ. ಎರಡು ನೂರು ವರ್ಷಗಳ ನಂತರ ಮುಕ್ತ ವಾತಾವರಣದಲ್ಲಿ ಪುನಃ ತಲೆ ಎತ್ತಿದ ವೀರಶೈವ ಧರ್ಮವು ತನಗೊಂದು ನಿಖರವಾದ ತಾತ್ವಿಕ ನೆಲೆಗಟ್ಟನ್ನು ನಿರ್ಮಿಸಿಕೊಳ್ಳುವುದು ಅನಿವಾರ್ಯವಾಯಿತು. ವೈದಿಕ ಧರ್ಮದೊಂದಿಗಿನ ಘರ್ಷಣೆಯಲ್ಲಿ ಆಕಾರ ತಳೆದ ಈ ಧರ್ಮವು ತನಗರಿವಿಲ್ಲದಂತೆ ವೈದಿಕ ಧರ್ಮದ ಅನುಕರಣೆಗೆ ಇಳಿಯಬೇಕಾಯಿತು. ತನ್ನ ಪ್ರತಿಸ್ಪರ್ಧಿ ಧರ್ಮದ ಘನತೆ, ತಾತ್ವಿಕತೆಗಳು ತನ್ನಲ್ಲಿಯೂ ಇವೆ ಎಂಬುದನ್ನು ಸಮರ್ಥ ರೀತಿಯಲ್ಲಿ ಪ್ರತಿಪಾದಿಸಬೇಕಾಯಿತು. ಪ್ರಸ್ಥಾನತ್ರಯಿಗಳು ಮತ್ತು ಅವುಗಳ ವ್ಯಾಖ್ಯಾನಗಳು ಅಂದಿನ ವೀರಶೈವ ಪಂಡಿತರಿಗೆ ಮಾದರಿಯಾಗಿ ಕಂಡದ್ದರಲ್ಲಿ ಆಶ್ಚರ್ಯವಿಲ್ಲ. ಏನೆಲ್ಲ ಸಿದ್ಧಾಂತಗಳನ್ನು ರೂಪಿಸಲು ಮತ್ತು ತಾತ್ವಿಕ ನೆಲೆಗಟ್ಟು ನಿರ್ಮಿಸಲು ಅವರಿಗೆ ಆಕರವಾಗಿ ದೊರೆತ

ಘನ ಸಂಪತ್ತು - ವಚನ ಸಾಹಿತ್ಯ. ತಮ್ಮ ಉದ್ದೇಶಕ್ಕೆ ತಕ್ಕಂತೆ ಶರಣರ ವಚನಗಳನ್ನು ಸಂಗ್ರಹಿಸಿದರು, ಸಂಕಲನಗೊಳಿಸಿದರು. ಈ ಪ್ರಕ್ರಿಯೆಯಲ್ಲಿ ಅವರಿಗೆ ವಚನಗಳ ಸಾಹಿತ್ಯಿಕ ಗುಣ ಪ್ರಧಾನವಾಗಿ ಕಾಣದೆ ಅವು ಸ್ಫುರಿಸಬಹುದಾದ ತಾತ್ವಿಕ ಚಿಂತನೆಗಳು ಮುಖ್ಯವೆಂದೆನಿಸಿದವು. ತಾವು ಕಲ್ಪಿಸಿದ ಸಿದ್ಧಾಂತ-ತತ್ವಗಳ ಸಮರ್ಥನೆಗೆ ವಚನಗಳನ್ನು ಬಳಸಿಕೊಂಡರು. ಹೀಗೆ ವಚನ ಸಾಹಿತ್ಯದ ಶಾಸ್ತ್ರೀಕರಣ ಪ್ರಾರಂಭವಾಯಿತು.

'ಸ್ಥಲ'ದ ಕಲ್ಪನೆ ವಚನಕಾರರ ಕಾಲಕ್ಕೇ ರೂಢಿಗೆ ಬಂದಿತ್ತು. ಅವರು 'ಷಟ್‌ಸ್ಥಲ'ಗಳ ಬಗ್ಗೆ ಗಂಭೀರವಾಗಿ ಆಲೋಚಿಸಿದ್ದರು. ಸಾಧಕನು ಆತ್ಯಂತಿಕ ಸತ್ಯದೊಂದಿಗೆ ಒಂದಾಗುವವರೆಗಿನ ವಿವಿಧ ಹಂತಗಳೇ ಈ 'ಸ್ಥಲ'ಗಳು. ಒಂದು ಸ್ಥಲದಿಂದ ಮತ್ತೊಂದು ಸ್ಥಲಕ್ಕೇರುವುದು ಸಾಧಕನ ಸಾಧನಾ ಮಾರ್ಗದ ಪ್ರಗತಿಯನ್ನು ತಿಳಿಸುತ್ತದೆ. ಭಕ್ತ ಮಹೇಶ ಪ್ರಸಾದ ಪ್ರಾಣಲಿಂಗಿ ಶರಣ ಮತ್ತು ಐಕ್ಯ ಇವು ಇಂಥ ಆರು ಸ್ಥಲಗಳು. ವಿಜಯನಗರ ಕಾಲದ ಕೆಲವು ಪಂಡಿತರಿಗೆ ಈ ಆರು ಸ್ಥಲಗಳ ಹೊರತಾಗಿ ಇನ್ನಷ್ಟು ಸ್ಥಲಗಳನ್ನು ರೂಢಿಗತಗೊಳಿಸುವ ಇಚ್ಛೆ ಉಂಟಾಯಿತು. ಈ ಹಿನ್ನೆಲೆಯಲ್ಲಿ 'ಏಕೋತ್ತರ ಶತಸ್ಥಲ' ಕಲ್ಪನೆ ರೂಪುಗೊಂಡಿತು. ವೀರಶೈವ ಸಿದ್ಧಾಂತ ಅತ್ಯಂತ ಸೂಕ್ಷ್ಮವಾದುದು, ವೈಜ್ಞಾನಿಕವಾದುದು, ಬುದ್ಧಿಪ್ರಧಾನವಾದುದು ಎಂಬುದನ್ನು ಸಮರ್ಥಿಸಿಕೊಳ್ಳಲು ನೂರೊಂದು ಸ್ಥಲಗಳನ್ನು ಆಯೋಜಿಸಲಾಯಿತು. ಇಂಥ ಪ್ರಯತ್ನಕ್ಕೆ ನಾಂದಿ ಹಾಡಿದವನು ಮಹಲಿಂಗರಂಗ. ಇವನು ಪುರಿಗೆಯವನು. ದಂಡನಾಯಕನಾಗಿದ್ದ ಜಕ್ಕಣಾರ್ಯನ ಮೂಲಕ ವಿಜಯನಗರದ ಸಂಪರ್ಕ ಹೊಂದಿದ್ದನು. ತನ್ನ ಶಿಷ್ಯ ಜಕ್ಕಣಾರ್ಯನಿಗೆ ವೀರಶೈವ ಸಿದ್ಧಾಂತವನ್ನು ಬೋಧಿಸುವ ಉದ್ದೇಶ-ವಿಧಾನದಲ್ಲಿ ಮಹಲಿಂಗನು ಏಕೋತ್ತರ ಶತಸ್ಥಲ ಸಂಯೋಜಿಸಿದ್ದಾನೆ.

ಏಕೋತ್ತರ ಶತಸ್ಥಲದಲ್ಲಿ ಅಂಗಸ್ಥಲ 44 ಮತ್ತು ಲಿಂಗಸ್ಥಲ 57, ಹೀಗೆ 101 ಸ್ಥಲಗಳಿವೆ. ಅಂಗಸ್ಥಲ ವಿಭಾಗದಲ್ಲಿ ಮೊದಲಿನ ಷಟ್‌ಸ್ಥಲಗಳಿಗೆ ಮತ್ತೆ ಒಂದಿಷ್ಟು ಉಪಸ್ಥಲಗಳನ್ನು ಸೇರಿಸಲಾಗಿದೆ. ಉದಾ - ಭಕ್ತಸ್ಥಲಕ್ಕೆ 14, ಮಹೇಶಸ್ಥಲಕ್ಕೆ 8, ಪ್ರಸಾದಿಸ್ಥಲಕ್ಕೆ 6, ಪ್ರಾಣಲಿಂಗಿಸ್ಥಲಕ್ಕೆ 4, ಶರಣಸ್ಥಲಕ್ಕೆ 3, ಐಕ್ಯಸ್ಥಲಕ್ಕೆ 3 - ಹೀಗೆ. ಇವುಗಳಿಗೆ ಮೂಲ ಷಟ್‌ಸ್ಥಲ ಸೇರಿಸಿದಾಗ 44 ಸ್ಥಲಗಳಾಗುತ್ತವೆ. ಲಿಂಗಸ್ಥಲದ ವಿವರ ಹೀಗಿದೆ - ಆಚಾರಲಿಂಗಸ್ಥಲ 9, ಗುರುಲಿಂಗಸ್ಥಲ 9, ಶಿವಲಿಂಗಸ್ಥಲ 9, ಜಂಗಮಲಿಂಗಸ್ಥಲ 12, ಪ್ರಸಾದಲಿಂಗಸ್ಥಲ 9, ಮಹಾಲಿಂಗಸ್ಥಲ 9 - ಹೀಗೆ ಒಟ್ಟು 57 ಸ್ಥಲಗಳು.

'ಏಕೋತ್ತರ ಶತಸ್ಥಲ' ಸ್ವರೂಪದಲ್ಲಿ ಒಂದು ವಚನ ಸಂಕಲನ ಗ್ರಂಥವಾಗಿದೆ. ಮಹಾಲಿಂಗದೇವನು ಪ್ರತಿಯೊಂದು ಸ್ಥಲಕ್ಕೆ ವಿವರಣೆ ನೀಡಲು ಶರಣರ ವಚನಗಳನ್ನೇ ಉದಾಹರಿಸಿದ್ದಾನೆ. ಮಹಲಿಂಗರಂಗನು "ತಮ್ಮ ಪರಮ ಜ್ಞಾನುಭಾವ ಪ್ರಸನ್ನ ಪ್ರಕಾಶದಿಂ ಬಸವರಾಜ ದೇವರು ಚೆನ್ನಬಸವರಾಜ ದೇವರು ಪ್ರಭುದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳ ಪರಮ ವಾಕ್ಯಾಮೃತಮಪ್ಪವಚನಂಗಳಿಂ ಶಿಷ್ಯಂಗೆ ಬೋಧಿಸುತ್ತಿರಲು" ಎಂದು ಹೇಳಿರುವಲ್ಲಿ ಶರಣರ ವಚನಗಳನ್ನೇ ಆಧರಿಸಿ ತನ್ನ ಏಕೋತ್ತರ ಶತಸ್ಥಲವನ್ನು ರಚಿಸಿದನೆಂಬುದು ಸ್ಪಷ್ಟವಾಗುತ್ತದೆ. ಅವನು ತನ್ನ ಉದ್ದೇಶಕ್ಕಾಗಿ ಮೂವತ್ತು ವಚನಕಾರರ 934 ವಚನಗಳನ್ನು ಬಳಸಿಕೊಂಡಿದ್ದಾನೆ.

ವಚನಗಳಲ್ಲಿ ಕೆಲವು ಸಲ ತಾತ್ವಿಕ ಚಿಂತನೆ ಸಹಜವಾಗಿ ಒಡಮೂಡಿರಬಹುದು. ಆದರೆ ಮಹಲಿಂಗದೇವನ ಸ್ವಕಲ್ಪಿತ ನೂರೊಂದು ಸ್ಥಲಗಳಿಗೆ ಉದಾಹರಣೆಯಾಗಬೇಕೆಂಬ ಉದ್ದೇಶದಿಂದ ವಚನಕಾರರು ವಚನಗಳನ್ನು ರಚಿಸಿರಲಿಲ್ಲ. ಒಂದು ಸ್ಥಲಕ್ಕೆ ಉದಾಹರಣೆಯಾಗಿ ಕೊಡುವ ವಚನವು ತನ್ನ ಮೂಲದ ಸಹಜ ಸೊಬಗನ್ನು ಕಳೆದುಕೊಂಡು ಕೃತಕ ವಿವರಣೆಯಾದಂತೆನಿಸುವುದು. ಬಹಳಷ್ಟು ಉದಾಹರಣ ವಚನಗಳು ಎಳೆದು ತಂದು ಒತ್ತಾಯದಿಂದ ಸ್ಥಲದ ಚೌಕಟ್ಟಿನೊಳಗೆ ಕೂಡಿಸಿದಂತೆ ಕಾಣುತ್ತವೆ.

ಮರದೊಳಗಣ ಮಂದಾಗ್ನಿಯ ಉರಿಯದಂತಿರಿಸಿದೆ
ನೊರೆಯೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ
ಶರೀರದೊಳಗಾತ್ಮವನಾರೂ ಕಾಣದಂತಿರಿಸಿದೆ
ನೀನು ಬೆರಸುವ ಭೇದಕ್ಕೆ ಬೆರಗಾದೆನ್ನೆ ರಾಮನಾಥ ॥

ಈ ವಚನಕ್ಕೆ ಯಾವ ವಿವರಣೆಯೂ ಬೇಕಾಗಿಲ್ಲ ತನ್ನಷ್ಟಕ್ಕೆ ತಾನು ಸಹಜ ಸೊಬಗು-ಅರ್ಥ ಸಂಪತ್ತಿನಿಂದ ಹೊಳೆಯುವ ಇದನ್ನು ಮಹಲಿಂಗದೇವನು ಲಿಂಗಸ್ಥಲದಲ್ಲಿ ಬರುವ ಪ್ರಸಾದಿ ಲಿಂಗಸ್ಥಲದ ನಾಲ್ಕನೆಯ ಸ್ಥೂಲವಾದ ಪಿಂಡಾಕಾಶ ಸ್ಥಲಕ್ಕೆ ಉದಾಹರಣೆಯಾಗಿ ಕೊಟ್ಟಿದ್ದಾನೆ. ಹೀಗಾಗಿ ಅತ್ಯಂತ ಸರಳವಾಗಿರುವ ಈ ವಚನ ಶಾಸ್ತ್ರೀಯತೆಯ ಭಾರ ಹೊತ್ತು ನರಳುವಂತಾಗಿದೆ.

ಉದಯ ಮಧ್ಯಾಹ್ನ ಸಂಧ್ಯಾಕಾಲವನೋಡಿ ಮಾಡುವ ಕರ್ಮಿ ನೀಕೇಳಾ
ಉದಯವೆಂದೇನೋ ಶರಣಂಗೆ ಅಸ್ತಮಾನವೆಂದೇನೋ ಶರಣಂಗೆ
ಮಹಾಮೇರುವಿನ ಮರೆಯಲಿರ್ದು ತನ್ನ ನೆಳಲನರಸುವ
ಭಾವ ಭ್ರಮಿತರ ಮೆಚ್ಚ ನಮ್ಮ ಕೂಡಲ ಸಂಗಮದೇವಾ ॥

ಇದನ್ನು ಮಹಾಲಿಂಗದೇವನು 'ಭಾವಪ್ರಕಾಶ ಸ್ಥಲ'ಕ್ಕೆ ಉದಾಹರಣೆಯಾಗಿ ನೀಡಿದ್ದಾನೆ. ಸ್ಥಲದ ಹೆಸರಿಗೂ ಈ ವಚನಕ್ಕೂ ಸಂಬಂಧವೇರ್ಪಡದು. ಅಲ್ಲದೆ ಈ ವಚನದಲ್ಲಿರುವ ವಿಡಂಬನೆಯ ಅಂಶವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ ಅದನ್ನು ಸ್ಥಲವೊಂದಕ್ಕೆ ಉದಾರಹಣೆಯಾಗಿ ನೀಡಿರುವುದು ಅದರ ಮೂಲದ ಸೊಗಡನ್ನು ಅಲ್ಲಗಳೆದಂತಾಗಿದೆ. ಇಂಥ ದುಸ್ಥಿತಿ ಬಹಳಷ್ಟು ವಚನಗಳಿಗೆ ಪ್ರಾಪ್ತವಾಗಿದೆ.

ಕಲ್ಲುಮಠದ ಪ್ರಭುದೇವನ ''ಲಿಂಗ ಲೀಲಾ ವಿಲಾಸ ಚಾರಿತ್ರ'' ಸಂಕಲನ, ವ್ಯಾಖ್ಯಾನ ಶ್ಲೋಕಗಳನ್ನೊಳಗೊಂಡ ಒಂದು ವಿಶಿಷ್ಟ ಕೃತಿಯಾಗಿದೆ. ಕೃತಿಯ ಹೆಸರು ಯಾವುದೋ ಒಂದು ಕಥೆಯನ್ನು ಯಾರದೋ ಚರಿತ್ರೆಯನ್ನು ಹೇಳುತ್ತಿರಬಹುದು ಎಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದರೆ ಇದೊಂದು ಕಥಾರಹಿತ ಲಿಂಗಲೀಲೆಯನ್ನು ವರ್ಣಿಸುವ ಕೃತಿಯಾಗಿದೆ. ''ಪುರಾತನ ವಚನ ಏಳುನೂರು ಎಪ್ಪತ್ತು ತೆಗೆದುಕೊಂಡು ಷೋಡಷ ಸ್ಥಲ ಪರಿಕ್ರಮದಿಂದ ಸೇರಿಸಿ'' ವ್ಯಾಖ್ಯಾನ ಮಾಡಿರುವುದಾಗಿ ಕಲ್ಲುಮಠದ ಪ್ರಭುದೇವನು ಹೇಳಿಕೊಂಡಿದ್ದಾನೆ. ಇದರಲ್ಲಿ ನಿಷ್ಕಲ ಲಿಂಗಸ್ಥಲ, ಮಹಾಲಿಂಗಸ್ಥಲ, ಲಿಂಗ ಮೂರ್ತಿಸ್ಥಲ, ಅಂಗಸ್ಥಲ, ಸಂಸಾರ ಸಂಬಂಧಸ್ಥಲ, ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ಗುರುಕರುಣಸ್ಥಲ, ಭಕ್ತಿಸ್ಥಲ, ಮಾಹೇಶ್ವರಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ, ಐಕ್ಯಸ್ಥಲ, ಸ್ವಲೀಲಾ ನಂದಸ್ಥಲ - ಹೀಗೆ ಹದಿನಾರು ಸ್ಥಲಗಳಿವೆ. ಪ್ರತಿಯೊಂದು ಸ್ಥಲದ ಆರಂಭಕ್ಕೆ ಸ್ಥಲ ನಿರ್ದೇಶನದ ನಂತರ ಸೂತ್ರ ನಿರೂಪಣೆಯಿದ್ದು ಸಂಸ್ಕೃತ ಶ್ಲೋಕಗಳನ್ನು ಪೀಠಿಕೆಯಂತೆ ಬಳಸಿಕೊಳ್ಳಲಾಗಿದೆ. ಆನಂತರ ವಚನಗಳು, ವಚನಗಳ ಕೆಳಗೆ ಅವುಗಳ ಟೀಕೆ - ವ್ಯಾಖ್ಯಾನ ಇದು ಈ ಗ್ರಂಥದ ಸ್ವರೂಪ. ಹೀಗಾಗಿ ಇದು ಸಂಕಲನ ಗ್ರಂಥವೂ ಹೌದು ವ್ಯಾಖ್ಯಾನ ಗ್ರಂಥವೂ ಹೌದು. ಕ. ಪ್ರಭುದೇವನು ವಚನ ಸಾಹಿತ್ಯವನ್ನು 'ವಚನಾಗಮ' ಎಂದು ಕರೆದಿದ್ದಾನೆ ಮತ್ತು ವಚನಗಳ ಅರ್ಥ ವಿವರಣೆ ಸಮರ್ಥಿಸಲು ಆಗಮಗಳ ಶ್ಲೋಕಗಳನ್ನು ಧಾರಾಳವಾಗಿ ಉಪಯೋಗಿಸಿದ್ದಾನೆ. ಅವನಿಗೆ ವಚನಗಳ ಸೃಜನ ಗುಣಕ್ಕಿಂತ ತಾತ್ವಿಕತೆ - ಮಹತ್ವದ್ದಾಗಿ ಕಂಡಿತು. ಆದ್ದರಿಂದಲೇ ವಚನಗಳನ್ನು ಆಗಮಗಳೊಂದಿಗೆ ಸಮೀಕರಿಸಿದ್ದಾನೆ. ಸಾಮಾನ್ಯವಾಗಿ ಏಕೋತ್ತರ ಶತಸ್ಥಲದ ಗುಣದೋಷಗಳು ಲಿಂಗಲೀಲಾ ವಿಲಾಸ ಚಾರಿತ್ರದಲ್ಲಿಯೂ ಕಂಡುಬರುತ್ತವೆ. ಕ. ಪ್ರಭುದೇವನ ತೀಕ್ಷ್ಣಮತಿ, ಅಗಾಧ ಪಾಂಡಿತ್ಯ, ನಿರೂಪಣಾ ಶಕ್ತಿಗಳು ಒಂದೆಡೆ ಮೆಚ್ಚುಗೆ ಗಳಿಸಿದರೆ ವಚನಗಳು ತಮ್ಮ ಸಹಜ ಸೊಬಗನ್ನು ಕಳೆದುಕೊಂಡು ತತ್ವ ನಿರೂಪಣೆಗೆ ಉದಾಹರಣೆಗಳಾಗಿರುವುದನ್ನು ಕಂಡಾಗ ವಿಷಾದವೆನಿಸುತ್ತದೆ. ಆದರೆ ಬೆಡಗಿನ ವಚನಗಳಿಗೆ ವಿವರಣಾತ್ಮಕ ಟೀಕೆ ಬರೆಯುವುದರ ಮೂಲಕ ಕ. ಪ್ರಭುದೇವನು ವಚನ ಸಾಹಿತ್ಯದ ಅಧ್ಯಯನವನ್ನು ಸುಗಮಗೊಳಿಸಿರುವುದನ್ನು ಮರೆಯಲಾಗದು.

ಹೀಗೆ ವಿಜಯನಗರ ಕಾಲಕ್ಕೆ ಪ್ರಾರಂಭವಾದ ವಚನ ಸಾಹಿತ್ಯದ ಶಾಸ್ತ್ರೀಕರಣ ಪ್ರಕ್ರಿಯೆ ಮುಂದುವರೆದು ಅನೇಕ ಫಲಿತಗಳನ್ನು ನೀಡಿತು.

19. ವಿಜಯನಗರ ಕಾಲದಲ್ಲಿ ಸಂಗೀತ ಮತ್ತು ನೃತ್ಯ - ಕೊಡುಗೆ

ವಿ.ಎಸ್. ಸಂಪತ್ಕುಮಾರಾಚಾರ್ಯ

ಪ್ರಸ್ತಾವನೆ:

ಭಾರತೀಯ ಸಂಸ್ಕೃತಿಯ ಮುಕುಟದಲ್ಲಿ ಅತ್ಯಂತ ಜಾಜ್ವಲ್ಯಮಾನವಾದ ರತ್ನದಂತಿರುವುದು ಸಂಗೀತ. ಇದರ ಮೂಲವು ಸಾಮವೇದ. ಆದ್ದರಿಂದ ವಿಶ್ವದ ಸಂಗೀತ ಪದ್ಧತಿಗಳಲ್ಲಿ ಅತ್ಯಂತ ಪುರಾತನವಾದುದು. ಇದು ನಾದ ವಿದ್ಯೆ, ಧ್ವನಿಯ ವಿಜ್ಞಾನ, ಒಂದು ಉಪವೇದ. ಭಾರತೀಯ ಸಂಗೀತದ ಸಪ್ತ ಸ್ವರಗಳಾದ ಸ, ರಿ, ಗ, ಮ, ಪ, ದ, ನಿ - ನಾರದ ಪರಿವ್ರಾಜಕ ಉಪನಿಷತ್ತಿನಲ್ಲಿ ಮೊಟ್ಟಮೊದಲನೆ ಸಲ ಉಕ್ತವಾಗಿವೆ. ತ್ರಿಸ್ಥಾಯಿಗಳು, ಸ್ವರದ ಗಮಕಗಳನ್ನು ಋಕ್ ಪ್ರತಿಶಾಖ್ಯದಲ್ಲಿ ಹೇಳಿರುವುದು ಅತ್ಯಂತ ಪುರಾತನವಾದುದು.

ಸಂಗೀತ ಸಾಹಿತ್ಯದಲ್ಲಿ ಭರತ ಮುನಿಯ ನಾಟ್ಯಶಾಸ್ತ್ರವೆಂಬ ಗ್ರಂಥವು ಅತ್ಯಂತ ಹಿಂದಿನದು. ಇದರಲ್ಲಿ ಸಂಗೀತವನ್ನು ನಾಟ್ಯ ಮತ್ತು ನಾಟಕದ ಒಂದು ಪೋಷಕಾಂಗವಾಗಿ ಪರಿಗಣಿಸಲಾಗಿದೆ. ಇದು ವೇದದ ಸಂಗೀತದಿಂದ ಉಂಟಾದ ಮೊದಲ ಬದಲಾವಣೆಯನ್ನು ಸೂಚಿಸುತ್ತದೆ. ಭರತನ ಗ್ರಂಥದ ನಂತರ ಅತಿ ಮುಖ್ಯವಾದ ಶಾಸ್ತ್ರ ಗ್ರಂಥವೆಂದರೆ ಮತಂಗ ಮುನಿಯ ಬೃಹದ್ದೇಶಿ (9ನೇ ಶತಮಾನ). ಇದರಲ್ಲಿ ಪ್ರಥಮ ಬಾರಿ ರಾಗದ ವಿವೇಚನೆಯನ್ನು ಮಾಡಲಾಗಿದೆ. ತರುವಾಯ ಅತಿ ಮುಖ್ಯವಾದ ಗ್ರಂಥ ಶಾರ್ಙ್ಗದೇವನ ಸಂಗೀತ ರತ್ನಾಕರ (13ನೇ ಶತಮಾನ). ಈ ಗ್ರಂಥವನ್ನು ಭಾರತೀಯ ಸಂಗೀತದ ಅಧಿಕೃತವಾದ ಪ್ರಮುಖ ಗ್ರಂಥವೆಂದು ಇಂದಿಗೂ ಪರಿಗಣಿಸಲಾಗಿದೆ. ಇದು 264 ರಾಗಗಳನ್ನೂ ಪ್ರಸಿದ್ಧವಾಗಿದ್ದ ದೇಶೀ ರಾಗಗಳನ್ನೂ, 120 ತಾಳಗಳನ್ನೂ, ಒಂದು ರಾಗವನ್ನು ಹಾಡುವಾಗ ಅನುಸರಿಸಬೇಕಾದ ನಿಯಮಗಳನ್ನೂ ಕುರಿತು ವಿವರಿಸಿದೆ.

13ನೇ ಶತಮಾನದವರೆಗೂ ಭಾರತಾದ್ಯಂತ, ಸ್ಥಳೀಯ ವ್ಯತ್ಯಾಸಗಳನ್ನು ಬಿಟ್ಟರೆ, ಒಂದೇ ವಿಧವಾದ ಸಂಗೀತ ಪದ್ಧತಿ ಇದ್ದಿತು. ದೆಹಲಿಯು ಪರಕೀಯ ಮುಸ್ಲಿಮರ ವಶವಾದನಂತರ, ಉತ್ತರ ಭಾರತದಲ್ಲಿ ಪರ್ಷಿಯಾ ಮತ್ತು ಅರಬ್ಬಿಯಿಂದ ಪ್ರಭಾವಿತವಾಗಿ ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತಗಳೆಂಬ ಎರಡು ಪದ್ಧತಿಗಳಾಗಿ ವಿಭಾಗವಾಯಿತು. ದಕ್ಷಿಣ ಭಾರತದಲ್ಲಿ ವಿದೇಶೀ ಆಕ್ರಮಣಗಳಿಗೆ ಒಳಗಾಗಿ ಅಲ್ಲೋಲಕಲ್ಲೋಲವಾಗದೆ, ಸಂಗೀತವು ಪರಂಪರೆಗೆ ಹೊಂದಿಕೊಂಡು ಮುಂದುವರಿಯಿತು. ಇದೇ ಕಾಲಾನುಕ್ರಮದಲ್ಲಿ ದಾಕ್ಷಿಣಾತ್ಯ ಅಥವಾ ಕರ್ನಾಟಕ ಸಂಗೀತ ಪದ್ಧತಿ ಎನಿಸಿಕೊಂಡಿತು. ಪ್ರಬಂಧ ಅಥವಾ ರಚನೆಗಳು, ಪ್ರಮೇಯ ಅಥವಾ ನಿಯಮಗಳು, ಸಂಶೋಧನೆ ಮತ್ತು ಸಂಗೀತವಾದ್ಯಗಳು - ಈ ಎಲ್ಲ ಕ್ಷೇತ್ರಗಳಲ್ಲಿ ಕರ್ನಾಟಕದವರು ಮೂಲಭೂತವಾದ ಕೊಡುಗೆಯನ್ನು ನೀಡಿದ್ದಾರೆ. ಕರ್ನಾಟಕದಲಿದ್ದವರು ಮತ್ತು ಬೇರೆ ರಾಜ್ಯಗಳಲ್ಲಿ ನೆಲೆಸಿದ ಕರ್ನಾಟಕದ ಜನರ ಕೊಡುಗೆಯು ವಿಶೇಷವಾದುದು. ಇದಲ್ಲದೆ, ಹೊಯ್ಸಳ ಸಾಮ್ರಾಜ್ಯ ಮತ್ತು ವಿಜಯನಗರ ಸಾಮ್ರಾಜ್ಯಗಳು ದಕ್ಷಿಣದ ಶ್ರೀರಂಗದವರೆಗೆ ವಿಸ್ತಾರವಾಗಿದ್ದುವು. ತತ್ಕಾರಣ ದಕ್ಷಿಣ ಭಾರತದ ಸಂಗೀತವನ್ನು ಕರ್ನಾಟಕ ಸಂಗೀತವೆಂದು ಕರೆಯುವುದು ರೂಢಿಗೆ ಬಂದಿದೆ.

ವಿಜಯನಗರ ಕಾಲ:

ಹರಿಹರ ಮತ್ತು ಬುಕ್ಕರಾಯರ ಗುರು ಮತ್ತು ಶೃಂಗೇರಿ ಮಠಾಧೀಶರಾಗಿದ್ದ ವಿದ್ಯಾರಣ್ಯ ಶ್ರೀಚರಣರು, ಒಬ್ಬ ಮಹಾವಿದ್ವಾಂಸರೂ ಸಂಗೀತದಲ್ಲಿ ಘನವಿದ್ವಾಂಸರೂ ಆಗಿದ್ದರು. ಇವರು ಸಂಗೀತಸಾರವೆಂಬ ಲಕ್ಷಣಗ್ರಂಥವನ್ನು ರಚಿಸಿದರು. ಈ ಗ್ರಂಥವು ಇಲ್ಲಿಯವರೆಗೆ ದೊರೆತಿಲ್ಲವಾದರೂ ಗೋವಿಂದ ದೀಕ್ಷಿತರ ಸಂಗೀತ ಸುಧಾ ಎಂಬ ಗ್ರಂಥದಲ್ಲಿ ಶ್ರೀ ವಿದ್ಯಾರಣ್ಯರನ್ನೂ ಅವರ ಸಂಗೀತಸಾರದಿಂದ ಸ್ವಲ್ಪ ಭಾಗವನ್ನೂ ಉಲ್ಲೇಖಿಸಿರುವುದರಿಂದ ಈ ಗ್ರಂಥದ ವಿಚಾರವಾಗಿ ತಿಳಿದು ಬರುತ್ತದೆ. ಉಲ್ಲೇಖವು ಹೀಗಿದೆ:

''ಸಂಗೀತಸಾರಂ ಸಮವೇಕ್ಷ್ಯ ವಿದ್ಯಾರಣ್ಯಾಭಿದ ಶ್ರೀ ಚರಣ ಪ್ರಣೀತಮ್ । (ಪು. 152)
ಕರ್ಣಾಟಕ ಸಿಂಹಾಸನ ಭಾಗ್ಯ ವಿದ್ಯಾರಣ್ಯಾಭಿದ ಶ್ರೀ ಚರಣಾಗ್ರಣೇಭ್ಯಃ ।
ಆರಭ್ಯರಾಗಾನ್ ಪ್ರಚುರ ಪ್ರಯೋಗಾನ್ ಪಂಚಾಶತಮ್ ಚಾಕಲಯೇ ಷಡಂಗಾನ್ ॥ (ಅದೇ ಪುಟ).

ಈ ಗ್ರಂಥದಲ್ಲಿ ವಿದ್ಯಾರಣ್ಯರು 15 ಜನಕರಾಗಗಳನ್ನು ಹೆಸರಿಸಿದ್ದಾರೆ. ಜನಕ-ಜನ್ಯರಾಗ ಪದ್ಧತಿಯ ರಾಗ ವರ್ಗೀಕರಣವನ್ನು ಸೂಚಿಸಿದವರಲ್ಲಿ ಇವರೇ ಮೊದಲಿಗರು. 15 ರಾಗಗಳ ವರ್ಗೀಕರಣದಲ್ಲಿ ಒಳಗೊಂಡಂತೆ 50 ರಾಗಗಳ ವಿವರಣೆಯನ್ನು ಕುರಿತು ವಿದ್ಯಾರಣ್ಯರು ಮುಂದಿನ ವ್ಯವಸ್ಥೆಯ ಬೆಳವಣಿಗೆಗೆ ಮಾರ್ಗದರ್ಶಿಯಾಗಿ ಕರ್ನಾಟಕ ಸಂಗೀತ ಸಾಮ್ರಾಜ್ಯ ಸ್ಥಾಪಕರಾದರು.

ವಿಜಯನಗರದ ದೊರೆಗಳು ಸಂಗೀತ ಮತ್ತು ಇತರ ಲಲಿತ ಕಲೆಗಳ ಪೋಷಕರಾಗಿದ್ದರು. ಸಂಗೀತ ಮತ್ತು ನೃತ್ಯ ಇವು ಯಮಳಕಲೆಗಳಾಗಿ ಪರಸ್ಪರ ಪೋಷಕಗಳಾಗಿದ್ದುವು. ಇವು ಸಾರ್ವಜನಿಕ ಸಮಾರಂಭಗಳು, ಉತ್ಸವಗಳು, ಧಾರ್ಮಿಕ ಸಮಾರಂಭಗಳು, ರಾಜಾಸ್ಥಾನಗಳು ಮತ್ತು ಸಭೆಗಳ ಕಲಾಪಗಳ ಒಂದು ಅಂಗವಾಗಿದ್ದುವು. ಈ ಲಲಿತ ಕಲೆಗಳ ಪೋಷಣೆ ಮತ್ತು ವಿಕಾಸದಲ್ಲಿ ದೇವಾಲಯಗಳು ಮಹತ್ತರ ಪಾತ್ರ ವಹಿಸಿದ್ದುವು. ಅನೇಕ ಸಂಗೀತ ವಿದ್ವಾಂಸರು ಮತ್ತು ವಾದ್ಯಗಾರರು ರಾಜರು, ಶ್ರೀಮಂತರು, ರಾಜ ಪುರುಷರು ನೀಡಿದ ವೃತ್ತಿಗಳಿಂದ ಜೀವನ ಮಾಡುತ್ತಿದ್ದರು.[1]

ಸಂಗೀತ ಶಾಸ್ತ್ರ ಮತ್ತು ಪ್ರಯೋಗಗಳು ಈ ಕಾಲದಲ್ಲಿ ಮಹತ್ತರವಾದ ಅಧ್ಯಯನ ಮತ್ತು ಸಂಶೋಧನೆಗೆ ಒಳಗಾಯಿತು ಎಂಬುದು ಹಲವು ಸಂಗೀತ ಶಾಸ್ತ್ರಗಳು ಮತ್ತು ಸಮಕಾಲೀನ ಸಾಹಿತ್ಯ ಗ್ರಂಥಗಳಿಂದ ವ್ಯಕ್ತವಾಗುತ್ತದೆ. ಸರ್ವರಿಗೂ ತಿಳಿದಿರುವಂತೆ, ವಿಜಯನಗರ ಸಾಮ್ರಾಜ್ಯವು ಹಿಂದೂ ಸಂಸ್ಕೃತಿಯ ಸರ್ವತೋಮುಖವಾದ ಬೆಳವಣಿಗೆಗೆ ಅಮೂಲ್ಯವಾದ ಸೇವೆ ಸಲ್ಲಿಸಿತು. ಸಂಗೀತ ಪ್ರೇಮವು ಸಮಾಜದ ಎಲ್ಲ ಸ್ತರಗಳಿಗೂ ವ್ಯಾಪಿಸಿತ್ತು.

ಶಾರ್ಙ್ಗದೇವನ ಸಂಗೀತ ರತ್ನಾಕರದ ಪ್ರಸಿದ್ಧವಾದ ವ್ಯಾಖ್ಯಾನಕಾರನಾದ ಚತುರ ಕಲ್ಲಿನಾಥನು ಇಮ್ಮಡಿ ದೇವರಾಯನ ಪೋಷಣೆಯನ್ನು ಪಡೆದಿದ್ದನು. ಇವನ ಪ್ರಸಿದ್ಧ ವ್ಯಾಖ್ಯಾನ ಗ್ರಂಥವಾದ 'ಕಲಾನಿಧಿ' ಎಂಬುದು ಒಂದು ನಿಖರವಾದ, ಸ್ಪಷ್ಟವಾದ ಗ್ರಂಥ. ಇದು ಮುಂದೆ ರಮಾಮಾತ್ಯ, ಪುಂಡರೀಕ ವಿಠಲ, ಸೋಮನಾಥ, ವೆಂಕಟಮಖಿ, ತುಳಜಾಜಿ ಮುಂತಾದವರಿಗೆ ಅತ್ಯಂತ ಮುಖ್ಯವಾದ ಆಕರಗ್ರಂಥವಾಯಿತು. ಇವನು ವೇದಗಳು, ಉಪನಿಷತ್ತುಗಳು, ವ್ಯಾಕರಣ, ತರ್ಕ, ಅಲಂಕಾರ ಮತ್ತು ಆಯುರ್ವೇದಗಳಲ್ಲಿ ವಿದ್ವಾಂಸನಾಗಿದ್ದನು. ಇವನು ಆಧುನಿಕ ಕರ್ನಾಟಕ ಸಂಗೀತದ ಅರುಣೋದಯ ತಾರೆ. ಕನ್ನಡಿಗನಾದ ಈತನು ಸಂಗೀತದಲ್ಲಿ ಆಗಿದ್ದ ಬದಲಾವಣೆಗಳನ್ನೆಲ್ಲ ಲಕ್ಷಣದೊಡನೆ ಅನ್ವಯಿಸಿ ಅವುಗಳಿಗೆ ಶಾಸ್ತ್ರಾಧಿಕಾರವನ್ನು ಒದಗಿಸಿ ಆಧುನಿಕ ಸಂಗೀತದ ಕುಲದೀಪವಾಗಿದ್ದಾನೆ.

ಮಾಧ್ವಯತಿವರ್ಯರಾದ ಶ್ರೀಪಾದರಾಯಸ್ವಾಮಿಯು (ಕ್ರಿ.ಶ. 1304-1502), ಸಂಗೀತದಲ್ಲಿ ಪರಿಣತಿ ಹೊಂದಿದ, ಕವಿತಾ ಪ್ರತಿಭಾ ಸಂಪನ್ನರಾಗಿದ್ದರು. ಇವರು ವಿಜಯನಗರದ ಸಾಮಂತನಾಗಿದ್ದ ಚಂದ್ರಗಿರಿಯ ಸಾಳುವ ನರಸಿಂಗರಾಯನ (ಕ್ರಿ.ಶ. 1487-1497) ಗುರುವಾಗಿದ್ದರು. ಇವರು ಶ್ರೀರಂಗದಲ್ಲಿ ಹಲವು ವರ್ಷಗಳ ಕಾಲವಿದ್ದರು. ಅಲ್ಲಿ ವಿಷ್ಣು ದೇವಾಲಯಗಳಲ್ಲಿ ಆಳ್ವಾರರ ದಿವ್ಯ ಪ್ರಬಂಧಗಳನ್ನು ಹಾಡುವುದನ್ನು ಗಮನಿಸಿ ತಿಳಿದಿದ್ದರು. ಇದು ಅವರ ಮೇಲೆ ಮಹತ್ತರವಾದ ಪ್ರಭಾವ ಬೀರಿತು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಶ್ರೀಪಾದರಾಜರು ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ನಿಂತ ಮೇಲೆ ಕನ್ನಡದಲ್ಲಿ ಹಾಡುಗಳನ್ನು ರಚಿಸಿ ದೇವರ ಪೂಜೆಯಲ್ಲಿ ಅವುಗಳನ್ನು ಹಾಡುವುದನ್ನು ಪ್ರಾರಂಭಿಸಿದರು. ದೇವರನಾಮುಗಳು ಅಥವಾ ದಾಸರ ಪದಗಳೆಂಬ ಹಾಡುಗಳನ್ನು ವಿಜಯನಗರದಲ್ಲಿ 14-15ನೆ ಶತಮಾನಗಳ ಅವಧಿಯಲ್ಲಿ ಮೊಟ್ಟ ಮೊದಲು ರಚಿಸಲಾಯಿತು. ಇದು ನರಹರಿ ತೀರ್ಥರಿಂದ ಆರಂಭವಾಯಿತು. ನಂತರ ಇದ್ದ ಹರಿದಾಸರೆಲ್ಲರೂ ಸಾವಿರಾರು ದೇವರ ನಾಮುಗಳನ್ನು ರಚಿಸಿ ಹರಿದಾಸ ಸಾಹಿತ್ಯವನ್ನು ಬೆಳಸಿದರು. ಸುಮಾರು ಇದೇ ಕಾಲದಲ್ಲಿ ತಿರುಪತಿಯ ತಾಳ್ಳಪಾಕಂ ಅಣ್ಣಮಾಚಾರ್ಯರು, ಪೆದ್ದ ತಿರುಮಲ, ಚಿನ್ನ ತಿರುಮಲ ತೆಲುಗಿನಲ್ಲೂ, ಕೊಳ್ಳೆಗಾಲದ ಸಮೀಪದಲ್ಲಿರುವ ಚಿಲುಕವಾಡಿಯ ನಿಜಗುಣ ಶಿವಯೋಗಿ ಮುಂತಾದವರು ದೇವರ ನಾಮುಗಳ ಮಾದರಿಯನ್ನು ಅನುಸರಿಸಿ ಹಲವು ಕನ್ನಡದಲ್ಲೂ ಹಾಡುಗಳನ್ನು ರಚಿಸಿದರು.

ಹರಿದಾಸ ಚಳುವಳಿ ಮತ್ತು ಸಾಹಿತ್ಯಕ್ಕೆ ಶ್ರೀಪಾದರಾಜಸ್ವಾಮಿಯ ಕೊಡುಗೆ ಕರ್ನಾಟಕದ ಭಕ್ತಿ ಚಳುವಳಿಗೆ ಸ್ಫೂರ್ತಿದಾಯಕ ಹಾಗೂ ಮಾರ್ಗದರ್ಶಿಯಾಯಿತು. ಪ್ರತಿನಿತ್ಯ ದೇವರ ಪೂಜೆಯ ಅಂಗವಾಗಿ ದೇವರ ನಾಮುಗಳನ್ನು ಹಾಡುವ ಪದ್ಧತಿಯನ್ನು ಪ್ರಾರಂಭಿಸಿದರು. ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳು, ವೃತ್ತನಾಮುಗಳು, ದಂಡಕಗಳು, ಗೋಪಿಗೀತ, ವೇಣುಗೀತ, ಭ್ರಮರಗೀತ, ಲಕ್ಷ್ಮೀನರಸಿಂಹ ಪ್ರಾದುರ್ಭಾವ ದಂಡಕ, ರುಕ್ಮಿಣಿ ಸತ್ಯಭಾಮ ವಿಲಾಸ ಮುಂತಾದ ಇವರ ವಿಶೇಷ ರಚನೆಗಳು ಹರಿದಾಸ ಸಾಹಿತ್ಯಕ್ಕೆ ಅಪರೂಪ ಕೊಡುಗೆಗಳಾಗಿವೆ. ನಿಂದಾಸ್ತುತಿಗಳು, ಸುಳಾದಿಗಳು ಮತ್ತು ಉಗಾಭೋಗಗಳನ್ನು ರಚಿಸಿದವರಲ್ಲಿ ಇವರೇ ಮೊದಲಿಗರು ಮತ್ತು ಮಾರ್ಗದರ್ಶಿ. ಇವರ ಅಂಕಿತ 'ರಂಗವಿಠಲ'.

ಶ್ರೀಪಾದರಾಜಸ್ವಾಮಿಯ ಶಿಷ್ಯರುಗಳಲ್ಲಿ, ಕೃಷ್ಣದೇವರಾಯನ ಗುರುವಾಗಿದ್ದ ವ್ಯಾಸರಾಯ ಸ್ವಾಮಿಗಳು ವಾಗ್ಗೇಯಕಾರರೂ, ಸಂಗೀತವಿದ್ವಾಂಸರೂ ಆಗಿದ್ದರು. ಇವರು ವ್ಯಾಸಕೂಟ ಮತ್ತು ದಾಸಕೂಟಗಳನ್ನು ಸ್ಥಾಪಿಸಿದರು. ಇವರ ಹಲವು ಶಿಷ್ಯರಲ್ಲಿ ಪುರಂದರದಾಸರು, ಕನಕದಾಸರು, ವಾದಿರಾಜಸ್ವಾಮಿಗಳು ಬಹಳ ಪ್ರಸಿದ್ಧರು. ವೃತ್ತ ಪದ್ಯ, ಸಾಂಗತ್ಯ, ಸೂಳಾದಿ, ಪದಗಳು ಮತ್ತು ದೇವರ ನಾಮಗಳನ್ನು ಶ್ರೀಕೃಷ್ಣ ಎಂಬ ಅಂಕಿತದಲ್ಲಿ ಹಲವಾರು ರಚಿಸಿ ಹರಿದಾಸ ಸಾಹಿತ್ಯವನ್ನು ಸಮೃದ್ಧಗೊಳಿಸಿದರು.

ಸುಮಾರು ಇದೇ ಕಾಲದಲ್ಲಿ ನಿಜಗುಣ ಶಿವಯೋಗಿ (ಸು. ಕ್ರಿ.ಶ. 1550) ಮೈಸೂರು ಜಿಲ್ಲೆಯ ಕೊಳ್ಳೆಗಾಲದ ಸಮೀಪದಲ್ಲಿ ವಾಸವಾಗಿದ್ದರು. ಮೊದಲು ಇವರು ಒಂದು ಚಿಕ್ಕ ಸೀಮೆಯ ಅಧಿಪತಿಯಾಗಿದ್ದು, ವೈರಾಗ್ಯದಿಂದ ಐಹಿಕ ಜೀವನವನ್ನು ತ್ಯಜಿಸಿ ಯೋಗಿಯಾಗಿ ಚಿಲುಕವಾಡಿ ಬಳಿಯಿರುವ ಶಂಭುಲಿಂಗ ಬೆಟ್ಟದಲ್ಲಿ ವಾಸವಾಗಿದ್ದರು. ಶೈವ ವೇದಾಂತ, ಸಂಗೀತ, ಕನ್ನಡ ಮತ್ತು ಸಂಸ್ಕೃತದಲ್ಲಿ ಪರಿಣತರಾಗಿದ್ದು, ಹಲವು ಗ್ರಂಥಗಳನ್ನು ರಚಿಸಿದರು. ವಿವೇಕ ಚಿಂತಾಮಣಿ ಎಂಬ ಗ್ರಂಥದ ಒಂದು ಅಧ್ಯಾಯದಲ್ಲಿ ಶ್ರುತಿ, ಸ್ವರ, ಅಲಂಕಾರ, ಜಾತಿಗಳು ಮತ್ತು ಸಂಗೀತ ವಾದ್ಯಗಳು ಮತ್ತು ರಾಗಗಳ ವರ್ಗೀಕರಣವನ್ನು ಕುರಿತು ವಿವೇಚನೆ ಮಾಡಲಾಗಿದೆ. ಪಲ್ಲವಿ ಮತ್ತು ಚರಣಗಳನ್ನುಳ್ಳ ಕನ್ನಡದ ಹಾಡುಗಳನ್ನು ರಚಿಸಿದರು. ತಮ್ಮ ಕಾಲದ ವೀಣೆಯನ್ನೂ, ರಾಗಗಳನ್ನೂ ವರ್ಣಿಸಿದ್ದಾರೆ. ಶಂಭುಲಿಂಗ ಎಂಬ ಅಂಕಿತದಲ್ಲಿರುವ ಇವರ ಹಾಡುಗಳನ್ನು ಕರ್ನಾಟಕ ಸಂಗೀತಕ್ಕೆ ಅಮೂಲ್ಯವಾದ ಕೊಡುಗೆ ಎಂದು ಪರಿಗಣಿಸಲಾಗಿದೆ. ಈ ಕಾಲದ ಶಿವಶರಣರು ಮಂತ್ರಗೋಪ್ಯ ಮತ್ತು ಕಾಲಜ್ಞಾನಗಳನ್ನು ರಚಿಸಿ ಕನ್ನಡದ ಸಂಗೀತ ಸಾಹಿತ್ಯವನ್ನು ಮತ್ತಷ್ಟು ಸಂಪದ್ಭರಿತವಾಗಿ ಮಾಡಿದರು.

ವ್ಯಾಸರಾಯಸ್ವಾಮಿಯ ಪ್ರಸಿದ್ಧ ಶಿಷ್ಯರಲ್ಲಿ ಒಬ್ಬರಾದ ಪುರಂದರದಾಸರು ಭಕ್ತಿ, ತತ್ವನೀತಿಮಯವಾದ ಸಾವಿರಾರು ಹಾಡುಗಳನ್ನು ಸುಲಭವಾದ, ಅರ್ಥವಾಗುವಂಥ, ಎಲ್ಲರ ಮೆಚ್ಚಿಗೆಗೆ ಪಾತ್ರವಾಗುವಂಥ ಕನ್ನಡದಲ್ಲಿ ರಚಿಸಿದರು. ಅವರ ರಚನೆಗಳು ಸಂಗೀತ ಮತ್ತು ಕವಿತ್ವದ ಮಧುರ ಸಮ್ಮಿಳನವಾಗಿವೆ. ಅವರು ಕೇವಲ ಕವನಗಳ ಕವಿಯಾಗಿರಲಿಲ್ಲ. ಸರಿಯಾದ ಅರ್ಥದಲ್ಲಿ ವಾಗ್ಗೇಯಕಾರರಾಗಿದ್ದರು, ತತ್ಕಾರಣ, ಇವರ ವಿವಿಧ ರಚನೆಗಳನ್ನು ನಂತರದ ವಾಗ್ಗೇಯಕಾರರಾದ ಷಾಹಜಿ ಮತ್ತು ಶಾಸ್ತ್ರ ರಚನಕಾರರಾದ ತುಳಜಾಜಿ ಮುಂತಾದವರು ಹಲವು ರಾಗಗಳಿಗೆ ಲಕ್ಷ್ಯವಾಗಿ ಪರಿಗಣಿಸಿದ್ದಾರೆ. ತುಳಜಾಜಿಯು ತನ್ನ ಸಂಗೀತ ಸಾರಾಮೃತವೆಂಬ ಗ್ರಂಥದಲ್ಲಿ ರಾಗಗಳು ಮತ್ತು ಪ್ರಬಂಧಗಳ ಸಂಬಂಧವಾಗಿ ಇವರ 50 ರಚನೆಗಳನ್ನು ಲಕ್ಷ್ಯವಾಗಿ ಉಲ್ಲೇಖಿಸಿದ್ದಾನೆ. ತ್ಯಾಗರಾಜ ಸ್ವಾಮಿಯ ರಚನೆಗಳು ದಾಸರಿಂದ ಹೇಗೆ ಎಷ್ಟರಮಟ್ಟಿಗೆ ಪ್ರಭಾವಿತವಾಗಿದ್ದುವು ಎಂಬುದನ್ನು ತೋರಿಸುತ್ತವೆ. ತ್ಯಾಗರಾಜಸ್ವಾಮಿಯು ತಮ್ಮ ಪ್ರಹ್ಲಾದ ಭಕ್ತಿ ವಿಜಯವೆಂಬ ಸಂಗೀತ ರೂಪಕದಲ್ಲಿ ಪುರಂದರದಾಸರನ್ನು ನಮಿಸಿದ್ದಾರೆ. ಕಮಲಾಪುರದಲ್ಲಿ ದೊರಕಿರುವ ತಾಮ್ರ ಶಾಸನಗಳು ಪುರಂದರದಾಸರ ಮತ್ತು ಅವರ ಪುತ್ರರ ಬಗ್ಗೆ ಸರಿಯಾದ ಮಾಹಿತಿಯನ್ನು ಒದಗಿಸುತ್ತವೆ.[2] ಇದಲ್ಲದೆ, ಪೆದ್ದ ತಿರುಮಲಾಚಾರ್ಯನು ತನ್ನ ತಾತ ತಿರುಪತಿಯ ತಾಳ್ಳಪಾಕಂ ಅಣ್ಣಮಾಚಾರ್ಯರೂ ಪುರಂದರದಾಸರೂ ಭೇಟಿಯಾಗಿದ್ದರು ಎಂದು ಬರೆದಿದ್ದಾರೆ.

ಪುರಂದರದಾಸರನ್ನು ಕರ್ನಾಟಕ ಸಂಗೀತ ಪಿತಾಮಹರೆಂದು ಗೌರವದಿಂದ ಸ್ಮರಿಸುವುದು ವಾಡಿಕೆ. ಹೀಗೆ ಕೊಂಡಾಡುವುದು ಮೊದಲು ತಮಿಳುನಾಡಿನಲ್ಲಿ ಪ್ರಾರಂಭವಾಗಿ ನಂತರ ಭಾರತದ ಇತರ ಭಾಗಗಳಲ್ಲಿ ಹರಡಿ ರೂಢಿಗೆ ಬಂದಿತು ಎಂಬುದು ಗಮನಾರ್ಹ. ಇವರು ಮಾಯಾಮಾಳವ ಗೌಳ ಮೇಳವನ್ನು ಶುದ್ಧಮೇಳವೆಂದು ಆರಿಸಿಕೊಂಡು ಅದರ ಜನ್ಯವಾದ ಮಲಹರಿ ರಾಗದಲ್ಲಿ ಸಂಗೀತಾಭ್ಯಾಸಕ್ಕಾಗಿ ವೈಜ್ಞಾನಿಕವಾದ ಪಾಠಗಳನ್ನು ರಚಿಸಿದರು. ಇವರ ಲಕ್ಷ್ಯಗೀತೆಗಳಾದ ಪಿಳ್ಳಾರಿಗೀತೆಗಳನ್ನು ಪ್ರತಿಯೊಬ್ಬ ಕರ್ನಾಟಕ ಸಂಗೀತದ ವಿದ್ಯಾರ್ಥಿಯು ಇಂದಿಗೂ ಅಭ್ಯಾಸ ಮಾಡುತ್ತಾನೆ. ದಾಸರು ಕೃತಿಗಳು, ಕೀರ್ತನೆಗಳು, ಪದಗಳು, ಸುಳಾದಿಗಳು, ಉಗಾಭೋಗಗಳೇ ಮುಂತಾದ ಹಲವು ರೀತಿಯ ರಚನೆಗಳನ್ನು ರಚಿಸಿ ಹರಿದಾಸ ಸಾಹಿತ್ಯವನ್ನು ವಿಪುಲವಾಗಿ ಸಮೃದ್ಧಗೊಳಿಸಿದ್ದಾರೆ. ತಮ್ಮ ಮೂರು ರಚನೆಗಳಲ್ಲಿ ಆಗ ಪ್ರಚಲಿತವಿದ್ದ 32 ರಾಗಗಳನ್ನು ಹೆಸರಿಸಿದ್ದಾರೆ. ಆಡಿದನೋ ರಂಗ ಎಂಬ ಕೆಲವು ಹಾಡುಗಳನ್ನು ರಚಿಸುವುದರಲ್ಲಿ ಸಾಂಪ್ರದಾಯಿಕವಾದ ಭರತನಾಟ್ಯ ಪದ್ಧತಿಯನ್ನು ಅನುಸರಿಸಿದ್ದಾರೆ. ಭಯಸಮಯದೇವ ಎಂಬ ಭಾಂಡೀರ ಭಾಷೆಯ ಅವರ ರಚನೆಯನ್ನು ನೋಡಿದರೆ ಭಾಂಡೀರ ಭಾಷೆಯಲ್ಲಿಯೂ ಕೃತಿ ರಚನೆ ಮಾಡಿದ್ದರು ಎಂದು ತಿಳಿದು ಬರುತ್ತದೆ. ಅವರ ಅಂಕಿತವಿರುವ ದೇಶಾಕ್ಷಿರಾಗದ ಗೀತೆಯೊಂದು ಅಪರೂಪ ಬಳಕೆಯಲ್ಲಿದೆ. ಪಿಳ್ಳಾರಿ ಗೀತಗಳಲ್ಲದೆ ಬೇರೆ ಬೇರೆ ಗೀತಗಳನ್ನೂ ರಚಿಸಿದ್ದರು ಎಂದು ಇದರಿಂದ ತಿಳಿಯುತ್ತದೆ. ಇದಲ್ಲದೆ ದಾಸರು ಲಕ್ಷಣ ಗೀತಗಳು, ತಾನವರ್ಣಗಳು ಮತ್ತು ತಿಲ್ಲಾನಗಳನ್ನೂ ರಚಿಸಿದ್ದಾರೆಂದು ಹೇಳಲಾಗಿದೆ. ಆದರೆ ಇವು ಯಾವುವೂ ಲಬ್ಧವಿಲ್ಲ. ಇವರ ಅನೇಕ ರಚನೆಗಳು ಮಧ್ಯಮ ಕಾಲದಲ್ಲಿವೆ. ಆದಿತಾಳ, ಛಾಪುತಾಳ ಮತ್ತು ಝಂಪೆತಾಳಗಳ ಬಗ್ಗೆ ಅವರಿಗೆ ವಿಶೇಷ ಒಲವು ಇದ್ದಿತು ಎಂದು ತೋರುತ್ತದೆ. ಅವರ ಶೃಂಗಾರ ಭಾವವಿರುವ ರಚನೆಗಳು ಪದಗಳ ವಾಗ್ಗೇಯಕಾರರಾದ ಕ್ಷೇತ್ರಜ್ಞರಿಗೆ ಮಾದರಿಗಳಾದುವು. ಹರಿದಾಸರು ಕರ್ನಾಟಕ ಸಂಗೀತದ ತಾಳ ಪದ್ಧತಿಯಲ್ಲಿ ಮಹತ್ತರ ಬದಲಾವಣೆ

ಉಂಟು ಮಾಡಿದರು. ನೂರಾರು ದೇಶೀ ತಾಳಗಳ ಸ್ಥಾನದಲ್ಲಿ ಒಂಬತ್ತು ಅಥವಾ ಹತ್ತು ತಾಳಗಳನ್ನು ರೂಢಿಗೆ ತಂದರು. ಸುಳಾದಿ ಸಪ್ತತಾಳಗಳನ್ನು ಬಳಕೆಗೆ ತಂದು ಕರ್ನಾಟಕ ಸಂಗೀತದ ತಾಳಪದ್ಧತಿಯಲ್ಲಿ ಕ್ರಾಂತಿಯನ್ನು ಉಂಟುಮಾಡಿದರು.

ವ್ಯಾಸರಾಯಸ್ವಾಮಿಯ ಮತ್ತೊಬ್ಬ ಪ್ರಮುಖ ಶಿಷ್ಯರೂ ಪುರಂದರದಾಸರ ಒಡನಾಡಿಗಳೂ ಆದ ಕನಕದಾಸರು ತಮ್ಮ ದೇವರನಾಮಗಳನ್ನು ಸುಮಾರು 30ಕ್ಕೂ ಹೆಚ್ಚು ರಾಗಗಳಲ್ಲಿ ರಚಿಸಿದ್ದಾರೆ. ತಂಗದಿರನ ನಿಮಿಷತಾರಕೆಗಳು ಎಂಬ ಕೃತಿಯಲ್ಲಿ ಕೆಲವು ಅಪರೂಪ ರಾಗಗಳನ್ನು ಹೆಸರಿಸಿದ್ದಾರೆ. ಇದಲ್ಲದೆ ರಾಮಧಾನ್ಯ ಚರಿತ್ರೆ, ನಳಚರಿತ್ರೆ ಮುಂತಾದ ಕಾವ್ಯಗಳನ್ನು ರಚಿಸಿದ್ದಾರೆ.

ವ್ಯಾಸರಾಯಸ್ವಾಮಿಯ ಮತ್ತೊಬ್ಬ ಪ್ರಮುಖ ಶಿಷ್ಯರು ಸೋದೆ ಮಠದ ವಾದಿರಾಜಸ್ವಾಮಿಗಳು ಪುರಂದರದಾಸರು, ಕನಕದಾಸರು ಮತ್ತು ಬೇಲೂರು ವೈಕುಂಠದಾಸರ ಮಿತ್ರರಾಗಿದ್ದರು. ಇವರು ವಿದ್ವಾಂಸರು, ಕವಿ, ಸಂಗೀತ ವಿದ್ವಾಂಸರು ಮತ್ತು ವಾಗ್ಗೇಯಕಾರರಾಗಿದ್ದರು. ಇವರು ಎಲ್ಲಾ ವಿಧವಾದ ರಚನೆಗಳು ಮತ್ತು ದೀರ್ಘವಾದ ಸಂಗೀತ ಪ್ರಕಾರಗಳನ್ನು ರಚಿಸಿದರು. ದ್ವೈತಸಿದ್ಧಾಂತವನ್ನು ಪ್ರತಿಪಾದಿಸುವ, ವಿವರಿಸುವ ಹಲವು ವಿದ್ವತ್ಪೂರ್ಣವಾದ ಸಂಸ್ಕೃತ ಗ್ರಂಥಗಳನ್ನು ರಚಿಸಿದರು. ಇವರ 313 ಹಾಡುಗಳು ಹಯವದನ ಎಂಬ ಅಂಕಿತದಲ್ಲಿರುವುದು ಲಭ್ಯವಾಗಿದೆ. ಇದು 291 ಕೃತಿಗಳು, 10 ಸುಳಾದಿಗಳು ಮತ್ತು 12 ಉಗಾಭೋಗಗಳನ್ನು ಒಳಗೊಂಡಿದೆ. ಇವರು ಭ್ರಮರಗೀತ, ಗುಂಡಕ್ರಿಯ, ವೈಕುಂಠವರ್ಣನೆ, ಸ್ವಪ್ನಗದ್ಯ ಲಕ್ಷ್ಮೀಶೋಭಾನೆ, ನಾರದ ಕುರವಂಜಿ ಮತ್ತು ತತ್ವಸುವ್ವಾಲಿ ಎಂಬ ವಿಶಿಷ್ಟವಾದ ದೀರ್ಘ ರಚನೆಗಳನ್ನು ರಚಿಸಿದ್ದಾರೆ. ನಾರದ ಕುರವಂಜಿಯು ಸಂಗೀತ ಸಾಹಿತ್ಯ ರಚನೆಗಳಲ್ಲಿ ವಾದಿರಾಜರು ಸಾಧಿಸಿದ ದಕ್ಷಿಣ ಭಾರತದಲ್ಲೇ ಪ್ರಪ್ರಥಮ ಜಾನಪದ ನೃತ್ಯನಾಟಕವಾಗಿದೆ. ಬಹುಶಃ ಇಡೀ ಭಾರತದಲ್ಲೇ ಶಾಸ್ತ್ರೀಯ ಸಂಗೀತ ಮತ್ತು ನೃತ್ಯಕ್ಷೇತ್ರದಲ್ಲಿ ಇದು ಪ್ರಥಮ ರಚನೆ ಎನ್ನಲು ಅಡ್ಡಿಯಿಲ್ಲ.

ಈ ಕಾಲದ ಮತ್ತೊಂದು ವಿಶಿಷ್ಟ ಗ್ರಂಥ ಸ್ವರಮೇಳ ಕಳಾನಿಧಿ. ಇದನ್ನು ರಾಮರಾಯನ ಮಂತ್ರಿ ವಿದ್ವಾಂಸ ಮತ್ತು ಸಂಗೀತ ಕಲಾಕೋವಿದನಾಗಿದ್ದ ರಾಮಾಮಾತ್ಯನು ರಾಜನ ಅಣತಿಯಂತೆ ಆಗಿನ ಕಾಲದಲ್ಲಿ ಗೊಂದಲವನ್ನು ಪರಿಹರಿಸಿ ಸಂಪ್ರದಾಯ ಮತ್ತು ಪ್ರಯೋಗಗಳ ಸಮನ್ವಯ ಮಾಡಲು ರಚಿಸಿದನು. ಇವನು ಚತುರ ಕಲ್ಲಿನಾಥನ ಮೊಮ್ಮಗ. ಬೈಕಾರ ರಾಮಪ್ಪಯ್ಯ ಎಂದೂ ಇವನ ಹೆಸರು. ಇವನು ಈ ಗ್ರಂಥವನ್ನು ರಚಿಸಿ ಸುಭದ್ರ ಸುಂದರವಾದ ಅಣೆಕಟ್ಟನ್ನು ನಿರ್ಮಿಸಿ ಉಪಕರಿಸಿದ್ದಾನೆ. ಈ ಗ್ರಂಥವು 5 ಅಧ್ಯಾಯಗಳಲ್ಲಿ ಒಟ್ಟು 328 ಸಂಸ್ಕೃತ ಶ್ಲೋಕಗಳುಳ್ಳ ಗ್ರಂಥ. ಗ್ರಂಥವು ಪುಟ್ಟದಾದರೂ ಅದು 2000 ವರ್ಷಗಳ ಕಾಲದ ಸಂಗೀತದ ವಿಕಾಸವನ್ನು ಪ್ರತಿಬಿಂಬಿಸುತ್ತದೆ. ವಿಷಯದ ಸಂಗ್ರಹವು ವಿಶಿಷ್ಟವಾದ ಸೂಚ್ಯಾರ್ಥ ಕೊಡುತ್ತದೆ. ಇದು ದಕ್ಷಿಣ ಭಾರತದ ಸಂಗೀತದ ಇತಿಹಾಸದಲ್ಲಿ ಆಧುನಿಕ ಯುಗಕ್ಕೆ ಸೂಕ್ತವಾದ ಪೀಠಿಕೆಯಾಗಿದೆ. ವೀಣೆ, ಮೇಳ ಮತ್ತು ರಾಗದ ವಿವೇಚನೆಯು ಎಷ್ಟು ಸ್ಪಷ್ಟ ಮತ್ತು ಕರಾರುವಕ್ಕಾಗಿದೆ ಎಂದರೆ ನಮ್ಮನ್ನು ಅದು ಹಠಾತ್ತನೆ ಈಗಿನ ಕಾಲಕ್ಕೆ ಕರೆದೊಯ್ಯುವಂತೆ ಭಾವನೆ ಉಂಟಾಗುತ್ತದೆ. ಪಾರಿಭಾಷಿಕ ಶಬ್ದಗಳ ಬಗ್ಗೆ ತಲೆದೋರಿದ್ದ ಗೊಂದಲವನ್ನು ನಿವಾರಿಸುತ್ತದೆ. ತನ್ನ ಕಾಲದಲ್ಲಿ ಪ್ರಚಲಿತವಾಗಿದ್ದ ರಾಗಗಳನ್ನು ವೈಜ್ಞಾನಿಕವಾಗಿ ಅವುಗಳಲ್ಲಿಯ ಸ್ವರಗಳ ಸಂಖ್ಯೆ ಮತ್ತು ಮೈತ್ರಿಯ ಆಧಾರದ ಮೇಲೆ ವರ್ಗೀಕರಣ ಮಾಡಿ 20 ಜನಕರಾಗಗಳ ಪಟ್ಟಿ ಕೊಟ್ಟಿದ್ದಾನೆ. ಒಂದೇ ಸ್ವರ ಸ್ಥಾನದಲ್ಲಿ ನೆರೆಹೊರೆಯ ಎರಡು ಸ್ವರಗಳು ಪ್ರಕಟವಾಗಬಹುದೆಂಬ ಪ್ರಮೇಯವನ್ನು ವಿವೇಚಿಸಿ ಆರಂಭಿಸಿ ಆಧುನಿಕ ಜನಕರಾಗಗಳ ಜನಕನಾಗಿ, ಆಧುನಿಕ ಸಂಗೀತದ ಅರುಣೋದಯವಾಗಿದ್ದಾನೆ. ರಾಗ ಮತ್ತು ಮೇಳಗಳ ಬಗ್ಗೆ ಅವನ ವಿಶ್ಲೇಷಣೆಯು ಸಂಗೀತ ಪದ್ಧತಿಯ ವೈಜ್ಞಾನಿಕ ವಿಕಾಸ ಮತ್ತು ವರ್ಗೀಕರಣದಲ್ಲಿ ಒಂದು ಮೈಲಿಗಲ್ಲು ಆಗಿದೆ. ಇವನು ಕೊಟ್ಟಿರುವ ಮೇಳಗಳು ಈಗಿನ ಮೇಳಕರ್ತ ಪದ್ಧತಿಯ ಒಂದು ಅಂಗವಾಗಿವೆ. ಇವನ ಮೇಳಗಳು ಹಳೆಯದಾಗಿದ್ದರೂ ಕೆಲವು ಆಧುನಿಕ ರಾಗಗಳ ವಿವರಣೆಗೆ ಸಹಾಯಕವಾಗಿವೆ.

ಸಂಗೀತ ವಾದ್ಯಗಳಲ್ಲಿ ವೀಣೆಯು ಶ್ರುತಿ ಮಾಡುವ ವಿಧಾನ ಮತ್ತು ಮೆಟ್ಟಲು ಸಂಖ್ಯೆಯ ಅಲ್ಪ ಸ್ವಲ್ಪ ವ್ಯತ್ಯಾಸವನ್ನು ಬಿಟ್ಟರೆ ವಿಜಯನಗರದ ಕಾಲದಲ್ಲಿ ಈಗಿನ ಸ್ವರೂಪವನ್ನು ಪಡೆಯಿತು. ಶಾರ್ಙ್ಗದೇವನು ಹೇಳಿರುವ ಕಿನ್ನರಿ ವೀಣೆಯು ವಿಜಯನಗರ ಕಾಲದ ರುದ್ರವೀಣೆಯಾಗಿ ವಿಕಾಸಗೊಂಡಿತು. ಇದು ತನ್ನ ಮೂಲ ಲಕ್ಷಣಗಳನ್ನು ಕಳೆದುಕೊಳ್ಳದೆ ಆಧುನಿಕ ವೀಣೆಯಾಗಿ ನಮಗೆ ಬಂದಿದೆ. ರಾಮಾಮಾತ್ಯನು ಅಚ್ಯುತರಾಯ ಮೇಳ ವೀಣೆಯನ್ನು ನಿರ್ಮಿಸಿದನು. ಅವನು ದೊರೆಯ ಕೃಪಾಪೋಷಿತನೂ ಸನ್ಮಾನಿತನೂ ಆಗಿದ್ದನು ಎಂಬುದನ್ನು ಇಲ್ಲಿ ಸ್ಮರಿಸಬಹುದು.[3] ಈ ಮಧ್ಯ ಮೇಳ ವೀಣೆಯು ಮುಂದೆ ತುಳಜೇಂದ್ರ ವೀಣಾ ಎಂಬ ಹೆಸರು ಪಡೆದು ಆಧುನಿಕ ವೀಣೆಗೆ ಸಮನಾಗಿದೆ.

ಇದೇ ಕಾಲದಲ್ಲಿ ರಚಿಸಲ್ಪಟ್ಟ ಮತ್ತೊಂದು ಸಂಗೀತ ಶಾಸ್ತ್ರ ಗ್ರಂಥ ಸಂಗೀತ ಸೂರ್ಯೋದಯ. ಗ್ರಂಥಕರ್ತನಾದ ಭಂಡಾರು ಲಕ್ಷ್ಮೀನಾರಾಯಣನು ಕಲ್ಲಿನಾಥನಂತೆ ರಾಯಬಯಕಾರನಾಗಿದ್ದು ತೋಡರಮಲ್ಲ ಎಂಬ ಬಿರುದಾಂಕಿತನಾಗಿ ಕೃಷ್ಣದೇವರಾಯನ

ಕಾಲದಲ್ಲಿ ರಾಜಮನೆತನದ ನಾಟ್ಯಾಚಾರ್ಯನಾಗಿದ್ದನು. ಸಂಸ್ಕೃತದಲ್ಲಿರುವ ಈ ಗ್ರಂಥವು ಹೆಚ್ಚು ಕಡಿಮೆ ಸಂಗೀತ ರತ್ನಾಕರವನ್ನು ಅನುಸರಿಸಿ ಸ್ವರಗಳು, ಜಾತಿಗಳು, ತಾಳಗಳು, ಪ್ರಬಂಧಗಳು ಮತ್ತು ನೃತ್ಯ ಇವುಗಳ ವಿವರಣೆಯನ್ನೊಳಗೊಂಡಿದೆ.

ಮತ್ತೊಬ್ಬ ಮಹಾ ಸಂಗೀತ ವಿದ್ವಾಂಸ ಮತ್ತು ಸಂಗೀತ ಶಾಸ್ತ್ರಜ್ಞನಾಗಿದ್ದ ಪುಂಡರೀಕ ವಿಠಲನನ್ನು (ಕ್ರಿ.ಶ. 1562-1599) ಹೆಸರಿಸಬಹುದು. ಇವನು ಬೆಂಗಳೂರು ಜಿಲ್ಲೆಯ ಶಿವಗಂಗೆಯ ಬಳಿ ಇರುವ ಸಾತನೂರಿನವನು. ಸಂಗೀತದ ಎರಡು ಪದ್ಧತಿಗಳಲ್ಲೂ ಪರಿಣತನಾಗಿದ್ದನು. ಉತ್ತರ ಭಾರತಕ್ಕೆ ಹೋಗಿ ನೆಲೆಸಿ ಸದ್ರಾಗ ಚಂದ್ರೋದಯವೆಂಬ ಗ್ರಂಥವನ್ನು ರಚಿಸಿ ಅದರಲ್ಲಿ ದಕ್ಷಿಣ ಭಾರತದ ಸಂಗೀತವನ್ನು ಕುರಿತು ಬರೆದಿದ್ದಾನೆ. ನಂತರ ಗ್ವಾಲಿಯರ್‌ನಲ್ಲಿದ್ದಾಗ ಹಿಂದೂಸ್ಥಾನೀ ಸಂಗೀತದ ಆಕರ ಗ್ರಂಥವಾಗಿರುವ ರಾಗಮಂಜರೀ ಎಂಬ ಗ್ರಂಥವನ್ನು ಬರೆದನು. ಮೊಗಲ್ ಚಕ್ರವರ್ತಿ ಅಕ್ಬರ್‌ನಿಂದ ಆಹ್ವಾನಿತನಾಗಿ ದೆಹಲಿಗೆ ಹೋಗಿ ರಾಗಮಾಲಾ ಮತ್ತು ನರ್ತನ ನಿರ್ಣಯವೆಂಬ ಇತರ ಗ್ರಂಥಗಳನ್ನು ಬರೆದು ಅಕ್ಬರೀಯ ಕಾಳಿದಾಸನೆನಿಸಿಕೊಂಡನು. ಇಂದಿಗೂ ಇವನ ಗ್ರಂಥಗಳು ಹಿಂದುಸ್ಥಾನೀ ಸಂಗೀತದ ಆಕರ ಗ್ರಂಥಗಳೆಂದು ಪರಿಗಣಿಸಲ್ಪಟ್ಟಿವೆ. ಇವನು 90 ಮೇಳಕರ್ತ ಪದ್ಧತಿಯನ್ನು ರೂಪಿಸಿದ್ದಾನೆ. ಇದು ಕ್ರಾಂತಿಕಾರಕವೂ ವೈಜ್ಞಾನಿಕವೂ ಆದ ಒಂದು ಮೇಳಕರ್ತ ಪದ್ಧತಿ. ರಾಗಮಾಲಾ ಗ್ರಂಥದಲ್ಲಿ ರಾಗಗಳನ್ನು ಪ್ರತಿ ಪುಂರಾಗವು 5 ರಾಗಿಣಿಗಳನ್ನು ಹೊಂದಿರುವ ರಾಗವರ್ಗೀಕರಣವನ್ನು ಕೊಟ್ಟಿರುವುದಲ್ಲದೆ ಗಾನವೇಳೆಯನ್ನು ಗೊತ್ತುಮಾಡಿದೆ.

ಈ ಕಾಲದ ಮತ್ತೊಂದು ಸಂಗೀತ ಶಾಸ್ತ್ರ ಗ್ರಂಥ ಸಂಗೀತದರ್ಪಣ. ಇದರ ಕರ್ತೃ ಚತುರ ದಾಮೋದರ. ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಚೆರುಕುರಿ ಎಂಬ ಸ್ಥಳದವನು. ಇವನ ತಂದೆ ಲಕ್ಷ್ಮೀಧರನು ಸಂಗೀತ ಕಲಾಕೋವಿದನಾಗಿದ್ದು ವಿಜಯನಗರದ ತಿರುಮಲರಾಯನ ಆಸ್ಥಾನ ಕವಿಯಾಗಿದ್ದನು. ದಾಮೋದರನು ಎರಡು ಸಂಗೀತ ಪದ್ಧತಿಗಳ ವಿದ್ವಾಂಸನಾಗಿ, ಸಂಸ್ಕೃತದಲ್ಲಿ 7 ಅಧ್ಯಾಯಗಳುಳ್ಳ ಈ ಗ್ರಂಥವನ್ನು ಬರೆದನು. ಇದರಲ್ಲಿ ತನ್ನ ಕಾಲದಲ್ಲಿದ್ದ ಸಂಗೀತ ಶಾಸ್ತ್ರ ಮತ್ತು ಸಂಪ್ರದಾಯಗಳೆರಡನ್ನೂ ಪ್ರತಿಬಿಂಬಿಸಿದ್ದಾನೆ. ಈ ಗ್ರಂಥದ ಪ್ರತಿ ಬಾಗದಲ್ಲೂ ನಿಖರತೆ ಮತ್ತು ಸಂಗ್ರಹ ಸಾರವು ಕಂಡು ಬರುತ್ತದೆ.

ಸಂಗೀತ ಮತ್ತು ನಾಟ್ಯವನ್ನು ಕುರಿತು ರಚಿಸಲಾದ ಈ ಕಾಲದ ಇತರ ಗ್ರಂಥಗಳು - ರಸಿಕನೂ ಸಂಗೀತ ವಿದ್ಯಾವಿನೋದನೂ ಆಗಿದ್ದ ಕನ್ನಡಿಗ ದೊರೆ ಅಚ್ಯುತರಾಯನ ತಾಳ ಕಲಾವಾರಿಧಿ ಎಂಬ ಪ್ರೌಢ ಸಂಗೀತ ಶಾಸ್ತ್ರ ಗ್ರಂಥ, ಇವನ ಆಶ್ರಿತನಾಗಿದ್ದ ಅಷ್ಟಾವಧಾನ ಸೋಮನಾರ್ಯನ ನಾಟ್ಯ ಚೂಡಾಮಣಿ ಮತ್ತು ಸಂಗೀತ ಚಿಂತಾಮಣಿ - ಎರಡನೆಯದು ಸಂಗೀತ ರತ್ನಾಕರವನ್ನು ಅನುಸರಿಸಿದೆ. ದೇವಣ್ಣ ಭಟ್ಟನ ಸಂಗೀತ ಮುಕ್ತಾವಳೀ, ವೇದನ ಸಂಗೀತ ಮಕರಂದ, ಚಂದ್ರಶೇಖರನ ಪಂಪಾಪತಿ ಸ್ಥಾನವರ್ಣನಂ, ತಾನಪ್ಪನ ಚತುರ್ದಂಡಿ ಮುಂತಾದುವು.

ನೃತ್ಯ:

ನೃತವು ಮಾನವನಿಂದ ವಿಕಾಸಗೊಂಡ ಬಹು ಪುರಾತನ ಕಲೆ. ನಮ್ಮೊಳಗಿನ ಬಲವಾದ ಉದ್ವೇಗ ಮತ್ತು ಭಾವವು ನಾಟ್ಯದ ಮೂಲಕ ಬಹಿರಂಗವಾಗಿ ವ್ಯಕ್ತಗೊಳ್ಳುತ್ತದೆ. ನಮ್ಮ ಹೃದಯಾಂತರಾಳದಲ್ಲಿ ಹುದುಗಿರುವ ಭಾವನೆಯ ಬಹಿಃರೂಪವೇ ನೃತ್ಯ. ನಮ್ಮನ್ನು ಐಹಿಕ ಬಂಧನಗಳಿಂದ ಮೇಲಕ್ಕೆ ಕೊಂಡೊಯ್ಯುವ ಸ್ಫೂರ್ತಿಯ ಸಂಕೇತವಾಗಿ, ಈ ಕಲೆಯ ತಳಹದಿ ಆಧ್ಯಾತ್ಮಿಕತೆ. ಈ ಕಲೆಗೆ ದೇಹದ ಅಂಗಾಂಗಗಳು, ಕೈಕಾಲುಗಳು, ಹಾವಭಾವಗಳು, ಮನಸ್ಸಿನ ಬದಲಾವಣೆಗಳೇ ವಾಹನ ವಸ್ತುಗಳು. ಇವೆಲ್ಲವನ್ನೂ ಒಳಗೊಂಡಿರುವ ಭರತನಾಟ್ಯವು ಅತಂತ ಆಕರ್ಷಕ ಕಲೆಯಾಗಿ ಬಂದಿದೆ. ಸೂಚಿಸುವುದು ಮತ್ತು ಅಧ್ಯಾತ್ಮಿಕತೆ ಇವೆರಡೂ ನಾಟ್ಯ ಸರಸ್ವತಿಯ ಎರಡು ಕಣ್ಣುಗಳು. ಒಳಗಿನ ಸಂಗೀತವಿಲ್ಲದೆ ನೃತ್ಯ ಮಾಡಲು ಸಾಧ್ಯವಿಲ್ಲ.

ಸಂಗೀತದಂತೆಯೇ ನಾಟ್ಯವನ್ನು ರಾಜರು, ರಾಜ ಪುರುಷರು ಪೋಷಿಸುತ್ತಿದ್ದರು. ಇದು ವಿಜಯನಗರದ ಸಾಂಸ್ಕೃತಿಕ ಜೀವನದ ಒಂದು ಅವಿಭಾಜ್ಯ ಅಂಗವಾಗಿತ್ತು. ವಿದೇಶೀ ಪ್ರವಾಸಿಗಳಾದ ಪೇಯಸ್, ನ್ಯೂನಿಜ್ ಮತ್ತು ಇತರರು ನೃತ್ಯ ಮಂಟಪಗಳು ಮತ್ತು ನೃತ್ಯ ಕಲಾವಿದೆಯರನ್ನು ವರ್ಣಿಸಿದ್ದಾರೆ.[4] ರಂಗಮಂಟಪಕ್ಕೆ ನಾಟ್ಯಶಾಲಾ, ನಾಟ್ಯಮಂಟಪ ಎಂಬ ಹೆಸರುಗಳಿದ್ದುವು. ದೇವಾಲಯಗಳಿಗೆ ಸೇರಿದ ದೇವದಾಸಿಯರಿಗೆ ಸಮಾಜದಲ್ಲಿ ಅಪಾರ ಗೌರವವಿದ್ದಿತು.[5] ಮತ್ತು ಅವರು ಕೆಲವು ವಿಶೇಷ ಹಕ್ಕುಗಳನ್ನು ಅನುಭವಿಸುತ್ತಿದ್ದರು. ಆಗಿನ ಶಿಲ್ಪ ಕಲೆಯಲ್ಲಿ ಪ್ರತಿಬಿಂಬಿಸಿರುವಂತೆ ಆ ಕಾಲದಲ್ಲಿ ನೃತ್ಯಕ್ಕೆ ವಿಶೇಷವಾದ ಸ್ಥಾನಮಾನಗಳಿದ್ದುವು. ಕೂಚಿಪುಡಿ ನೃತ್ಯ ಪದ್ಧತಿಯು ಬಹು ಪ್ರಸಿದ್ಧವಾದ ನಾಟ್ಯಪ್ರಕಾರವಾಗಿತ್ತು. ಸಮಕಾಲೀನ ಸಾಹಿತ್ಯ ಗ್ರಂಥಗಳಲ್ಲಿ ಕವಿಗಳು ನೃತ್ಯ, ಗಾಯನ ಮತ್ತು ವಾದ್ಯ ಮೇಳಗಳನ್ನು

ವರ್ಣಿಸಿದ್ದಾರೆ.[6] ಸಾಮಾನ್ಯವಾಗಿ ದೇವದಾಸಿಯರು ಅತ್ಯಂತ ಹಿಂದಿನ ಕಾಲದಿಂದ ಸಂಗೀತ ಮತ್ತು ನೃತ್ಯ ಕಲೆಗಳ ರಕ್ಷಕರೂ, ಪರಿಣತರೂ ಆಗಿದ್ದರು. ಕೃಷ್ಣದೇವರಾಯನ ಕಿರಿಯರಾಣಿ ಚಿನ್ನಾದೇವಿಯು ಹಂಪೆಯ ವಿರೂಪಾಕ್ಷ ದೇವಾಲಯದ ಪ್ರಸಿದ್ಧ ನರ್ತಕಿಯಾಗಿದ್ದಳು. ಆಗಿನ ಗ್ರಂಥಗಳಲ್ಲಿ ಹಿಂದೆಯೇ ಹೇಳಿದಂತೆ ಅಚ್ಯುತರಾಯನ ತಾಳ ಕಲಾವಾರಿಧಿಯು ಆಧುನಿಕ ತಾಳದ ತತ್ವಗಳನ್ನು ನಿರೂಪಿಸುತ್ತದೆ. ಪೊಲೂರಿ ಗೋವಿಂದ ಕವಿಯ ತಾಳದಶ ಪ್ರಾಣ ದೀಪೀಕಾ ಎಂಬ ಗ್ರಂಥವು ನಂತರದ ಗ್ರಂಥವಾದರೂ ನೃತ್ಯದ ಬಗ್ಗೆ ಅಧಿಕೃತವಾದ ವಿಷಯವನ್ನು ತಿಳಿಸುತ್ತದೆ.

ಆಗಿನ ಸಂಗೀತ ವಾದ್ಯಗಳಲ್ಲಿ ವೀಣೆಯು ಜನಪ್ರಿಯವಾದ ವಾದ್ಯವಾಗಿತ್ತು. ಚಿನ್ನಾದೇವಿ ಮತ್ತು ತಿರುಮಲಾದೇವಿ ಅತ್ಯುತ್ತಮ ವೀಣಾ ವಿದುಷಿಯರಾಗಿದ್ದರು. ತಂಬೂರಿ, ಕೊಂಬು, ಡೋಲು, ತಾಳಗಳು, ಶಂಖ, ದಂಡಿಗೆ, ಸ್ವರಮಂಡಲ, ಕಿನ್ನರಿ, ವೇಣು, ವಿಪಂಚಿ, ವಲ್ಲಕಿ, ಒತ್ತು, ಕರಡೆ, ಮೃದಂಗ, ಅವುಜ, ದುಂದುಭಿ, ಪಣವ, ಡಮರು, ರವಳಿ, ಘಂಟೆ, ಕಿಂಕಿಣಿ, ಕಂಸಾಲ ಇವು ಆಗಿನ ಜನರು ಬಳಸುತ್ತಿದ್ದ ಇತರ ಸಂಗೀತ ವಾದ್ಯಗಳಾಗಿದ್ದುವು.[7]

ವಿಜಯನಗರದ ಸಂಗೀತ ಸಂಪ್ರದಾಯಗಳನ್ನು ತಂಜಾವೂರಿನ ನಾಯಕ ದೊರೆಗಳು ಮತ್ತು ಮೈಸೂರಿನ ಒಡೆಯರು ಮುಂದುವರಿಸಿಕೊಂಡು ಪೋಷಿಸಿದರು. ಈ ಕಾಲದಲ್ಲಿ ಹಿಂದೂಸ್ಥಾನಿ ಸಂಗೀತದೊಡನೆ ನೆರೆಯರಾಜ್ಯಗಳಾದ ಬಿಜಾಪುರ ಮತ್ತು ಗುಲ್ಬರ್ಗ ಮತ್ತು ವಿಜಯನಗರದ ಸಂಗೀತಕ್ಕೂ ಪರಸ್ಪರ ಸಂಪರ್ಕ ಹಾಗೂ ಪ್ರಭಾವ ಉಂಟಾಯಿತು. ಹೀಗೆ ವಿಜಯನಗರದ ಕಾಲವು ಕರ್ನಾಟಕ ಸಂಗೀತವನ್ನು ಕೈ ಹಿಡಿದು ನಡೆಸಿದ ಪರ್ವಯುಗ. ಕ್ರಾಂತವಾಗುತ್ತಿದ್ದ ಸಂಗೀತವನ್ನು ಅಭಿನವ ಭರತಾಚಾರ್ಯರೂ, ವಾಗ್ಗೇಯಕಾರರೂ ಆಗಿದ್ದ ವ್ಯಾಸರಾಯರು ಮತ್ತು ಅವರ ಶ್ರೇಷ್ಠ ಶಿಷ್ಯರಾದ ಪುರಂದರದಾಸರು, ವಾದಿರಾಜರು, ಕನಕದಾಸರು ಮತ್ತು ಬೇಲೂರು ವೈಕುಂಠದಾಸರು ಅದರ ಲಕ್ಷ್ಯಮಾರ್ಗವನ್ನು ಪರಿಷ್ಕರಿಸಿ ಸಮೃದ್ಧಗೊಳಿಸಿದರು. ಶಿವಶರಣರು ನಿಜಗುಣ ಶಿವಯೋಗಿಯ ನಾಯಕತ್ವದಲ್ಲಿ ಸಂಗೀತದ ಗೇಯ ಸಂಪತ್ತನ್ನು ಬೆಳೆಸಿದರು. ರಾಮಾಮಾತ್ಯ, ಭಂಡಾರು ಲಕ್ಷ್ಮೀನಾರಾಯಣ ಮುಂತಾದವರು ಹಳೆಯದಕ್ಕೆ ಹೊಸತನವನ್ನು ಕೊಟ್ಟರು. ಕಲ್ಲಿನಾಥ, ರಾಮಾಮಾತ್ಯ, ಶ್ರೀಕಂಠ, ಪುಂಡರೀಕ ವಿಠಲ ಮುಂತಾದವರು ಸಂಗೀತಕ್ಕೆ ಹೊಸ ಆಯಾಮಗಳನ್ನು ಕಲ್ಪಿಸಿದರು. ಹೀಗೆ ವಿಜಯನಗರದ ಕಾಲವು ಕರ್ನಾಟಕ ಸಂಗೀತ ಮತ್ತು ನೃತ್ಯ ಕಲೆಗಳ ಪೋಷಣೆ, ರಕ್ಷಣೆ, ವಿಕಾಸದಲ್ಲಿ ಗುರುತರವಾದ ಪಾತ್ರವಹಿಸಿದೆ. ಕಲಾಭಿಜ್ಞರೂ, ಕಲಾರಸಿಕರೂ, ಪೋಷಕರೂ ಆಗಿದ್ದ ಅದರ ರಾಜರು ಕಲಾದೇವಿಯ ಆರಾಧಕರಾಗಿ ನಮಗೆ ಸಂಪದ್ಭರಿತವಾದ ಅಮೂಲ್ಯವಾದ ಪರಂಪರೆಯನ್ನು ಬಿಟ್ಟುಹೋಗಿದ್ದಾರೆ.

ಅಡಿ ಟಿಪ್ಪಣಿಗಳು

1. *ಸೌಇಂಇ.*, 4, ಸಂ. 797.
2. *ಎಇಂ.*, 31, ಪು. 152.
3. *ಎಕ.*, 5, ಅರಸೀಕೆರೆ ತಾಲೂಕು ಸಂ. 167.
4. ರಾಬರ್ಟ್ ಸಿವೆಲ್, *ಎ ಫಾರ್‌ಗಾಟನ್ ಎಂಪಾಯರ್,* ಪು. 288-89.
5. *ಅದೇ,* ಪು. 242.
6. *ಸಿಂಗಿರಾಜ ಪುರಾಣ* (ಕ್ರಿ.ಶ. 1500), ಅ. 38, ಪು. 379-80; *ಚೆನ್ನಬಸವ ಪುರಾಣ* (16ನೇ ಶತಮಾನ); *ವೀರಭದ್ರ ವಿಜಯ* (ಕ್ರಿ.ಶ. 1530), ಅ 10; *ಭರತೇಶ ವೈಭವ* (16ನೇ ಶತಮಾನ) ಹಲವು ನೃತ್ಯಗಳ ವರ್ಣನೆ.
7. *ಇಂಎಂ.*, 24, ಪು. 273.